
ಕರ್ನಾಟಕ ಸರ್ಕಾರ

ವೈದ್ಯಕೀಯ ಸಾಹಿತ್ಯ ಮಾಲೆ

ಚರ್ಮ ಮತ್ತು ಲೈಂಗಿಕ ರೋಗಗಳು ಕಾರಣ ಮತ್ತು ಪರಿಹಾರ

ಡಾ|| ಬಿ. ಡಿ. ಸತ್ಯನಾರಾಯಣ



ಕನ್ನಡ ಪುಸ್ತಕ ಪ್ರಾಧಿಕಾರ

ವೈದ್ಯಕೀಯ ಸಾಹಿತ್ಯ ಮಾಲೆ

ಪ್ರಧಾನ ಸಂಪಾದಕರು

ಡಾ. ಸಿದ್ಧಲಿಂಗಯ್ಯ

ಗೌರವ ಸಂಪಾದಕರು

ಡಾ॥ ಸಿ.ಆರ್. ಚಂದ್ರಶೇಖರ್

ಚರ್ಮ ಮತ್ತು ಲೈಂಗಿಕ ರೋಗಗಳು ಕಾರಣ ಮತ್ತು ಪರಿಹಾರ

ಡಾ॥ ಬಿ.ಡಿ. ಸತ್ಯನಾರಾಯಣ

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಬೆಂಗಳೂರು

Charma matthu Lyngika Rogagalu Kaarana matthu Parihara by **Dr. B. D. Sathya Narayana** (Vydyakiya Sahitya Maale), Published by B.H. Mallikarjuna, Administrative Officer, Kannada Pustaka Pradhikara, Kannada Bhavana, J.C. Road, Bangalore-560 002

First Impression	: 2012
Pages	: xiii + 126
Copies	: 1000
Price	: ₹ 80/-

ಮೊದಲನೆಯ ಮುದ್ರಣ	: ೨೦೧೨
ಪುಟಗಳು	: xiii + ೧೨೬
ಪ್ರತಿಗಳು	: ೧೦೦೦
ಬೆಲೆ	: ₹ 80/-
ಕರಡು ತಿದ್ದಿದವರು	: ಲೇಖಕರು ಮತ್ತು ಸಂಪಾದಕರು

ಪ್ರಕಾಶಕರು
ಬಿ.ಹೆಚ್. ಮಲ್ಲಿಕಾರ್ಜುನ
ಆಡಳಿತಾಧಿಕಾರಿಗಳು
ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು-೫೬೦ ೦೦೨

ಮುದ್ರಕರು :
ಸತ್ಯಶ್ರೀ ಪ್ರಿಂಟರ್ಸ್ ಪ್ರೈ. ಲಿ.,
ನಂ. ೧೬/೧, ೨ನೇ ಮುಖ್ಯರಸ್ತೆ, ೩ನೇ ಅಡ್ಡರಸ್ತೆ
ಕಸ್ತೂರಿಬಾ ನಗರ, ಮೈಸೂರು ರಸ್ತೆ, ಬೆಂಗಳೂರು-೫೬೦ ೦೨೬.
ದೂರವಾಣಿ : ೦೮೦-೨೬೭೪೮೮೧೧; ಮೊ : ೯೩೪೨೮೬೪೭೬೧

ವೈದ್ಯಕೀಯ ಸಾಹಿತ್ಯ ಮಾಲೆ

ಪ್ರಧಾನ ಸಂಪಾದಕರು

ಡಾ. ಸಿದ್ಧಲಿಂಗಯ್ಯ

ಸಂಪಾದಕರು

ಡಾ|| ಸಿ.ಆರ್. ಚಂದ್ರಶೇಖರ್

ಸದಸ್ಯರು

ಡಾ|| ನಾ. ಸೋಮೇಶ್ವರ

ಡಾ|| ವಸಂತ ಅ. ಕುಲಕರ್ಣಿ

ಡಾ|| ಪದ್ಮಿನಿ ಪ್ರಸಾದ್

ಡಾ|| ವಸುಂಧರಾ ಭೂಪತಿ

ಡಾ|| ವಿಜಯಲಕ್ಷ್ಮೀ ಬಾಳೇಕುಂದ್ರಿ

ಡಾ|| ಕೆ.ಪಿ. ಪುತ್ತೂರಾಯ

ಶ್ರೀ. ಬಿ.ಹೆಚ್. ಮಲ್ಲಿಕಾರ್ಜುನ

ಆಡಳಿತಾಧಿಕಾರಿಗಳು


ಅಧ್ಯಕ್ಷರ ಮಾತು

ಕನ್ನಡ ಪುಸ್ತಕ ಪ್ರಾಧಿಕಾರವು ಅಪರೂಪದ ಹಾಗೂ ಶಾಸ್ತ್ರಸಂಬಂಧ ಕೃತಿಗಳನ್ನು ಪ್ರಕಟಿಸುವುದರ ಜೊತೆಗೆ ವಿವಿಧ ಮಾಲಿಕೆಯಡಿ ಬೇರೆ ಪ್ರಕಾಶಕರು ಅಷ್ಟಾಗಿ ಪ್ರಕಟಿಸದ ಪುಸ್ತಕಗಳು ಜನಸಾಮಾನ್ಯರಿಗೆ ಲಭ್ಯವಾಗಬೇಕೆಂಬ ಉದ್ದೇಶದಿಂದ ಪ್ರಕಟಿಸುತ್ತಾ ಬಂದಿದೆ. ಸಾವಿರಾರು ವರ್ಷಗಳ ಇತಿಹಾಸ ಹೊಂದಿರುವ ಕನ್ನಡ ಭಾಷೆ ಸಾಹಿತ್ಯಿಕವಾಗಿ ಪ್ರೌಢಾವಸ್ಥೆಯನ್ನು ತಲುಪಿರುವುದರಲ್ಲಿ ಸಂಶಯವಿಲ್ಲ. ಸಮಾಜ ಈ ಒಂದು ಶತಮಾನದಿಂದ ಬಹಳ ಶೀಘ್ರಗತಿಯಲ್ಲಿ ಮುಂದುವರೆಯುತ್ತಿದ್ದು ಆ ವೇಗಕ್ಕೆ ತಕ್ಕಾಗಿ ಕನ್ನಡ ಭಾಷೆಯೂ ಹೊಸ ಪ್ರಯೋಗಗಳನ್ನು ಮಾಡುತ್ತಾ ಹೊಸತನ್ನು ತನ್ನಲ್ಲಿ ಅರಗಿಸಿಕೊಳ್ಳುವುದು ಅನಿವಾರ್ಯ. ವೈದ್ಯಕೀಯ, ಇಂಜಿನಿಯರಿಂಗ್, ವಿಜ್ಞಾನ ಲೋಕಗಳ ಬಗ್ಗೆ ಕನ್ನಡದಲ್ಲಿ ಸಾಕಷ್ಟು ಪುಸ್ತಕಗಳು ಹೊರಬರುತ್ತಿದ್ದರೂ ಈಗಿನ ಕಾಲ ವೇಗಕ್ಕೆ ತಕ್ಕಷ್ಟು ಕನ್ನಡದಲ್ಲಿ ಈ ವಿಭಾಗಗಳಲ್ಲಿ ಪುಸ್ತಕಗಳು ಹೊರಬರುತ್ತಿಲ್ಲ. ಬಂದಂತಹ ಪುಸ್ತಕಗಳೂ ಕೂಡ ಜನ ಸಾಮಾನ್ಯರಿಗೆ ಎಟುಕುವ ದರದಲ್ಲಿ ಲಭ್ಯವಾಗುತ್ತಿಲ್ಲ. ಈ ಕೊರತೆಯನ್ನು ತುಂಬಬೇಕೆಂಬ ಸದಾಶಯದಿಂದ ಕೆಲ ಮಾಲೆಗಳಲ್ಲಿ ಪುಸ್ತಕಗಳನ್ನು ಹೊರತರುವ ಪ್ರಯತ್ನವನ್ನು ಮಾಡಿದ್ದೇವೆ.

ಈ ದಿಶೆಯಲ್ಲಿ ಪ್ರಾಧಿಕಾರವು ಹಮ್ಮಿಕೊಂಡಿರುವ ಮಹತ್ವದ ಯೋಜನೆಗಳಲ್ಲಿ ವೈದ್ಯಕೀಯ ಸಾಹಿತ್ಯ ಮಾಲೆಯೂ ಒಂದು. ಕನ್ನಡದಲ್ಲಿ ವೈದ್ಯಕೀಯ ಸಾಹಿತ್ಯಕ್ಕೆ ಸಂಬಂಧಪಟ್ಟಂತೆ ಹೆಚ್ಚು ಗ್ರಂಥಗಳು ಲಭ್ಯವಿಲ್ಲದೆ ಇರುವುದನ್ನು ಗಮನಿಸಿದ ಪ್ರಾಧಿಕಾರ ಈ ಮಾಲೆಯನ್ನು ಆರಂಭಿಸಬೇಕೆಂದು ಒಂದು ಸಂಪಾದಕ ಮಂಡಳಿಯನ್ನು ನೇಮಿಸಿತು. ಈ ಸಂಪಾದಕ ಮಂಡಳಿಯಲ್ಲಿ ಸಂಪಾದಕರಾಗಿರಲು ನಾಡಿನ ಹಿರಿಯ ವೈದ್ಯರಾದ ಡಾ|| ಸಿ.ಆರ್. ಚಂದ್ರಶೇಖರ್ ಅವರು ಒಪ್ಪಿರುತ್ತಾರೆ. ಮಂಡಳಿಯ ಸದಸ್ಯರಾಗಿ ಹಿರಿಯ ವೈದ್ಯರುಗಳಾದ ಡಾ|| ನಾ. ಸೋಮೇಶ್ವರ, ಡಾ|| ವಸಂತ ಕುಲಕರ್ಣಿ, ಡಾ|| ಪದ್ಮಿನಿ ಪ್ರಸಾದ್, ಡಾ|| ವಸುಂಧರಾ ಭೂಪತಿ, ಡಾ|| ವಿಜಯಲಕ್ಷ್ಮೀ ಬಾಳೇಕುಂದ್ರಿ, ಡಾ|| ಕೆ.ಪಿ. ಪುತ್ತೂರಾಯ ಅವರುಗಳು ಈ ಕಾರ್ಯವನ್ನು ಸುಲಲಿತವಾಗಿ ನೆರವೇರಿಸಿಕೊಟ್ಟಿದ್ದಾರೆ. ಇವರೆಲ್ಲರಿಗೂ ನನ್ನ ಕೃತಜ್ಞತೆಗಳು.

ಈ ಮಾಲಿಕೆಯಲ್ಲಿ **ಚರ್ಮ ಮತ್ತು ಲೈಂಗಿಕ ರೋಗಗಳು ಕಾರಣ ಮತ್ತು ಪರಿಹಾರ** ಕೃತಿಯನ್ನು ರಚಿಸಿಕೊಡಲು ಒಪ್ಪಿ ಹಸ್ತಪ್ರತಿಯನ್ನು ನೀಡಿ ಸಹಕರಿಸಿದ ಡಾ॥ ಬಿ.ಡಿ. ಸತ್ಯನಾರಾಯಣ ಅವರಿಗೆ ಆಭಾರಿಯಾಗಿದ್ದೇವೆ.

ಈ ಮಾಲೆಯ ಪುಸ್ತಕಗಳನ್ನು ಹೊರತರುವಲ್ಲಿ ಪ್ರಾರಂಭದಿಂದ ವಿಶೇಷ ಆಸಕ್ತಿ ವಹಿಸಿದ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಬಿ.ಹೆಚ್. ಮಲ್ಲಿಕಾರ್ಜುನ, ನನ್ನ ಆಪ್ತ ಕಾರ್ಯದರ್ಶಿ ಶ್ರೀ ಕೆ. ಮುಕುಂದನ್, ಪ್ರಾಧಿಕಾರದ ಎಲ್ಲಾ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರಿಗೆ ಆಭಾರಿಯಾಗಿದ್ದೇನೆ. ಈ ಮಾಲೆಯ ಎಲ್ಲಾ ಕೃತಿಗಳನ್ನು ಕನ್ನಡ ವಾಚಕರು ತುಂಬುಹೃದಯದಿಂದ ಸ್ವಾಗತಿಸುತ್ತಾರೆಂದು ಆಶಿಸುತ್ತೇನೆ.



(ಡಾ. ಸಿದ್ಧಲಿಂಗಯ್ಯ)
ಅಧ್ಯಕ್ಷರು

ಸಂಪಾದಕರ ಮಾತು

ನಮ್ಮ ಮೈಮುಚ್ಚುವ ಚರ್ಮದ ಬಗ್ಗೆ ನಮಗೆ ಬಹಳ ಮಮತೆ. ಅದು ಬೆಳ್ಳಗಿರಬೇಕು. ಕಲೆರಹಿತವಾಗಿರಬೇಕು. ಕಾಂತಿಯಿಂದ ಮಿನುಗಬೇಕು. ನಮ್ಮ ಸೌಂದರ್ಯವನ್ನು ವೃದ್ಧಿಸುವಂತಿರಬೇಕು ಎಂದೆಲ್ಲ ನಿರೀಕ್ಷಿಸುತ್ತೇವೆ. ಚರ್ಮದ ಸೌಂದರ್ಯವರ್ಧನೆಗೆ ನಾವು ಏನೆಲ್ಲ ಮಾಡುತ್ತೇವೆ. ಕ್ರೀಮು, ಲೋಶನ್ನು, ಪೌಡರ್ರು, ಸೋಪು, ಮಸಾಜು ಇತ್ಯಾದಿ. ಚರ್ಮಕ್ಕೆ ಕಾಯಿಲೆ ಬಂದು ಅಥವಾ ಗಾಯವಾಗಿ ಅಥವಾ ಬೆಂಕಿಯಿಂದಲೋ ಆಸಿಡ್‌ನಿಂದಲೋ ಸುಟ್ಟು ವಿಕಾರವಾದರೆ, ನಮಗಾಗುವ ನೋವು ಅಗಾಧ. ಬೇರೆಯವರಿಗೆ ಮುಖ ತೋರಿಸಲು ನಾವು ನಾಚುವಂತಾಗುತ್ತದೆ. ನಾವು ಅಸ್ಪೃಶ್ಯರಂತಾಗಿಬಿಡುತ್ತೇವೆ. ಎಕ್ಜಿಮಾ, ಸೋರಿಯಾಸಿಸ್, ವಿಟಿಲಿಗೋ ಇರುವವರನ್ನು ಮದುವೆಯಾಗಲು ಯಾರೂ ಇಷ್ಟಪಡುವುದಿಲ್ಲ. ಹೆಚ್ಚು ಕೂದಲುಗಳಿಲ್ಲವೆಂದು ಪುರುಷರು ಚಿಂತೆಮಾಡಿದರೆ, ಹೆಚ್ಚುಕೂದಲುಗಳಿದ್ದರೆ ಸ್ತ್ರೀಯರು ಚಿಂತೆಮಾಡುತ್ತಾರೆ. ತಲೆ ಕೂದಲು ಉದುರಿದರೆ ಸ್ತ್ರೀಪುರುಷರಿಬ್ಬರೂ ದುಃಖಪಡುತ್ತಾರೆ. ಕಪ್ಪು ಚರ್ಮವನ್ನು ಬಿಳಿಮಾಡುತ್ತೇವೆ ಎಂದು ಹೇಳಿ ಕ್ರೀಮು ಲೋಶನ್‌ಗಳನ್ನು ಮಾರಿ ಅನೇಕ ಕಂಪನಿಗಳು ಶ್ರೀಮಂತವಾಗುತ್ತಿವೆ. ಜನರಿಗೆ ಸಕತ್ ಟೋಪಿ ಹಾಕುತ್ತಿವೆ. ಹಾಗೆಯೇ ತಲೆ ಕೂದಲು ಉದುರುವುದನ್ನು ತಪ್ಪಿಸುತ್ತದೆ, ತಲೆ ಹೊಟ್ಟನ್ನು ನಿವಾರಿಸುತ್ತದೆ ಎಂಬ ಜಾಹೀರಾತುಗಳು ಪ್ರತಿಗಂಟೆಗೆ ನಮ್ಮ ಟೀವಿಗಳಲ್ಲಿ ಪ್ರಸಾರವಾಗುತ್ತಾ, ಜನರಿಗೆ ಮೋಸಮಾಡುತ್ತಿವೆ. ಚರ್ಮದ ಸುರೂಪಿಕಾ ಶಸ್ತ್ರ ಚಿಕಿತ್ಸೆ ಮಾಡುವ ವೈದ್ಯರಿಗೆಲ್ಲಿಲ್ಲದ ಬೇಡಿಕೆ.

ಕಾಮ, ಲೈಂಗಿಕತೆ ಯಾವುದೇ ವ್ಯಕ್ತಿಗೆ ದೊಡ್ಡ ಆಕರ್ಷಣೆ. ಕಾಮ ಸುಖಕ್ಕಾಗಿ ಪರಿತಪಿಸದವರ ಸಂಖ್ಯೆ ಅತ್ಯಲ್ಪ. ಯಾರೊಂದಿಗೋ, ಕಾಮಕೂಟ ನಡೆಸಿ, ಮನದ ವಾಂಛೆಯನ್ನು ತೀರಿಸಿಕೊಂಡಮೇಲೆ, ಕಾಣಿಸಿಕೊಳ್ಳುವ ಗುಹ್ಯ ರೋಗಗಳು ವ್ಯಕ್ತಿಯನ್ನು ನರಕಕ್ಕೆ ತಳ್ಳುತ್ತವೆ. ಹೇಳಿಕೊಳ್ಳಲಾಗದೇ ಅನುಭವಿಸಲೂ ಆಗದೇ ಒದ್ದಾಡಿಸುತ್ತವೆ. ನಮ್ಮಲ್ಲಿ ಎಲ್ಲ ಅಂಗಗಳ ವಿಶೇಷ ತಜ್ಞರಿದ್ದರೂ, ಜನನಾಂಗ – ಲೈಂಗಿಕ ಕ್ಷೇತ್ರಕ್ಕೆ ಸಂಬಂಧಿಸಿದ ತಜ್ಞರಿಲ್ಲ. ಲೈಂಗಿಕ ಕಾಯಿಲೆಗಳನ್ನು ಚರ್ಮ ವೈದ್ಯರು ಚಿಕಿತ್ಸೆಗೆ ಒಳಪಡಿಸಿದರೆ ಲೈಂಗಿಕ ದುರ್ಬಲತೆಗಳನ್ನು ಗೈನಕಾಲಜಿಸ್ಟ್ ಯುರಾಲಜಿಸ್ಟ್, ಮನೋವೈದ್ಯರು, ಫಿಸಿಶಿಯನ್ ಯಾರೋ ಒಬ್ಬರು ನೋಡುತ್ತಾರೆ. ಲೈಂಗಿಕರೋಗಗಳ ಬಗ್ಗೆ ನಮ್ಮಲ್ಲಿ ಅಜ್ಞಾನ, ಭಯ, ನಾಚಿಕೆ, ಹೀನಾಯಭಾವನೆಗಳೇ ತುಂಬಿಕೊಂಡಿವೆ. ಆರಂಭಿಕ ಲಕ್ಷಣಗಳ ಬಗ್ಗೆ ಮಾಹಿತಿಯಾಗಲೀ, ಸರಿ ಚಿಕಿತ್ಸೆ ಬಗ್ಗೆ ತಿಳುವಳಿಕೆಯಾಗಲೀ ಇಲ್ಲ. ಲೈಂಗಿಕ ಕಾಯಿಲೆಗಳು ಅಂಟು ರೋಗಗಳಾದ್ದರಿಂದ, ಲೈಂಗಿಕರೋಗವಿರುವ

ವ್ಯಕ್ತಿ ಅದನ್ನು ತನ್ನೊಂದಿಗೆ ಕೂಡುವ ಎಲ್ಲರಿಗೆ ಹಂಚುತ್ತಾ ಹೋಗುತ್ತಾನೆ/ಳೆ. ವೇಶ್ಯಾವೃತ್ತಿಯಲ್ಲಿರುವ ಸ್ತ್ರೀಪುರುಷರು ನೂರಾರು ಸಾವಿರಾರು ಜನರಿಗೆ ಸಿಫಿಲಿಸ್, ಗೋನೋರಿಯಾ, ಹೆಚ್.ಐ.ವಿ. ಸೋಂಕನ್ನು ಹರಡುತ್ತಾರೆ. ಇಡೀ ಸಮಾಜಕ್ಕೆ ಅಪಾಯಕಾರಿಯಾಗುತ್ತಾರೆ.

ಡಾ|| ಬಿ.ಡಿ. ಸತ್ಯನಾರಾಯಣ ವೃತ್ತಿಯಿಂದ ಚರ್ಮ ಮತ್ತು ಲೈಂಗಿಕ ರೋಗತಜ್ಞರು. ಅರವತ್ತು ವರ್ಷ ತುಂಬಿದ ಹಿರಿಯರು. ಮೈಸೂರಿನಲ್ಲಿ ಪ್ರಾಕ್ಟೀಸ್ ಮಾಡುತ್ತಿದ್ದಾರೆ. ಪ್ರವೃತ್ತಿಯಿಂದ ಲೇಖಕರು ಐದು ಪುಸ್ತಕಗಳನ್ನು ಐವತ್ತಕ್ಕೂ ಮಿಕ್ಕಿದ ಲೇಖನಗಳನ್ನು ಬರೆದಿದ್ದಾರೆ. ಜ್ಞಾನ ಪ್ರಸಾರದಲ್ಲಿ ನಂಬಿಕೆಯುಳ್ಳವರು. ಜನರಲ್ಲಿ ಚರ್ಮ ಮತ್ತು ಲೈಂಗಿಕ ರೋಗಗಳ ಬಗ್ಗೆ ಇರುವ ತಪ್ಪು ನಂಬಿಕೆ, ಭಯಗಳನ್ನು ಕಂದಾಚಾರಗಳನ್ನು ಹೋಗಲಾಡಿಸಲು ನಿರಂತರವಾಗಿ ಪ್ರಯತ್ನ ಮಾಡುತ್ತಿದ್ದಾರೆ. ತಮ್ಮ ಸ್ಪೆಶಾಲಿಟಿಯ ವೈದ್ಯಸಂಘಗಳಲ್ಲಿ ಸಕ್ರಿಯ ಸದಸ್ಯರಾಗಿ, ಜವಾಬ್ದಾರಿಹುದ್ದೆಗಳನ್ನು ನಿರ್ವಹಿಸಿದ್ದಾರೆ. ಇಂತಹ ಡಾ|| ಸತ್ಯನಾರಾಯಣ ಅವರು, ಕನ್ನಡ ಪುಸ್ತಕ ಪ್ರಾಧಿಕಾರವು ಪ್ರಕಟಿಸುತ್ತಿರುವ ವೈದ್ಯಕೀಯ ವಿಜ್ಞಾನ ಸಾಹಿತ್ಯ ಮಾಲೆಯ ಎರಡನೇ ಕಂತಿಗಾಗಿ, ಈ ಪುಸ್ತಕವನ್ನು ರಚಿಸಿಕೊಟ್ಟು ಕನ್ನಡಿಗರಿಗೆ ಮಹದುಪಕಾರ ಮಾಡಿದ್ದಾರೆ. ಚಿಕ್ಕ ಚಿಕ್ಕ ಅಧ್ಯಾಯಗಳು, ಸರಳವಾದ ಅಗತ್ಯ ಮಹಿತಿ. ಚರ್ಮ–ಲೈಂಗಿಕ ರೋಗಗಳ ಲಕ್ಷಣ, ನಿವಾರಣೆ ಮತ್ತು ಚಿಕಿತ್ಸೆಯ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಅವರಿಗೆ ಓದುಗರ ಪರವಾಗಿ ಧನ್ಯವಾದಗಳು. ಈ ಪುಸ್ತಕವು ಪ್ರತಿಯೊಂದು ಮನೆಯಲ್ಲಿರಲಿ ಎಂದು ಹಾರೈಸುತ್ತೇನೆ.

ಡಾ|| ಸಿ.ಆರ್. ಚಂದ್ರಶೇಖರ್

ಲೇಖಕರ ಮಾತು

ಚರ್ಮ ಮತ್ತು ಲೈಂಗಿಕ ರೋಗಗಳಿಗೆ ಕಾರಣ ಮತ್ತ ಚಿಕಿತ್ಸೆಯನ್ನು ಈ ಪುಸ್ತಕದಲ್ಲಿ ವಿವರಿಸಲಾಗಿದೆ. ಬಹಳಷ್ಟು ಚರ್ಮ ಮತ್ತು ಲೈಂಗಿಕ ಕಾಯಿಲೆಗಳನ್ನು ಕಾಯಿಲೆಗಳು ಎನ್ನುವುದಕ್ಕಿಂತ ಸಮಸ್ಯೆಗಳು ಎಂದು ಹೇಳಬಹುದು. ಏಕೆಂದರೆ ನಿರ್ದಿಷ್ಟ ಕಾಯಿಲೆಗಳನ್ನು ಹೊರತುಪಡಿಸಿ ಬಹಳಷ್ಟು ಕಾಯಿಲೆಗಳೂ ಸಾರ್ವತ್ರಿಕವಾಗಿ ಚಿಕ್ಕವರು, ದೊಡ್ಡವರು, ಹೆಣ್ಣು, ಗಂಡು ಎಂಬ ಭೇದಭಾವವಿಲ್ಲದೆ ಬಹುಪಾಲು ಜನರಲ್ಲಿ ಕಾಣಿಸಿಕೊಳ್ಳುತ್ತವೆ. ಇಂತಹ ವ್ಯಕ್ತಿಗಳನ್ನು ರೋಗಿಗಳು ಎಂದು ಕರೆಯುವುದು ಸಹ ಸಮಂಜಸವಾಗಲಾರದು. ಇಂತಹ ಜನರಿಗೆ ಅಗತ್ಯವಾಗಿ ಬೇಕಾಗಿರುವುದು ಸಮಾಲೋಚನೆ (ಕೌನ್ಸಿಲಿಂಗ್) ಮತ್ತು ಸಲಹೆ, ಅವಶ್ಯಕತೆ ಬಿದ್ದರೆ ಕೆಲವೊಂದು ಶಮನಕಾರಿ ಔಷಧಗಳು.

ಬಹಳಷ್ಟು ಜನರು ಚರ್ಮರೋಗಗಳು ವಾಸಿಯಾಗುವುದಿಲ್ಲ ಎಂಬ ತಪ್ಪು ಅಭಿಪ್ರಾಯ ಹೊಂದಿದ್ದಾರೆ, ಇದು ತಪ್ಪು. ಯಾವುದೇ ವೈದ್ಯ ಪದ್ಧತಿಯಲ್ಲಿ ಇದೇ ಪರಿಸ್ಥಿತಿ, ಬ್ಯಾಕ್ಟೀರಿಯಾ ಮತ್ತು ಫಂಗಸ್ ರೋಗಾಣುಗಳಿಂದ ಬರುವ ಕಾಯಿಲೆಗಳನ್ನು ಮಾತ್ರ ಆಂಟಿಬಯಾಟಿಕ್ಸ್ ಮತ್ತು ಆಂಟಿಫಂಗಲ್ ಔಷಧಗಳಿಂದಲೇ ವಾಸಿಮಾಡಬಹುದು. ಅನೇಕ ಸಂದರ್ಭಗಳಲ್ಲಿ ಈ ಕಾಯಿಲೆಗಳೂ ಸಹ ಚಿಕಿತ್ಸೆಗೆ ಬಗ್ಗುವುದಿಲ್ಲ. ಶಸ್ತ್ರಕ್ರಿಯೆಯಿಂದ ಕೆಲವೊಂದು ಕಾಯಿಲೆಗಳನ್ನು ಮಾತ್ರ ಗುಣಪಡಿಸಬಹುದು. ಉಳಿದ ಬಹುಪಾಲು ಕಾಯಿಲೆಗಳನ್ನು ಎಲ್ಲಾ ವಿಭಾಗದ ವೈದ್ಯರೂ, ಸಮಾಲೋಚನೆ, ಸಲಹೆ ಮತ್ತು ಶಮನಕಾರಿ ಔಷಧಗಳಿಂದಲೇ ಚಿಕಿತ್ಸೆಯನ್ನು ನೀಡುತ್ತಾರೆ. ಆದುದರಿಂದ ಪ್ರತಿಯೊಬ್ಬರು ಯಾವುದೇ ಕಾಯಿಲೆ ಬಂದರೆ ಬರಲು ಕಾರಣಗಳನ್ನು ತಿಳಿದುಕೊಂಡು ತಡೆಗಟ್ಟುವ ಕ್ರಮಗಳನ್ನು ಅನುಸರಿಸಿ ಮತ್ತು ಕಾಯಿಲೆಯನ್ನು ತಹಬಂದಿಗೆ ತರುವ ಉಪಾಯಗಳನ್ನು ಅರಿತು ವೈದ್ಯರ ಸಲಹೆಯಂತೆ ಜೀವನ ಸಾಗಿಸಬೇಕು.

ಹಳೆಗನ್ನಡ, ಹೊಸಗನ್ನಡ ಮತ್ತು ಇತ್ತೀಚಿನ ಸಾಹಿತ್ಯವನ್ನು ತುಲನೆ ಮಾಡಿದಾಗ ಬಹಳಷ್ಟು ಹೊಸ ಹೊಸ ಪದಪುಂಜಗಳು ಕನ್ನಡ ಶಬ್ದಭಂಡಾರಕ್ಕೆ ಸೇರಿವೆ. ಬರವಣಿಗೆಯ ಶೈಲಿಯಲ್ಲಿಯೂ ಬದಲಾವಣೆಗಳನ್ನು ಕಾಣುತ್ತಿದ್ದೇವೆ. ಅಂದಮೇಲೆ ತಾಂತ್ರಿಕ ಪದಗಳು ಕನ್ನಡದಲ್ಲಿ ಲಭ್ಯವಿಲ್ಲದಿದ್ದಾಗ ವಿಶ್ವದಲ್ಲಿ ಸಾರ್ವತ್ರಿಕಾವಾಗಿ ಉಪಯೋಗಿಸುವ ಪದಗಳನ್ನು ಕನ್ನಡದಲ್ಲಿ ಬಳಸುವುದು ಸಮಂಜಸ. ಇಂಗ್ಲೀಷಿನಲ್ಲಿರುವ ಬಹಳಷ್ಟು ಪಾರಿಭಾಷಿಕ ಪದಗಳು ಪ್ರಪಂಚದ ವಿವಿಧ ಭಾಷೆಗಳ ಮೂಲದಿಂದಲೇ ಬಂದಿವೆ. ಯಾವುದೇ ರಾಜ್ಯದ ಅಥವಾ ದೇಶದ ಭಾಷೆಯ ಪದವು ಬಹುಪಾಲು ಕನ್ನಡಿಗರಿಗೆ ಚಿರಪರಿಚಿತವಾಗಿ

ಬಳಕೆಯಲಿದ್ದು ಇತರ ಪದಗಳಿಗಿಂತ ಹೆಚ್ಚು ಅರ್ಥಪೂರ್ಣವಾಗಿದ್ದರೆ ಆ ಪದವು ಕನ್ನಡ ಪದ ಎಂದು ಪರಿಗಣಿಸಿ ಕನ್ನಡ ವೈದ್ಯಕೋಶಕ್ಕೆ ಸೇರಿಸುವುದು ಸಮಂಜಸ ಎಂದು ನನ್ನ ಅನಿಸಿಕೆ. ಆಗ ಕನ್ನಡದಲ್ಲಿ ವೈದ್ಯಕೀಯ ಕಾಲೇಜುಗಳಲ್ಲಿ ಕನ್ನಡ ಮಾಧ್ಯಮಗಳ ಮೂಲಕ ಪಾಠ ಹೇಳಿಕೊಡುವ ಕಾಲ ಕೂಡಿ ಬರಬಹುದು ಎಂಬುದು ನನ್ನ ಬಲವಾದ ನಂಬಿಕೆ.

ಈ ಪುಸ್ತಕದಲ್ಲಿರುವ ಬಹುಪಾಲು ಲೇಖನಗಳು ನಾಡಿನ ಪತ್ರಿಕೆ ಮತ್ತು ನಿಯತಕಾಲಿಕೆಗಳಲ್ಲಿ ಹಿಂದೆ ಪ್ರಕಟಗೊಂಡಿವೆ, ಅವುಗಳನ್ನು ಪರಿಷ್ಕರಿಸಿ ಪ್ರಕಟಿಸಲಾಗಿದೆ. ಲೇಖನಗಳ ತಪ್ಪನ್ನು ತಿದ್ದಿ ಸಲಹೆ ನೀಡಿದ ಸಂಪಾದಕರಾದ ಮಾನ್ಯ ಶ್ರೀಯುತ ಡಾ: ಸಿ.ಆರ್. ಚಂದ್ರಶೇಖರವರಿಗೆ, ಸಾಹಿತಿ ಮತ್ತು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀಯುತ ಡಾ. ಸಿದ್ದಲಿಂಗಯ್ಯನವರಿಗೆ; ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿಗಳು ಮತ್ತು ಅವರ ಸಿಬ್ಬಂದಿಗೆ ಮತ್ತು ಸರ್ಕಾರಕ್ಕೆ ನನ್ನ ವಂದನೆಗಳು.

(ಡಾ: ಬಿ.ಡಿ. ಸತ್ಯನಾರಾಯಣ)

ಲೇಖಕರ ಪರಿಚಯ

1. ಪೂರ್ಣ ಹೆಸರು	:	ಡಾ. ಬಿ.ಡಿ. ಸತ್ಯನಾರಾಯಣ
2. ಹುಟ್ಟಿದ ದಿನಾಂಕ ಮತ್ತು ವಯಸ್ಸು	:	31.08.1950, 61.5 ವರ್ಷ
3. ಪ್ರಸಕ್ತ ವಿಳಾಸ	:	1753, 4ನೇ ಕ್ರಾಸ್ (ಉತ್ತರ): ಅನಿಕೇತನ ರಸ್ತೆ, ಕುವೆಂಪುನಗರ: ಮೈಸೂರು – 570023.
4. ಫೋನ್	:	ಸೆಲ್: 9731137753
5. ವಿದ್ಯಾಭ್ಯಾಸ	:	ಎಂ.ಬಿ.ಬಿ.ಎಸ್: ಡಿ.ವಿ.ಡಿ: ಎಂ.ಡಿ. (ಡಿವಿಎಲ್)
6. ವಿಶೇಷ ಪರಿಣಿತಿ ವಿಷಯ	:	ಚರ್ಮ, ಕುಷ್ಠ ಮತ್ತು ಲೈಂಗಿಕ ರೋಗಗಳ ತಜ್ಞರು.
7. ಉದ್ಯೋಗ	:	ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ವೈದ್ಯಕೀಯ ಅಧೀಕ್ಷಕನಾಗಿ ಕರ್ತವ್ಯ ನಿರ್ವಹಿಸಿ, ನಂತರ ಮೈಸೂರು ಮೆಡಿಕಲ್ ಕಾಲೇಜಿನ ಚರ್ಮ ಮತ್ತು ಲೈಂಗಿಕ ರೋಗ ವಿಭಾಗದಲ್ಲಿ ಪ್ರಾಧ್ಯಾಪಕ ಮತ್ತು ಮುಖ್ಯಸ್ಥನಾಗಿ ವಯೋ ನಿವೃತ್ತಿಯ ನಂತರ, ಪ್ರಸ್ತುತ ಬಿ.ಜಿ. ನಗರ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆಯ ಆದಿಚುಂಚನಗಿರಿ ವೈದ್ಯಕೀಯ

		ಮಹಾವಿದ್ಯಾಲಯದ ಚರ್ಮ ಮತ್ತು ಲೈಂಗಿಕ ರೋಗ ವಿಭಾಗದಲ್ಲಿ ಪ್ರಾಧ್ಯಾಪಕ ಮತ್ತು ಮುಖ್ಯಸ್ಥನಾಗಿ ಕಾರ್ಯ ನಿರ್ವಹಣೆ.
8. ವೈದ್ಯ ಸಾಹಿತ್ಯ ಸೃಷ್ಠಿ	:	ಪುಸ್ತಕಗಳ ಸಂಖ್ಯೆ: 05 (ಐದು) ಲೇಖನಗಳ ಸಂಖ್ಯೆ: 50 (ಐವತ್ತು)
9. ಪ್ರಕಟಗೊಂಡ ಪತ್ರಿಕೆಗಳು ಮತ್ತು ನಿಯತಕಾಲಿಕೆಗಳು	:	ಪ್ರಜಾವಾಣಿ, ಕನ್ನಡಪ್ರಭಾ, ವಿಜಯಕರ್ನಾಟಕ, ಆಂದೋಲನಾ, ಮೈಸೂರು ಮಿತ್ರ, ಲಂಕೇಶ್ ಪತ್ರಿಕೆ, ಸುಧಾ, ತರಂಗ, ತುಷಾರ, ಕರ್ಮವೀರ, ಗೃಹ ಶೋಭಾ, ಪುಸ್ತಕ ಪ್ರಪಂಚ.
10. ಸಾಹಿತ್ಯ ಸೃಷ್ಠಿ	:	ಪತ್ರಿಕೆಗಳಲ್ಲಿ ಕಥೆಗಳು: 05 (ಐದು)

11. 1998 ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಕಟಿಸಿರುವ ವರ್ಷದ ವೈಜ್ಞಾನಿಕ ಸಾಹಿತ್ಯ ಸಂಕಲನದ ಪುಸ್ತಕದಲ್ಲಿ ಒಂದು ಲೇಖನ ಪ್ರಕಟಗೊಂಡಿದೆ.

12. ಮೈಸೂರು ಜಿಲ್ಲೆ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನಿತರು ಮತ್ತು ಯುನೈಟೆಡ್ ರೈಟರ್ಸ್ ಅಸೋಶಿಯೇಷನ್ ಆಫ್ ಇಂಡಿಯಾದ ಫೆಲೋ.

13. 2010ರ ಶ್ರೀರಂಗಪಟ್ಟಣ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನದ "ಸಮ್ಮೇಳನಾಧ್ಯಕ್ಷ"ರಾಗಿ ಕಾರ್ಯನಿರ್ವಹಣೆ.

14. ಇತರ ಪ್ರತಿಭೆ	:	1. ಕರ್ನಾಟಕ ಮತ್ತು ತಮಿಳುನಾಡು ರಾಜ್ಯ ಚರ್ಮ ಮತ್ತು ಲೈಂಗಿಕ ರೋಗಗಳ ತಜ್ಞರ ಸಂಘದ ಅಧ್ಯಕ್ಷನಾಗಿ ಕಾರ್ಯನಿರ್ವಹಣೆ.
	:	2. ಅಖಿಲಭಾರತ ಚರ್ಮ ಮತ್ತು ಲೈಂಗಿಕ ರೋಗಗಳ ತಜ್ಞರ ಸಂಘದ ಉಪಾಧ್ಯಕ್ಷನಾಗಿ ಕಾರ್ಯನಿರ್ವಹಣೆ.

ಪರಿವಿಡಿ

ಭಾಗ - ೧ : ಚರ್ಮ


ಭಾಗ - ೨ : ಲೈಂಗಿಕತೆ

ಭಾಗ – ೧

1. ಚರ್ಮ

ಚರ್ಮವು ಶರೀರದ ಅಂಗಾಂಗಗಳಲ್ಲೆಲ್ಲಾ ದೊಡ್ಡದಾದ ಅಂಗ ಮತ್ತು ಸುತ್ತಲ ಹೊದಿಕೆ. ಇದು ಮನುಷ್ಯರ ಶರೀರಕ್ಕೂ ಮತ್ತು ಹೊರ ಪ್ರಪಂಚಕ್ಕೂ ಗಡಿ ಇದ್ದಂತೆ. ಚರ್ಮವು ಶರೀರದ ಕನ್ನಡಿ. ಮನುಷ್ಯನ ದೇಹದೊಳಗಿನ ರೋಗ ರುಜಿನಗಳನ್ನು ಮತ್ತು ಆಂತರಿಕ ತುಮುಲಗಳನ್ನು ಚರ್ಮವನ್ನು ನೋಡಿಯೇ ತಿಳಿದುಕೊಳ್ಳಬಹುದು. ಮನುಷ್ಯನ ಭಾವೋದ್ರೇಕಗಳನ್ನು ಮತ್ತು ಮಾನಸಿಕ ಬದಲಾವಣೆಗಳನ್ನು ಚರ್ಮ ನೋಡಿದೊಡನೆಯೆ ಹೇಳಬಹುದು.

ಆರೋಗ್ಯವಂತ ಮನುಷ್ಯರ ಚರ್ಮವು ಕೆಂಪೇರುವ, ಮಿನುಗುವ, ಬಿಳಿಚುವ, ಬೆವರುವ, ಸುಕ್ಕುಗಟ್ಟುವ, ಜೋಮು ಹಿಡಯುವ ಹಾಗೂ ಸುಖ ಮತ್ತು ದುಃಖಗಳನ್ನು ತೋರಿಸುವ ಗುಣವನ್ನು ಹೊಂದಿದೆ. ಈ ಪ್ರಕೃತಿ ದತ್ತವಾದ ಚರ್ಮದ ಸ್ವಾಭಾವಿಕ ಗುಣಗಳು ಮಾನಸಿಕ ಮತ್ತು ಆಂತರಿಕ ರೋಗಗಳಿಂದ ಹೆಚ್ಚು ಕಡಿಮೆಯಾಗಬಹುದು ಅಥವಾ ಸಂಪೂರ್ಣವಾಗಿ ಈ ಗುಣಗಳನ್ನು ಕಳೆದುಕೊಳ್ಳಬಹುದು.



ಆಂಗ್ಲರು ತಮ್ಮ ವಾಕ್ ಸಂಪ್ರದಾಯದಲ್ಲಿ ಚರ್ಮಕ್ಕೆ ಬಹಳ ಮಹತ್ವವನ್ನು ಕೊಟ್ಟಿದ್ದಾರೆ.

ಉದಾಹರಣೆಗೆ

1. ಆಂಗ್ಲ ಪಂಡಿತರು ಚರ್ಮವನ್ನು ಜೀವನಕ್ಕೆ ಹೋಲಿಸಿದ್ದಾರೆ. (ಟು ಸೇವ್ ಮೈ ಸ್ಕಿನ್)
2. ಬುದ್ಧಿ ಶಕ್ತಿಯನ್ನು ಚರ್ಮದ ಗಾತ್ರಕ್ಕೆ ಹೋಲಿಸಿದ್ದಾರೆ (ತಿನ್ ಸ್ಕಿನ್ ಅಥವಾ ತಿಕ್ ಸ್ಕಿನ್ಡ್)
3. ಸೌಂದರ್ಯವನ್ನು ಚರ್ಮಕ್ಕೆ ಹೋಲಿಸಿದ್ದಾರೆ (ಎ ಸಿಲ್ಪ್ ಈಸ್ ಸ್ಕಿನ್ನಿ)
4. ತೊಂದರೆ ಅಥವಾ ಕಿರುಕುಳ ಶಬ್ದಕ್ಕೂ ಚರ್ಮವನ್ನು ಉಪಯೋಗಿಸಿದ್ದಾರೆ (ಗೆಟಿಂಗ್ ಅಂಡರ್ ಮೈ ಸ್ಕಿನ್)

ಹೀಗೆ ಆಂಗ್ಲ ನುಡಿಗಟ್ಟುಗಳಲ್ಲಿ ಚರ್ಮ ಎಂಬ ಶಬ್ದವನ್ನು ಹಲವು ರೀತಿಗಳಲ್ಲಿ ಉಪಯೋಗಿಸಿ ಚರ್ಮದ ಮಹತ್ವವನ್ನು ಎತ್ತಿ ಹಿಡಿದಿದ್ದಾರೆ.

ಹೆಣ್ಣು ಮತ್ತು ಗಂಡುಗಳು ಪರಸ್ಪರ ಆಕರ್ಷಣೆಯ ಪೈಪೋಟಿಯಲ್ಲಿ ಚರ್ಮವು ಕಾಂತಿಯುಕ್ತವಾಗಿ ಮತ್ತು ಸೌಂದರ್ಯಭರಿತವಾಗಿ ಕಾಣಲು ಶೃಂಗಾರ ಸಾಧನಗಳನ್ನು ಬಳಸಿ ಚರ್ಮವನ್ನು ಮತ್ತಷ್ಟು ಆಕರ್ಷಣೀಯ ವಸ್ತುವನ್ನಾಗಿ ಪರಿವರ್ತಿಸಿದ್ದಾರೆ.

ಚರ್ಮದ ರಚನೆ:

ಉಗುರು ಮತ್ತು ಕೂದಲು ಸಹ ಚರ್ಮದ ಒಂದು ಭಾಗ. ಚರ್ಮವು ಮನುಷ್ಯನ ತೂಕದ ಶೇ.15 ಭಾಗ ತೂಗುತ್ತದೆ. ಇದರ ವಿಸ್ತೀರ್ಣವು ಸುಮಾರು 10000 ದಿಂದ 18000 ಸ್ಕ್ವೇರ್ ಸೆಂ.ಮೀ.ನಷ್ಟಿದೆ. ಚರ್ಮದ ದಪ್ಪವು ಸುಮಾರು 0.5 ರಿಂದ 4 ಮಿ.ಮಿ ಗಳಷ್ಟಿದ್ದು ಮುಖ ಮತ್ತು ರೆಪ್ಪೆಯ ಚರ್ಮ ತೆಳುವಾಗಿಯೂ, ಅಂಗೈ ಮತ್ತು ಅಂಗಾಲಿನ ಚರ್ಮ ಮಂದವಾಗಿಯೂ ಇದೆ. ಚರ್ಮವನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು.

1. ಹೊರಚರ್ಮ (ಎಪಿಡೆರ್ಮಿಸ್)   2. ಒಳಚರ್ಮ (ಡೆರ್ಮಿಸ್)

1. ಹೊರಚರ್ಮ (ಎಪಿಡೆರ್ಮಿಸ್):

ಹೊರ ಚರ್ಮವು ಸುಮಾರು 0.4 ಮಿ.ಮೀ. ನಿಂದ 1.6 ಮಿ. ಮೀಟರ್‌ನಷ್ಟು ದಪ್ಪವಾಗಿದೆ. ಅಂಗಾಲು ಮತ್ತು ಅಂಗೈನ ಹೊರ ಚರ್ಮವು 5 ಪದರಗಳಿಂದ ಉಳಿದ ಶರೀರದ ಹೊರ ಚರ್ಮವು 4 ಪದರಗಳಿಂದ ಕೂಡಿದೆ. ಒಳಭಾಗದಿಂದ

ಹೊರ ಭಾಗಕ್ಕೆ ಐದು ಪದರಗಳಾದ (1) ಚಿಗುರು ಪದರ (ಬೇಸಲ್ ಲೇಯರ್:) (2) ಮುಳ್ಳಿನ ಪದರ (ಪ್ರಿಕಲ್‌ಸೆಲ್ ಲೇಯರ್) (3) ಹರಳು ಪದರ (ಗ್ರ್ಯಾನುಲಾರ್ ಲೇಯರ್) (4) ಲ್ಯೂಸಿಡ್‌ಪದರ (5) ಕಾರ್ನಿಯಮ್ ಪದರಗಳು ಇವೆ.

1) ಚಿಗುರು ಪದರ: ಚಿಗುರು ಪದರವು ಒಂದೇ ಸಾಲಿನಿಂದ ಕೂಡಿದ್ದು, ಒಳ ಚರ್ಮಕ್ಕೆ ಭದ್ರವಾಗಿ ಅಂಟಿಕೊಂಡಿರುತ್ತದೆ. ಕಲಮ್ನಾರ್ ಎಂಬ ಎತ್ತರವಾಗಿರುವ ಜೀವ ಕಣಗಳು ಮತ್ತು ಮೆಲನೋಸೈಟ್ ಎಂಬ ಜೀವ ಕಣಗಳು ಒಂದೆ ಸಾಲಿನಲ್ಲಿ 10–1 ರ ಅಂತರದಲ್ಲಿ ಜೋಡಿಸಲ್ಪಟ್ಟಿರುತ್ತವೆ. ಮೆಲನೋಸೈಟ್‌ನಿಂದ ಮೆಲಾನಿನ್ ಎಂಬ ಕಪ್ಪು ಬಣ್ಣವು ಉತ್ಪತ್ತಿಯಾಗಿ ಚರ್ಮದ ಕಂದುಬಣ್ಣಕ್ಕೆ ಕಾರಣವಾದರೆ ಕಲಮ್‌ನಾರ್ ಜೀವ ಕಣಗಳು ವಿಭಜನೆಗೊಂಡು ಒಂದು ಚಿಗುರು ಪದರದಲ್ಲೆ ಶಾಶ್ವತವಾಗಿ ಉಳಿದು ಮತ್ತೊಂದು ಮೇಲಿನ ಪದರಕ್ಕೆ ಬಂದು ಸೇರುತ್ತದೆ.

2) ಮುಳ್ಳಿನ ಪದರವು ಅನೇಕ ಸಾಲುಗಳಿಂದ (5 ರಿಂದ 10) ಕೂಡಿರುತ್ತದೆ. ಕಲಮ್ನಾರ್ ಜೀವ ಕಣಗಳು ಬಹುಕೋನಾಕೃತಿಯ ಜೀವಕಣಗಳಾಗಿ ಮಾರ್ಪಟ್ಟು ಜೀವ ಕಣಗಳ ಮೂಲೆಗಳಲ್ಲಿ ಮುಳ್ಳಿನ ರೀತಿ ಇರುವುದರಿಂದ ಈ ಪದರಕ್ಕೆ ಮುಳ್ಳಿನ ಪದರವೆನ್ನುತ್ತೇವೆ. ದಿನಕಳೆದಂತೆ ಈ ಜೀವ ಕಣಗಳು ಮೇಲೆ ಚಲಿಸುತ್ತಾ ನಂತರ ಹರಳು ಪದರವಾಗಿ ಮಾರ್ಪಡುತ್ತವೆ.

3) ಹರಳು ಪದರ (ಗ್ರ್ಯಾನುಲಾರ್ ಲೇಯರ್): ಹರಳು ಪದರವು 3 ರಿಂದ 4 ಸಾಲುಗಳಿಂದ ಕೂಡಿದ್ದು, ಜೀವ ಕಣಗಳು ಚಪ್ಪಟೆಯಾಗಿರುತ್ತವೆ. ಜೀವ ಕಣಗಳಲ್ಲೆ ಹರಳುಗಳು ಕಾಣಿಸಿಕೊಂಡು ದಿನಕಳೆದಂತೆ ಮೇಲಕ್ಕೆ ಚಲಿಸಿ ಕೊನೆಯಲ್ಲಿ ಜೀವ ಕಣಗಳು, ಹರಳು ಮತ್ತು ಜೀವವನ್ನು ಕಳೆದುಕೊಂಡು ಅಂಗೈ ಮತ್ತು ಅಂಗಾಲಿನಲ್ಲಿ ಲ್ಯೂಸಿಡ್ ಪದರವಾಗಿ ಮತ್ತು ಉಳಿದ ಚರ್ಮದಲ್ಲಿ ಕಾರ್ನಿಯಮ್ ಪದರವಾಗಿ ಮಾರ್ಪಡುತ್ತವೆ.

4) ಲ್ಯೂಸಿಡ್ ಪದರ: ಲ್ಯೂಸಿಡ್ ಪದರವು ಅಂಗೈ ಮತ್ತು ಅಂಗಾಲಿನಲ್ಲಿ 3–4 ಸಾಲುಗಳಿಂದ ಕೂಡಿದ ಪಾರದರ್ಶಕವಾದ ಪದರ, ಮೇಲಕ್ಕೆ ಚಲಿಸಿ ಕಾರ್ನಿಯಂ ಪದರವಾಗುತ್ತದೆ.

5) ಕಾರ್ನಿಯಂ ಪದರ: ಕಾರ್ನಿಯಂ ಪದರವು ಚರ್ಮದ ಮೇಲ್ಟೈ ಪದರ, ಚಪ್ಪಟೆಯಾಕಾರದ ನಿರ್ಜೀವಿ ಕಣಗಳಿಂದ ಕೂಡಿರುತ್ತದೆ. ದಿನಕಳೆದಂತೆ ಹರಳಿಲ್ಲದ ಜೀವ ಕಣಗಳು ಮೇಲಕ್ಕೆ ಚಲಿಸುತ್ತಾ ಒಂದಕ್ಕೊಂದು ಅಂಟಿಕೊಂಡು

ಹುರುಪಿನಂತೆ ಆಗುತ್ತವೆ. ಜೀವ ಕಣಗಳಲ್ಲಿದ್ದ ಜೀವ ರಸವು ಕೆರ್ಯಾಟಿನ್ ಎಂಬ ಪ್ರೋಟೀನ್‌ನಂತೆ ಬದಲಾಗುತ್ತದೆ. ಹುರುಪು ಮೇಲ್ಮೈ ಪದರದಿಂದ ಬೇರ್ಪಟ್ಟು ಚರ್ಮದಿಂದ ಹೊರದೂಡಲ್ಪಡುತ್ತದೆ.

ಈ ಕಾರ್ಯವು ಮನುಷ್ಯನ ಚರ್ಮದಲ್ಲಿ ನಿರಂತರವಾಗಿ ನಡೆಯುತ್ತಿರುತ್ತದೆ, ಆದರೆ ಕಣ್ಣಿಗೆ ಕಾಣಿಸಿಕೊಳ್ಳುವುದಿಲ್ಲ. ಹೀಗೆ ಜೀವ ಕಣಗಳು ತಳಪದರದಿಂದ ಮೇಲಕ್ಕೆ ಚಲಿಸಿ ನಿರ್ಜೀವಿಗಳಾಗಿ ಹುರುಪಿನಂತೆ ಚರ್ಮದಿಂದ ಹೊರಕ್ಕೆ ಎಸೆಯಲ್ಪಡಲು ತೆಗೆದುಕೊಳ್ಳುವ ಸಮಯ ಸುಮಾರು 39 ದಿನಗಳು. ಕೆಲವು ಚರ್ಮದ ಕಾಯಿಲೆಗಳಲ್ಲಿ ಈ ಹುರುಪು ಜಾಸ್ತಿಯಾಗಿ ಮತ್ತು ಬೇಗನೆ ಉತ್ಪತ್ತಿಯಾಗಿ ಅಥವಾ ಹೊರಗೆ ಎಸೆಯಲ್ಪಡುವುದು, ನಿಧಾನವಾಗಿ ಮೈ ಮೇಲೆ ಹುರುಪು ಕಾಣಿಸಿಕೊಳ್ಳುತ್ತದೆ.

2) ಒಳಚರ್ಮ (ಡೆರ್ಮಿಸ್)

0.5 ರಿಂದ 3 ಮಿ. ಮೀಟರ್‌ನಷ್ಟು ದಪ್ಪವಾಗಿರುವ ಒಳಚರ್ಮದಲ್ಲಿ ಫೈಬ್ರೋಬ್ಲಾಸ್ಟ್ ಎಂಬ ಜೀವ ಕಣಗಳಿಂದ ಕೊಲ್ಯಾಜಿನ್, ರೆಟಿಕ್ಯೂಲಿನ್ ಮತ್ತು ಎಲಸ್ಟಿನ್ ಎಂಬ ನಾರುಗಳು (ಫೈಬರ್ಸ್), ಆಧಾರ ದ್ರವ್ಯ ಅಥವಾ ಗ್ರೌಂಡ್ ಸಬ್‌ಸ್ಟನ್ಸ್ ಎಂಬ ವಸ್ತುಗಳು ಉತ್ಪತ್ತಿಯಾಗಿ ಒಳಚರ್ಮದಲ್ಲಿ ಹರಡಿಕೊಂಡಿರುತ್ತವೆ. ಇದರ ಜೊತೆಗೆ ಮ್ಯಾಕ್ರೋಫೇಜ್, ಮ್ಯಾಸ್ಟ್‌ಸೆಲ್, ಫ್ಯಾಟ್ ಸೆಲ್ ಮುಂತಾದ ಜೀವ ಕಣಗಳು ಹಾಗೂ ನರ ತಂತುಗಳು, ರಕ್ತನಾಳಗಳು, ಬೆವರು ಗ್ರಂಥಿಗಳು, ಜಿಡ್ಡಿನ ಗ್ರಂಥಿಗಳು, ಕೂದಲು ಚೀಲ, ಕೂದಲು ನಾಳ ಮತ್ತು ಕೂದಲು ಸಹ ತುಂಬಿಕೊಂಡಿವೆ.

ಜಿಡ್ಡು, ಜಿಡ್ಡಿನ ಗ್ರಂಥಿಗಳಿಂದ (ಸೆಬೇಸಿಯಸ್ ಗ್ಲ್ಯಾಂಡ್) ಜಿಡ್ಡಿನ ನಾಳದ ಮೂಲಕ ಕೂದಲು ನಾಳವನ್ನು ಸೇರಿ ನಂತರ ಹೊರ ಚರ್ಮಕ್ಕೆ ಬಂದು ಚರ್ಮವನ್ನು ಜಿಗುಟಾಗಿ ಇಡುವುದರಿಂದ ಚರ್ಮವು ಮೃದುವಾಗಿರುತ್ತದೆ. ಜಿಡ್ಡಿನ ಗ್ರಂಥಿಗಳು ಅಂಗೈ ಮತ್ತು ಅಂಗಾಲು ವಿನಹ ಚರ್ಮದಲ್ಲೆಲ್ಲಾ ಇರುತ್ತವೆ, ಆದರೆ ಮುಖ, ತಲೆ, ತೊಡೆಯ ಸಂದು, ಗುಪ್ತಾಂಗ, ಮಲದ್ವಾರ, ಕಂಕಳುಗಳಲ್ಲಿ ಹೇರಳವಾಗಿರುತ್ತವೆ, ಪ್ರಾಯದ ವಯಸ್ಸಿನಲ್ಲಿ ಜಿಡ್ಡು ಜಾಸ್ತಿ ಉತ್ಪತ್ತಿಯಾಗುತ್ತದೆ. ಬೆವರು ಗ್ರಂಥಿಗಳಲ್ಲಿ ಎರಡು ವಿಧ (1) ಎಕ್ರೈನ್ ಮತ್ತು (2) ಅಪೋಕ್ರೈನ್ ಬೆವರು ಗ್ರಂಥಿಗಳು.

ಸುರುಳಿಯಾಕಾರದ ಎಕ್ರೈನ್ ಬೆವರು ಗ್ರಂಥಿಗಳು ಒಳಚರ್ಮದ ತಳಭಾಗದಲ್ಲಿದ್ದು, ಎಕ್ರೈನ್ ಬೆವರು ನಾಳದ ಮೂಲಕ ಚರ್ಮದ ಮೇಲ್ಮೈಯನ್ನು

ಸೇರುತ್ತದೆ. ಬೆವರು, ಬಣ್ಣ ಮತ್ತು ವಾಸನೆ ಇಲ್ಲದ ದ್ರವ ಶೇ. 99 ಭಾಗ ನೀರಿನಿಂದ ಕೂಡಿರುತ್ತದೆ, ಉಳಿದ ಭಾಗವು ಸೋಡಿಯಂ, ಪೊಟಾಸಿಯಂ, ಕ್ಲೋರೈಡ್, ಯೂರಿಯಾ, ಪ್ರೋಟೀನ್, ಲಿಪಿಡ್ಸ್, ಅಮೈನೊಆಸಿಡ್, ಕ್ಯಾಲ್ಷಿಯಂ, ರಂಜಕ ಮತ್ತು ಕಬ್ಬಿಣದಿಂದ ಕೂಡಿದೆ. ಒಂದು ಘಂಟೆಗೆ 2 ರಿಂದ 3 ಲೀಟರ್ ಬೆವರು ಉತ್ಪತ್ತಿಯಾಗುತ್ತದೆ. ಒಂದು ಲೀಟರ್ ಬೆವರು 540 ಕ್ಯಾಲೋರಿ ಶಾಖವನ್ನು ದೇಹದಿಂದ ಕಡಿಮೆ ಮಾಡುತ್ತದೆ.

ಅಪೊಕ್ರೈನ್ ಬೆವರು ಗ್ರಂಥಿಗಳು ಕಂಕಳು, ಹೊಕ್ಕಳು, ತೊಡೆಸಂದು, ಮಲದ್ವಾರದ ಸುತ್ತ, ಕುಂಡಿ, ಸ್ತನಗಳ ತೊಟ್ಟಿನ ಸುತ್ತ ಮತ್ತು ಗುಪ್ತಾಂಗಗಳಲ್ಲಿ ಹೇರಳವಾಗಿ ಇರುತ್ತವೆ. ಮನುಷ್ಯರ ಪ್ರಾಯದಲ್ಲಿ ಜಾಸ್ತಿ ಉತ್ಪತ್ತಿಯಾಗುವ ಅಪೊಕ್ರೈನ್ ಬೆವರು ಕಂಕಳು, ಗುಪ್ತಾಂಗ ಮತ್ತು ತೊಡೆ ಸಂದುಗಳಲ್ಲಿ ಉಂಟಾಗುವ ವಿಶಿಷ್ಟ ವಾಸನೆಗೆ ಕಾರಣವಾಗಿದೆ. ಅಪೊಕ್ರೈನ್ ಬೆವರು ಸುರುಳಿಯಾಕಾರದ ಗ್ರಂಥಿಗಳಿಂದ ನಾಳದ ಮೂಲಕ ಕೂದಲು ಚೀಲವನ್ನು ಸೇರಿ ಕೂದಲು ನಾಳದ ಮೂಲಕ ಹೊರ ಚೆಲ್ಲಲ್ಪಡುತ್ತದೆ.

ಕೂದಲು ಚರ್ಮದ ಒಂದು ಭಾಗ ದಾರದಂತೆ ಚರ್ಮದ ಮೇಲ್ಭಾಗದಲ್ಲೆಲ್ಲಾ ಇದೆ. 0.05 ರಿಂದ 0.5 ಮಿಲಿಮೀಟರ್‌ನಷ್ಟು ದಪ್ಪವಾಗಿರುವ ಕೂದಲನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು. ಚರ್ಮದ ಒಳಭಾಗ ಬೇರು ಮತ್ತು ಹೊರಭಾಗ ಕಾಂಡ, ಬೇರಿನ ಸುತ್ತ ಕೂದಲು ಚೀಲ (ಹೇರ್ ಫಾಲಿಕಲ್) ಸುತ್ತುವರಿದಿರುತ್ತದೆ. ಕೂದಲು ಚೀಲದಲ್ಲಿ ಒಳ ಮತ್ತು ಹೊರ ಚರ್ಮದ ಅಂಗಾಂಶಗಳಿರುತ್ತವೆ. ಕೂದಲು ಚೀಲವು ಕೂದಲು ನಾಳದ ಮೂಲಕ ಚರ್ಮದ ಹೊರಭಾಗಕ್ಕೆ ತೆರೆದುಕೊಂಡಿರುತ್ತದೆ. ಒಂದು ಸಣ್ಣ ಮಾಂಸ ಖಂಡವು ಕೂದಲು ಚೀಲದ ತಳಭಾಗಕ್ಕೆ ಅಂಟಿಕೊಂಡು ಕೂದಲು ನಿಗರಲು ಸಹಾಯ ಮಾಡುತ್ತದೆ. ಪಕ್ಕದಲ್ಲಿ ಜಿಡ್ಡು ಗ್ರಂಥಿ ಮತ್ತು ಅಪೊಕ್ರೈನ್ ಬೆವರು ಗ್ರಂಥಿ ಕೂದಲು ಚೀಲವನ್ನು ಸೇರುತ್ತವೆ.

ಒಳಚರ್ಮದಲ್ಲಿ ಜ್ಞಾನ ನರತಂತುಗಳು (ಸೆನ್ಸರಿನರ್ವ್) ನೋವು, ಶಾಖ, ಸ್ಪರ್ಶ ಮತ್ತು ಒತ್ತಡದ ಪ್ರೇರಣೆಗಳನ್ನು ಗ್ರಾಹಕಾಂಗ (ರಿಸೆಪ್ಟಾರ್ಸ್) ಗಳಿಂದ ಮೆದುಳಿಗೆ ಕೊಂಡೊಯ್ದರೆ ಕ್ರಿಯಾ ನರತಂತುಗಳು (ಮೋಟಾರ್) ಸ್ವಪ್ರೇರಿತ ನರಗಳ (ಅಟೊನಾಮಿಕ್) ಮೂಲಕ ಕಾರ್ಯ ನಿರ್ವಹಿಸುತ್ತವೆ.

ಚರ್ಮದ ಬಣ್ಣವು ಕಪ್ಪು ಬಣ್ಣದ ಮೆಲ್ಯಾನಿನ್, ಹಳದಿ ಬಣ್ಣದ ಕೆರಾಟಿನ್ ಮತ್ತು ಕೆಂಪು ಬಣ್ಣದ ಹಿಮೊಗ್ಲೋಬಿನ್ ಎಂಬ ಪಿಗ್ಮೆಂಟ್‌ಗಳ ಮಿಶ್ರಣಗಳಿಂದ ಉಂಟಾಗಿದ್ದು, ಕಪ್ಪು ಜನರಲ್ಲಿ ಮೆಲ್ಯಾನಿನ್ ಅಂಶವು ಜಾಸ್ತಿಯಾಗಿರುತ್ತದೆ.

ಚರ್ಮದ ಕಾರ್ಯಗಳಲ್ಲಿ ಬಹಳ ಮುಖ್ಯವಾದುವುಗಳೆಂದರೆ (1) ರಕ್ಷಣೆ (2) ಶರೀರದ ಶಾಖವನ್ನು ಸ್ಥಿಮಿತದಲ್ಲಿಡುವುದು (3) ಜ್ಞಾನ ಸಂದೇಶದಲ್ಲಿ ಭಾಗಿಯಾಗುವುದು (4) ವಿಸರ್ಜನೆ ಮತ್ತು (5) ಉತ್ಪತ್ತಿ.

ಚರ್ಮವು ಶರೀರದ ಸುತ್ತಲ ಹೊದಿಕೆಯಂತೆ ಇದ್ದು, ಒಳಗಿರುವ ಮಾಂಸಖಂಡ, ಮೂಳೆ, ನರಗಳು, ರಕ್ತನಾಳ ಮುಂತಾದ ಸಮಸ್ತ ವಸ್ತುಗಳನ್ನು ಆಯಾ ಸ್ಥಳಗಳಲ್ಲಿ ನಿರ್ದಿಷ್ಟವಾಗಿ ಇರುವಂತೆ ನೋಡಿಕೊಂಡು ಅಂಗಾಂಗಗಳ ಚಲನೆ ವ್ಯವಸ್ಥಿತವಾಗಿ ನಡೆಯುವಂತೆ ಸಹಾಯ ಮಾಡುತ್ತದೆ. ಬಾಹ್ಯ ಪ್ರಪಂಚದ ಜೀವಿ ಮತ್ತು ನಿರ್ಜೀವಿ ವಸ್ತುಗಳ ಉಪದ್ರವದಿಂದ ಒಳಗಿನ ಅಂಗಾಂಶಗಳನ್ನು ಮುಕ್ತವಾಗಿಟ್ಟಿದೆ.

ಶರೀರದ ಶಾಖವನ್ನು ನರತಂತುಗಳ ಸಹಾಯದಿಂದ ನಿರಂತರ ಸ್ಥಿಮಿತದಲ್ಲಿ ಇರುವಂತೆ ನೋಡಿಕೊಳ್ಳುತ್ತದೆ. ಬೇಡವಾದ ಮಲಿನ ವಸ್ತುಗಳನ್ನು ಬೆವರು ಮತ್ತು ಕೂದಲಿನ ಬುಡದ ಮೂಲಕ ಹೊರ ಚೆಲ್ಲುತ್ತದೆ ಮತ್ತು ಚರ್ಮದಲ್ಲಿ ವಿಟಮಿನ್ - ಡಿ ಅನ್ನಾಂಗವು ಉತ್ಪತ್ತಿಯಾಗುತ್ತದೆ.

ಮೇಲೆ ವಿವರಿಸಿದ ಚರ್ಮದ ಯಾವುದೇ ಅಂಗಗಳು ಅಥವಾ ಅಂಗಾಂಗಗಳು ಅನೇಕ ಕಾರಣಗಳಿಂದ ಉದಾಹರಣೆಗೆ - ಅನುವಂಶಿಕ, ಪರಿಸರದ ಮತ್ತು ಆಹಾರದ ಅಸಮತೋಲನ, ಸೋಂಕುಗಳು ಮತ್ತು ಬಾಹ್ಯ ಪ್ರಪಂಚದ ಭೌತಿಕ ಏರುಪೇರುಗಳಿಂದ ತಮ್ಮ ಪ್ರಕೃತಿ ದತ್ತ ನಿಗದಿತ ಕಾರ್ಯಗಳು ಹೆಚ್ಚು ಕಡಿಮೆಯಾಗಿ ಚರ್ಮದ ರೋಗಗಳು ಉಂಟಾಗುತ್ತದೆ.

* * * * *

2. ಚರ್ಮದ ರಕ್ಷಣೆ ಮತ್ತು ಪೋಷಣೆ

ಚರ್ಮವು ಹೂವಿನಂತೆ ಬಹು ಸೂಕ್ಷ್ಮ. ಅತಿಯಾದ ಬಿಸಿಲು, ಮಳೆ, ಗಾಳಿ, ಧೂಳು ಚರ್ಮವನ್ನು ಘಾಸಿಗೊಳಸುತ್ತದೆ. ಪ್ರತಿಯೊಬ್ಬರು ತಮ್ಮ ಚರ್ಮದ ರಕ್ಷಣೆ ಮತ್ತು ಪೋಷಣೆಯನ್ನು ಮಾಡಿಕೊಳ್ಳದಿದ್ದರೆ ಚರ್ಮದ ನಾನಾ ತೊಂದರೆಗಳಿಗೆ ಸಿಲುಕಬಹುದು.

ಮಕ್ಕಳ ಚರ್ಮವನ್ನಂತೂ ಸೂಕ್ಷ್ಮವಾಗಿ ನೋಡಿಕೊಳ್ಳಬೇಕು. ಯಾವಾಗಲೂ ಹತ್ತಿಯಿಂದ ನೇಯ್ದ ಬಟ್ಟೆಗಳನ್ನು ಹಾಸಲು, ಹೊದಿಯಲು ಮತ್ತು ತೊಡಲು ಉಪಯೋಗಿಸಬೇಕು. ಪ್ರತಿದಿನ ಕೆಲವು ತಾಸು ಸ್ನಾನದ ಮುಂಚೆ ಎಣ್ಣೆಯನ್ನು ಚರ್ಮಕ್ಕೆ ಸವರಿ ಮಕ್ಕಳ ಸಾಬೂನಿನಿಂದ ಸ್ನಾನ ಮಾಡಿಸಬೇಕು. ಮನೆಯ ಒಳಗೆ ಧೂಳು ಮಗುವಿನ ಮೈಮೇಲೆ ಬೀಳದಂತೆ ಮನೆಯನ್ನು ಚೊಕ್ಕಟವಾಗಿಡಬೇಕು. ಸೊಳ್ಳೆಗಳ ಕಡಿತದಿಂದ ಗುಳ್ಳೆಗಳು ಮತ್ತು ಕೆರೆತ ಬರದಂತೆ ಸೊಳ್ಳೆ ಪರದೆಯನ್ನು ಉಪಯೋಗಿಸಬೇಕು. ಅಲರ್ಜಿ ಇರುವವರು ಮತ್ತು ಹುಟ್ಟಿನಿಂದ ಸೂಕ್ಷ್ಮ ಚರ್ಮದವರೂ ಸಹ ತಮ್ಮ ಚರ್ಮವನ್ನು ಮಕ್ಕಳ ಚರ್ಮದಂತೆ ನೋಡಿಕೊಳ್ಳಬೇಕು.

ಚಳಿಗಾಲದಲ್ಲಿ ನೀರಿನಂಶ ಕಡಿಮೆಯಾಗಿ ಚರ್ಮವು ಒಣಗಿ ಒಡೆಯುತ್ತದೆ. ಚರ್ಮದೊಳಗೆ ನೀರಿನ ಅಂಶ ಇರುವಂತೆ ನೋಡಿಕೊಳ್ಳಲು ಅಭ್ಯಂಜನ ಸ್ನಾನ ಉಪಯೋಗಕಾರಿ. ಬಿಸಿಲಿಗೆ ಚರ್ಮವು ಬಾಡುತ್ತದೆ, ಸೊರಗುತ್ತದೆ ಮತ್ತು ಕಪ್ಪಾಗುತ್ತದೆ. ಇದನ್ನು ತಡೆಯಲು ಬೇಸಿಗೆಯಲ್ಲಿ ಬಿಸಿಲನ್ನು ಹಿಮ್ಮೆಟ್ಟಿಸುವಂತಹ ಬಿಳಿ ಉಡುಪುಗಳನ್ನು ಮೈ ತುಂಬುವಂತೆ ತೊಡಬೇಕು. ಬೆವರು, ಕ್ರಿಮಿ ಕೀಟಗಳು ಮತ್ತು ಕಾರ್ಖಾನೆಗಳ ಕೊಳಕು ಮೈಮೇಲೆ ಕೂರದಂತೆ ಪ್ರತಿದಿನ ತಣ್ಣೀರು ಅಥವಾ ಬಿಸಿನೀರಿನಿಂದ ಸ್ನಾನ ಮಾಡಿ ಬಹುಪಾಲು ಚರ್ಮಮುಚ್ಚುವಂತೆ ಉಡುಪುಗಳನ್ನು ತೊಡುತ್ತಿದ್ದರೆ ಬಹುಪಾಲು ಚರ್ಮದ ಸೋಂಕುಗಳನ್ನು ತಡೆಗಟ್ಟಬಹುದು.

ಸಮತೋಲನ ಆಹಾರ, ವ್ಯಾಯಾಮ, ಸಮಯಕ್ಕೆ ಸರಿಯಾಗಿ ನಿದ್ರೆ ಮತ್ತು ದುಶ್ಚಟ ರಹಿತ ಬದುಕು ಪ್ರಶಾಂತ ಮನಸ್ಸು ಚರ್ಮದ ಕಾಂತಿಗೆ ಸಹಾಯಕ.

* * * * *

೩. ಪರಾವಲಂಬಿ ಫಂಗಸ್ ಸಾಮ್ರಾಜ್ಯ



ಜಗತ್ತಿನ ಜೀವಿಗಳಲ್ಲಿ ಪ್ರಾಣಿ ಜಾತಿಯ ಬ್ಯಾಕ್ಟೀರಿಯಾಗಳನ್ನು ಹೊರತುಪಡಿಸಿ ಸಸ್ಯ ಜಾತಿಯ ಫಂಗಸ್ ಅರ್ಥಾತ್ ಬೂಸ್ಟುಗಳನ್ನು ಸಂಖ್ಯೆಯಲ್ಲಿ ಮೀರಿಸುವ ಜೀವಿಗಳು ಬೇರೆ ಇಲ್ಲ. ಫಂಗಸ್‌ಗಳು ಇಲ್ಲದ ಜಾಗವಿಲ್ಲ. ಇವು ಸರ್ವಾಂತರ್ಯಾಮಿ. ಪರಿಸರದ ಜೀವಿ ಮತ್ತು ನಿರ್ಜೀವ ವಸ್ತುಗಳ ಒಳಗೆ ಮತ್ತು ಹೊರಗೆ ತಿಂಡಿ ತಿನಿಸುಗಳಲ್ಲಿ ದವಸ ಧಾನ್ಯಗಳಲ್ಲಿ ಹಣ್ಣು ತರಕಾರಿಗಳಲ್ಲಿ ಮತ್ತು ಕೊಳಕು ಗುಂಡಿಗಳಲ್ಲಿ ಇವುಗಳ ಜೀವನ, ಶರವೇಗದ ವಂಶಾಭಿವೃದ್ಧಿಯೇ ಇವುಗಳ ಬೃಹತ್ ಸಂಖ್ಯೆಗೆ ಕಾರಣ. ಅಂಟಾರ್ಟಿಕದ ಗ್ಲೇಸಿಯರ್ಸ್‌ನಲ್ಲಿ ಭಟ್ಟಿಇಳಿಸಿದ ನೀರಿನಲ್ಲಿ ಮತ್ತು ಸುಡುವ ಪ್ರಬಲ ನೈಟ್ರಿಕ್ ಆಮ್ಲದಲ್ಲಿಯೂ ಕೆಲವು ಜಾತಿಯ ಫಂಗಸ್‌ಗಳು ಬದುಕ ಬಲ್ಲವು.

ಎಲ್ಲಾ ಸಸ್ಯಗಳ ಎಲೆಗಳಲ್ಲಿ ಇರುವಂತೆ ಸ್ವತಹ ಆಹಾರ ಉತ್ಪಾದನೆಗೆ ನೆರವಾಗುವ ಕ್ಲೋರೋಫಿಲ್ ರಾಸಾಯನಿಕವು ಈ ಫಂಗಸ್‌ಗಳಲ್ಲಿ ಇಲ್ಲದಿರುವುದರಿಂದಲೇ ಇವುಗಳಿಗೆ ಪರಾವಲಂಬಿಯಾಗಿ ಜೀವಿಸುವುದು ಅನಿವಾರ್ಯ. ಇತರರ ಆಶ್ರಯ ಅತ್ಯಗತ್ಯ. ಆದುದರಿಂದಲೇ ಇವುಗಳ ಉಪದ್ರವ ಹೆಚ್ಚು. ಸುಮಾರು 50 ಸಾವಿರದಿಂದ ಒಂದು ಲಕ್ಷದವರೆಗೆ ವಿವಿಧ ಜಾತಿಯ ಫಂಗಸ್‌ಗಳು ನಮ್ಮ ಪರಿಸರದಲ್ಲಿವೆ. ಇವುಗಳ ಗಾತ್ರ ರೂಪ ಆಕಾರ

ಬಣ್ಣ ಮತ್ತು ಬದುಕಿನ ರೀತಿ ನೀತಿಗಳು ಬೇಕಾದಷ್ಟು ಬಗೆಗಳು. ಅಣಬೆಗಳು ಟೋಡಸ್ಟೂಲ್‌ಗಳು ಬೃಹದಾಕಾರದ ಪಫ್‌ಬಾಲ್‌ಗಳು ಮತ್ತು ಮೌಲ್ಡ್ಸ್ ಮುಂತಾದ ಫಂಗಸ್‌ಗಳನ್ನು ಕಣ್ಣಿನಲ್ಲಿ ನೋಡಬಹುದಾದರೆ ಈಸ್ಟ್ ಮತ್ತು ಡೆರ್ಮಟೋಫೈಟ್ಸ್ ಮುಂತಾದ ಅಸಂಖ್ಯ ರೋಗಕಾರಕ ಫಂಗಸ್‌ಗಳನ್ನು ಸೂಕ್ಷ್ಮದರ್ಶಕದಲ್ಲಿ ನೋಡಬಹುದು.

ಪೆನ್ಸಿಲಿನ್ ಮತ್ತು ಗ್ರೀಸಿಯೋಫೆಲ್ವಿನ್ ಮುಂತಾದ ಆಂಟಿಬಯಾಟಿಕ್ ಔಷಧಗಳು ಕೆಲವು ಜಾತಿಯ ಫಂಗಸ್‌ಗಳಿಂದಲೇ ದೊರೆತರೆ ಏಕಾಣು ಜೀವಿ ಫಂಗಸ್ ಆದ ಈಸ್ಟ್‌ಗಳನ್ನು ಮದ್ಯ ತಯಾರಿಕೆಯಲ್ಲಿ ಬೇಕರಿಗಳಲ್ಲಿ ಮತ್ತು ಈಗೀಗ ಬಹಳಷ್ಟು ಮಹಿಳೆಯರು ಪಾಕಶಾಸ್ತ್ರದಲ್ಲಿ ಬಳಸುತ್ತಾರೆ. ಔಷಧ, ಬಣ್ಣ ಮತ್ತು ಮಸಿ ಮುಂತಾದ ವಸ್ತುಗಳ ತಯಾರಿಕೆಯಲ್ಲಿ ಬೇಕಾಗಿರುವ ಸಿಟ್ರಿಕ್ ಆಮ್ಲವು ಆಸ್ಪರಜಿಲ್ಲಸ್ ಮುಂತಾದ ಫಂಗಸ್‌ಗಳ ಸಹಕಾರದಿಂದಲೇ ದೊರೆಯುತ್ತದೆ. ಹೆರಿಗೆ ಸಮಯದಲ್ಲಿ ಅತಿ ರಕ್ತಸ್ರಾವವನ್ನು ತಡೆಯಲು ಉಪಯೋಗಿಸುವ ಎರ್ಗಾಟಮಿನ್ ಮುಂತಾದ ಅಲ್ಕಲಾಯಿಡ್‌ಗಳು ಫಂಗಸ್ಗಳಿಂದಲೇ ಲಭ್ಯವಿದೆ. ನಿಸರ್ಗದಲ್ಲಿ ದೊರೆಯುವ ಫಂಗಸ್ ವಂಶದ ವಿವಿಧ ಜಾತಿಯ ಅಣಬೆಗಳನ್ನು ಆಹಾರವಾಗಿ ವಿವಿಧ ರೀತಿಯಲ್ಲಿ ಅಡುಗೆ ಮಾಡಿ ಉಪಯೋಗಿಸುತ್ತಾರೆ. ಇವು ತಿನ್ನಲು ಬಲು ರುಚಿಕರ ಹಾಗೂ ಪುಷ್ಟಿಕರ. ತಿನ್ನುವ ಅಣಬೆಗಳ ವ್ಯವಸಾಯವನ್ನು ಕೆಲವರು ಹಮ್ಮಿಕೊಂಡಿದ್ದಾರೆ. ಹಾಗೆಯೇ ವಿಷಕಾರಿ ಅಣಬೆಗಳ ಬಗ್ಗೆ ಎಚ್ಚರ ಅಗತ್ಯ.

ಕೆಲವು ಫಂಗಸ್‌ಗಳು ಜಮೀನಿನಲ್ಲಿ ಮಣ್ಣು ಫಲವತ್ತಾಗಿ ಇರಲು ಸಹಕರಿಸುತ್ತವೆ. ಅದರೆ ಬಹಳಷ್ಟು ಫಂಗಸ್‌ಗಳು ವಿಷಕರ ವಿನಾಶಕರ ಮತ್ತು ಮಾನವರಿಗೆ ಉಪದ್ರವಕಾರಿಗಳೇ, ಶೇಕಡಾ ಹತ್ತು ಭಾಗದಷ್ಟು ರೈತರ ಬೆಳೆ ಈ ಫಂಗಸ್‌ಗಳಿಂದಲೇ ನಾಶವಾಗುತ್ತಿದೆ. ಕಣಜ ಮತ್ತು ಗೋಡೋನ್‌ಗಳಲ್ಲಿ ಬಹಳಷ್ಟು ದವಸ ಧಾನ್ಯಗಳು ಈ ಫಂಗಸ್‌ಗಳಿಂದಲೇ ಬೂಸ್ಟು ಹಿಡಿದು ಹಾಳಾಗುತ್ತಿದೆ. ಕೆಲವು ಜಾತಿಯ ಫಂಗಸ್‌ಗಳು ಮೈಕೊ ಟಾಕ್ಸಿನ್ ಎಂಬ ವಿಷವನ್ನು ಹೊರ ಸೂಸುವುದರಿಂದ ಅನೇಕ ಸಲ ಆಹಾರದಲ್ಲಿ ಕಲಬೆರಕೆಯಾಗಿ ದೇಹದೊಳಕ್ಕೆ ಸೇರಿದಾಗ (ಫುಡ್‌ಪಾಯ್ಸನ್) ಆಹಾರ ವಿಷವೇರಿಕೆ ಲಕ್ಷಣಗಳಿಂದ ಪ್ರಾಣಕ್ಕೆ ಅಪಾಯ ಒದಗಬಹುದು.

ರೋಗಕಾರಕ ಫಂಗಸ್

ಕಣ್ಣಿಗೆ ಕಾಣದ ಫಂಗಸ್ ಅಣುಗಳು (ಸ್ಪೋರ್ಸ್) ಗಾಳಿಯಲ್ಲಿ ತೂರಿಕೊಂಡು ಮನುಷ್ಯರ ಚರ್ಮ ಕಣ್ಣು ಮೂಗು ಮತ್ತು ಗಂಟಲಿಗೆ ತಾಗಿದರೆ

ಅಥವಾ ದೇಹದೊಳಕ್ಕೆ ನುಸುಳಿದರೆ ಕೆಲವರಲ್ಲಿ ದೇಹದಲ್ಲಿರುವ ಜೀವಕಣಗಳಿಗೆ ಒಗ್ಗದೆ ಅಲರ್ಜಿ ಉಂಟಾಗಿ ಅಲರ್ಜಿಕ್ ಅಸ್ತಮಾ, ಪೈತ್ಯ, ರೈನೈಟಿಸ್ (ಮೂಗು ಸೋರುವಿಕೆ) ಬ್ರಾಂಕೈಟಿಸ್ (ಶ್ವಾಸನಾಳದುರಿತ) ಕಂಜಕ್ಟೈವೈಟಿಸ್ (ಕಣ್ಣು ಕೆಂಪಾಗುವುದು) ಮತ್ತು ಇಸುಬು ಅಥವಾ ಡರ್ಮಟೈಟಿಸ್ ಮುಂತಾದ ಕಾಯಿಲೆಗಳಿಂದ ನರಳಬಹುದು.

ಇತಿಹಾಸ ಬದಲಾಗುತ್ತಿದ್ದಂತೆ ನಿಸರ್ಗದಲ್ಲಿ ಪರಾವಲಂಬಿಯಂತೆ ಬದುಕಿದ್ದ ಫಂಗಸ್‌ಗಳಲ್ಲಿ ಕೆಲವು ಪ್ರಾಣಿ ಮತ್ತು ಮನುಷ್ಯರ ಚರ್ಮದ ಮೇಲ್ಭಾಗದಲ್ಲಿರುವ ಕೆರಾಟೀನ್ ಎಂಬ ಪ್ರೋಟೀನನ್ನು ತಿಂದು ಜೀವಿಸುವುದನ್ನು ಕಲಿತ ಮೇಲೆ ಪ್ರಾಣಿ ಮತ್ತು ಮನುಷ್ಯರ ಚರ್ಮ ಕೂದಲು ಮತ್ತು ಉಗುರುಗಳಿಗೆ ಸೋಂಕು ತಟ್ಟಿ ರಿಂಗ್ ವರ್ಮ್ ಅರ್ಥಾತ್ ಹುಳುಕಡ್ಡಿ, ಅನಿಕೊಮೈಕೋಸಿಸ್ ಮತ್ತು ಕೀರಿಯಾನ್ ಮುಂತಾದ ಕಾಯಿಲೆಗಳಿಂದ ತಲೆ ಕೂದಲು ಉದುರಿ ಚರ್ಮ ಮತ್ತು ಉಗುರು ವಿಕಾರಗೊಳ್ಳಲು ಕಾರಣವಾದರೆ ಕೆಲವು ಜಾತಿಯ ಫಂಗಸ್‌ಗಳಿಗೆ ಕೆರಾಟೀನ್ ಪ್ರೋಟೀನನ್ನು ತಿನ್ನಲು ಶಕ್ತಿ ಇಲ್ಲದೆ ಚರ್ಮದ ಮೇಲಿರುವ ಕೊಳಕನ್ನು ತಿಂದು ಜೀವಿಸುವುದನ್ನು ಕಲಿತು ಯಾವ ತೊಂದರೆಯನ್ನೂ ಕೊಡದೆ ಉರುಪೆಯಿಂದ ಕೂಡಿದ ಚಿಬ್ಬು ಅಥವಾ ಸಿಬ್ಬಿನಂತೆ ದೇಹದ ಮೇಲ್ಭಾಗದ ಮೈಮೇಲೆಲ್ಲಾ ಹರಡುವುದನ್ನು ಅನೇಕರ ಕುತ್ತಿಗೆ ಮತ್ತು ಮೈಮೇಲೆ ನೀವೆಲ್ಲಾ ನೋಡಿರಬಹುದು.

ಕೆಲವು ಜಾತಿಯ ಫಂಗಸ್‌ಗಳು ಜಖಂಗೊಂಡ ಚರ್ಮದ ಮೂಲಕ ಅಥವ ಬಾಯಿ ಮತ್ತು ಮೂಗಿನ ಮೂಲಕ ದೇಹವನ್ನು ಹೊಕ್ಕು ಶ್ವಾಸಕೋಶ ಮಿದುಳು ಅನ್ನಾಂಗ ಜನನೇಂದ್ರಿಯ ಮತ್ತು ಚರ್ಮದ ತಳಭಾಗದಲ್ಲಿ ಅನೇಕ ಫಂಗಸ್ ಕಾಯಿಲೆಗಳಿಗೆ ಕಾರಣವಾಗಿ ತಕ್ಕ ಔಷಧಿಗಳು ಲಭ್ಯವಿಲ್ಲದೆ ಜೀವಕ್ಕೆ ಗಂಡಾಂತರಕಾರಿಯಾಗಿ ಪರಿಣಮಿಸಿದೆ.

ಇಷ್ಟೆಲ್ಲಾ ಆತಂಕಕಾರಿಯಾದ ಈ ಫಂಗಸ್‌ಗಳು ಸಾಮಾನ್ಯವಾಗಿ ಆರೋಗ್ಯವಂತ ಸಸ್ಯ ಪ್ರಾಣಿ ಅಥವ ಮಾನವರಿಗೆ ರೋಗವನ್ನು ಉಂಟುಮಾಡುವಷ್ಟು ಶಕ್ತಿಯುತವಾಗಿಲ್ಲ.

ಭೂಮಿಯ ಫಲವತ್ತನ್ನು ಉತ್ತಮಪಡಿಸಿ ತಕ್ಕ ಪ್ರಮಾಣದಲ್ಲಿ ನೀರು ಗೊಬ್ಬರ ಕೊಟ್ಟು ಕಳೆ ರಹಿತ ವ್ಯವಸಾಯದಿಂದ ಹಣ್ಣು ತರಕಾರಿ ಮತ್ತು ಧಾನ್ಯಗಳ ಬೆಳೆಗಳೂ ಸೇರಿದಂತೆ ಅಗತ್ಯವಿರುವ ಇಡೀ ಸಸ್ಯ ಕುಲವನ್ನು ಈ ಫಂಗಸ್ ರೋಗಗಳಿಂದ ಬಹುಪಾಲು ಮುಕ್ತವಾಗಿಡಬಹುದು.

ಹಾಗೆಯೇ ಯಾವೊಂದು ದುಶ್ಚಟವಿಲ್ಲದೆ ತಕ್ಕ ಪ್ರಮಾಣದಲ್ಲಿ ಆಹಾರ ಸೇವಿಸಿ ಶ್ರಮ ವಹಿಸಿದ ದುಡಿಮೆ ಅಥವ ವ್ಯಾಯಾಮದಿಂದ ದೃಢಕಾಯರಾದ ಮನುಷ್ಯರೂ ಈ ಫಂಗಸ್ ರೋಗಗಳ ಬಾಧೆಯಿಂದ ಸಾಧ್ಯವಾದಷ್ಟೂ ಮುಕ್ತವಾಗಿರಬಹುದು.

* * * * *

4. ಹುಳುಕಡ್ಡಿ (ರಿಂಗ್ ವರ್ಮ್)



ಸಾಮಾನ್ಯವಾಗಿ ಜನರು ಹುಳುಕಡ್ಡಿ, ಗಜಕರ್ಣ ಮುಂತಾದ ಹೆಸರಿನಿಂದ ಕರೆಯುವ ಈ ಅಂಟು ಜಾಡ್ಯ ವಿವಿಧ ಜಾತಿಯ ಡರ್ಮಟೋಫೈಟ್ಸ್ ಫಂಗಸ್‌ಗಳಿಂದ ಬರುತ್ತದೆ.

ಚರ್ಮ, ಕೂದಲು ಮತ್ತು ಉಗುರುಗಳಲ್ಲಿ ಕಾಣ ಬರುವ ಈ ಕಾಯಿಲೆ ದೃಢಕಾಯರಾದ ಆರೋಗ್ಯವಂತರಲ್ಲಿ ಮಿತಿಯಾಗಿ ಮತ್ತು ದುಶ್ಚಟಗಳಿಂದ ಹಾಗೂ ಇತರೆ ಕಾಯಿಲೆಗಳಿಂದ ನರಳುತ್ತಿರುವವರಲ್ಲಿ ಅತಿಯಾಗಿ ಕಾಣಿಸಿಕೊಳ್ಳುತ್ತದೆ.

ಕಾಯಿಲೆ ಬಂದ ಸ್ಥಳವನ್ನು ಆಧರಿಸಿ ಅವನ್ನು ಈ ರೀತಿ ಹೆಸರಿಸಬಹುದು.

- ತಲೆಯಲ್ಲಿದ್ದರೆ – ಟೇನಿಯಾ ಕ್ಯಾಪಿಟಸ್
- ಗಡ್ಡದಲ್ಲಿದ್ದರೆ – ಟೇನಿಯಾ ಬಾರ್ಬೆ
- ಮುಖದಲ್ಲಿದ್ದರೆ – ಟೇನಿಯಾ ಫೇಸಿಯ
- ಕೈಗಳಲ್ಲಿದ್ದರೆ – ಟೇನಿಯಾ ಮ್ಯಾನಮ್

- ಕಾಲಿನಲ್ಲಿದ್ದರೆ – ಟೇನಿಯಾ ಪೀಡಿಸ್
- ತೊಡೆ ಸಂದುಗಳಲ್ಲಿದ್ದರೆ – ಟೇನಿಯಾ ಕ್ರೂರಿಸ್
- ಉಗುರಿನಲ್ಲಿದ್ದರೆ – ಆನಿಕೋ ಮೈಕೋಸಿಸ್
- ಮಿಕ್ಕ ದೇಹದ ಭಾಗದಲ್ಲಿದ್ದರೆ – ಟೇನಿಯಾ ಕಾರ್ಪೋರಿಸ್
- ಒಂದೆರಡು ಉಂಗುರಾಕಾರವಿದ್ದರೆ – ಟೇನಿಯಾ ಸರ್ಸಿನೇಟ್

ಉಂಗುರಾಕಾರದ ಅಥವ ಸುರುಳಿಯಂತೆ ಕಾಣುವ ಕಾಯಿಲೆಯ ಮಚ್ಚೆಗಳ ಅಂಚಿನಲ್ಲಿಯೇ ಫಂಗಸ್‌ಗಳು ಜಾಸ್ತಿ ಇರುವುದರಿಂದ ಮಧ್ಯ ಭಾಗಕ್ಕಿಂತ ಅಂಚಿನಲ್ಲಿಯೇ ಜಾಸ್ತಿ ಕಡಿತವಿದ್ದು ಜಾಸ್ತಿ ಕೆಂಪಾಗಿರುತ್ತದೆ ಹಾಗೂ ಸ್ವಲ್ಪ ಹುರುಪೆ ಕಾಣಿಸಿಕೊಳ್ಳುತ್ತದೆ. ಆರಂಭದಲ್ಲಿ ಮುಲಾಮುಗಳಿಂದ ಇದನ್ನು ಗುಣಪಡಿಸಿಕೊಳ್ಳಬಹುದು. ಅತಿಯಾಗಿದ್ದರೆ ಮಾತ್ರೆಗಳನ್ನು ವೈದ್ಯರ ಸಲಹೆಯಂತೆ ದೀರ್ಘಕಾಲ ತೆಗೆದುಕೊಳ್ಳಬೇಕಾಗುತ್ತದೆ.

ಟೇನಿಯಾ ಕ್ಯಾಪಿಟಸ್

ತಲೆಯ ಚರ್ಮ ಮತ್ತು ಕೂದಲಿನ ಬುಡದಲ್ಲಿ ಕಾಣಿಸಿಕೊಳ್ಳುವ ರಿಂಗ್ ವರ್ಮ್ ಅಂಟು ಜಾಡ್ಯ, ಮಕ್ಕಳು ಮತ್ತು ಚಿಕ್ಕವರಲ್ಲಿ ಬಹಳ ಸಾಮಾನ್ಯವಾಗಿರುತ್ತದೆ. ಧಾರ್ಮಿಕ ಸಮಾರಂಭಗಳಲ್ಲಿ ತಲೆಯ ಕೂದಲನ್ನು ತೆಗೆಸಿದಾಗ ಮತ್ತು ಕ್ಷೌರ ಮಾಡಿಸಿದಾಗ ಅಥವಾ ಮನೆಯಲ್ಲಿ ಎಲ್ಲರೂ ಒಂದೇ ಬಾಚಣಿಗೆ, ಟವಲ್, ಸಾಬೂನು ಉಪಯೋಗಿಸುವುದರಿಂದ ಒಬ್ಬರಿಂದೊಬ್ಬರಿಗೆ ಹರಡುತ್ತದೆ. ಹುರುಪೆ ಅಥವ ಹೊಟ್ಟು ಕಾಣಿಸಿ ಕೊಳ್ಳುವುದು ಕಡಿಯುವುದು, ಕೂದಲು ಉದುರುವುದು ಅಥವ ಮೊಟಕಾಗಿರುವುದು ಸಾಮಾನ್ಯವಾಗಿ ಕಾಣುವ ಲಕ್ಷಣಗಳು. ಕಾಯಿಲೆ ಜಾಸ್ತಿ ಆದಾಗ ಕೆರೆತದಿಂದಾಗಿ ಉಗುರು ಸಂದಿನ ಕೊಳೆಯಿಂದ ಮೇಲು ಸೋಂಕು ತಗಲಿ ಕೀವು ಗುಳ್ಳೆಗಳು ಕಾಣಿಸಿಕೊಂಡು ಕುತ್ತಿಗೆಯಲ್ಲಿ ಬರೆಗಳ್ಳೆ ಕಟ್ಟುತ್ತದೆ.

ಪ್ರಾರಂಭದಲ್ಲಿ ಕೂದಲಿನ ಬುಡಕ್ಕೆ ಸವರುವ ಔಷಧಗಳಿಂದ ಪ್ರತಿ ದಿನ ಎರಡು ಸಾರಿ ಸವರುತ್ತಾ ಕಾಯಿಲೆಯ ಚಿಹ್ನೆಗಳು ಸಂಪೂರ್ಣವಾಗಿ ಗುಣವಾದ ಮೇಲೂ ನಿಲ್ಲಿಸದೆ ಕೆಲವು ದಿನಗಳವರೆಗೆ ಸವರುತ್ತಿರಬೇಕು. ಕಾಯಿಲೆ ಜಾಸ್ತಿಯಾಗಿದ್ದರೆ ವೈದ್ಯರ ಸಲಹೆಯಂತೆ ಮಾತ್ರೆಗಳನ್ನು ಕೆಲವು ತಿಂಗಳುಗಳ ಕಾಲ ತೆಗೆದು ಕೊಳ್ಳಬೇಕಾಗುತ್ತದೆ. ಕೀವು ಗುಳ್ಳೆಗಳಾಗಿದ್ದರೆ ಆಂಟಿ ಬಯೋಟಿಕ್ಸ್ ಔಷಧಗಳನ್ನು ಐದರಿಂದ ಏಳು ದಿನಗಳವರೆಗೆ ತೆಗದುಕೊಳ್ಳಬೇಕು.

ಟೀನಿಯಾ ಕ್ರೂರಿಸ್

ಪ್ರಾಪ್ತ ವಯಸ್ಸಿನವರಲ್ಲಿ, ಆಟಗಾರರಲ್ಲಿ ಮತ್ತು ಕಾಚ ಅಥವ ಲಂಗೋಟಿ ಧರಿಸುವವರ ತೊಡೆಯ ಸಂದುಗಳಲ್ಲಿ, ಹೆಚ್ಚಾಗಿ ಬೇಸಿಗೆಯಲ್ಲಿ ಇದು ಕಾಣಿಸಿಕೊಳ್ಳುತ್ತದೆ. ಮಚ್ಚೆಗಳ ಅಂಚಿನಲ್ಲಿ ಕಡಿತ ಇದ್ದು ಹುರುಪೆ ಮತ್ತು ಸಣ್ಣ ಸಣ್ಣ ಕೆಂಪು ಮಿಶ್ರಿತ ಕಂದು ಗುಳ್ಳೆಗಳು ಇರುತ್ತವೆ. ಚಿಗುರಿನಲ್ಲಿಯೇ ಗುಣಪಡಿಸಿಕೊಳ್ಳದಿದ್ದರೆ ಸೋಂಕು ಬಲಿತು ಔಷಧಗಳಿಂದ ವಾಸಿಯಾದರೂ ಆಗಾಗ್ಗೆ ಮರುಕಳಿಸುತ್ತಿರುತ್ತದೆ. ತೊಡೆಯ ಸಂದುಗಳನ್ನು ತೇವರಹಿತವಾಗಿ ಮತ್ತು ಗಾಳಿಯಾಡುವಂತೆ ಎಚ್ಚರಿಕೆ ವಹಿಸಿದರೆ ಕಾಯಿಲೆ ಬರದಂತೆ ನೋಡಿಕೊಳ್ಳಬಹುದು.

ಆನಿಕೊ ಮೈಕೋಸಿಸ್


ಹುಳುಕಡ್ಡಿ, ಉಗುರಿಗೆ ತಗುಲಿದ ಪ್ರಾರಂಭದಲ್ಲಿಯೇ ಚಿಕಿತ್ಸೆ ತೆಗೆದುಕೊಂಡರೆ ಸುಲಭದಲ್ಲಿ ಗುಣಪಡಿಸಿಕೊಳ್ಳಬಹುದು. ಕಾಯಿಲೆ ಬಲಿತ ಮೇಲೆ ಕೆಲವು ತಿಂಗಳಿನಿಂದ ಒಂದು ವರ್ಷದವರೆಗೂ ಮಾತ್ರೆಗಳನ್ನು ನುಂಗಬೇಕಾಗಿ ಬರಬಹುದು.

ಉಗುರು ಒರಟಾಗುವುದು, ದಪ್ಪವಾಗುವುದು, ಬಣ್ಣ ಬದಲಾಗುವುದು, ಉಗುರಿನ ಮೇಲೆ ಗೆರೆಗಳು, ಮಚ್ಚೆಗಳು, ಕುಳಿಗಳು ಕಾಣಿಸಿಕೊಂಡು ಅಂತಿಮವಾಗಿ ಉಗುರು ಬಿರುಕು ಬಿಟ್ಟು ಉದುರಿ ಹೋಗುತ್ತದೆ.

ಕಾಯಿಲೆಯ ವಿಧ ಮತ್ತು ಪ್ರಮಾಣವನ್ನಾಧರಿಸಿ ಮಿತಿಯಲ್ಲಿದ್ದರೆ ಮುಲಾಮುಗಳಿಂದ ಮತ್ತು ಅತಿಯಾಗಿದ್ದರೆ ಮಾತ್ರೆಗಳಿಂದ ಹುಳುಕಡ್ಡಿಯನ್ನು ಗುಣಪಡಿಸಿಕೊಳ್ಳಬಹುದು. ಕ್ಲೋಟ್ರಿಮಜೋಲ್, ಮೈಕನಾಜೋಲ್, ಗ್ರೀಸಿಯೋಫಲ್ವಿನ್, ಕಿಟಕೊನೊಜೋಲ್, ವೈಟ್‌ಫೀಲ್ಡ್ ಮತ್ತು ಫ್ಲುಕನಜೋಲ್ ಮುಂತಾದ ಔಷಧಗಳು ಈ ಕಾಯಿಲೆಯನ್ನು ಗುಣಪಡಿಸಬಲ್ಲವು.

* * * * *

5. ಗುಣವಾಗಬಲ್ಲ ಕುಷ್ಠರೋಗ



ಬಹುಶಃ ಮಾನವರಿಗೆ ಪ್ರಾಚೀನ ಕಾಲದಿಂದಲೂ ತಿಳಿದಿರುವಂತಹ ಮತ್ತು ಪ್ರಪಂಚದ ಬಡ ರಾಷ್ಟ್ರಗಳಲ್ಲಿ ಈಗಲೂ ಪ್ರಮುಖ ಆರೋಗ್ಯ ಸಮಸ್ಯೆಯಾಗಿರುವ ಕುಷ್ಠ ರೋಗ ಕಾಯಿಲೆಗಳಲ್ಲೆಲ್ಲ ಬಹಳಷ್ಟು ಹಳೆಯದಾದ ಕಾಯಿಲೆ. ಚರಕ, ಶುಶ್ರುತ ಮುಂತಾದ ಪ್ರಾಚೀನ ಕಾಲದ ದೇಶೀಯ ವೈದ್ಯ ಪಂಡಿತರೂ ತಮ್ಮ ಗ್ರಂಥಗಳಲ್ಲಿ ಈ ರೋಗದ ಬಗ್ಗೆ ವಿವರಣೆಗಳನ್ನು ನೀಡಿದ್ದಾರೆ.

ಈ ರೋಗ ಪೂರ್ವ ಜನ್ಮದ ಪಾಪಗಳ ಫಲ, ಅಂಟು ರೋಗ, ಗುಣಪಡಿಸಲಾಗದ ಕಾಯಿಲೆ ಮುಂತಾದ ತಪ್ಪು ತಿಳುವಳಿಕೆ ಈಗಲೂ ಅನೇಕರಲ್ಲಿ ಉಳಿದುಕೊಂಡು ಬಂದಿರುವುದು ದುರದೃಷ್ಟಕರ. ಇಂತಹ ಜನರ ನಡುವೆ ರೋಗಿಯು ಪಡುವ ಪಾಡು ಮತ್ತು ಅನುಭವಿಸುವ ಯಾತನೆ ಕರುಣಾಜನಕ.

ಆರಂಭದಲ್ಲಿ ಕಾಯಿಲೆಯನ್ನು ಪತ್ತೆ ಹಚ್ಚಿ ಚಿಕಿತ್ಸೆಯನ್ನು ತೆಗೆದುಕೊಳ್ಳದಿದ್ದರೆ ಈ ರೋಗ ರೋಗಿಯನ್ನು ವಿರೂಪಗೊಳಿಸಿ ಹೆಳವನನ್ನಾಗಿಸುತ್ತದೆ.

ಗಾಂಧೀಜಿ, ಬಾಬಾ ಆಮ್ಟೆ, ಮದರ್ ತೆರೇಸಾ ಇವರೆಲ್ಲ ಕುಷ್ಠ ರೋಗಿಗಳ ಶುಶ್ರೂಷೆಯಲ್ಲಿ ನಿರತರಾದವರೆ ಆದರೂ ಇವರ್ಯಾರಿಗೂ ಕುಷ್ಠ ರೋಗ ತಗುಲಲಿಲ್ಲ.

1871 ರಲ್ಲಿ ಹ್ಯಾನ್ಸನ್ ಎಂಬ ನಾರ್ವೆ ದೇಶದ ವಿಜ್ಞಾನಿ ಈ ಕಾಯಿಲೆ ಬರಲು ಕಾರಣವಾದ ಮೈಕೊಬ್ಯಾಕ್ಟೀರಿಯಾ ಲೆಪ್ರ ಎಂಬ ಬ್ಯಾಕ್ಟೀರಿಯಾ ರೋಗಾಣುವನ್ನು ಕಂಡು ಹಿಡಿದನು.

1943 ರಲ್ಲಿ ಡ್ಯಾಪ್ಸೋನ್ ಎಂಬ ಔಷಧವನ್ನು ಕಂಡು ಹಿಡಿದ ಮೇಲೆ ವಿಶ್ವದ ಕುಷ್ಠ ರೋಗಿಗಳ ಸಂಖ್ಯೆ ಕ್ಷೀಣಿಸತೊಡಗಿತು. ಪ್ರಸ್ತುತ ಈ ಕಾಯಿಲೆಯ ನಿರ್ಮೂಲನಕ್ಕೆ ಪರಮೌಷಧವಾಗಿರುವ ಡ್ಯಾಪ್ಸೋನ್ ಜೊತೆಗೆ ಇನ್ನೂ ಅನೇಕ ಔಷಧಿಗಳು ಮಾರುಕಟ್ಟೆಯಲ್ಲಿ ಲಭ್ಯವಿದೆ.

ಕುಷ್ಠ ರೋಗಿಗಳಲ್ಲಿ ಕೆಲವು ರೀತಿಯ ರೋಗಿಗಳು ಮಾತ್ರ ರೋಗವನ್ನು ಹರಡುವಂತಹವರು. ಸಾಮಾನ್ಯವಾಗಿ ಉಷ್ಣಾಂಶ ಜಾಸ್ತಿ ಇರುವ ಭಾಗಗಳಾದ ಕಂಕಳು, ಕೂದಲಿನಿಂದ ಕೂಡಿದ ತಲೆ ಮತ್ತು ತೊಡೆಯ ಸಂದುಗಳಲ್ಲಿ ರೋಗದ ಲಕ್ಷಣಗಳು ಕಾಣಿಸಿಕೊಳ್ಳುವುದಿಲ್ಲ.

ಪ್ರತಿಯೊಬ್ಬರ ಶರೀರದ ರಕ್ತ ಮತ್ತು ಇತರ ಭಾಗಗಳಲ್ಲಿ ರೋಗ ನಿರೋಧಕ ಗುಣ ಇರುವ ಮತ್ತು ಕಾಯಿಲೆಗಳನ್ನು ತಡೆಯುವ ಶಕ್ತಿ ಇರುವ ಲಿಂಪೋಸೈಟ್ ಮತ್ತು ಇನ್ನೂ ಅನೇಕ ತರಹದ ಜೀವ ಕಣಗಳು ನಿರಂತರ ಕಾಯಿಲೆ ಬರದಂತೆ ಎಚ್ಚರಿಕೆ ವಹಿಸುತ್ತಿರುತ್ತವೆ.

ಯಾವ ದುಶ್ಚಟ ಇಲ್ಲದೆ ಸರಿಯಾದ ಪ್ರಮಾಣದಲ್ಲಿ ಆಹಾರ, ಹಣ್ಣು, ತರಕಾರಿ ಸೇವಿಸುತ್ತಿದ್ದು ಹಾಗೂ ತನ್ನ ಸುತ್ತ ಮುತ್ತ ಪರಿಸರವನ್ನು ಚೊಕ್ಕಟವಾಗಿಟ್ಟಿದ್ದು ಶುಚಿಯಾದ ನೀರು ಕುಡಿಯುವ ಜನಗಳಲ್ಲಿ ಈ ರೋಗ ನಿರೋಧಕ ಶಕ್ತಿಯ ಜೀವ ಕಣಗಳು ಯಥೇಚ್ಚವಾಗಿ ಶಕ್ತಿಯುತವಾಗಿರುತ್ತವೆ. ಇಂತಹವರಲ್ಲಿ ಸಾಮಾನ್ಯವಾಗಿ ಕುಷ್ಠ ಅಥವ ಇನ್ಯಾವ ಕಾಯಿಲೆಗಳು ಬರುವುದಿಲ್ಲ.

ಅನುವಂಶಿಕವಾಗಿ, ನೈಸರ್ಗಿಕವಾಗಿ, ಪರಿಸರದ ಮಲಿನತೆಯಿಂದ ಆಹಾರದ ಕೊರತೆಯಿಂದ ಮತ್ತು ದೀರ್ಘಾವಧಿ ಕಾಯಿಲೆಗಳಿಂದ ರೋಗ ನಿರೋಧಕ ಶಕ್ತಿಯು ಕುಂಠಿತಗೊಳ್ಳಬಹುದು, ಇಂತಹ ಜನರಲ್ಲಿ ಕುಷ್ಠ ರೋಗವು ಜಾಸ್ತಿ ಕಾಣಿಸಿಕೊಳ್ಳುತ್ತದೆ.

ಕರ್ನಾಟಕದಲ್ಲಿ ಕುಷ್ಠ ರೋಗಿಗಳ ಸಂಖ್ಯೆ ಸುಮಾರು 2.2 ಲಕ್ಷ, ಕಲ್ಬುರ್ಗಿ ರಾಯಚೂರು, ಬೀದರ್ ಬಳ್ಳಾರಿ ವಿಜಾಪುರ, ಧಾರವಾಡ, ಬೆಳಗಾವಿ ಮೈಸೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಪ್ರತಿ 10 ಸಾವಿರಕ್ಕೆ 5 ಕ್ಕಿಂತ ಹೆಚ್ಚು ಕುಷ್ಠ ರೋಗಿಗಳಿದ್ದಾರೆ.

ಆರೋಗ್ಯವಂತರ ಸುತ್ತ ಅಂಟುವಂತಹ ಕುಷ್ಠ ರೋಗಿಗಳು ಜಾಸ್ತಿ ಇದ್ದರೆ, ಅವರಿಗೂ ರೋಗ ಅಂಟುವ ಸಂಭವ ಹೆಚ್ಚು. ಔಷಧವನ್ನು ತೆಗೆದುಕೊಳ್ಳದ ಕುಷ್ಠ ರೋಗಿಯ ಚರ್ಮ ಪದೇ ಪದೇ ಆರೋಗ್ಯವಂತರ ಚರ್ಮಕ್ಕೆ ಸೋಕುತ್ತಿದ್ದರೆ ರೋಗ ಅಂಟುತ್ತದೆ. ಕುಷ್ಠ ರೋಗಿಯಿಂದ ರೋಗವು ನಾನಾ ರೀತಿಯಿಂದ ಬೇರೆ ಜನಗಳಿಗೆ ಹರಡುತ್ತದೆ. ಉದಾ: ಸೂಜಿ ಮತ್ತು ಸಿರಿಂಜ್‌ನಿಂದ, ರೋಗಿಗೆ ಕಡಿದ ಸೊಳ್ಳೆಗಳು ಬೇರೆಯವರಿಗೆ ಕಡಿಯುವುದರಿಂದ, ರೋಗಿಗೆ ಕಡಿದ ಸೊಳ್ಳೆ ಮತ್ತು ನೊಣಗಳು ಆಹಾರದ ಮೇಲೆ ಕೂಡುವುದರಿಂದ ಬೇರೆಯವರಿಗೆ ಹರಡುತ್ತದೆ. ಕುಷ್ಠ ರೋಗಿಗಳು ಸೀನಿದಾಗ, ಕೆಮ್ಮಿದಾಗ ಅಥವ ಉಸಿರಾಡಿದಾಗ ಉಗುಳಿನ ಹನಿ ಮೂಲಕ ರೋಗಾಣು ಗಾಳಿಗೆ ಸೇರಿ ಬೇರೆಯವರಿಗೆ ಅಂಟುತ್ತದೆ. ಕಾಯಿಲೆ ಅತಿ ಆದಾಗ ತಾಯಿಯಿಂದ ಮಗುವಿಗೂ ಎದೆ ಹಾಲಿನಿಂದ ಬರಬಹುದು. ಕಾಯಿಲೆ ಕಾಣಿಸಿಕೊಳ್ಳಲು ಕುಷ್ಠ ರೋಗಾಣು ಚರ್ಮದೊಳಕ್ಕೆ ಸೇರಿದ ಮೇಲೆ 2 ರಿಂದ 7 ವರ್ಷ ತೆಗೆದುಕೊಳ್ಳಬಹುದು.

ಕೆಲವರಿಗೆ ಕುಷ್ಠ ರೋಗ ತಗುಲಿದ ಮೇಲೆ ಕುಷ್ಠ ರೋಗದ ಅವಧಿಯಲ್ಲಿ ಯಾವಾಗ ಬೇಕಾದರೂ ಔಷಧಿ ತೆಗೆದುಕೊಳ್ಳುತ್ತಿದ್ದರೂ ಅಥವ ಔಷಧಿ ತೆಗೆದುಕೊಳ್ಳದಿದ್ದರೂ ಒಂದು ರೀತಿಯ ಅಲರ್ಜಿ ಬರಬಹುದು (ರಿಯಾಕ್ಷನ್), ಜ್ವರ, ನರಗಳ ನೋವು ಅಥವ ಸೆಳೆತ, ಕೀಲು ನೋವು, ಮೈ, ಕೈ ಮತ್ತು ತಲೆ ನೋವು ಬರಬಹುದು. ಹೊಸದಾಗಿ ಅಥವ ವಿಶಿಷ್ಠವಾಗಿ ಚರ್ಮದ ಗುಳ್ಳೆ, ಗಂಟುಗಳು ಬರಬಹುದು.

ಅಂಗವಿಕಲತೆ ಸಾಮಾನ್ಯವಾಗಿ ಬೆರಳುಗಳು, ಕೈ ಕಾಲು, ಕಣ್ಣು ಮತ್ತು ಮೂಗಿನಲ್ಲಿ ಉಂಟಾಗುತ್ತದೆ. ವಿಕಲತೆಗಳು ಎರಡು ಕಾರಣಗಳಿಂದ ಉಂಟಾಗುತ್ತವೆ. ಮೊದಲನೆಯದು ಔಷಧಿಯನ್ನು ತೆಗೆದು ಕೊಳ್ಳದೆ ಕಾಯಿಲೆ ಅತಿಯಾದಾಗ ಜ್ಞಾನ ನರ ತಂತುಗಳ ನಾಶದಿಂದ ಜ್ಞಾನ ಶೂನ್ಯತೆ ಉಂಟಾಗುತ್ತದೆ. ಕೆಲಸ ಕಾರ್ಯಗಳಲ್ಲಿ ಗಾಯಗಳಾಗುತ್ತವೆ. ಈ ಗಾಯದೊಳಕ್ಕೆ ಕೀವು ಗುಳ್ಳೆ ತರುವ ಬ್ಯಾಕ್ಟೀರಿಯಾಗಳು ಸೇರಿಕೊಂಡು ಗಾಯ ಆಳಕ್ಕೆ ಹಬ್ಬಿ, ಮಾಂಸ ಖಂಡಗಳು ಮತ್ತು ಮೂಳೆಗಳಿಗೂ ತಗುಲಿ ಅಂಗ ವಿಕಲತೆ ಉಂಟಾಗುತ್ತದೆ. ಹಾಗೆಯೇ ಕ್ರಿಯಾ ನರ ತಂತುಗಳ ನಾಶದಿಂದ ಮಾಂಸಖಂಡಗಳು ಬಲಹೀನವಾಗಿ ಅಂಗವಿಕಲತೆ, ಲಕ್ವ ಒದಗಬಹುದು. ಈ ತೆರನಾದ ಅಂಗವಿಕಲತೆಗಳನ್ನು ರೋಗದ ಪ್ರಾರಂಭದಲ್ಲೇ ಚಿಕಿತ್ಸೆ ಶುರು ಮಾಡಿದರೆ ತಡೆಗಟ್ಟಬಹುದು.

ಎರಡನೆಯ ಕಾರಣ ಚಿಕಿತ್ಸೆ ಶುರು ಮಾಡಿದ ಮೇಲೆ ಅಥವ ಅದಕ್ಕಿಂತ ಮುಂಚೆ ರೋಗಿಗಳಿಗೆ 'ರಿಯಾಕ್ಷನ್' ಬಂದಾಗ ಕೆಲವು ನರಗಳಲ್ಲಿ ಒಂಟಿಯಾಗಿ ಅಥವ ಜೊತೆಯಾಗಿ ನ್ಯೂರೈಟಿಸ್ ಉಂಟಾಗಿ ಅಂಗವಿಕಲತೆ ಉಂಟಾಗುವ

ಸಂಭವ ಜಾಸ್ತಿ. ಸ್ವಲ್ಪ ನಿರ್ಲಕ್ಷ್ಯ ಮಾಡಿದರೂ ಶಾಶ್ವತ ಅಂಗವಿಕಲತೆ ಉಂಟಾಗುತ್ತದೆ.

ರೋಗಾಣುಗಳಿಂದ ನರ ತಂತುಗಳು ನಾಶವಾಗುವ ಮೊದಲೇ ಚಿಕಿತ್ಸೆ ಶುರು ಮಾಡಿ ಕಾಯಿಲೆ ಗುಣಪಡಿಸಿದರೆ ಅಂಗವಿಕಲತೆಯನ್ನು ತಡೆಗಟ್ಟಬಹುದು.

ಚಿಕಿತ್ಸೆಯ ಅವಧಿ ದೀರ್ಘ ಕಾಲದಾದ್ದರಿಂದ ಪ್ರತಿಯೊಬ್ಬ ರೋಗಿಯು ಒಂದು ಸಣ್ಣ ಪಾಕೆಟ್ ಪುಸ್ತಕದಲ್ಲಿ ವಿಳಾಸ, ರೋಗದ ಬಗೆ ಮತ್ತು ಚಿಕಿತ್ಸೆಯ ವಿವರವನ್ನು ವೈದ್ಯರಿಂದ ದಾಖಲಿಸಿ ಜೊತೆಯಲ್ಲಿ ಇಟ್ಟುಕೊಂಡಿದ್ದರೆ ಒಳ್ಳೆಯದು.

ಪರಿಷ್ಕೃತ ಬಹುಔಷಧಿ ಚಿಕಿತ್ಸೆ:

ಸ್ಲಿಟ್‌ಸ್ಕಿನ್‌ಸ್ಮಿಯರ್ ಮತ್ತು ಬಯಾಪ್ಸಿ ಮುಂತಾದ ಪರೀಕ್ಷೆಗಳಿಗೆ ತಾಂತ್ರಿಕ ತಜ್ಞರು ಮತ್ತು ಸಹಾಯಕರು ಹಾಗು ಪ್ರಯೋಗಾಲಯಗಳ ಅವಶ್ಯಕತೆ ಇದ್ದು, ಚಿಕಿತ್ಸೆಯ ಖರ್ಚು ಜಾಸ್ತಿಯಾಗುವುದರ ಜೊತೆಗೆ ಔಷಧ ಸೇವನೆಯೂ ಸಹ ವಿಳಂಬವಾಗಿ ರೋಗ ನಿರ್ಮೂಲನೆಯ ಕಾರ್ಯಕ್ರಮ ನಿಧಾನವಾಗುವುದನ್ನು ತಡೆಗಟ್ಟಲು ಪರಿಷ್ಕೃತ ಬಹುಔಷಧಿ ಚಿಕಿತ್ಸೆಯನ್ನು ವಿಶ್ವ ಆರೋಗ್ಯ ಸಂಸ್ಥೆಯು 1998ನೆ ಇಸವಿ 7ನೇ ವರದಿಯ ಸಲಹೆ ಮೇರೆಗೆ ಜಾರಿಗೊಳಿಸಲಾಯಿತು.

ಪರಿಷ್ಕೃತ ಪದ್ಧತಿಯ ಪ್ರಕಾರ ಕಾಯಿಲೆಯ ಯಾವುದೆ ವಿಧ ಅಥವಾ ಉಪವಿಧವಾಗಿದ್ದರೂ ಸಹ ಅದನ್ನೆಲ್ಲಾ ಪರಿಗಣಿಸುವುದಿಲ್ಲ, ಕೇವಲ ಮೈಮೇಲಿರುವ ಮಚ್ಚೆಗಳ ಸಂಖ್ಯೆಗಳ ಪ್ರಮಾಣದ ಮೇಲೆ ಅಥವಾ ಕಾಯಿಲೆಯ ಊತದಿಂದ ದಪ್ಪವಾಗಿರುವ ನರಗಳ (ನರ್ವ್) ಸಂಖ್ಯೆಯ ಪ್ರಮಾಣದ ಮೇಲೆ ಕಾಯಿಲೆಯನ್ನು 2 ವಿಧವಾಗಿ ವಿಂಗಡಿಸಿ ಔಷಧವನ್ನು ನೀಡುತ್ತಾರೆ.

1. ಪಾಸಿಬ್ಯಾಸಿಲರಿ (ಪಿ.ಬಿ.) ಅಥವಾ ಕೆಲವು ರೋಗಾಣುಗಳಿರುವ ಲೆಪ್ರಸಿ.
2. ಮಲ್ಟಿಬ್ಯಾಸಿಲರಿ (ಎಂ.ಬಿ) ಅಥವಾ ಬಹುರೋಗಾಣುಗಳಿರುವ ಲೆಪ್ರಸಿ.

1. ಪಾಸಿಬ್ಯಾಲರಿ ಲೆಪ್ರಸಿ: ಲೆಪ್ರಸಿ ಕಾಯಿಲೆ ಇರುವ ವ್ಯಕ್ತಿಯ ಮೈಮೇಲಿನ ಮಚ್ಚೆಗಳು 5 ಅಥವಾ ಅದಕ್ಕಿಂತ ಕಡಿಮೆ ಇದ್ದರೆ ಪಾಸಿಬ್ಯಾಲರಿ ಲೆಪ್ರಸಿ ಎಂದು ಕರೆಯುತ್ತೇವೆ.

ಅಥವಾ

ಸದರಿ ಮಚ್ಚೆಗಳ ಜೊತೆಗೆ ಒಂದೇ ಒಂದು ನರ ಊದಿಕೊಂಡಿದ್ದರೂ ಸಹ ಪಾಸಿಬ್ಯಾಸಿಲರಿ ಎಂದು ಕರೆಯುತ್ತೇವೆ.

ಅಥವಾ

ಸದರಿ ವ್ಯಕ್ತಿಯ ಮೈಮೇಲೆ ಮಚ್ಚೆಗಳು ಇಲ್ಲದಿದ್ದರೂ, ಕೇವಲ ಒಂದು ನರ ಮಾತ್ರ ಊದಿಕೊಂಡಿದ್ದರೆ ಅಂತಹ ರೋಗಿಗಳನ್ನು ಪಾಸಿಬ್ಯಾಸಿಲರಿ ಎಂದು ಕರೆಯುತ್ತೇವೆ.

ಔಷಧಿಗಳು: 1) ರಿಫ್ಯಾಂಪಿಸಿನ್ 600 ಮಿ.ಗ್ರಾಂ. ಕ್ಯಾಪ್ಸೂಲನ್ನು ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ತಿಂಗಳಲ್ಲಿ ಒಂದು ನಿರ್ದಿಷ್ಟ ದಿನ ಮಾತ್ರ ಪ್ರತಿ ತಿಂಗಳು 6 ತಿಂಗಳವರೆಗೆ ತೆಗೆದುಕೊಳ್ಳಬೇಕು.

2) ಡ್ಯಾಪ್ಸೋನ್ 100 ಮಿ.ಗ್ರಾಂ. ಮಾತ್ರೆಯನ್ನು ಪ್ರತಿದಿನ ಒಂದು ಸಾರಿ ಊಟದ ನಂತರ 6 ತಿಂಗಳ ತನಕ ನುಂಗಬೇಕು.

ಆಮೇಲೆ ಪ್ರತಿ ಆರು ತಿಂಗಳಿಗೆ ಅಥವಾ ವರ್ಷಕ್ಕೆ ಒಂದು ಸಾರಿ 2 ವರ್ಷಗಳವರೆಗೆ ವೈದ್ಯರಿಂದ ತಪಾಸಣೆ ಮಾಡಿಸಿಕೊಂಡು ಕಾಯಿಲೆ ಇಲ್ಲದಿರುವಿಕೆಯ ಬಗ್ಗೆ ಖಚಿತಪಡಿಸಿಕೊಳ್ಳಬೇಕು. ಮದ್ಯದಲ್ಲಿ ಕಾಯಿಲೆ ಮರುಕಳಿಸಿದರೆ ಕಾರಣಗಳನ್ನು ಪತ್ತೆ ಹಚ್ಚಿ ತಕ್ಕ ಚಿಕಿತ್ಸೆಯನ್ನು ಶುರುಮಾಡಲು ಸಹಾಯಕವಾಗುತ್ತದೆ.

2) ಮಲ್ಟಿಬ್ಯಾಸಿಲರಿ ಲೆಪ್ರಸಿ:

ಲೆಪ್ರಸಿ ಕಾಯಿಲೆ ಇರುವ ವ್ಯಕ್ತಿಯ ಮೈಮೇಲಿನ ಮಚ್ಚೆಗಳ ಸಂಖ್ಯೆಗಳು 6 ಅಥವಾ ಅದಕ್ಕಿಂತ ಜಾಸ್ತಿ ಇದ್ದರೆ ಮಲ್ಟಿಬ್ಯಾಸಿಲರಿ ಎಂದು ಕರೆಯುತ್ತೇವೆ.

ಅಥವಾ

ಸದರಿ ಮಚ್ಚೆಗಳ ಜೊತೆಗೆ ಒಂದು ಅಥವಾ ಅದಕ್ಕಿಂತ ಹೆಚ್ಚು ನರಗಳು ಊದಿಕೊಂಡಿದ್ದರೂ ಮಲ್ಟಿಬ್ಯಾಸಿಲರಿ ಎಂದು ಕರೆಯುತ್ತೇವೆ.

ಅಥವಾ

ಸದರಿ ವ್ಯಕ್ತಿಯ ಮೈಮೇಲೆ ಕಾಯಿಲೆಯ ಮಚ್ಚೆಗಳು ಒಂದೂ ಇಲ್ಲದೆ ಕೇವಲ 2 ಅಥವಾ ಅದಕ್ಕಿಂತ ಹೆಚ್ಚು ನರಗಳು ಊದಿಕೊಂಡಿದ್ದರೂ ಸಹ ಅಂತಹ ರೋಗಿಗಳನ್ನು ಮಲ್ಟಿಬ್ಯಾಸಿಲರಿ ಎಂದು ಕರೆಯುತ್ತೇವೆ.

ಔಷಧಿಗಳು: 1) ರಿಫ್ಯಾಂಪಿಸಿನ್ 600 ಮಿ.ಗ್ರಾಂ. ಕ್ಯಾಪ್ಸೂಲನ್ನು ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ತಿಂಗಳಲ್ಲಿ ಒಂದು ನಿರ್ದಿಷ್ಟ ದಿನ ಮಾತ್ರ ಪ್ರತಿ ತಿಂಗಳು 12 ತಿಂಗಳವರೆಗೆ ತೆಗೆದುಕೊಳ್ಳಬೇಕು.

2) ಕ್ಲೊಫಜಮಿನ್ 300 ಮಿ.ಗ್ರಾಂ ಕ್ಯಾಪ್ಸೂಲನ್ನು ತಿಂಗಳಲ್ಲಿ ಒಂದು ನಿರ್ದಿಷ್ಟ ದಿನ, ನಂತರ 50 ಮಿ.ಗ್ರಾಂ. ಕ್ಯಾಪ್ಸೂಲನ್ನು ಪ್ರತಿದಿನ 12 ತಿಂಗಳವರೆಗೆ ತುಂಬು ಹೊಟ್ಟೆಯಲ್ಲಿ ತೆಗೆದುಕೊಳ್ಳಬೇಕು.

3) ಡ್ಯಾಪ್ಸೋನ್ 100 ಮಿ.ಗ್ರಾಂ. ಮಾತ್ರೆಯನ್ನು ಪ್ರತಿದಿನ ಒಂದು ಸಾರಿ ತುಂಬು ಹೊಟ್ಟೆಯಲ್ಲಿ 12 ತಿಂಗಳ ತನಕ ನುಂಗಬೇಕು.

ಮೇಲೆ ತಿಳಿಸಿದ ಔಷಧಿಗಳ ಜೊತೆಗೆ ವಿಟಮಿನ್, ಬಿ.ಕಾಂಪ್ಲೆಕ್ಸ್ ಮತ್ತು ಐರನ್ ಮಾತ್ರೆಗಳನ್ನು ಸನ್ನಿವೇಶ ನೋಡಿ ಅಗತ್ಯ ಬಿದ್ದಾಗ ವೈದ್ಯರ ಸಲಹೆ ಮೇರೆಗೆ ಸೇವಿಸಬೇಕಾಗುತ್ತದೆ.

3) ಮಕ್ಕಳಿಗೆ ಔಷಧಿ ಪ್ರಮಾಣ:

ಮಕ್ಕಳಿಗೆ ಅವರ ತೂಕ ಮತ್ತು ವಯಸ್ಸಿನ ಆಧಾರದ ಮೇಲೆ ಔಷಧಿಗಳನ್ನು ಕಡಿಮೆ ಪ್ರಮಾಣದಲ್ಲಿ ನೀಡಬೇಕು.

ಡಯಾಪ್ಸೋನ್ ಔಷಧವನ್ನು 3 ರಿಂದ 5 ವರ್ಷದ ಮಕ್ಕಳಿಗೆ 25 ಮಿ.ಗ್ರಾಂ, 6 ರಿಂದ 14 ವರ್ಷದವರಿಗೆ 50 ರಿಂದ 100 ಮಿ.ಗ್ರಾಂ ಪ್ರಮಾಣದಲ್ಲಿ ಕೊಡಬೇಕು. ಡಯಾಪ್ಸೋನ್ ಮಾತ್ರೆಗಳು 25, 50 ಮತ್ತು 100 ಮಿ.ಗ್ರಾಂ ತೂಕದಲ್ಲಿ ದೊರೆಯುತ್ತವೆ.


ರಿಫ್ಯಾಂಪಿಸಿನ್ ಔಷಧವನ್ನು 3 ರಿಂದ 5 ವರ್ಷದ ವಯಸ್ಸಿನವರಿಗೆ 150ರಿಂದ 300 ಮಿ.ಗ್ರಾಂ, 6 ರಿಂದ 14 ವರ್ಷದವರೆಗೆ 300 ರಿಂದ 450 ಮಿ.ಗ್ರಾಂ. ಪ್ರಮಾಣದಲ್ಲಿ ನೀಡಬೇಕು. ರಿಫ್ಯಾಂಪಿಸಿನ್ ಔಷಧವು 300, 450 ಮತ್ತು 600 ಮಿ.ಗ್ರಾಂ ತೂಕದ ಕ್ಯಾಪ್ಸೂಲ್‌ಗಳಲ್ಲಿ ದೊರೆಯುತ್ತವೆ.

ಕ್ಲೊಫಜಮಿನ್ ಔಷಧವನ್ನು 3 ರಿಂದ 5 ವರ್ಷದವರಿಗೆ 100 ಮಿ.ಗ್ರಾಂ ಮತ್ತು 6 ರಿಂದ 14 ವರ್ಷದವರಿಗೆ 150 ಮಿ.ಗ್ರಾಂ. ಪ್ರಮಾಣದಲ್ಲಿ ನೀಡಬೇಕು. ಕ್ಲೊಫಜಮಿನ್ ಔಷಧವು 50, 100 ಮತ್ತು 300 ಮಿ.ಗ್ರಾಂ ಪ್ರಮಾಣದಲ್ಲಿ ಕ್ಯಾಪ್ಸೂಲ್ ರೂಪದಲ್ಲಿ ದೊರೆಯುತ್ತದೆ.

ನೆನಪಿಡಿ: ಕುಷ್ಠ ವಾಸಿಯಾಗಬಲ್ಲ ಕಾಯಿಲೆ ಭಯ ಬೇಡ.

* * * * *

6. ಚರ್ಮಕ್ಕೂ ಕ್ಷಯ



ಮನುಷ್ಯರ ಚರ್ಮವೂ ಕ್ಷಯ ರೋಗಕ್ಕೆ ತುತ್ತಾಗುತ್ತದೆ, ಮನುಷ್ಯರ ಶ್ವಾಸಕೋಶ, ಕೀಲು ಮೂಳೆ, ಮಿದುಳಿನ ಪೊರೆ ಮತ್ತು ಜೀರ್ಣಾಂಗಗಳ ಕ್ಷಯ (ಟಿ ಬಿ) ಕಾಯಿಲೆ ಕಂಡು ಬರುವಂಥೆಯೇ ಚರ್ಮದಲ್ಲೂ ಸಹ ಆಯಾ ವ್ಯಕ್ತಿಗಳ ರೋಗ ನಿರೋಧಕ ಶಕ್ತಿಯನ್ನು ಅನುಸರಿಸಿ ಅನೇಕ ರೀತಿಯ ಕ್ಷಯರೋಗ ಕಂಡು ಬರುತ್ತದೆ. ಅನೇಕ ವಿಧಗಳಾಗಿ ವಿಂಗಡಿಸಿರುವ ಚರ್ಮದ ಟಿ ಬಿ ಯಲ್ಲಿ ಬಹಳ ಸಾಮಾನ್ಯವಾಗಿ ಕಾಣಿಸಿಕೊಳ್ಳುವ ಮೂರು ವಿಧಗಳು ಹೀಗಿವೆ.

ಲ್ಯೂಪಸ್ ವಲ್ಗಾರಿಸ್

ವ್ಯಕ್ತಿಯ ಚರ್ಮದ ಯಾವುದೇ ಬಾಗದಲ್ಲಾದರೂ ಹೊರಗಿನಿಂದ ಟಿ ಬಿ ರೋಗಾಣುಗಳು ಚರ್ಮವನ್ನು ಹೊಕ್ಕಾಗ ಅಥವ ಒಳಗಿನ ಇತರ ಅಂಗಾಂಗಗಳಿಂದ ರೋಗಾಣುಗಳು ಚರ್ಮವನ್ನು ಸೇರಿದಾಗ ಸೋಂಕು ತಗಲುತ್ತದೆ.

ಮೊದಲಿಗೆ ಕೆಂಪುಮಿಶ್ರಿತ ಕಂದು ಬಣ್ಣದ ಬಹಳ ಸಣ್ಣದಾದ ಚರ್ಮದ ಒಳಗೆ ಅಂಟಿಕೊಂಡಂತೆ ಕಾಣುವ ಜಿಲ್ಯಾಟಿನ್‌ನಂತೆ ಮೃದುವಾದ ಗಂಟುಗಳು

ಗುಂಪು ಗುಂಪಾಗಿ ಹರಡಿಕೊಂಡರುತ್ತವೆ. ನಿಧಾನವಾಗಿ ಕಂದು ಬಣ್ಣಕ್ಕೆ ತಿರುಗಿ ಚರ್ಮದಿಂದ ಸ್ವಲ್ಪ ಎದ್ದು ಕಾಣುವಂತಾಗಿ ಉಂಗುರಾಕಾರ, ಕಮಾನಿನಾಕಾರ ಅಥವ ಕುದುರೆ ಲಾಳದಾಕಾರದಲ್ಲಿ ಕಾಣುತ್ತವೆ. ಗಾಜಿನ ಪಟ್ಟಿಯನ್ನು ಗುಂಟುಗಳ ಮೇಲೆ ಇಟ್ಟು ಅದುಮಿದಾಗ ಗಂಟುಗಳು ಕಂದು ಮಿಶ್ರಿತ ಹಳದಿ ಬಣ್ಣಕ್ಕೆ ತಿರುಗುತ್ತವೆ. ಗಂಟುಗಳ ಗುಂಪುಗಳು ಒಂದಕ್ಕೊಂದು ಸೇರಿಕೊಂಡು ಚರ್ಮದಿಂದ ಎದ್ದು ಕಾಣುವ ಮಜ್ಜೆಯಂತೆ ಇದ್ದು ಹುರುಪಿನಿಂದ (ಸ್ಕೇಲ್ಸ್) ಕೂಡಿರುತ್ತವೆ. ಹೀಗೆ ಚರ್ಮದ ಅಂಗಾಂಶವು ನಾಶವಾಗುತ್ತಿದ್ದಂತೆ ಒಂದು ಕಡೆಯಿಂದ ಚರ್ಮವು ಸುಕ್ಕುಗಟ್ಟಿ ಮಾಯುತ್ತಾ ಮತ್ತೊಂದು ಕಡೆ ರೋಗವು ಹರಡುತ್ತಾ ಹೋಗುತ್ತದೆ. ಇಂದ್ರಿಯಗಳ ಮೇಲಿನ ಚರ್ಮಕ್ಕೆ ರೋಗ ಹಬ್ಬಿದಾಗ ಇಂದ್ರಿಯಗಳು ವಿರೂಪಗೊಳ್ಳುತ್ತವೆ. ಹೀಗೆ ಕೆಲವು ಇಂಚುಗಳಷ್ಟು ಚರ್ಮವು ವಿರೂಪಗೊಳ್ಳಲು ವರ್ಷಗಟ್ಟಲೆ ಸಮಯ ಹಿಡಿಯಬಹುದು.

ಟಿ ಬಿ ವಾರ್ಟ್

ಇದು ರೈತರಲ್ಲಿ ಮತ್ತು ಬರಿ ಕೈ ಕಾಲುಗಳಲ್ಲಿ ಕೆಲಸ ಮಾಡುವವರಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ರೋಗ ನಿರೋಧಕ ಶಕ್ತಿ ಜಾಸ್ತಿ ಇರುವ ವ್ಯಕ್ತಿಗಳ ಚರ್ಮದೊಳಕ್ಕೆ ಹೊರಗಿನಿಂದ ಟಿ ಬಿ ಬ್ಯಾಸಿಲೈಗಳು ಹೊಕ್ಕಾಗ ಸೋಂಕು ಶುರುವಾಗುತ್ತದೆ.

ಚಿಗುರು ಹೂ ಕೋಸಿನ ರೀತಿಯಲ್ಲಿ ಚರ್ಮದಿಂದ ಎದ್ದು ಕಾಣುವ ಮಚ್ಚೆಯಂತೆ ಅಥವ ಅಗಲವಾದ ಗಂಟಿನಂತೆ ಕಾಣುವ ಈ ಬೇನೆಯ ಮೇಲ್ಮೈ ತುರಿ ತುರಿಯಾಗಿ ಅಥವ ಒರಟಾಗಿ ಹುಲಿ ಉಗುರಿನಂತೆ ಕಾಣಬಹುದು. ನೋವಿಲ್ಲದ ಕೆಂಪು ಕಂದು ಅಥವ ಬೂದಿ ಬಣ್ಣಕ್ಕೆ ಕಾಣುವ ಈ ಬೇನೆ ನಿಧಾನವಾಗಿ ಹರಡುತ್ತದೆ.


ಸ್ಕ್ರಾಫ್ಯೂಲೋಡರ್ಮ

ಕುತ್ತಿಗೆಯಲ್ಲಿರುವ ಹಾಲ್ರಸ ಗ್ರಂಥ (ಲಂಫ್ ನೋಡ್ಸ್) ಗಳಿಗೆ ಕ್ಷಯ ರೋಗದ ಬ್ಯಾಸಿಲೈಗಳಿಂದ ಸೋಂಕು ತಗಲಿ ಲೆಂಫ್ ನೋಡ್ಸ್ ಹರಳುಗಳು ಅರಳಿ ಊದಿಕೊಂಡು ಕತ್ತಿನ ಒಂದು ಅಥವ ಎರಡು ಕಡೆ ಗಂಟುಗಳಾಗುತ್ತವೆ. ಸಾಮಾನ್ಯವಾಗಿ ಚಿಕ್ಕವರಲ್ಲಿ ಕಾಣಿಸಕೊಳ್ಳುವ ಈ ಕಾಯಿಲೆಯನ್ನು ಜನರು ಮೂಢ ನಂಬಿಕೆಯಿಂದ ಶಂಖದಾಳ ಎಂದು ತಪ್ಪು ತಿಳಿದು ಬೆಂಕಿಯಿಂದ ಬರೆ ಹಾಕಿಸುವುದನ್ನು ಬಿಟ್ಟು ಪ್ರಾರಂಭದಲ್ಲೆ ವೈದ್ಯರ ಸಲಹೆ ಪಡೆದರೆ ಟಿ ಬಿ

ಔಷಧಿಗಳಿಂದ ಸಂಪೂರ್ಣವಾಗಿ ಗುಣವಾಗುತದೆ. ಉದಾಸೀನ ಮಾಡಿದರೆ ಗಂಟುಗಳು ಒಂದಕ್ಕೊಂದು ಅಂಟಿಕೊಂಡು ಒಳಗೆ ಕೀವಾಗಿ ಕೀವು ಗಂಟುಗಳು ಒಡೆದು ಚರ್ಮಕ್ಕೂ ಹರಡಿ ಚರ್ಮದ ಮಖಾಂತರ ರಂಧ್ರ ಮಾಡಿಕೊಂಡು ಕೀವು ಸೋರುತ್ತದೆ. ಇದೇ ರೀತಿ ಚರ್ಮದ ತಳಭಾಗದಿಂದ ಯಾವುದೇ ಅಂಗಾಂಗ ಅಥವ ಅಂಗಾಂಶಗಳಿಗೆ ಟಿ ಬಿ ರೋಗ ತಗಲಿ ಅಲ್ಲಿಂದ ಚರ್ಮಕ್ಕೆ ಹರಡಿ ಉಂಟಾಗುವ ಟಿ ಬಿ ಕಾಯಿಲೆಯನ್ನೂ ಸಹ ಸ್ಕ್ರಾಫ್ಯೂಲೋಡರ್ಮ ಎನ್ನುತ್ತೇವೆ. ಪ್ರಾರಂಭದಲ್ಲೆಯೇ ಚಿಕಿತ್ಸೆ ತೆಗೆದುಕೊಂಡರೆ ಚರ್ಮ ಸುಕ್ಕುಕಟ್ಟಿ ವಿರೂಪವಾಗುವುದನ್ನು ತಡೆಗಟ್ಟಬಹುದು. ಕ್ಷಯ ರೋಗ ಸಂಪೂರ್ಣವಾಗಿ ವಾಸಿಯಾಗುವಂತಹ ನವೀನ ರೀತಿಯ ಔಷಧಿಗಳು ಈಗ ದೊರೆಯುತ್ತವೆ.

* * * * *

7. ಪಯೋಡರ್ಮ (ಕೀವು ಗುಳ್ಳೆಗಳು)



ಡಾಕ್ಟ್ರೆ, ನಮ್ಮ ಮಗುವಿಗೆ ಇಂಜಕ್ಷನ್ ಕೊಡಿಸಿ ಕೊಡಿಸಿ ಸಾಕಾಗಿ ಹೋಗಿದೆ. ಇಂಜಕ್ಷನ್ ನಿಲ್ಲಿಸಿದ ಒಂದು ವಾರದಲ್ಲೇ ಪುನಹ ಶುರುವಾಗುತ್ತದೆ. ಇವನಿಂದಾಗಿ ಇದು ಇನ್ನಿಬ್ಬರು ಮಕ್ಕಳಿಗೂ ಅಂಟಿ ಕೊಂಡು ಬಿಡುತ್ತದೆ. ಇದು ಬಾರದಂತೆ ಏನಾದರೂ ಮಾಡಿ ಎಂದು ತಂದೆ ತಾಯಂದಿರು ಮಕ್ಕಳನ್ನು ಕರೆತರುವುದು ಸಾಮಾನ್ಯ.

ಚರ್ಮದ ಅಂಟು ರೋಗಗಳಲ್ಲೆಲ್ಲಾ ಬಹಳ ಸಾಮಾನ್ಯವಾದ, ಯಾವ ವಯಸ್ಸಿನವರಲ್ಲಾದರೂ ಕಾಣಿಸಿಕೊಳ್ಳುವ ಈ ಜಾಡ್ಯವನ್ನು ಕೀವು ಗುಳ್ಳೆಗಳು ಅಥವ ಪಯೋಡರ್ಮ ಎಂದು ಕರೆಯುತ್ತೇವೆ. ದಪ್ಪವಾಗಿರುವ ಕೀವು ಗುಳ್ಳೆಗಳನ್ನು ಕುರುಗಳು ಎನ್ನುತ್ತೇವೆ. ಸಾಮಾನ್ಯವಾಗಿ ಮಕ್ಕಳಲ್ಲಿ, ಶುಚಿತ್ವವನ್ನು ಕಾಪಾಡದಿರುವುದರಿಂದ, ಆಹಾರದ ಕೊರತೆಯಿಂದ, ರೋಗ ನಿರೋಧಕ ಶಕ್ತಿ ಕುಂಠಿತಗೊಂಡಿರುವವರಲ್ಲಿ ಹೆಚ್ಚಾಗಿ ಬಡವರಲ್ಲಿ ಸ್ಕೇಬೀಸ್, ಹುಳುಕಡ್ಡಿ, ಹೇನು, ಕೂರೆ, ಸಕ್ಕರೆ ಕಾಯಿಲೆ, ಕ್ಯಾನ್ಸರ್ ಮತ್ತು ಎಯ್ಡ್ಸ್ ಮುಂತಾದ ಕಾಯಿಲೆಯಿಂದ ಬಳಲುತ್ತಿರುವವರಲ್ಲಿ ಹಾಗು ಉಚಿತ ಹಾಸ್ಟೆಲ್ ಮತ್ತು ಅನಾಥಾಲಯಗಳಲ್ಲಿ

ವಾಸ ಮಾಡುವ ಮಕ್ಕಳಲ್ಲಿ ಈ ಜಾಡ್ಯ ಹೆಚ್ಚಾಗಿ ಕಾಣಿಸಿಕೊಳ್ಳುತ್ತವೆ.

ಧಾರ್ಮಿಕ ಸ್ಥಳಗಳಲ್ಲಿ ಕೂದಲನ್ನು ತೆಗೆಯುವ ಸಿಬ್ಬಂದಿ, ಬಾರ್ಬರ್ ಶಾಪ್, ಬ್ಯೂಟಿ ಪಾರ್ಲರಗಳು ಮುಂತಾದ ಸ್ಥಳಗಳಲ್ಲಿನ ನೌಕರರು ತಮ್ಮ ಕೆಲಸದಲ್ಲಿ ಉಪಯೋಗಿಸುವ ಸಾಧನಗಳನ್ನು ಸರಿಯಾಗಿ ಶುಚಿ ಮಾಡದೆ (ಸ್ಟೆರಿಲೈಜ್) ಉಪಯೋಗಿಸುವುದರಿಂದ, ರೇಜರ್, ಬ್ಲೇಡ್, ಬ್ರಷ್, ಟವಲ್, ಬಾಚಣಿಗೆ ಮತ್ತು ಇತರ ಶೃಂಗಾರ ಸಾಧನಗಳನ್ನು ಮನೆ ಮಂದಿಯೆಲ್ಲಾ ಸಾಮೂಹಿಕವಾಗಿ ಹಂಚಿಕೊಂಡು ಉಪಯೋಗಿಸುವುದರಿಂದ ಪಯೋಡರ್ಮ ಒಬ್ಬರಿಂದ ಮತ್ತೊಬ್ಬರಿಗೆ ಸುಲಭವಾಗಿ ಅಂಟುತ್ತದೆ.

ಮಕ್ಕಳು ಹೆಚ್ಚಾಗಿ ತಮ್ಮ ಸಹಪಾಠಿಗಳ ಜತೆಗೂಡಿ ಆಟ ಆಡುವಾಗ, ಕೀವು ಗುಳ್ಳೆಗಳಿದ್ದರೆ, ಕೀವು ಒಬ್ಬರಿಂದ ಇನ್ನೊಬ್ಬರ ಚರ್ಮಕ್ಕೆ ತಾಗಿ ಬಹುಬೇಗ ಅಂಟಿ ಹರಡುತ್ತವೆ. ಕೀವು ಗುಳ್ಳೆಗಳು, ಸ್ಟೆಪೈಲೊ ಮತ್ತು ಸ್ಟ್ರೆಪ್ಟೋಕಾಕಸ್ ಹಾಗೂ ಇನ್ನೂ ಅನೇಕ ತೆರನಾದ ಬ್ಯಾಕ್ಟೀರಿಯಾಗಳಿಂದ ಬರುತ್ತದೆ. ಒಂದೆರಡು ಕೀವು ಗುಳ್ಳೆಗಳಿದ್ದರೆ ಇಂಪೆಟಿಗೂ ಎಂದು, ಕೀವು ಗುಳ್ಳೆಗಳು ಕೂದಲಿನ ಬುಡದಲ್ಲಿದ್ದು ಆಳಕ್ಕೆ ಹಬ್ಬದಿದ್ದರೆ ಫಾಲಿಕ್ಯುಲೈಟಿಸ್ ಎಂದೂ ದಪ್ಪವಾಗಿ ಬುಡದ ತಳಭಾಗಕಕ್ಕೂ ಹಬ್ಬಿದ್ದರೆ ಫರಂಕಲ್ ಎಂದು, ಎರಡು ಫರಂಕಲ್‌ಗಳು ಆಳದಲ್ಲಿ ಒಂದನ್ನೊಂದು ಸೇರಿಕೊಂಡಿದ್ದರೆ ಕಾರ್ಬಂಕಲ್ ಎಂದೂ ಕರೆಯುತ್ತೇವೆ.


ಚರ್ಮವು ಯಾವುದೇ ಕಾರಣದಿಂದ ತರಚಿ ಅಥವ ಪೆಟ್ಟಾಗಿ ಜಖಂಗೊಂಡಿದ್ದರೆ ಬ್ಯಾಕ್ಟೀರಿಯಾಗಳು ಸುಲಭವಾಗಿ ಚರ್ಮದೊಳಕ್ಕೆ ಹೊಕ್ಕು, ಕೀವು ಗುಳ್ಳೆಗಳು ಶುರವಾಗುತ್ತವೆ. ಆರಂಭದಲ್ಲಿ ನಿಗಾವಹಿಸಿದರೆ ಕೀವು ಗುಳ್ಳೆಗಳು ಹರಡದಂತೆ ನೋಡಿಕೊಳ್ಳಬಹುದ. ಚರ್ಮಕ್ಕೆ ಯಾವುದೇ ತೆರನಾದ ಪೆಟ್ಟು ಬಿದ್ದು ತರಚಿದರೆ, ಕೊಯ್ದರೆ ಅಥವ ಗಾಯವಾದರೆ ತಕ್ಷಣವೇ ಜುಂಗು ಅಥವ ಬ್ರಷ್ ಉಪಯೋಗಿಸಿ ಸಾಬೂನಿನಿಂದ ಚೆನ್ನಾಗಿ ಪದೇ ಪದೇ ತೊಳೆಯುತ್ತಿದ್ದರೆ ಆ ಜಾಗದಲ್ಲಿ ಕೀವು ಗುಳ್ಳೆಗಳು ಬರದಂತೆ ನೋಡಿಕೊಳ್ಳಬಹದು ಮತ್ತು ಗಾಯಗಳು ನಾಲ್ಕೈದು ದಿನಗಳಲ್ಲಿ ಒಣಗಿ ಹೋಗುತ್ತವೆ. ಗುಳ್ಳೆಯಿಂದ ಕೀವು ಬೇರೆ ಜಾಗಕ್ಕೆ ಸೋಕದಂತೆ ನೋಡಿಕೊಳ್ಳಬೇಕು. ಬೆರಳಿನಿಂದ ಮುಟ್ಟುವುದು ಮತ್ತು ಉಗುರಿನಿಂದ ಪರಚುವುದರಿಂದ ಕೀವು ಬೇರೆ ಕಡೆಗೆ ತಾಗಿ ಕೀವು ಗುಳ್ಳೆಗಳು ಬರುತ್ತವೆ.

ಸಣ್ಣದಾದ ಒಂದು ಅಥವ ಎರಡು ಕೀವು ಗುಳ್ಳೆಗಳು ಬಂದ ಆರಂಭದಲ್ಲೇ ಹಾಗೂ ಕೀವು ಒಳಗೆ ಸಂಗ್ರಹವಾಗಿದ್ದರೆ, ಮೊದಲನೆಯ ಕೆಲಸ ಕೀವನ್ನು ತೆಗೆಯುವುದು ಮತ್ತು ಸಾಬೂನಿನಿಂದ ಚೆನ್ನಾಗಿ ತೊಳೆದು ಯಾವುದಾದರೂ ಆ್ಯಂಟಿಸೆಪ್ಟಿಕ್ ಮುಲಾವನ್ನು ಹಚ್ಚಿದರೆ ಸಾಕು, ಕೀವು ಗುಳ್ಳೆಗಳು ಒಣಗಿಹೋಗುತ್ತವೆ.

ಕೀವನ್ನು ತೆಗೆಯಲು ಸೂಜಿಯನ್ನು ಬಿಸಿ ನೀರಿನಲ್ಲಿ ಕುದಿಸಿ, ಶುಭ್ರವಾದ ಕೈಯಿಂದ ಸೂಜಿಯ ಮತ್ತೊಂದು ಭಾಗವನ್ನು ಮಾತ್ರ ಹಿಡಿದು ಸೂಜಿಯ ಮೊನೆಯಿಂದ ಚುಚ್ಚಿ, ಗುಳ್ಳೆಗಳನ್ನು ಒಡೆದು ಕೀವನ್ನು ತೆಗೆಯಬೇಕು. ಕುದಿಸಿ ಆರಿಸಿದ ನೀರಿಗೆ ಅಡುಗೆ ಉಪ್ಪನ್ನು ಬೆರೆಸಿ (ಒಂದು ಲೋಟನೀರಿಗೆ ಒಂದು ಚಮಚ) ಕರಗಿಸಿದ ನೀರನ್ನು ತೊಳೆಯಲು ಅಥವ ನೆನೆಸಲು ಉಪಯೋಗಿಸಬಹುದು. ಕೀವು ಗುಳ್ಳೆ ಕುರುವಿನಂತೆ ದಪ್ಪವಾಗಿದ್ದು ಕುರುವಿನ ಸುತ್ತ ಮತ್ತು ಬುಡದ ತಳಭಾಗದಲ್ಲಿ ಊತ ಬಂದು ಕೆಂಪು ಗಟ್ಟಿ ಜಾಸ್ತಿ ನೋವಿದ್ದರೆ ಆರಂಭದಲ್ಲಿ ವೈದ್ಯರ ಸಲಹೆ ಪಡೆಯಬೇಕು. ತನ್ನಷ್ಟಕ್ಕೆ ತಾನೆ ಒಡೆಯಲು ಬಿಡಬಾರದು. ತಕ್ಷಣ ಚಿಕಿತ್ಸೆ ತೆಗೆದುಕೊಳ್ಳದಿದ್ದರೆ ಒಂಧಾದ ಮೇಲೊಂದರಂತೆ ಬಂದು ಹಳೆಯದಾಗಿ ಯಾವ ಔಷಧಿಗೂ ಬಗ್ಗುವುದಿಲ್ಲ. ಸಕ್ಕರೆ ಅಥವ ಇತರೆ ಕಾಯಿಲೆ ಇರುವವರು ವೈದ್ಯರ ಚಿಕಿತ್ಸೆಯಿಂದ ಕಾಯಿಲೆಗಳನ್ನು ತಹಬಂದಿಗೆ ತಂದ ನಂತರವೇ ಕೀವು ಗುಳ್ಳೆಗಳು ಔಷಧಿಯಿಂದ ಗುಣವಾಗುತ್ತವೆ. ಮಕ್ಕಳಲ್ಲಿ ಅಧಿಕ ಪ್ರಮಾಣದಲ್ಲಿ ಕೀವು ಗುಳ್ಳೆಗಳಿದ್ದು ತಕ್ಷಣ ಚಿಕಿತ್ಸೆ ತೆಗೆದುಕೊಳ್ಳದಿದ್ದರೆ ಮೂತ್ರಜನಕಾಂಗ ಸೋಂಕಿಗೆ ಒಳಪಟ್ಟು ಮತ್ತಷ್ಟು ತೊಂದರೆ ಅನುಭವಿಸಬೇಕಾಗಿ ಬರಬಹುದು. ಪುಷ್ಟಿಕರ ಆಹಾರ ಸೇವನೆ ಶುಚಿತ್ವ ಮತ್ತು ವೈಜ್ಞಾನಿಕ ತಿಳುವಳಿಕೆ ಇದ್ದರೆ ಕೀವು ಗುಳ್ಳೆಗಳ ಉಪದ್ರವದಿಂದ ಬಹುಪಾಲು ಮುಕ್ತವಾಗಿರುಬಹುದ. ಚಿಗುರಿನಲ್ಲೇ ಪ್ರಥಮ ಚಿಕಿತ್ಸೆಯ ಉಪಕ್ರಮದಿಂದ ಕೀವು ಗುಳ್ಳೆಗಳನ್ನು ಸುಲಭವಾಗಿ ಗುಣಪಡಿಸಕೊಳ್ಳಬಹುದು.

* * * * *

8. ವೈರಸ್‌ಗುಳ್ಳೆಗಳು



ವೈರಸ್ ರೋಗಾಣುಗಳಿಂದ ಬರುವಂತಹ ಅಸಂಖ್ಯಾತ ಕಾಯಿಲೆಗಳಲ್ಲಿ ನೋಡಲು ಬಹಳಷ್ಟು ಸಾಮ್ಯವಿರುವ ಎರಡು ಕಾಯಿಲೆಗಳಿವೆ. ಈ ಎರಡೂ ಕಾಯಿಲೆಗಳಲ್ಲಿ ರೋಗದ ಲಕ್ಷಣಗಳು ಗುಳ್ಳೆಗಳೇ ಅಗಿರುವುದರಿಂದ ಅನೇಕ ಬಾರಿ ಜನರು ಈ ಎರಡು ಸೋಂಕು ಕಾಯಿಲೆಗಳನ್ನು ಒಂದೇ ಎಂದು ನಂಬುವುದು ಸಹಜ ಮತ್ತು ಇವು ದೇವರ ದೋಷದಿಂದ ಬಂದಿದೆ ಎಂದು ನಂಬಿ ದೇವರಿಗೆ ಹರಕೆ ಹೊತ್ತು ಬಹಳ ದಿನಗಳು ಕಳೆದರೂ ಕಾಯಿಲೆಯ ಗುಳ್ಳೆಗಳು ಕಡಿಮೆಯಾಗದೆ ಜಾಸ್ತಿಯಾದಾಗ ವೈದ್ಯರ ಬಳಿ ಚಿಕಿತ್ಸೆಗೆ ಹೋಗುವ ವ್ಯಕ್ತಿಗಳೇ ಬಹಳಷ್ಟು ಮಂದಿ. ಕಾಮನ್ ವಾರ್ಟ್ ಮತ್ತು ಮೊಲಸ್ಕಮ್ ಕಂಟೇಜಿಯೋಸಮ್‌ಗಳೇ ಆ ಎರಡು ಕಾಯಿಲೆಗಳು.



ವೆರುಕಾ, ವೈರಲ್‌ವಾರ್ಟ್, ಹುಲ್ಲುರಿ ಅಥವ ಹುಲಿಯುಗುರು ಮುಂತಾದ ಹೆಸರಿನಿಂದ ಕರೆಯುವ ಈ ಕಾಯಿಲೆಬರಲು ಪ್ಯಾಪಿಲೊಮ ವೈರಸ್‌ಗಳೇ ಕಾರಣ.

ವೆರುಕಾ, ಗುಳ್ಳೆಗಳಿದ್ದ ವ್ಯಕ್ತಿಯ ಚರ್ಮ ಬೇರೆಯವರ ಚರ್ಮಕ್ಕೆ ಸೋಕಿದಾಗ ಸೋಂಕು ಆ ವ್ಯಕ್ತಿಗಳಿಗೂ ಅಂಟಿ ಕಾಯಿಲೆ ಒಬ್ಬರಿಂದ ಬೇರೊಬ್ಬರಿಗೆ ಹರಡುತ್ತದೆ.

ರೋಗ ನಿರೋಧಕ ಶಕ್ತಿ ಜಾಸ್ತಿ ಇರುವವರಲ್ಲಿ ಒಂದೆರಡು ಗುಳ್ಳೆಗಳಿದ್ದು ಅಷ್ಟಕ್ಕೆ ಕೊನೆಗೊಳ್ಳುತ್ತದೆ. ರೋಗ ನಿರೋಧಕ ಶಕ್ತಿ ಕುಂಠಿತಗೊಂಡವರಲ್ಲಿ ಮೈಮೇಲೆಲ್ಲಾ ಹರಡಿ ಜಾಸ್ತಿಯಾಗುತ್ತವೆ. ಹೆಚ್ಚಾಗಿ ಚಿಕ್ಕವರಲ್ಲಿ ಕಾಣಿಸಿಕೊಳ್ಳುವ ಈ ಸೋಂಕು, ಸೂಜಿಯ ಗುಂಡಿನ ಗಾತ್ರದಿಂದ ಕಾಳಿನ ಗಾತ್ರದವರೆಗೆ ದಪ್ಪವಾಗಿದ್ದು, ಮೇಲ್ಮೈ ಒರಟಾಗಿರುತ್ತದೆ. ಕೆಲವು ಹುಲಿಯುಗುರುಗಳು ಒಂದಕ್ಕೊಂದು ಸೇರಿಕೊಂಡು ಒಂದೆರಡು ಸೆಂಟಿ ಮೀಟರನಷ್ಟು ಅಗಲವಾಗಬಹುದು. ಉಗುರಿನ ಸುತ್ತ ಇದ್ದಾಗ ಉಗುರಿನ ಬೇರಿಗೂ ಸೋಂಕು ಆವರಿಸಿ ಉಗುರು ನಾಶವಾಗಬಹುದು. ಉಗುರು, ಅಂಗಾಲು ಮತ್ತು ಅಂಗೈಗಳಲ್ಲಿ ಉಂಟಾದಾಗ ಅದುಮಿದರೆ ಅಥವ ನಡೆಯುವಾಗ ಒತ್ತಿದರೆ ನೋವುಂಟಾಗುತ್ತದೆ. ಅಂಗಾಲಿನಲ್ಲಿ ಹುಲಿಯುಗುರುಗಳು ಬಂದಾಗ ಕೆಲವು ವೇಳೆ ಕಲ್ಲೊತ್ತಿನ ರೀತಿಯಲ್ಲಿ ಕಾಣಬಹುದಾದುದರಿಂದ ಜನರು ವೈದ್ಯರ ಸಲಹೆ ಕೇಳುವುದು ಉತ್ತಮ. ಏಕೆಂದರೆ ಕಲ್ಲೊತ್ತು ಸೋಂಕು ಕಾಯಿಲೆಯಲ್ಲ ಮತ್ತು ಒಬ್ಬರಿಂದ ಬೇರೊಬ್ಬರಿಗೆ ಅಂಟುವುದಿಲ್ಲ ಕಲ್ಲೊತ್ತಿನ ಚಿಕಿತ್ಸೆಯೇ ಬೇರೆ ರೀತಿಯಾಗಿರುತ್ತದೆ.

ಅಸಂಖ್ಯಾತ ಕಾಯಿಲೆಗಳಿಗೆ ಕಾರಣವಾಗಿರುವ ಯಾವುದೇ ವೈರಸ್‌ಗಳನ್ನು ದೇಹದೊಳಗೆ ನಾಶಪಡಿಸುವಂಥ ಔಷಧಗಳನ್ನು ವಿಶ್ವದಲ್ಲಿ ಇದುವರೆಗೂ ವಿಜ್ಞಾನಿಗಳು ಕಂಡು ಇಡಿದಿಲ್ಲ. ಆದರೂ ಬಹಳಷ್ಟು ಕಾಯಿಲೆಗಳಲ್ಲಿ ವೈರಸ್‌ಗಳು ಯಾವ ಔಷಧಿಯ ನೆರವಿಲ್ಲದೆ ಹಲವಾರು ದಿನಗಳಲ್ಲಿ ತಮ್ಮಷ್ಟಕ್ಕೆ ತಾವೇ ಆ ರೋಗಿಯ ದೇಹದಿಂದ ಬಿಡುಗಡೆ ಹೊಂದುವುದರಿಂದ ಗುಣಮುಖರಾಗುತ್ತಾರೆ. ಇದು ಪ್ರಕೃತಿಯ ವೈಶಿಷ್ಟ್ಯ ಮತ್ತು ನಮ್ಮ ಅದೃಷ್ಟ. ಇದೇ ರೀತಿ ಕಾಮನ್ ವಾರ್ಟ್‌ಗಳು ಸಹ ಯಾವ ಔಷಧಿಯ ನೆರವಿಲ್ಲದೆ ಆ ವ್ಯಕ್ತಿಯ ಪಕೃತಿದತ್ತವಾದ ರೋಗ ನಿರೋಧಕ ಶಕ್ತಿಯ ಆಧಾರದ ಮೇಲೆ ಸ್ವಲ್ಪ ದಿನಗಳಿಂದ ಕೆಲವಾರು ತಿಂಗಳು ಅಥವ ಕೆಲವಾರು ವರ್ಷಗಳು ಇದ್ದು ತಮ್ಮಷ್ಟಕ್ಕೆ ತಾವೇ ಹೊರಟು ಹೋಗುತ್ತವೆ.

ಒಂದು ಜಾಗದಿಂದ ಇನ್ನೊಂದು ಜಾಗಕ್ಕೆ ಮತ್ತು ಒಬ್ಬರಿಂದ ಬೇರೊಬ್ಬರಿಗೆ ಅಂಟುವುದರಿಂದ ಹಾಗೂ ಕೆಲವರಲ್ಲಿ ಮೈಮೇಲೆಲ್ಲಾ ಗುಳ್ಳೆಗಳು ಹರಡಿಕೊಂಡು ನೋಡಲು ವಿಲಕ್ಷಣವಾಗಿ ಕಾಣುವುದರಿಂದ ಒಂದೆರಡು

ಗುಳ್ಳೆಗಳಿರುವಾಗಲೆ ಉದಾಸೀನ ಮಾಡದೆ ವೈದ್ಯರ ಸಲಹೆ ಕೇಳಬೇಕು. ಕೆಲವರಲ್ಲಿ ಗುಳ್ಳೆಗಳಿಗೆ ಮೇಲು ಸೋಂಕು ತಗಲಿ ಕೀವಾಗಿ ಮುಂದೆ ಕಿಡ್ನಿ ತೊಂದರೆಗೂ ಕಾರಣವಾಗಬಹುದು.

ಕರೆಂಟ್, ಆಸಿಡ್ ಮತ್ತು ಕ್ರಯೋಥೆರಪಿ ಮುಂತಾದ ವಿಧಾನಗಳಿಂದ ಗುಳ್ಳೆಗಳನ್ನು ತಗೆಸುವುದೇ ಅತ್ಯುತ್ತಮವಾದ ವಿಧಾನ.

ಮೊಲಸ್ಕಮ್ ಕಂಟೇಜಿಯೋಸಮ್.

ಸೂಜಿಯ ಗುಂಡಿನ ಗಾತ್ರದಿಂದ ಕಾಳಿನ ಗಾತ್ರದವರೆಗೆ ಇರಬಹುದಾದ ವೈರಸ್ ಸೋಂಕಿನಿಂದ ಬರುವ ಕಾಯಿಲೆ ಇದು. ಶರವೇಗದಲ್ಲಿ ಒಂದು ಜಾಗದಿಂದ ಬೇರೊಂದು ಜಾಗಕ್ಕೆ ಅಂಟಿ (ಕಂಟೇಜಿಯಸ್) ಹರಡುವ ಈ ಕಾಯಿಲೆ ಸಾಮಾನ್ಯವಾಗಿ ಚಿಕ್ಕವರಲ್ಲೆ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ.

ಗುಳ್ಳೆಗಳ ಮೈನಯವಾಗಿದ್ದು ಮೇಲ್ಮೈನ ಮಧ್ಯದಲ್ಲಿ ಒಂದು ಸಣ್ಣ ಕುಳಿ ಇರುತ್ತದೆ. ಚರ್ಮದ ಬಣ್ಣದಂತೆ ಕಾಣುವ ಗುಳ್ಳೆಗಳ ಒಳಗೆ ರೋಗಾಣುಗಳ ಮುತ್ತಿನ ಬಿಳಿ ಬಣ್ಣದ ಮೊಲಸ್ಕಮ್ ಮುದ್ದೆಗಳಿರುತ್ತದೆ. ಸ್ಕಾಲಪೆಲ್ (ಚಾಕು) ನಿಂದ ಗುಳ್ಳೆಗಳ ಮೇಲ್ಮೈಯನ್ನು ಕೊಯ್ದು ಸ್ಕೂಪರ್‌ನಿಂದ ಮೊಲಸ್ಕಮ್ ಮುದ್ದೆಗಳನ್ನು ತೆಗೆಯಬೇಕು. ಈ ಮುದ್ದೆಗಳು ಸೋಕಿದ ಕಡೆಯಲ್ಲೆಲ್ಲಾ ಸೋಂಕಿನ ಗುಳ್ಳೆಗಳು ಬರುವುದರಿಂದ ಚರ್ಮದ ಇತರ ಬಾಗಗಳಿಗೆ ತಗಲದಂತೆ ಎಚ್ಚರಿಕೆ ವಹಿಸಬೇಕು.

ದೊಡ್ಡವರಲ್ಲಿ ಸಾಮಾನ್ಯವಾಗಿ ಗುಪ್ತಾಂಗಗಳ ಸುತ್ತ ಮುತ್ತ ಕಾಣಿಸಿಕೊಳ್ಳುವ ಈ ಗುಳ್ಳೆಗಳು ಬೇರೆಯವರ ಜತೆ ಅನೈತಿಕ ಸಂಬಂಧವಿಟ್ಟುಕೊಂಡಿರುವವರಲ್ಲಿ ಹೆಚ್ಚಾಗಿ ಕಾಣಿಸಿಕೊಂಡು ಲೈಂಗಿಕ ಕ್ರಿಯೆ ಸಮಯದಲ್ಲಿ ವ್ಯಕ್ತಿಯಿಂದ ವ್ಯಕ್ತಿಗೆ ಅಂಟುತ್ತದೆ. ಯಾರಿಗೆ ಬೇಕಾದರೂ ಬರಬಹುದಾದ ಈ ಗುಳ್ಳೆಗಳು ಗುಪ್ತಾಂಗಗಳ ಚರ್ಮದಲ್ಲಿ ಕಂಡು ಬಂದ ತಕ್ಷಣವೇ ಜೀವನ ಸಂಗಾತಿಯ ಜತೆ ಲೈಂಗಿಕ ಕ್ರಿಯೆ ಬಹಿಷ್ಕರಿಸಿ ವೈದ್ಯರಿಂದ ಗುಳ್ಳೆಗಳನ್ನು ತೆಗೆಸಿಕೊಳ್ಳಬೇಕು.

* * * * *

೯. ಹರ್ಪಿಸ್ ಸಿಂಪ್ಲೆಕ್ಸ್



ಚರ್ಮರೋಗ ತಜ್ಞರ ಹತ್ತಿರ ಬರುವ ಬಹಳಷ್ಟು ರೋಗಿಗಳಲ್ಲಿ ಸಾಮಾನ್ಯವಾಗಿ ಕಾಣಿಸಕೊಳ್ಳುವ ಈ ಹರ್ಪಿಸ್ ಸಿಂಪ್ಲೆಕ್ಸ್ ಬೇನೆಗೆ ವೈರಸ್ ರೋಗಾಣುವಾದ ಹರ್ಪಿಸ್ ವೈರಸ್ ಹೋಮಿನಿಸ್ ಎಂಬ ಅಣುಜೀವಿ ಕಾರಣವಾಗಿದೆ.

ಮಕ್ಕಳಿಂದ ಹಿಡಿದು ದೊಡ್ಡವರ ಚರ್ಮದಲ್ಲಿ ಸಾಮಾನ್ಯವಾಗಿ ಮುಖ, ತುಟ್ಟಿ ಮೂಗು ಮತ್ತು ಬಾಯಿಯ ಸುತ್ತಮುತ್ತ ಮತ್ತು ಅವುಗಳ ಒಳಭಾಗದಲ್ಲಿ ಎಲ್ಲಿ ಬೇಕಾದರೂ ಕಾಣಿಸಿಕೊಳ್ಳುವ ಈ ಸೋಂಕಿಗೆ ಟೈಪ್ -1 (ಒಂದು) ಜಾತಿಯ ಹರ್ಪಿಸ್ ವೈರಸ್ ಹೋಮಿನಿಸ್ ಕಾರಣವಾಗಿದೆ. ತುಟಿ ಅಥವ ಅದರ ಸುತ್ತಮುತ್ತ ಇದು ಕಾಣಿಸಿಕೊಂಡಾಗ ಅನೇಕ ಜನರು ಜ್ವರದ ಗುಳ್ಳೆ, ಎಂಜಲು ಬೊಕ್ಕೆ ಅಥವ ಹಲ್ಲಿಯ ಮೂತ್ರದ ಗುಳ್ಳೆ ಮುಂತಾದ ಹೆಸರಿನಿಂದಲೂ ಕರೆಯುತ್ತಾರೆ.

ಎಂಜಲು ತಿನ್ನುವುದು, ಮುತ್ತು ಕೊಡುವುದು, ಟವಲ್, ಲೆಪ್‌ಸ್ಟಿಕ್, ವ್ಯಾಸಲೇನ್ ಅಥವ ಇತರ ಶೃಂಗಾರ ಸಾಧನಗಳನ್ನು ಸಾಮೂಹಿಕವಾಗಿ ಬಳಸುವುದು, ಒಬ್ಬರು ಉಪಯೋಗಿಸಿದ ಶೇವಿಂಗ್ ಬ್ಲೇಡ್, ಬ್ರಷ್, ರೇಜರ್

ಮುಂತಾದ ವಸ್ತುಗಳನ್ನು ಸ್ಟೆರಿಲೈಜ್ (ರೋಗಾಣು ಸಾಯುವಂತೆ ಶುಚಿ ಮಾಡುವುದು) ಮಾಡದೆ ಇತರರು ಉಪಯೋಗಿಸಿದಾಗ ಈ ಸೋಂಕು ಒಬ್ಬರಿಂದ ಮತ್ತೊಬ್ಬರಿಗೆ ಹರಡುತ್ತದೆ.

ಬೆರಳಿನ ತುದಿ ಮತ್ತು ಕಣ್ಣಿನಲ್ಲೂ ಸಹ ಕಾಣಿಸಿಕೊಳ್ಳುವ ಈ ಬೇನೆ ಮೊದಲ ಸಲ ಸೋಂಕು ತಗುಲಿದಾಗ ಸೋಂಕಿನ ಲಕ್ಷಣಗಳು ತೀಕ್ಷ್ಣವಾಗಿದ್ದು ನಂತರ ಕಾಯಿಲೆಯ ಲಕ್ಷಣಗಳು ಕಡಿಮೆಯಾಗಿ ಗುಣವಾದರೂ ವೈರಸ್‌ಗಳು ದೇಹದಿಂದ ತೊಲಗದೆ ಬೇನೆ ಕಾಣಿಸಿಕೊಂಡ ಜಾಗದ ಚರ್ಮದ ತಳ ಭಾಗದಲ್ಲಿರುವ ನರಗಳಲ್ಲಿ ರಕ್ಷಣೆ ಪಡೆದುಕೊಂಡು ಕುಂಭಕರ್ಣನಂತೆ ನಿದ್ರಾವಸ್ಥೆಯಲ್ಲಿರುತ್ತವೆ. ಒಮ್ಮೊಮ್ಮೆ ಜ್ವರ ಶೀತ, ನ್ಯುಮೋನಿಯಾ ಬಂದಾಗ, ಮನಸ್ಸಿಗೆ ನೋವಾಗುವ ಘಟನೆಗಳು ಜರುಗಿ ಮನಸ್ಸು ಖೇದ ಗೊಂಡಾಗ, ಎಯ್ಡ್ಸ್ ಸಕ್ಕರೆ ರೋಗ ಮತ್ತು ಕೆಲವು ಕಾಯಿಲೆಗಳಲ್ಲಿ ದೀರ್ಘ ಕಾಲ ಕಾರ್ಟಿಸೋನ್ ಔಷಧ ತೆಗೆದುಕೊಳ್ಳುತ್ತಿರುವವರಲ್ಲಿ ಹಂಗಾಮಿಯಾಗಿ ಅಥವ ಶಾಶ್ವತವಾಗಿ ರೋಗ ನಿರೋಧಕ ಶಕ್ತಿ ಕಡಿಮೆಯಾದಾಗ ವೈರಸ್‌ಗಳು ಎಚ್ಚರವಾಗಿ ಚುರುಕುಗೊಂಡಾಗ ಸೋಂಕು ಮರುಕಳಿಸಿ ಬೇನೆಯ ಲಕ್ಷಣ ಸ್ವಲ್ಪ ದಿನ ಮೊದಲಿನಂತೆಯೇ ಕಾಣಿಸಿಕೊಳ್ಳುತ್ತದೆ. ಈ ರೀತಿಯಾಗಿ ಜೀವನ ಪರ್ಯಂತ ಆಗಾಗ್ಗೆ ಕಾಯಿಲೆ ಮರುಕಳಿಸಿ ಕಾಡುತ್ತಿರಬಹುದು.

ಸೋಂಕು ಬರುವ ಜಾಗದಲ್ಲಿ ಕೆಲವು ತಾಸುಗಳ ಮುಂಚೆ ಕಡಿತ, ಉರಿ ಮತ್ತು ನೋವು ಅಥವ ಯಾವ ಸೂಚನೆಯೂ ಇಲ್ಲದೆ ಕೆಂಪನೆಯ ಅತಿ ಸಣ್ಣ ಮಚ್ಚೆಗಳು ಬಂದು ಗುಳ್ಳೆಗಳಾಗುತ್ತವೆ. ನಂತರ ನೀರು ಗುಳ್ಳೆಗಳಂತೆ ಬದಲಾಗಿ ಗುಂಪು ಗುಂಪಾಗಿ ಹರಡಿಕೊಂಡಿರುತ್ತವೆ. ಆಮೇಲೆ ಕೀವು ಗುಳ್ಳೆಗಳಾಗಿ ಮಾರ್ಪಟ್ಟು ಒಣಗಿ ಹೋಗುತ್ತವೆ. ಗುಳ್ಳೆಗಳು ಸೂಜಿಯ ಗುಂಡಿನ ಗಾತ್ರದಿಂದ ಹಿಡಿದು ಕಾಳಿನ ಗಾತ್ರದಷ್ಟು ದಪ್ಪವಾಗಿರಬಹದು. ಸೋಂಕಿನ ಶುರುವಿನಲ್ಲಿ ಹತ್ತಿರವಿರುವ ಲಿಂಫ್‌ನೋಡ್ ಗ್ರಂಥಿಗಳು ಅರಳಿಕೊಂಡು ಸ್ವಲ್ಪ ನೋವು ಉಂಟಾಗಬಹುದು.

ಸಾಮಾನ್ಯವಾಗಿ ಚಿಕ್ಕವರಲ್ಲಿ, ಬಾಯಿಯ ಒಳಭಾಗ, ಒಸಡುಗಳು ಮತ್ತು ನಾಲೆಗೆಯಲ್ಲಿ ಮೊದಲನೆ ಸಲ ಸೋಂಕು ಕಾಣಿಸಿಕೊಂಡಾಗ, ಗುಳ್ಳೆಗಳು ಒಡೆದು ಗಾಯಗಳಾಗುವುದು, ಜೊಲ್ಲು ಸೋರುವುದು, ನೋವು, ಉರಿ, ಅಹಾರ ತಿನ್ನಲು ತೊಂದರೆ, ಕುತ್ತಿಗೆಯಲ್ಲಿ ಬರೆಗಳ್ಳೆ ಕಟ್ಟುವುದು ಮತ್ತು ಜ್ವರ ಮುಂತಾದ ಲಕ್ಷಣಗಳು ತೀಕ್ಷ್ಣವಾಗಿರುತ್ತವೆ.

ಪ್ರಾಯದ ವ್ಯಕ್ತಿಗಳು ಬೇರೆಯವರ ಜೊತೆ ಅನೈತಿಕವಾಗಿ ಲೈಂಗಿಕ ಕ್ರಿಯೆಯಲ್ಲಿ ತೊಡಗಿದ್ದಾಗ ಮಾತ್ರದಿಂದ ಬರುವಂತಹ ಜನೈಟಲ್ (ಜನನೇಂದ್ರಿಯದ) ಹರ್ಪಿಸ್ ಸಿಂಪ್ಲೆಕ್ಸ್ ಕಾಯಿಲೆಗೆ ಟೈಪ್ –2 (ಎರಡು) ಜಾತಿಯ ಹರ್ಪಿಸ್ ಹೋಮಿನಿಸ್ ಕಾರಣವಾಗಿದೆ.

ಇತ್ತೀಚಿನ ದಿನಗಳಲ್ಲಿ ಜಗತ್ತಿನಲ್ಲೆಲ್ಲಾ ಶರವೇಗದಲ್ಲಿ ಹಬ್ಬುತ್ತಾ ಹರಡಿಕೊಂಡಿರುವ ಈ ಕಾಯಿಲೆ ಅನೈತಿಕ ಲೈಂಗಿಕ ಚಟುವಟಿಕೆಗಳಲ್ಲಿ ಭಾಗಿಯಾಗುವವರಲ್ಲಿ ಜಾಸ್ತಿಯಾಗಿದೆ.


ಪುರುಷರಲ್ಲಿ ಜನನಾಂಗದ ಸುತ್ತ ಮುತ್ತ ಕಾಣಿಸಿಕೊಂಡು ಆಗಾಗ್ಗೆ ಸ್ಥಳೀಯವಾಗಿ ಕಾಡುವ ಈ ಬೇನೆ ಮಹಿಳೆಯರಲ್ಲಿ ಜನನಾಂಗದ ಸುತ್ತ ಮುತ್ತ ಮತ್ತು ಒಳಭಾಗ, ಗರ್ಭಕೋಶದದ್ವಾರ ಮುಂತಾದ ಕಡೆ ಕಾಣಿಸಿಕೊಳ್ಳುತ್ತದೆ. ಪ್ರಥಮವಾಗಿ ಕಾಣಿಸಕೊಂಡಾಗ ಕಾಯಿಲೆಯ ಲಕ್ಷಣ ತೀಕ್ಷ್ಣವಾಗಿದ್ದು ಮಹಿಳೆಯರು ನೋವಿನಿಂದ ನರಳುತ್ತಾರೆ.

ಸೋಂಕು ಇರುವ ಮಹಿಳೆಯರ ಗರ್ಭದ್ವಾರಕ್ಕೆ ಭವಿಷ್ಯದಲ್ಲಿ ಕ್ಯಾನ್ಸರ್ ತಗಲುವ ಸಂಭವ ಇತರರಿಗಿಂತ ಜಾಸ್ತಿ ಇರುವುದರಿಂದ 2–3 ವರ್ಷಗಳಿಗೊಮ್ಮೆ ತಜ್ಞ ವೈದ್ಯರಿಂದ ಕ್ಯಾನ್ಸರ್ ಇಲ್ಲದಿರುವಿಕೆಯ ಬಗ್ಗೆ ಖಚಿತ ಪಡಿಸಿಕೊಳ್ಳುವುದು ಉತ್ತಮ. ಗರ್ಭ ಧ್ವಾರದ ಹರ್ಪಿಸ್ ಇರುವ ಮಹಿಳೆಯರು ಗರ್ಭವತಿಯರಾದರೆ ಹುಟ್ಟುವ ಮಕ್ಕಳಿಗೆ ಹೆರಿಗೆ ಸಮಯದಲ್ಲಿ ಅಂಟುವ ಸಂಭವ ಇರುವುದರಿಂದ ಸಿಸೇರಿಯನ್ ಆಪರೇಷನ್ ಮಾಡಿ ಮಗು ತೆಗೆಯುವುದು ಒಳ್ಳೆಯದು.

ಪತಿ ಪತ್ನಿಯರಿಬ್ಬರಲ್ಲಿ ಒಬ್ಬರು ಈ ಕಾಯಿಲೆಯಿಂದ ಬಳಲುತ್ತಿದ್ದರೆ ಕೃತಕ ಸಾಧನ (ನಿರೋಧ್) ಉಪಯೋಗಿಸುವುದರಿಂದ ಬಾಳಸಂಗಾತಿಗೆ ರೋಗ ಅಂಟದಂತೆ ನೋಡಿಕೊಳ್ಳಬಹುದು. ಹರ್ಪಿಸ್ ಜನನಾಂಗದಲ್ಲಿ ಮರುಕಳಿಸಿದ ನಂತರ ಒಣಗುವವರೆಗೂ ಲೈಂಗಿಕ ಕ್ರಿಯೆಯನ್ನು ಬಹಿಷ್ಕರಿಸಿ ರೋಗ ಬೇರೊಬ್ಬರಿಗೆ ಅಂಟದಂತೆ ಎಚ್ಚರ ವಹಿಸಬೇಕು.

* * * * *

10. ಹರ್ಪಿಸ್ ಜೋಸ್ಟರ್



ವಿಶ್ವದಲ್ಲೆಲ್ಲಾ ಹರಡಿಕೊಂಡಿರುವ ಹರ್ಪಿಸ್ ಜೋಸ್ಟರ್ ಅರ್ಥಾತ್ ಸರ್ಪಸುತ್ತು ಕಾಯಿಲೆಯು ದೊಡ್ಡವರಲ್ಲಿ ಸಾಮಾನ್ಯವಾಗಿ ಮತ್ತು ಚಿಕ್ಕವರಲ್ಲಿ ಅಪರೂಪವಾಗಿ ಕಾಣಿಸಿಕೊಳ್ಳುತ್ತದೆ. ವೆರಿಸಿಲ್ಲಾ ಜೋಸ್ಟರ್ (ವಿ-ಜಡ್) ಎಂಬ ವೈರಸ್ ರೋಗಾಣುಗಳು ಈ ಕಾಯಿಲೆ ಬರಲು ಕಾರಣವಾಗಿದ್ದು ಇದೇ ವೈರಾಣುಗಳು ಚಿಕನ್ ಪಾಕ್ಸ್ ಅರ್ಥಾತ ಸೀತಾಳ ಸಿಡುಬು ಎಂಬ ಸಾಂಕ್ರಾಮಿಕ ಕಾಯಿಲೆಯ ಉಪದ್ರವಕ್ಕೂ ಕಾರಣವಾಗಿದೆ.

ಸೀತಾಳ ಸಿಡುಬು ಕಾಯಿಲೆ ತಗಲಿ ಆಮೇಲೆ ಸಂಪೂರ್ಣ ಚೇತರಿಸಿಕೊಂಡ ನಂತರದಿಂದ ಭವಿಷ್ಯದಲ್ಲಿ ಯಾವಾಗ ಬೇಕಾದರೂ ಹರ್ಪಿಸ್ ಜೋಸ್ಟರ್ ಕಾಯಿಲೆಯಿಂದ ಬಳಲುವ ಬಹಳಷ್ಟು ಮಂದಿಯನ್ನು ನಾವು ಅನೇಕ ಸಲ ನೋಡುತ್ತೇವೆ.

ಈ ಹರ್ಪಿಸ್ ಜೋಸ್ಟರ್ ಕಾಯಿಲೆಯಲ್ಲಿ ವೈರಸ್‌ಗಳು ಮೊದಲಿಗೆ ಬೆನ್ನುರಿ ನರಗಳ (ಸ್ಪೈನಲ್ ನರ್ವ್ಸ್) ಮತ್ತು ತಲೆ ಹಾಗೂ ಕುತ್ತಿಗೆಯಲ್ಲಿರುವ

ಕ್ರೇನಿಯಲ್ ನರಗಳ ಉಗಮ ಸ್ಥಾನಗಳನ್ನು ಆಕ್ರಮಿಸಿ ಅಲ್ಲಿಂದ ಆ ನರಗಳ ಮೂಲಕ ಸೋಂಕು ಹರಡಿ ಅಂತಿಮವಾಗಿ ನರಗಳು ಹರಡಿಕೊಂಡಿರುವ ಚರ್ಮದ ಭಾಗಗಳಲ್ಲಿ ಕಾಯಿಲೆಯ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ದೇಹದ ಒಂದು ಪಾರ್ಶ್ವದಲ್ಲಿ ಮಾತ್ರ ಸೋಂಕಿನ ಲಕ್ಷಣಗಳು ಕಾಣಿಸಿಕೊಳ್ಳುವುದು ಈ ಕಾಯಿಲೆಯ ವೈಶಿಷ್ಟ್ಯ. ಒಂದು ನಿರ್ದಿಷ್ಟ ಜಾಗದ ಎರಡು ಮೂರು ನರಗಳಿಗೆ ಮಾತ್ರ ಸೋಂಕು ತಗಲುವುದರಿಂದ ಆ ಚರ್ಮದ ಭಾಗಗಳಲ್ಲಿ ಮಾತ್ರ ಗುಂಪು ಗುಂಪಾಗಿ ಕಾಣಿಸಿಕೊಳ್ಳುತ್ತವೆ. ಉದಾಹರಣೆಗೆ ಎದೆಯ ಹಿಂದೆ ಮತ್ತು ಮುಂದೆ ಅಥವಾ ಕುತ್ತಿಗೆ, ಕೈ ಮತ್ತು ತೋಳು ಅಥವಾ ಕಣ್ಣು ಮತ್ತು ಹಣೆ ಅಥವಾ ದವಡೆ, ಮೂಗು. ಕಾಲು ಅಥವಾ ಕಿವಿ ಮತ್ತು ಕೆನ್ನೆ ಇತ್ಯಾದಿ.

ಜ್ವರ ಬಂದು ಸೋಂಕು ತಗಲಿರುವ ನರಗಳು ಹರಡಿಕೊಂಡಿರುವ ಚರ್ಮದಲ್ಲಿ ಮೊದಲಿಗೆ ಸೆಳೆತ, ಕಡಿತ, ಉರಿ ಅಥವ ನೋವು ಕಾಣಿಸಿಕೊಳ್ಳಬಹುದು. ನಂತರ ಚರ್ಮ ಕೆಂಪಾಗಿ ಕೆಂಪಿನ ಮೇಲೆ ಸಣ್ಣ ಸಣ್ಣಗುಳ್ಳೆಗಳು ಬಂದು ಕೆಲವೇ ಘಂಟೆಗಳಲ್ಲಿ ನೀರು ಗುಳ್ಳೆಗಳಾಗಿ ಮಾರ್ಪಡುತ್ತವೆ. ಕೆಲವು ದಿನಗಳ ನಂತರ ಕೀವು ಗುಳ್ಳೆಗಳಾಗಿ ಬದಲಾಗಿ ಒಣಗಿಹೋಗುತ್ತವೆ. ಈ ರೀತಿಯಾಗಿ ಗುಳ್ಳೆಗಳು ಗುಂಪು ಗುಂಪಾಗಿ ರುಂಡದಲ್ಲಿ ಮಧ್ಯ ಭಾಗದಿಂದ ಅಂಚಿನ ದಿಕ್ಕಿನಲ್ಲಿ, ಕಾಲಿನಲ್ಲಿ ಬಂದರೆ ಕುಂಡಿಯಿಂದ ಕಾಲು ಬೆರಳಿನ ದಿಕ್ಕಿನಲ್ಲಿ, ಕೈಗಳಲ್ಲಿ ಬಂದರೆ ಭುಜದಿಂದ ಕೈ ಬೆರಳಿನ ದಿಕ್ಕಿನಲ್ಲಿ ಹರಡಿಕೊಂಡಿರುತ್ತವೆ. ಹೀಗೆ ಒಂದೊಂದು ಗುಂಪು ಕೆಲವು ಮಿಲಿ ಮೀಟರ್‌ಗಳಿಂದ ಕೆಲವು ಸೆಂಟಿ ಮೀಟರ್ ವಿಸ್ತೀರ್ಣದವರೆಗೂ ಹರಡಿಕೊಂಡಿರಬಹುದು. ಸೋಂಕಿನ ಶುರುವಿನಲ್ಲಿ ಹತ್ತಿರವಿರುವ ಲಿಂಫ್ ಗ್ರಂಥಿಗಳು ಅರಳಿ ದಪ್ಪವಾಗಿ (ಬರಗಳ್ಳೆ ಕಟ್ಟುವುದು) ಸ್ವಲ್ಪ ನೋವು ಕಾಣಬಹುದು.

ಎದೆಯ ಎಡಭಾಗವು ಈ ಸೋಂಕಿಗೆ ಗುರಿಯಾದರೆ ಗುಳ್ಳೆಗಳು ಶುರುವಾಗುವ ಮುನ್ನ ಪ್ರಾರಂಭದಲ್ಲಿ ಎದೆ ನೋವು ಅಥವಾ ಸೆಳೆತ ಕಾಣಿಸಕೊಳ್ಳಬಹುದು. ಆಗ ರೋಗಿಗಳು ಹೃದಯದ ಬೇನೆ ಇರಬಹುದೆಂದು ಶಂಕಿಸಿ ಇ ಸಿ ಜಿ ಮತ್ತು ಇತರೆ ದುಬಾರಿಯಾದ ತಪಾಸಣೆಗಳನ್ನು ಮಾಡಿಸಿಕೊಂಡು ಬರುವ ವ್ಯಕ್ತಿಗಳನ್ನು ನಾವು ಬಹಳಷ್ಟು ನೋಡುತ್ತೇವೆ.

ವಯಸ್ಸಾದವರಲ್ಲಿ, ಸಕ್ಕರೆ ಕಾಯಿಲೆ, ಎಯ್ಡ್ಸ್, ಕ್ಯಾನ್ಸರ್ ಮುಂತಾದ ಕಾಯಿಲೆಯಿಂದ ಬಳಲುತ್ತಿರುವವರಲ್ಲಿ ಮತ್ತು ರೋಗ ನಿರೋಧಕ ಶಕ್ತಿ ಕುಂಠಿತಗೊಂಡ ಇತರರಲ್ಲಿ ಜಾಸ್ತಿ ಕಾಣಿಸಿಕೊಳ್ಳುವ ಈ ಕಾಯಿಲೆ ಒಮ್ಮೆ ಬಂದರೆ ಚಿಕ್ಕವರಿಗಿಂತ ನಿದಾನವಾಗಿ ಗುಣವಾಗುತ್ತದೆ ಮತ್ತು ಕಾಯಿಲೆ ಗುಣವಾದ

ಮೇಲೂ ಉರಿ, ಕಡಿತ, ನೋವು, ಸೆಳೆತ ಮುಂತಾದ ತೊಂದರೆಗಳನ್ನು ಅನೇಕ ದಿನಗಳಷ್ಟು ಅಥವಾ ಅನೇಕ ವರ್ಷಗಳಷ್ಟು ಅನುಭವಿಸಬೇಕಾಗಿ ಬರಬಹುದು. ಒಮ್ಮೊಮ್ಮೆ ಸೋಂಕಿನ ಗಾಯಗಳು ವಾಸಿಯಾದಮೇಲೂ ಗಾಯದ ಮಚ್ಚೆಗಳು ಶಾಶ್ವತವಾಗಿ ಉಳಿದುಕೊಳ್ಳಬಹುದು. ಅಪರೂಪವಾಗಿ ಕಣ್ಣು ಮತ್ತು ಅದರ ಸುತ್ತ ಮುತ್ತಲಿನ ಜಾಗವು ಸೋಂಕಿಗೆ ಗುರಿಯಾದಾಗ ತಕ್ಷಣ ವೈದ್ಯರಿಗೆ ತೋರಿಸದೆ ನಿರ್ಲಕ್ಷಿಸಿದರೆ ಕಣ್ಣು ಕುರುಡಾಗುವ ಸಾಧ್ಯತೆಯೂ ಉಂಟು. ಮುಖದ ಸ್ನಾಯುಗಳ ನಿಯಂತ್ರಣವನ್ನು ಹೊಂದಿರುವ ನರಗಳು ಈ ಸೋಂಕಿಗೆ ತುತ್ತಾದರೆ ಮುಖದ ಒಂದು ಪಾರ್ಶ್ವವು ಲಕ್ವಕ್ಕೆ ಗುರಿಯಾಗಬಹುದು. ಕಿವಿಯೊಳಗೆ ಈ ಸೋಂಕು ತಗಲಿದಾಗ ಕಿವಿ ಕಿವುಡಾಗಬಹುದು. ವಿರಳವಾಗಿ ಈ ಸೋಂಕು ದೇಹದೊಳಕ್ಕೂ ಪಸರಿಸಿ ಕೆಲವೊಮ್ಮೆ ಮೆನೆಂಜೈಟಿಸ್, ನ್ಯೂಮೋನಿಯಾ ಮುಂತಾದ ಕಾರಣಗಳಿಂದ ಪ್ರಾಣಕ್ಕೂ ಹಾನಿ ಯಾಗಬಹುದು.

ಈ ಕಾಯಿಲೆ ಭೀಕರತೆಯಿಂದ ಕೂಡಿದ್ದು ಮತ್ತು ದೇಹದಲ್ಲಿ ವ್ಯಾಪಕವಾಗಿದ್ದರೆ ವೈದ್ಯರ ವಿಶಿಷ್ಟ ಚಿಕಿತ್ಸಾ ವಿಧಾನಗಳಿಂದ ಸೋಂಕನ್ನು ತಹಬಂದಿಗೆ ತಂದು ಮುಂದೆ ಒದಗಬಹುದಾದ ಅಪಾಯಗಳಿಂದ ಪಾರಾಗಬಹುದು.

ಚಿಕ್ಕವರಿಗೆ, ಆರೋಗ್ಯವಂತರಿಗೆ, ದುಶ್ಚಟ ರಹಿತ ದೃಢ ಕಾಯದವರಿಗೆ ಈ ಸೋಂಕು ತಗಲಿದರೆ ಯಾವ ತೊಂದರೆಯೂ ಇಲ್ಲದೆ ವೈದ್ಯರ ಸಾಮಾನ್ಯ ಚಿಕಿತ್ಸಾ ಕ್ರಮಗಳಿಂದ ಸಂಪೂರ್ಣವಾಗಿ ಗುಣಮುಖವಾಗುತ್ತಾರೆ.

ಕೀವನ್ನು ನಿಯಂತ್ರಿಸುವ ಮತ್ತು ಜ್ವರ, ನೋವು, ಉರಿ ಅಥವ ಕಡಿತವನ್ನು ಶಮನ ಮಾಡುವ ಶಮನಕಾರಿ ಔಷಧಿಗಳ ಜೊತೆಗೆ ಅಗತ್ಯವಿದ್ದರೆ ಎಸೈಕ್ಲೊವೀರ್, ಸ್ಟೀರ್ಯಾಡ್ ಮತ್ತು ಗ್ಯಾಮಾಗ್ಲಾಬ್ಯೂಲೀನ್ ಮುಂತಾದ ಔಷಧಗಳನ್ನು ನೀಡಲಾಗುತ್ತದೆ.

* * * * *

11. ಮೀಸಲ್ಸ್ ಮತ್ತು ಜರ್ಮನ್ ಮೀಸಲ್ಸ್

ಹೆಸರಿನಿಂದ ಮತ್ತು ಕಾಯಿಲೆಯ ಲಕ್ಷಣಗಳಿಂದ ಬಹಳಷ್ಟು ಸಾಮ್ಯವಿರುವ ಈ ಎರಡು ವೈರಸ್ ಸೋಂಕು ಕಾಯಿಲೆಗಳನ್ನು ಒಟ್ಟಿಗೆ ಜಪರಿಚಯ ಮಾಡಿಕೊಳ್ಳುವುದು ಆರೋಗ್ಯದ ದೃಷ್ಟಿಯಿಂದ ಅತ್ಯವಶ್ಯಕ. ಸಾಮಾನ್ಯ ಜನರು ಚರ್ಮದಲ್ಲಿನ ಈ ಕಾಯಿಲೆಗಳ ಲಕ್ಷಣಗಳನ್ನು ನೋಡಿ ದಡಾರ ಅಥವ ಜಡಾರ ಬಂದಿದೆ ಎಂದು ದೇವರ ಗುಡಿಗೆ ಭೇಟಿ ನೀಡಿ ಪೂಜೆ ಸಲ್ಲಿಸುವುದು ಅಥವ ಹರಿಕೆ ಮಾಡಿಕೊಳ್ಳುವುದು ರೂಢಿಯಲ್ಲಿದೆ.

ವಿಶ್ವದ ಬಡ ದೇಶಗಳಲ್ಲಿ ಬಹಳಷ್ಟು ಮಕ್ಕಳ ಸಾವಿಗೆ ಮತ್ತು ಅಂಗವಿಕಲತೆಗೆ ಈ ಕಾಯಿಲೆಗಳು ಕಾರಣವಾಗಿವೆ. ಅಭಿವೃದ್ಧಿ ಶೀಲ ರಾಷ್ಟ್ರಗಳಲ್ಲಿ ಸುಮಾರು ಆರರಿಂದ ಏಳು ಕೋಟಿಯಷ್ಟು ದಡಾರ ಪ್ರಕರಣಗಳು ಪ್ರತಿ ವರ್ಷ ವರದಿಯಾಗಿ ಸುಮಾರು ಇಪ್ಪತ್ತು ಲಕ್ಷದಷ್ಟು ಮಕ್ಕಳು ಅಸುನೀಗುತ್ತಿವೆ.

ಮೀಸಲ್ಸ್ : ಮೀಸಲ್ಸ್, ರುಬಿಯೋಲಾ ಅಥವಾ ಮಾರ್ಬಿಲ್ಲಿ ಮುಂತಾದ ಹೆಸರಿನಿಂದ ಕರೆಯುವ ಈ ಕಾಯಿಲೆಗೆ ವೈರಸ್ ರೋಗಾಣು ಕಾರಣವಾಗಿದೆ. ಮಕ್ಕಳಲ್ಲಿ ಹೆಚ್ಚಾಗಿ ತಾಗೂ ಪ್ರಾಯಾವಸ್ಥೆ ತಲುಪುತ್ತಿರುವ ಮತ್ತು ತಲುಪಿರುವ ವ್ಯಕ್ತಿಗಳಲ್ಲಿ ಈ ಕಾಯಿಲೆ ಸಾಮಾನ್ಯವಾಗಿ ಕಾಣಿಸಿಕೊಳ್ಳುತ್ತದೆ.

ಮೊದಲಿಗೆ ಜ್ವರ ತಲೆನೋವು, ಮೈಕೈ ನೋವು, ಸುಸ್ತು ಉಂಟಾಗಿ ಎರಡು ಮೂರು ದಿನಗಳ ನಂತರ ಕಣ್ಣು ಕೆಂಪಾಗಿ ಕಡಿತ, ಉರಿ ಕಾಣಿಸಿಕೊಂಡು ಬೆಳಕಿನಲ್ಲಿ ಕಣ್ಣು ತೆರೆಯಲು ತೊಂದರೆ ಉಂಟಾಗಬಹುದು. ಇದರ ಜೊತೆಗೆ ನೆಗಡಿ, ಗಂಟಲು ನೋವು, ಕೆಮ್ಮು ಬಂದು ಧ್ವನಿ ಬದಲಾಗಬಹುದು. ಬಾಯಿಯೊಳಗೆ ಮೇಲಿನ ದವಡೆಯ ಹಲ್ಲುಗಳ ಸಾಲಿನ ಎದುರು, ಕೆನ್ನೆಯ ಒಳಭಾಗ ಕೆಂಪಾಗಿದ್ದು ಅದರ ಮೇಲೆ ಹಾಲಿನ ಬಣ್ಣದ ಬಿಳಿ ಗುಳ್ಳೆಗಳು ಕಾಣಿಸಕೊಳ್ಳುತ್ತವೆ. ಈ ಗುಳ್ಳೆಗಳನ್ನು ಕಾಪಲಿಕ್ ಸ್ಪಾಟ್ ಎನ್ನುತ್ತೇವೆ. ಕಾಪಲಿಕ್ ಸ್ಪಾಟ್ ಮೀಸಲ್ಸ್ ಕಾಯಿಲೆಯಲ್ಲಿ ಮಾತ್ರ ಕಾಣಿಸಿಕೊಳ್ಳುತ್ತದೆ.

ಅನಂತರ ಕೆಂಪನೆಯ ಅಥವಾ ನಸು ಗೆಂಪಿನಂತಹ ಅತಿ ಸಣ್ಣ ಮಚ್ಚೆಗಳು ಮತ್ತು ಗುಳ್ಳೆಗಳು (5 ಮಿ.ಮೀ – 15 ಮಿ. ಮೀ) ಮೊದಲಿಗೆ ಹಣೆಯಲ್ಲಿ, ನಂತರ ಮುಖ ಕ್ರಮೇಣ ಎದೆ ಮತ್ತು ಕೈ ಕಾಲುಗಳಿಗೆ ಆವರಿಸಿ ಕೊಳ್ಳುತ್ತದೆ. ಸುಮಾರು ಐದು ದಿನಗಳ ನಂತರ ಜ್ವರದ ಜೊತೆಗೆ ಚರ್ಮದ ಚಿಹ್ನೆಗಳು ಕಡಿಮೆಯಾಗುತ್ತವೆ.

ಆರೋಗ್ಯವಂತ ದೃಢ ಕಾಯರಲ್ಲಿ ಈ ಸೋಂಕು ತಗಲಿದ್ದರೆ ಬಹುಪಾಲು ಯಾವ ತೊಂದರೆಯೂ ಇಲ್ಲದಂತೆ ಮತ್ತು ಯಾವ ಔಷಧಿಯ ನೆರವಿಲ್ಲದೆ ತನ್ನಷ್ಟಟಕ್ಕೆ ತಾನೆ ಗುಣವಾಗುವ ಕಾಯಿಲೆ ಇದು. ತನ್ನಷ್ಟಕ್ಕೆ ತಾನೆ ಗುಣವಾಗುವವರೆಗೆ ಕೆಲವರಲ್ಲಿ ಕಾಯಿಲೆಯ ಚಿಹ್ನೆಗಳಾದ ಜ್ವರ, ನೋವು, ಕೆಮ್ಮು, ಕೆರೆತ ಮುಂತಾದ ಲಕ್ಷಣಗಳು ಅತಿಯಾಗಿದ್ದರೆ ಅಂತವರು ವೈದ್ಯರನ್ನು ಸಂದರ್ಶಿಸಿ ಶಮನಕಾರಿ ಚಿಕಿತ್ಸೆಯನ್ನು ತೆಗೆದುಕೊಳ್ಳುವುದು ಕ್ಷೇಮ.

ದೃಢಕಾಯಿಗಳಲ್ಲದ ಮತ್ತು ಅಹಾರದ ಕೊರತೆಯಿಂದ ಬಳಲುತ್ತಿರುವ ಮಕ್ಕಳಿಗೆ ಈ ಕಾಯಿಲೆ ತಗಲಿದರೆ ಮಾತ್ರ ಹೆಚ್ಚಾಗಿ ಕಿವಿ ಸೋರುವುದು, ನ್ಯುಮೋನಿಯಾ, ಮೆದುಳಿನ ಜ್ವರ, ಪರ್‌ಪ್ಯೂರಾ ಮುಂತಾದ ಅಪಾಯಗಳಿಂದ ಪ್ರಾಣಕ್ಕೆ ಭೀತಿ ಉಂಟಾಗುತ್ತದೆ. ಅಂತಹ ಸಮಯದಲ್ಲಿ ವೈದ್ಯರ ವಿಶಿಷ್ಟ ಚಿಕಿತ್ಸೆಗಳಿಂದ ಪ್ರಾಣಾಪಾಯಗಳನ್ನು ಕಡಿಮೆ ಮಾಡಿಕೊಳ್ಳಬಹುದು. ಈ ಸೋಂಕು ತಗಲಿದ ತಕ್ಷಣವೇ ವೈದ್ಯರನ್ನು ಸಂದರ್ಶಿಸಿ ಶಮನಕಾರಿ ಚಿಕಿತ್ಸೆಗಳಿಂದ ಮುಂದೆ ಒದಗುವ ಅಪಾಯಗಳು ಬರದಂತೆ ನೋಡಿಕೊಳ್ಳುವುದೇ ಬುದ್ಧಿವಂತರ ಲಕ್ಷಣ.

ಮೀಸಲ್ಸ್ ಬರದಿರದ ಒಂದು ವರ್ಷದ ಮೇಲ್ಪಟ್ಟಿನ ಮಕ್ಕಳಿಗೆ ಮೀಸಲ್ಸ್ ವ್ಯಾಕ್ಸೀನ್ ಹಾಕಿಸುವುದರಿಂದ ಕಾಯಿಲೆ ಬರುವುದನ್ನು ತಡೆಗಟ್ಟಬಹುದು.

ಜರ್ಮನ್ ಮೀಸಲ್ಸ್: ಈ ಸೋಂಕನ್ನು ರುಬೆಲ್ಲಾ ಎಂದು ಸಹ ಕರೆಯುತ್ತೇವೆ. ಪ್ರಾಯಕ್ಕೆ ಬಂದವರಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುವ ಈ ವೈರಸ್ ಕಾಯಿಲೆಯನ್ನು ಬಹಳಷ್ಟು ಜನರು ಮೀಸಲ್ಸ್ ಕಾಯಿಲೆ ಎಂದು ತಪ್ಪಾಗಿ ತಿಳಿದುಕೊಳ್ಳುತ್ತಾರೆ.

ಮೀಸಲ್ಸ್ ಕಾಯಿಲೆಯ ರೀತಿಯಂತೆ ಚರ್ಮದ ಲಕ್ಷಣಗಳಿರುತ್ತವೆ. ಆದರೆ ಕೆನ್ನೆಯ ಒಳಭಾಗದಲ್ಲಿ ಕಾಪಲಿಕ್ ಸ್ಪಾಟ್ ಇರುವುದಿಲ್ಲ. ಕುತ್ತಿಗೆಯ ಸುತ್ತ ಅದರಲ್ಲಿಯೂ ಕಿವಿಯ ಹಿಂಭಾಗದಲ್ಲಿ ಕೆಲವು ಲಿಂಫ್ ನೋಡ್ಸ್‌ಗಳು ಊತದಿಂದ ದಪ್ಪವಾಗಿ (ಬರಗಳ್ಳೆ) ನೋವಿನಿಂದ ಕೂಡಿರುವುದು ಈ ಕಾಯಿಲೆಯ ಪ್ರಮುಖ ಲಕ್ಷಣ.

ಗರ್ಭಿಣಿ ಸ್ತ್ರೀಯರಲ್ಲಿ ಮೊದಲ ಮೂರು ತಿಂಗಳಲ್ಲಿ ಈ ಕಾಯಿಲೆ ಕಾಣಿಸಿಕೊಂಡರೆ ಹುಟ್ಟುವ ಮಗುವಿಗೆ ಹೃದಯದ ತೊಂದರೆ, ಅಂಗವಿಕಲತೆ, ಕಣ್ಣಿನ ಪೊರೆ, ಬುದ್ಧಿ ಮಾಂದ್ಯತೆ ಉಂಟಾಗುವುದು ಇತರ ಮಕ್ಕಳಿಗಿಂತ ಹೆಚ್ಚು.

ಒಮ್ಮೆ ಈ ಕಾಯಿಲೆ ತಗಲಿ ಸೋಂಕಿನಿಂದ ಸಂಪೂರ್ಣ ಗುಣವಾದ ನಂತರ ಕಾಯಿಲೆಯ ವೈರಸ್ ರೋಗಾಣುಗಳ ವಿರುದ್ಧ ಆ ರೋಗಿಗಳು ರೋಗ ನಿರೋಧಕ ಶಕ್ತಿಯನ್ನು ಗಳಿಸಿಕೊಳ್ಳುವುದರಿಂದ ಭವಿಷ್ಯದಲ್ಲಿ ಈ ಕಾಯಿಲೆ ಪುನಃ ಬರುವುದಿಲ್ಲ. ಆದುದರಿಂದ ಮದುವೆಗೆ ಮುಂಚೆ ಹೆಣ್ಣು ಮಕ್ಕಳಿಗೆ ಈ ಕಾಯಿಲೆ ಬಂದಿದ್ದರೆ ಮುಂದೆ ಗರ್ಭಿಣಿಯಾದಾಗ ಈ ಸೋಂಕಿನ ಭಯವಿಲ್ಲದಿರುವುದರಿಂದ ಹುಟ್ಟುವ ಮಗುವಿಗೂ ತೊಂದರೆಇಲ್ಲ.

ಹಿಂದೆ ಈ ಕಾಯಿಲೆ ತಗಲದಿದ್ದ ಪ್ರಾಯಾವಸ್ಥೆಯೊಳಗಿನ ಹೆಣ್ಣು ಮಕ್ಕಳಿಗೆ ಮದುವೆಗೆ ಮುಂಚೆ ಭವಿಷ್ಯದಲ್ಲಿ ಕಾಯಿಲೆ ಬರದಂತೆ ನೋಡಿಕೊಳ್ಳಲು ಜರ್ಮನ ಮಿಾಸಲ್ಸ್ ವ್ಯಾಕ್ಸಿನೇಶನ್ ಹಾಕಿಸುವುದು ಹುಟ್ಟುವ ಮಗುವಿನ ಆರೋಗ್ಯದ ದೃಷ್ಟಿಯಿಂದ ಕ್ಷೇಮಕರ ಅಥವ ಹನ್ನೆರಡರಿಂದ ಹದಿನಾಲ್ಕು ತಿಂಗಳ ಎಲ್ಲಾ ಮಕ್ಕಳಿಗೆ ಎಂ. ಎಂ. ಆರ್ ವ್ಯಾಕ್ಸಿನೇಶನ್ ಹಾಕಿಸುವುದರಿಂದ ಮೂರು ರೋಗಗಳಾದ ಮಿಾಸಲ್ಸ್, ಮಂಪ್ಸ್ (ಗದ್ದಕಟ್ಟು) ಮತ್ತು ರುಬೆಲ್ಲಾ ಕಾಯಿಲೆಗಳನ್ನು ಬರದಂತೆ ತಡೆಗಟ್ಟಬಹುದು.

* * * * *

12. ಬಿಳಿ ಮಚ್ಚೆಗಳು

ಬಿಳಿಮಚ್ಚೆ ಉಲ್ಬಣಾವಸ್ಥೆ ತಲುಪಿದ ಅನಂತರ ಚರ್ಮದ ವೈದ್ಯರ ಹತ್ತಿರ ಬರುವ ಬಹಳಷ್ಟು ರೋಗಿಗಳು ಮತ್ತು ಅವರ ಸಂಬಂಧಿಕರನ್ನು ವೈದ್ಯರು, "ಏಕೆ ನಿರ್ಲಕ್ಷ್ಯ ಮಾಡಿದರಿ? ಎಂದು ಪ್ರಶ್ನಿಸುವುದು ಸಾಮಾನ್ಯ. ಸ್ವಾಮಿ ನಾವು ಬಳ್ಚಿಪ್ಪು ಎಂದು ಸುಮ್ಮನಿದ್ವಿ ಎಂದು ರೋಗಿ ಉತ್ತರಿಸುವುದೂ ಸರ್ವೆ ಸಾಮಾನ್ಯ. ಮುಖ, ಕುತ್ತಿಗೆ ಮತ್ತು ಎದೆಯ ಸುತ್ತ ಮುತ್ತ ಎಲ್ಲಿ ಬೇಕಾದರೂ ಕಲೆಗಳು ಅರ್ಥಾತ್ ಮಚ್ಚೆಗಳು ಅನೇಕ ಕಾಯಿಲೆಗಳಲ್ಲಿ ಕಾಣಿಸಿಕೊಳ್ಳುತ್ತವೆ. ಸೂಜಿ ಗುಂಡಿನ ಗಾತ್ರದಿಂದ ಕೆಲವಾರು ಸೆಂಟಿ ಮೀಟರ್ ವಿಸ್ತೀರ್ಣದ ಒಂದರಿಂದ ಕೆಲವಾರು ಮಚ್ಚೆಗಳು ಕಾಣಿಸಿಕೊಳ್ಳಬಹುದು. ಮಚ್ಚೆಗಳ ಬಣ್ಣ ಆಯಾ ಕಾಯಿಲೆಗೆ ತಕ್ಕಂತೆ ಬದಲಾವಣೆಗೊಂಡಿರಬಹುದು. ಕೆಲವು ಕಾಯಿಲೆಗಳಲ್ಲಿ ಹುರುಪೆ ಅರ್ಥಾತ್ ಹೊಟ್ಟು, ಮಚ್ಚೆಗಳ ಮೇಲೆ ಕಾಣಿಸಿಕೊಂಡುಕಡಿತ ಉಂಟಾಗಬಹುದು.

ಬ್ಯಾಕ್ಟೀರಿಯಾಗಳಿಂದ ಬರುವಂತಹ ಕುಷ್ಠ ಮತ್ತು ಟಿ ಬಿ ಕಾಯಿಲೆಗಳಲ್ಲಿ ಈ ಮಚ್ಚೆಗಳು ಕಾಣಿಸಿಕೊಂಡರೆ, ಫಂಗಸ್‌ನಿಂದ ಬರುವ ಹುಳುಕಡ್ಡಿ ಮತ್ತುಲೈಂಗಿಕ ಕಾಯಿಲೆಯಾದ ಸಿಫಿಲಿಸ್‌ನಲ್ಲಿಯೂ ಮಚ್ಚೆಗಳು ಕಾಣಿಸಿಕೊಳ್ಳುತ್ತವೆ. ಮಚ್ಚೆಗಳನ್ನು ನಿರ್ಲಕ್ಷಿಸದೆ, ಜಿಗುರಿನಲ್ಲೆಯೇ ಪತ್ತೆ ಹಚ್ಚಿ ಚಿಕಿತ್ಸೆ ತೆಗೆದುಕೊಂಡರೆ ಮೇಲಿನ ಅಂಟು ಕಾಯಿಲೆಗಳಿಂದ ಪೂರ್ಣ ಮುಕ್ತರಾಗಿ ಇತರರಿಗೆ ಹರಡದಂತೆ ನೋಡಿ ಕೊಳ್ಳಬಹುದು.

ಅಲರ್ಜಿ, ಉರಿ ಬಿಸಿಲು, ಪೌಷ್ಠಿಕಾಂಶದ ಕೊರತೆ ಮತ್ತು ಔಷಧಿಗಳಿಂದಲೂ ಅನೇಕ ಸಲ ವಿವಿಧ ರೀತಿಯ ವಿಶಿಷ್ಟವಾದ ಮಚ್ಚೆಗಳು ಕಾಣಿಸಿಕೊಳ್ಳಬಹುದು. ವಿಟಿಲಿಗೊ ಅಥವ ತೊನ್ನಿನ ಆರಭದ ಲಕ್ಷಣಗಳೂ ಈ ತರಹದ ಮಚ್ಚೆಗಳನ್ನು ಹೋಲಬಹುದು. ಮೇಲೆ ತಿಳಿಸಿದ ಎಲ್ಲಾ ಸಂದರ್ಭಗಳಲ್ಲಿಯೂ ಮಜ್ಜೆಗಳು ಬರಬಹುದಾದ್ದರಿಂದ ಪ್ರತಿಯೊಂದನ್ನು ಬಳ್ಚಿಪ್ಪು ಎಂದು ಸುಮ್ಮನಿದ್ದು ಮಚ್ಚೆಯನ್ನು ಬಲಿಯಲು ಬಿಡುವುದು ಅಪಾಯಕಾರಿ.

ಬಳ್ಚಿಪ್ಪು

ಬಳ್ಚಿಪ್ಪು, ಬಿಳಿ ಚಿಪ್ಪು, ಚಿಬ್ಬು, ಮತ್ತು ಸಿಬ್ಬು ಮುಂತಾದ ಹೆಸರಿನಿಂದ ಕರೆಯುವ ಈ ಮಚ್ಚೆಗಳ ಇಂಗ್ಲಿಷ್ ರೂಪಾಂತರವೇ ಪಿಟ್ರಿಯಾಸಿಸ್ ಆಲ್ಬ ಮಕ್ಕಳು ಮತ್ತು ಪ್ರಾಯದ ಹಂತ ತಲುಪುತ್ತಿರುವ ವಯಸ್ಸಿನ ಬಹಳಷ್ಟು ಹೆಣ್ಣು ಮತ್ತು ಗಂಡುಗಳಲ್ಲಿ ಸಾಮಾನ್ಯವಾಗಿ ಕಾಣಿಸಿಕೊಳ್ಳುವ ಈ ಲಕ್ಷಣವನ್ನು

ಕಾಯಿಲೆ ಎಂದು ಕರೆಯುವುದು ಅಷ್ಟು ಸಮಂಜಸವಾಗಲಾರದು. ಆದರೂ ವೈದ್ಯ ಕೋಶದಲ್ಲಿ ಇದು ಒಂದು ಅಂಟದ ತನ್ನಷ್ಟಕ್ಕೆ ತಾನೆ ವಾಸಿಯಾಗುವ ಚರ್ಮದ ತೊಂದರೆ.

ಮೈಮೇಲೆನ ಚರ್ಮದ ಯಾವುದೇ ಭಾಗದಲ್ಲಿ ಕಾಣಿಸಿಕೊಳ್ಳಬಹುದಾದರೂ ಮುಖ ತೋಳು ಕುತ್ತಿಗೆ ಮತ್ತು ಕುಂಡಿಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ಮಕ್ಕಳು ಬೆಳೆಯುತ್ತಿದ್ದಂತೆ ಮುಖದಲ್ಲಿ ಮಾತ್ರ ಉಳಿದುಕೊಳ್ಳುತ್ತದೆ. ಒಂದರಿಂದ ಕೆಲವಾರು ಬಿಳಿಚಿಕೊಂಡ ಮಚ್ಚೆಗಳಿದ್ದು ಆರಂಭದಲ್ಲಿ ಮಚ್ಚೆಗಳ ಮೇಲ್ಮೈ ಸ್ವಲ್ಪ ಕೆಂಪಗಿದ್ದು ವೃತ್ತಾಕಾರ, ಅಂಡಾಕಾರ ಅಥವ ವಕ್ರವಾಗಿದ್ದು ಮಚ್ಚೆಗಳಲ್ಲಿ ಸ್ಪರ್ಶ ಜ್ಞಾನ ಚೆನ್ನಾಗಿರುತ್ತವೆ. ಯಾವ ಕಾರಣದಿಂದ ಬರುತ್ತದೆ ಎಂದು ಖಚಿತವಾಗಿ ಗೊತ್ತಿಲ್ಲದ ಈ ಬೇನೆ ಸೂಕ್ಷ್ಮ ಚರ್ಮದವರಲ್ಲಿ ಹೆಚ್ಚಾಗಿ ಕಾಣಸಿಕೊಳ್ಳುತ್ತದೆ.

ಕಡಿತ ಮತ್ತು ಉರಿ ಮುಂತಾದ ಯಾವೊಂದು ಲಕ್ಷಣಗಳಿಲ್ಲದೆ ಇದಕ್ಕಿದ್ದ ಹಾಗೆಯೇ ಕಡಿಮೆ ಯಾಗಿ ಮತ್ತೆ ಮತ್ತೆ ಮರುಕಳಿಸುತ್ತಿರುತ್ತದೆ. ಮಕ್ಕಳು ಬೆಳೆಯುತ್ತಿದ್ದಂತೆ ಕಡಿಮೆಯಾಗುತ್ತಾ ಕ್ರಮೇಣ ಪ್ರೌಢಾವಸ್ಥೆ ತಲುಪಿದ ಅನಂತರ ಈ ಬೇನೆಯಿಂದ ಸಂಪೂರ್ಣವಾಗಿ ಬಿಡುಗಡೆ ಹೊಂದುತ್ತಾರೆ. ಚಿಕ್ಕವರಲ್ಲಿ ಪಿಟ್ರಿಯಾಸಿಸ್ ಅಲ್ಬ ಜಾಸ್ತಿ ಕಾಣಿಸಿಕೊಂಡರೆ ಪ್ರೌಢರಲ್ಲಿ ಫಂಗಸ್‌ನಿಂದ ಬರುವಂತಹ ಟಿ.ವಿ ಅರ್ಥಾತ್ ಟೀನಿಯಾ ವರ್ಸಿಕ್ಯೂಲಾರ್ ಅಂಟು ರೋಗ ಸಾಮಾನ್ಯವಾಗಿ ಕಾಣಿಸಿಕೊಳ್ಳುತ್ತದೆ. ಇದನ್ನೂ ಸಹ ಕೆಲವರು ಚಿಬ್ಬು ಎನ್ನುತ್ತಾರೆ. ಮುಖಕ್ಕಿಂತ ಕುತ್ತಿಗೆ, ಭುಜ, ಕಂಕಳು ಮತ್ತು ಎದೆಯ ಸುತ್ತ ಮುತ್ತ ಆರಂಭದಲ್ಲಿ ಒಂದೆರಡು ಮಚ್ಚೆಗಳು ಕಾಣಿಸಿಕೊಂಡು ಚಿಕಿತ್ಸೆ ತೆಗೆದುಕೊಳ್ಳದಿದ್ರೆ ಭೂಪಟದಂತೆ ಶರೀರದ ಮೇಲಿನ ಅರ್ಧ ಭಾಗದಲ್ಲೆಲ್ಲಾ ಹರಡಿಕೊಳ್ಳುತ್ತದೆ.

ಪರಿಣಾಮ

ಬೆಳ್ಳಗೆ ಇರುವವರ ಚರ್ಮದಲ್ಲಿ ಕಂದು ಅಥವ ಹಳದಿ ಬಣ್ಣದಲ್ಲಿ ಮತ್ತು ಕಪ್ಪಗೆ ಇರುವವರಲ್ಲಿ ಚರ್ಮದ ಬಣ್ಣಕ್ಕಿಂತ ಬಿಳಿಚಿಕೊಂಡಂತೆ ಅಥವ ಗೋಧಿ ಬಣ್ಣದ ಮಚ್ಚೆಗಳಿದ್ದು ಮೇಲ್ಮೈ ತವಡಿನಂತಹ ಉರುಪೆ ಅರ್ಥಾತ್ ಹೊಟ್ಟಿನಿಂದ ಕೂಡಿರಬಹುದು. ಕೆಲವರಲ್ಲಿ ಕಡಿತ ಕಾಣಿಸಿಕೊಂಡು ಉಗುರಿನಿಂದ ಕರೆದಾಗ ಹೊಟ್ಟು ಏಳಬಹುದು. ಚಿಕಿತ್ಸೆ ತೆಗೆದುಕೊಳ್ಳದಿದ್ದರೆ ಮನ ಮಂದಿಗೆಲ್ಲಾ ಹರಡಿಕೊಳ್ಳುತ್ತದೆ. ಸೂಕ್ತ ಬೂಸ್ಟು ನಾಶಕಗಳಿಂದ ಕಾಯಿಲೆಗಳನ್ನು ಗುಣಪಡಿಸಬಹುದು.

ಪ್ರತಿಯೊಬ್ಬರೂ ಬೇರೆ ಬೇರೆಯಾಗಿ ಅವರದೇ ಆದ ಸಾಬೂನು,

ಬಾಚಣಿಗೆ, ಶೃಂಗಾರ ಸಾಧನಗಳು ಮತ್ತು ಟವಲ್ ಮುಂತಾದವುಗಳನ್ನು ಉಪಯೋಗಿಸುವುದರಿಂದ ಟಿ ವಿ ಮುಂತಾದ ಅಂಟು ಕಾಯಿಲೆಗಳು ಬರದಂತೆ ನೋಡಿಕೊಳ್ಳಬಹುದು.

ಅದೃಷ್ಟಕ್ಕೋ, ದುರದೃಷ್ಟಕ್ಕೋ ಬಂದಿದೆ ಎಂಬ ಮೂಢ ನಂಬಿಕೆಯನ್ನು ಮನಸ್ಸಿನಿಂದ ತೊಲಗಿಸಿ, ನುರಿತ ವೈದ್ಯರಿಂದ ತಪಾಸಣೆ ಮಾಡಿಸಿಕೊಂಡು ಮಚ್ಚೆ ಅರ್ಥಾತ್ ಕಲೆಗಳ ಇತಿಹಾಸವನ್ನ ತಿಳಿದು ಚಿಕಿತ್ಸೆಯ ಅವಶ್ಯಕತೆ ಇದ್ದರೆ ವೈದ್ಯರ ಸಲಹೆ ಅನುಸರಿಸುವುದು ಆರೋಗ್ಯದ ದೃಷ್ಟಿಯಿಂದ ಅತ್ಯಗತ್ಯ.

* * * * *

13. ಲ್ಯೂಕೋಡರ್ಮ ಮತ್ತು ವಿಟಿಲಿಗೋ (ತೊನ್ನು)



ಯಾವುದೇ ಕಾರಣದಿಂದ ಚರ್ಮ ಬಿಳಿಯಾಗಲಿ ಎಲ್ಲವನ್ನೂ 'ತೊನ್ನು' ಎಂದು ಮುದ್ರೆ ಒತ್ತಿ ಬಹಳ ಕೆಟ್ಟ ಕಾಯಿಲೆ ಎಂದು ಅಪಾದನೆ ಹೊರಿಸುವ ಪದ್ಧತಿ ನಮ್ಮಲ್ಲಿದೆ. ತಲತಲಾಂತರದಿಂದ ಬಂದ ಈ ತಪ್ಪು ತಿಳುವಳಿಕೆಯಿಂದಾಗಿ ಬಿಳಿ ಚರ್ಮದ ವ್ಯಕ್ತಿಗಳು ಚಿಕಿತ್ಸೆಗಾಗಿ ನುರಿತ ವೈದ್ಯರು, ನಾಟಿ ವೈದ್ಯರು ಮತ್ತು ಖೋಟಾ ವೈದ್ಯರೆನ್ನೆಲ್ಲಾ ಸುತ್ತಿ ಸಾಕಾಗಿ ನಂತರ ಗುಡಿ, ಮಸೀದಿ ಮತ್ತು ಚರ್ಚುಗಳನ್ನು ಸಹ ಬಳಸಿ ಬೆಂಡಾಗಿ ಪರಿಹಾರ ಕಾಣದೆ ಕೊನೆಯಲ್ಲಿ ಮನಸಿಕವಾಗಿ ಕ್ಷೋಭೆಗೊಂಡು ಜೀವನದಲ್ಲಿ ಜಿಗುಪ್ಸೆಗೊಳ್ಳುವುದು ಒಂದು ದುರಂತ.

ಲ್ಯೂಕೋಡರ್ಮವನ್ನು ಕಾಯಿಲೆ ಎಂದು ಕರೆಯುವುದೇ ತಪ್ಪು. ಇದು ಯಾವೊಂದು ಸೋಂಕನ್ನಾಗಲಿ, ಕೆಡುಕನ್ನಾಗಲಿ ತರುವುದಿಲ್ಲ. ಮಾನವರ

ಚರ್ಮದಲ್ಲಿರುವ ಮೆಲನೋಸೈಟ್ ಜೀವ ಕಣಗಳಿಂದ ಉತ್ಪತ್ತಿಯಾಗುವ ಮೆಲ್ಯಾನಿನ್ ಎಂಬ ಕಪ್ಪು ಬಣ್ಣ, ಕೆರೋಟಿನ್ ಎಂಬ ಹಳದಿ ಬಣ್ಣ ಮತ್ತು ಚರ್ಮದ ರಕ್ತದಲ್ಲಿರುವ ಹೀಮೋಗ್ಲೋಬಿನ್ ಎಂಬ ಕೆಂಪು ಬಣ್ಣಗಳ ಮಿಶ್ರಣವೇ ನಮ್ಮ ಚರ್ಮದ ಬಣ್ಣ. ನೀಗ್ರೋಗಳಲ್ಲಿ ಕಪ್ಪುಬಣ್ಣ ಜಾಸ್ತಿಯಾಗಿಯೂ ಮತ್ತು ಪಾಶ್ಚಿಮಾತ್ಯರಲ್ಲಿ ಕಪ್ಪು ಬಣ್ಣ ಸ್ವಲ್ಪ ಕಡಮೆ ಪ್ರಮಾಣದಲ್ಲಿಯೂ ಇರುತ್ತದೆ. ಭಾರತೀಯರ ಗೋಧಿ ಬಣ್ಣದ ಚರ್ಮದಲ್ಲಿ ಈ ಮೂರು ಬಣ್ಣಗಳು ಹೆಚ್ಚು ಕಡಿಮೆ ಸಮ ಪ್ರಮಾಣದಲ್ಲಿ ಇರುತ್ತದೆ.

ರಾಸಾಯನಿಕ ವಸ್ತುಗಳು ನಿರಂತರ ಚರ್ಮಕ್ಕೆ ತಾಗುತ್ತಿದ್ದರೆ ಆ ಜಾಗ ಬಿಳಿ ಬಣ್ಣಕ್ಕೆ ತಿರುಗ ಬಹುದು. ಔಷಧಿಗಳಾದ ಸ್ಟೀರ್ಯಾಡ್ ಮತ್ತು ಫ್ಲೂರೋಜೋನ್ ಮುಂತಾದ ಮುಲಾಮುಗಳನ್ನು ಅತಿಯಾಗಿ ಉಪಯೋಗಿಸಿದರೆ ಬಿಳಿ ಮಚ್ಚೆಗಳಿಗೆ ಕಾರಣವಾಗಬಹುದು. ಸಿಫಿಲಿಸ್, ಕುಷ್ಠ, ಎಕ್‌ಜಿಮ ಲ್ಯೂಪಸ್ ಮುಂತಾದ ಅಂಟು ಕಾಯಿಲೆಗಳಲ್ಲಿಯೂ ಚರ್ಮ ಬಿಳಿ ಬಣ್ಣಕ್ಕೆ ತಿರುಗಬಹುದು. ಕೆಲವು ನಿರ್ನಾಳ (ಎಂಡೋಕ್ರೈನ್) ಗ್ರಂಥಿಗಳ ನ್ಯೂನತೆಯಿಂದಲೂ ಚರ್ಮ ಬಿಳಿ ಬಣ್ಣಕ್ಕೆ ತಿರುಗ ಬಹದು. ಅಥವ ಅದು ಅನುವಂಶಿಕವಾಗಿಯೂ ಬರಬಹದು.

ಹುಟ್ಟಿನಿಂದಲೇ ಚರ್ಮ ಬಳಿಯಾಗಿದ್ದರೆ ಅಥವ ಹುಟ್ಟಿದ ಕೆಲವು ದಿನಗಳಲ್ಲಿ ಚರ್ಮ ಬಿಳಿ ಬಣ್ಣಕ್ಕೆ ತಿರುಗಿದರೆ ಅಂತಹ ಅನುವಂಶಿಕ ಚಿಹ್ನೆಗಳನ್ನು ಆಲ್ಬೆನಿಸಮ್ ಮತ್ತು ಪಿಬಾಲ್ಡಿಸಮ್ ಎಂದು ಎರಡು ಲಕ್ಷಣವಾಗಿ ವಿಂಗಡಿಸಿದ್ದಾರೆ. ಆಲ್ಬೆನಿಸಮ್‌ನಲ್ಲಿ ಇಡೀ ಶರೀರದ ಚರ್ಮ ಕೆಂಪು ಮಿಶ್ರಿತ ಬಿಳಿ ಅಥವ ಹಾಲಿನ ಬಿಳಿಯಂತಹ ಚರ್ಮದ ಜೊತೆಗೆ ಕೂದಲು ಮತ್ತು ಕಣ್ಣು ಸಹ ಬಿಳಿಯಾಗಿರುತ್ತದೆ. ಪಿಬಾಲ್ಡಿಸಮ್‌ನಲ್ಲಿ ಹಣಿಯ ಮಧ್ಯ ಭಾಗದ ಮೇಲಿನ ಕೂದಲು ಬಿಳಿಯಾಗಿದ್ದು ಚರ್ಮದಲ್ಲಿ, ಬಿಳಿಯಾಗಿರುವ ಭಾಗದಲ್ಲಿ ಅಲ್ಲಲ್ಲೆ ಚುಕ್ಕಿಯಂತಹ ಕಲೆಗಳುಕಾಣಿಸಿಕೊಳ್ಳುತ್ತವೆ.

ವಿಟಲಿಗೊ

ವಿಶ್ವದ ಜನ ಸಂಖ್ಯೆಯ ಶೇ. 1 ರಷ್ಟು ಜನರಲ್ಲಿ ಕಾಣಿಸಿಕೊಳ್ಳುವ ಈ 'ವಿಟಲಿಗೊ' ಲಕ್ಷಣಕ್ಕೆ ಅನುವಂಶಿಕ ಹಿನ್ನೆಲೆಯೆ ಪ್ರಮುಖ ಕಾರಣ. ಬಹುಪಾಲು ಜನರಲ್ಲಿ ಚಿಕ್ಕಂದಿನಲ್ಲಿ ಮತ್ತು ಕೆಲವರಲ್ಲಿ 40 ವರ್ಷಗಳ ನಂತರ ಕಾಣಿಸಿಕೊಳ್ಳುವ ಈ ವಿಟಲಿಗೊ ಲಕ್ಷಣ ಶುರುವಿನಲ್ಲಿ ಸಣ್ಣನೆಯ ಒಂದೆರಡು ಬಿಳಿ ಕಲೆಗಳು ಕಾಣಿಸಿಕೊಂಡು ನಿಧಾನವಾಗಿ ಅಗಲವಾಗುತ್ತಿದ್ದಂತೆ ಹೊಸ ಹೊಸ ಬಿಳಿ ಕಲೆಗಳು ಹುಟ್ಟಿಕೊಂಡು ಇನ್ನೂ ಅಗಲವಾಗಿ ಹರಡುತ್ತಾ ಕೊನೆಗೆ

ಮೈಯಲ್ಲೆಲಾ ತುಂಬಿಕೊಳ್ಳುತ್ತವೆ. ಒಮ್ಮೆ ಬಿಳಿ ಮಚ್ಚೆಗಳು ಪ್ರಾರಂಭವಾದ ಮೇಲೆ ಮೈಯಲ್ಲಾ ಬಿಳಿಯಾಗಲು ವರ್ಷಾನುಗಟ್ಟಲೆ ಹಿಡಿಯ ಬಹುದು. ಚರ್ಮ ಬಿಳಿ ಬಣ್ಣಕ್ಕೆ ತಿರುಗುವಿಕೆ ಆ ವ್ಯಕ್ತಿಯ ಚರ್ಮದಲ್ಲಿರುವ ಮೆಲನೋಸೈಟ್ ಜೀವ ಕಣಗಳ ನೈಜ ಸಾಮರ್ಥ್ಯವನ್ನು ಅವಲಂಬಿಸಿದೆ. ಆ ಜೀವ ಕಣಗಳು, ಭಾಗಶಹ ನಿಷ್ಕ್ರಿಯ ಗೊಂಡಿದ್ದರೆ ಅಂತಹ ಜನರಲ್ಲಿ ಅಲ್ಪ ಪ್ರಮಾಣದಲ್ಲಿ ಚರ್ಮ ಬಿಳಿಯಾಗಿರಬಹುದು. ಕೆಲವರಲ್ಲಿ ಹರಡದೆ ಬಿಳಿ ಮಚ್ಚೆಗಳು ಜೀವನ ಪರ್ಯಂತ ಉಳಿದುಕೊಳ್ಳಬಹುದು.

ಒಂದೆರಡು ಬಿಳಿ ಮಚ್ಚೆಗಳಿರುವ ಶೇ. 20 ರಿಂದ 25 ರಷ್ಟು ವಿಟಿಲಿಗೊ ವ್ಯಕ್ತಿಗಳಲ್ಲಿ ದಿನ ಕಳೆಯುತ್ತಿದ್ದಂತೆ ಯಾವ ಔಷಧಿಯ ನೆರವಿಲ್ಲದೆ ತನ್ನಷ್ಟಕ್ಕೆ ತಾನೆ ಬಿಳಿ ಮಚ್ಚೆಗಳು ಹೊರಟು ಹೋಗಬಹುದು. ಆದರೆ ಬಿಳಿ ಮಚ್ಚೆಗಳು ಚಿಕ್ಕಂದಿನಿಂದಲೂ ಬೆಳೆಯುತ್ತಿದ್ದರೆ ಮೈಮೇಲೆಲ್ಲಾ ಹರಡುತ್ತಾ ಹೋಗುವುದೇ ಹೆಚ್ಚು.

ಆಲ್ಬಿನೊ ಚರ್ಮದವರು ಬಿಸಿಲಿನ ತಾಪವನ್ನು ತಡೆಯಲಾರರು. ಇದೊಂದು ತೊಂದರೆಯನ್ನು ಬಿಟ್ಟರೆ ಇನ್ಯಾವ ಕೆಡುಕೂ ಇಲ್ಲ. ಇತರರ ಭಾವನೆಗಳಿಂದ ಪ್ರತಿಕ್ರಿಯೆಗಳಿಂದ ಬಿಳಿ ಚರ್ಮದ ವ್ಯಕ್ತಿಗಳು ಕೀಳರಿಮೆ ಬೆಳೆಸಿಕೊಳ್ಳುವುದು ಸಹಜ.

ಹಿಂದಿನಿಂದಲೂ ಅನೇಕ ಹಳ್ಳಿ ಮತ್ತು ಪಟ್ಟಣಗಳಲ್ಲಿ ವಿವಿಧ ಪದ್ಧತಿಯ ವೈದ್ಯರುಗಳಲ್ಲಿ ಕೆಲವರು (ಬಹಳಷ್ಟು ಖೋಟಾ ವೈದ್ಯರು) ಬಿಳಿ ಮಚ್ಚೆಗಳಿಗೆ ಔಷಧವನ್ನು ನೀಡಿ ಸಂಪೂರ್ಣವಾಗಿ ಗುಣಪಡಿಸುತ್ತೇವೆಂದು ಸೋಗು ಹಾಕಿ ಹಣ ಸುಲಿಯುತ್ತಿದ್ದರೂ ಈವರೆಗೆ ಅವರ ಯಾವ ಔಷಧವೂ ಫಲಕಾರಿಯಾದ ದಾಖಲೆಗಳಿಲ್ಲ.

ಬಿಳಿ ಮಚ್ಚೆಗಳನ್ನು ಶಾಶ್ವತವಾಗಿ ಮತ್ತು ಸಂಪೂರ್ಣವಾಗಿ ವಾಸಿ ಮಾಡುವಂತಹ ಔಷಧಿಗಳು ವಿಶ್ವದಲ್ಲಿ ಇನ್ನೂ ಲಭ್ಯವಿಲ್ಲ. ಆದರೂ ಗಿಡಮೂಲಿಕೆಗಳಿಂದ ದೊರೆಯುವ ಶುದ್ಧಿಕರಿಸಿದ ಸೊರಾಲೆನ್ ಗುಂಪಿನ ಔಷಧಗಳನ್ನು ಮಾತ್ರೆ ಮತ್ತು ಮುಲಾಮುಗಳ ರೂಪದಲ್ಲಿ ಉಪಯೋಗಿಸಿ ವೈದ್ಯರ ಸಲಹೆಯಂತೆ ನಿರ್ದಿಷ್ಟ ಅವಧಿಯವರೆಗೆ ಬಳಸುತ್ತಾ ಬಿಳಿ ಮಚ್ಚೆಗಳ ಮೇಲೆ ಸೂರ್ಯನ ಕಿರಣ ಬೀಳುವಂತೆ ನೋಡಿಕೊಂಡರೆ ಚರ್ಮದ ಬಣ್ಣಕ್ಕೆ ತಿರುಗುತ್ತವೆ. ಶಿಶುವಿನ ಜನನದ ಜತೆಗೆ ಹೊರಬರುವ ಮೆತ್ತೆಯ (ಪ್ಲೆಸೆಂಟಾ) ಶುದ್ಧಿಕರಿಸಿದ ರಸವನ್ನು ಚರ್ಮದ ಲೋಶನ್ ರೂಪದಲ್ಲಿ ಉಪಯೋಗಿಸಿದಾಗಲೂ ಕೂಡ ಬಿಳಿ ಮಚ್ಚೆಗಳು ಕೆಲವರಲ್ಲಿ ಕಡಿಮೆಯಾಗುತ್ತವೆ.

ಒಂದೆರಡು ಬಿಳಿ ಮಚ್ಚೆಗಳು ಬಹಳಷ್ಟು ವರ್ಷಗಳಾದರೂ ಅಗಲವಾಗದೆ ಅಥವ ಹರಡದೆ ಹಾಗೆ ಉಳಿದುಕೊಂಡಿದ್ದರೆ ಅಂತಹ ಮಚ್ಚೆಗಳಿಗೆ ಆ ವ್ಯಕ್ತಿಯ ದೇಹದ ಬೇರೆ ಜಾಗದಿಂದ ಚರ್ಮವನ್ನು ತೆಗೆದು ಪಂಚ್ ಬಯಾಪ್ಸಿ ಗ್ರಾಫ್ಟಿಂಗ್ ಮಾಡಿ ಬಿಳಿ ನಿವಾರಿಸಬಹುದು. ನೈಸರ್ಗಿಕ ಚರ್ಮದ ಬಣ್ಣವನ್ನು ಹೋಲುವ ಕೃತಕ ಬಣ್ಣಗಳಿಂದ ಹಚ್ಚೆ ಹಾಕಿಸುವ ಪದ್ಧತಿಯೂ ಇತ್ತೀಚಿಗೆ ರೂಢಿಯಲ್ಲಿ ಬರುತ್ತಿದೆ.

* * * * *

14. ಕಡಿತ (ತುರಿಕೆ)

"ನನಗೆ ಈ ಕಡಿತ ನಿಲ್ಸ್‌ಕೊಟ್‌ಬಿಡಿ ಡಾಕ್ಟ್ರೇ ಇಡೀ ಹಗಲು ರಾತ್ರಿ ಕೆರೆದು ಕೆರೆದು ಬೇಸತ್ತಿದ್ದೇನೆ ನನಗೆ ಕಾಯಿಲೆ ವಾಸಿ ಆಗ್ದೇ ಇದ್ರೂ ಪರವಾಗಿಲ್ಲ, ಈ ಕಡಿತ ಬೇಡ" ಎಂದು ಚರ್ಮ ರೋಗ ತಜ್ಞರ ಮುಂದೆ ಅಂಗಲಾಚುವ ವ್ಯಕ್ತಿಗಳು ಬಹಳಷ್ಟು ಮಂದಿ.

80 ವರ್ಷದ ರಾಮಯ್ಯ ಸುಮಾರು 20 ವರ್ಷಗಳಿಂದಲೂ ಕಡಿತದಿಂದ ಮೈ ಪೂರ್ತಿ ಕೆರೆದುಕೊಳ್ಳುತ್ತಾ ಜೀವನವನ್ನು ಸವೆಸುತ್ತಿರುವುದಕ್ಕೆ ಅವನ ಇಳಿ ವಯಸ್ಸೇ ಕಾರಣವಾದರೆ ಶಾಮಣ್ಣನಿಗೆ ಮೈ ಕಡಿತ ಶುರುವಾಗಿ ವೈದ್ಯರನ್ನು ಭೇಟಿಯಾದಾಗಲೆ ಸಕ್ಕರೆ ಕಾಯಿಲೆ ಹೊಸದಾಗಿ ಕಾಣಿಸಿಕೊಂಡ ವಿಷಯ ಬೆಳಕಿಗೆ ಬಂದು ಚಿಕಿತ್ಸೆ ತೆಗೆದುಕೊಂಡು ಸಕ್ಕರೆ ಕಾಯಿಲೆಯನ್ನು ತಹಬಂದಿಗೆ ತಂದಾಗಲೆ ಕಡಿತ ಶಮನಗೊಂಡಿದ್ದು. ರಾಮು ಸುಮಾರು ವರ್ಷಗಳಿಂದ ವರ್ಷದಲ್ಲಿ ಕೆಲವಾರು ವಾರಗಳು ಆಟೋಪಿಕ್ ಅಲರ್ಜಿ ನಿಮಿತ್ತ ಮೈ ಕಡಿತದಿಂದ ಬಳಲಲು ಬಾಹ್ಯ ಪ್ರಪಂಚದ ಹವಾಗುಣ ಮತ್ತು ಪರಿಸರ ಕಾರಣವಾಗಿದ್ದು, ಸಾವಿರಾರು ಜನರು ಅವನಂತೆ ಬಳಲುತ್ತಿರುವ ಅಂಶ ಮನಗಂಡು ಆಶ್ಚರ್ಯಚಕಿತನಾಗಿದ್ದಾನೆ. ಚೆಲುವಯ್ಯನ ಮನೆಯವರೆಲ್ಲರೂ ಮೈ ಕಡಿತಕ್ಕೆ ಗುರಿಯಾಗಲು ಸ್ಕೇಬೀಸ್ ಹುಳುಗಳು ಕಾರಣವಾಗಿ ತುರಿಕಜ್ಜಿಯಿಂದ ಎಲ್ಲರೂ ಬಳಲುತ್ತಿದ್ದಾರೆ. ಹನುಮನ ಮನೆಯವರೆಲ್ಲರ ಮೈ ಮತ್ತು ತಲೆಯಲ್ಲಿ ಹೇನುಗಳು ಸೇರಿಕೊಂಡಿರುವುದೇ ಕಡಿತಕ್ಕೆ ಕಾರಣವಾಗಿದೆ. ಹೇನು ಮತ್ತು ಸ್ಕೇಬೀಸ್ ಹುಳುಗಳು ಒಬ್ಬರಿಂದ ಇನ್ನೊಬ್ಬರಿಗೆ ಅಂಟಿ ಹರಡುವುದರಿಂದ ಅಂಟು ಕಾಯಿಲೆಗಳಲ್ಲಿ ಪ್ರಮುಖ ಸ್ಥಾನ ಪಡೆದಿವೆ. ಈ ಉದಾಹರಣೆಗಳು ಕಡಿತಕ್ಕೆ ಕಾರಣಗಳ ಕೆಲವು ಸ್ಯಾಂಪಲ್‌ಗಳು ಮಾತ್ರ.

ಚರ್ಮ ವೈದ್ಯರ ಬಳಿ ಬರುವ ವ್ಯಕ್ತಿಗಳಲ್ಲಿ 50 ಶೇ. ಭಾಗದಷ್ಟು ಜನರು ಒಂದಲ್ಲಾ ಒಂದು ಕಾರಣದಿಂದ ವಿವಿಧ ರೀತಿಯಾಗಿ ಕಡಿತದ ಲಕ್ಷಣಗಳಿಂದ ಬಳಲುತ್ತಿದ್ದು ಚಿಕಿತ್ಸೆ ತೆಗೆದುಕೊಳ್ಳುತ್ತಾರೆ. ಇಚ್ಚಿಂಗ್ ಅಥವ ಪ್ರುರೈಟಸ್ ಶಬ್ದಗಳು ಆಂಗ್ಲಭಾಷೆಯ ಮೂಲದಿಂದ ಬಂದ ಪದಗಳು. ಈ ಪದಗಳಿಗೆ ಕನ್ನಡ ನಾಡಿನ ವಿವಿಧ ಪ್ರದೇಶಗಳಲ್ಲಿ ವಿವಿಧ ರೀತಿಯ ಸಮಾನಾರ್ಥ ಪದಗಳಿವೆ. ಉದಾಹರಣೆಗೆ ಕಡಿತ, ಕೆರೆತ, ನವೆ, ತುರಿಕೆ, ತಿಮಿರ, ತಿಂಡಿ, ತೀಟೆ ಮತ್ತು ತೀನಿ ಮುಂತಾದುವು.

ಸಾಮಾನ್ಯವಾಗಿ ಮಾನವರ ಚರ್ಮ ಕನ್ನಡಿಯಂತಿದ್ದು ದೇಹದ ಒಳಗೆ ಅಥವ ಹೊರಗೆ ಆದ ಬದಲಾವಣೆಗಳನ್ನು ಪ್ರತಿಬಿಂಬಿಸುತ್ತವೆ. ಆರೋಗ್ಯವಂತರ ದೇಹದ ಒಳಗಿನಿಂದ ಅಥವ ಹೊರಗಿನಿಂದ ಮಾನಸಿಕ, ಭೌತಿಕ ಅಥವ ರಾಸಾಯನಿಕ ಪ್ರತಿಕ್ರಿಯೆಗಳಿಂದಾದ ಅಹಿತಕರ ಪ್ರಚೋದನೆಗಳಿಗೆ ಪ್ರತಿಯಾಗಿ ಕಡಿತದ ಸಂದೇಶಗಳು ಮಿದುಳಿನಿಂದ ಚರ್ಮಕ್ಕೆ ರವಾನೆಯಗುತ್ತವೆ. ಆಗ ಮನುಷ್ಯ ಬೆರಳಿನಿಂದ ಕೆರೆದು ಅಥವಾ ಉಜ್ಜದೆ ಸುಮ್ಮನಿರುವುದು ಬಹಳ ಕಷ್ಟ.

ಕಡಿತ – ಏನಿದು?

ತಜ್ಞರ ಪ್ರಕಾರ ಅಹಿತಕರ ಚರ್ಮದ ಸಂವೇದನೆ ಕೆರೆಯಲು ಪ್ರೇರಣೆಯನ್ನು ನೀಡುತ್ತದೆ. ಕಡಿತವು ಎಲ್ಲರಲ್ಲಿಯೂ ಒಂದೇ ರೀತಿಯಾಗಿರುವುದಿಲ್ಲ. ವ್ಯಕ್ತಿಯಿಂದ ವ್ಯಕ್ತಿಗೆ ಹವಾಗುಣಕ್ಕೆ ತಕ್ಕಂತೆ ಪರಿಸರದ ಮಲಿನತೆ ಮತ್ತು ವ್ಯಕ್ತಿಯ ಕಾಯಿಲೆಯನ್ನು ಆಧರಿಸಿ ಹೆಚ್ಚು ಕಡಿಮೆಯಾಗಿರುತ್ತದೆ. ಅತಿಯಾಗಿ, ಮಿತಿಯಾಗಿ, ನಿರಂತರ ಅಥವ ಬಿಟ್ಟು ಬಿಟ್ಟು ಕೆಲವಾರು ಗಂಟೆಗಳು, ದಿನಗಳು ಅಥವಾ ತಿಂಗಳುಗಳ ಮಟ್ಟಿಗೆ ಇಚ್ಚಿಂಗ್ ಮನುಷ್ಯರನ್ನು ಪೀಡಿಸುತ್ತದೆ.

ವಿಧಗಳೆಷ್ಟು?

ಹುಳು ಹರಿದಾಡಿದಂತೆ, ಜೋಮು ಹಿಡಿದಂತೆ, ಸೂಜಿಯಲ್ಲಿ ಚುಚ್ಚಿದಂತೆ, ಕೀಟ ಕಚ್ಚಿದಂತೆ ಕಡಿತ ಭಾಸವಾಗುತ್ತದೆ. ಕಣ್ಣಿನ ರೆಪ್ಪೆ, ಕಿವಿಯ ಒಳಭಾಗ, ಮೂಗಿನ ಹೊಳ್ಳೆ, ಮಲದ್ವಾರ, ಗುಪ್ತಾಂಗ ಮುಂತಾದ ಭಾಗಗಳ ಚರ್ಮವು ಸೂಕ್ಷ್ಮವಾಗಿದ್ದು ಕಡಿತದ ಸಂದೇಶಗಳು ಜಾಸ್ತಿ.

ಮಲದ್ವಾರದಲ್ಲಿನ ಕಡಿತವನ್ನು ಪ್ರುರೈಟಿಸ್ 'ಏನೈ', ಗುಪ್ತಾಂಗಗಳ ಕಡಿತವನ್ನು ಪ್ರುರೈಟಿಸ್ ವೂಲ್ವೆ ಮತ್ತು ಕುತ್ತಿಗೆ ಹಿಂಭಾಗದ ಕಡಿತವನ್ನು ಪ್ರುರೈಟಿಸ್ ನ್ಯೂಖೆ ಎಂದು ವಿಂಗಡಿಸಿದ್ದೇವೆ. ಪ್ರತಿಯೊಂದಕ್ಕೂ ಕಾರಣಗಳು ಹಲವಾರಿದ್ದು ಚಿಕಿತ್ಸೆಯು ವಿಶಿಷ್ಟವಾಗಿದೆ.

ವೃದ್ಧಾಪ್ಯ ಸಮೀಪಿಸುತ್ತಿದ್ದಂತೆ ಕೆಲವು ವ್ಯಕ್ತಿಗಳ ದೇಹದೊಳಗೆ ಕಡಿತವನ್ನುಂಟುಮಾಡುವ ನಂಜು ಉತ್ಪತ್ತಿಯಾಗುವುದರಿಂದ ದೇಹದ ಪ್ರತಿಯೊಂದು ಭಾಗವನ್ನೂ ಕೆರೆದುಕೊಳ್ಳುತ್ತಿರುತ್ತಾರೆ. ಈ ವಿಶಿಷ್ಟ ಬಗೆಯ ಕಾಯಿಲೆಯನ್ನು ಸೆನೈಲ್ ಪ್ರುರೈಟಿಸ್ ಎಂದು ಕರೆಯುತ್ತೇವೆ. ಬ್ಲಡ್ ಕ್ಯಾನ್ಸರ್ ಅರ್ಥಾತ್ ಲ್ಯುಕೀಮಿಯಾ, ಹಾಡ್‌ಕಿನ್ಸ್ ಲಿಂಪೋಮ ಮತ್ತು ಮೈಕೋಸಿಸ್

ಫಂಗ್ಯಾಯ್ಡ್ಸ್ ಮುಂತಾದ ಕ್ಯಾನ್ಸರ್ ಕಾಯಿಲೆಗಳಲ್ಲಿ ಕಡಿತವು ಸಾಮಾನ್ಯ ಲಕ್ಷಣಗಳಲ್ಲೊಂದು.

ಸಕ್ಕರೆ ಕಾಯಿಲೆ, ಜಾಂಡೀಸ್, ಯುರೀಮಿಯಾ, ಸಿರೋಸಿಸ್ ಮುಂತಾದ ಕಾಯಿಲೆಗಳು ಅತಿಯಾದಾಗ ಕಡಿತ ಕಾಣಿಸಿಕೊಳ್ಳುವುದು ಮಾಮೂಲು. ಕೆಲವು ಮಹಿಳೆಯರ ಹೊಟ್ಟೆಯ ಮೇಲೆ ಗರ್ಭಿಣಿಯರಾದಾಗ ವಿಶಿಷ್ಟವಾಗಿ ಕಾಣಿಸಿಕೊಳ್ಳುವ ಕಡಿತವನ್ನು ಪ್ರುರೈಟಿಸ್ ಗ್ರ್ಯಾವಿಡೇರ ಎಂದು ಕರೆಯುತ್ತೇವೆ. ಸೈಕೋಸಿಸ್, ನ್ಯೂರೋಸಿಸ್, ಆತಂಕ ಮತ್ತು ಭಯ ಮುಂತಾದ ಮಾನಸಿಕ ಒತ್ತಡದಿಂದ ಬಳಲುವ ಹಲವು ವ್ಯಕ್ತಿಗಳು ಶರೀರವಿಡೀ ಕೆರೆದುಕೊಳ್ಳುತ್ತಾ ವೈದ್ಯರನ್ನು ಕಾಣುವುದುಂಟು.

ಅಲರ್ಜಿಯಿಂದ :

ಬಾಹ್ಯ ಪ್ರಪಂಚದಲ್ಲಿರುವ ಕೆಲವು ಜೀವಿ ಮತ್ತು ನಿರ್ಜೀವ ವಸ್ತುಗಳು ಶರೀರದಲ್ಲಿನ ಜೀವ ಕಣಗಳ ಸಂಪರ್ಕ ಪಡೆದಾಗ ಆ ವಸ್ತುಗಳು ಜೀವ ಕಣಗಳಿಗೆ ಒಗ್ಗದೆ ಜೀವ ಕಣಗಳಲ್ಲಿ ನಡೆಯುವ ಅಹಿತಕರ ಕ್ರಿಯೆಗಳಿಂದ ಉತ್ಪತ್ತಿಯಾಗುವ ರಾಸಾಯನಿಕ ವಸ್ತುಗಳ ಉಪದ್ರವದಿಂದ ಉಂಟಾಗುವ ಲಕ್ಷಣಗಳನ್ನು ಅಲರ್ಜಿ ಎನ್ನುತ್ತೇವೆ. ವಿವಿಧ ರೀತಿಯ ಅಲರ್ಜಿಗಳು ಅನೇಕ ರೀತಿಯಲ್ಲಿ ದೇಹದ ವಿವಿಧ ಅಂಗಾಂಗಗಳಲ್ಲಿ ಕೆಡುಕನ್ನು ಕಾರಿ ಉಂಟಾಗುವ ಅಹಿತಕರ ಲಕ್ಷಣಗಳನ್ನು ನೂರಾರು ಕಾಯಿಲೆಗಳನ್ನಾಗಿ ವಿಂಗಡಿಸಿದ್ದಾರೆ. ಬಹುಪಾಲು ಎಲ್ಲಾ ಅಲರ್ಜಿ ಕಾಯಿಲೆಗಳಲ್ಲಿಯೂ ಕಡಿತ ಸಾಮಾನ್ಯ ಲಕ್ಷಣಗಳಲ್ಲೊಂದು.

ಎಲ್ಲಾ ತರದ ಇಸುಬು ಅರ್ಥಾತ್ ಎಗ್ಸೀಮಾ ಅಥವ ಡೆರ್ಮಟೈಟಿಸ್‌ಗಳು ಒಂದು ವಿಧವಾದ ಅಲರ್ಜಿ ಕಾಯಿಲೆಗಳೇ ಆದುದರಿಂದ ಕಡಿತ ಜಾಸ್ತಿ. ಕೆಲವು ಆಹಾರ ಪದಾರ್ಥಗಳು, ಕೆಲವು ಔಷಧಿಗಳು, ಸೂರ್ಯನ ಕಿರಣ, ಧೂಳು, ಪರಾಗ, ತಣ್ಣೀರು, ಕೆಲವು ಕ್ರಿಮಿಕೀಟಗಳು, ಅಣುಜೀವಿಗಳು, ರಾಸಾಯನಿಕಗಳು ಮುಂತಾದ ವಸ್ತುಗಳು ಕೆಲವರಲ್ಲಿ ಅಲರ್ಜಿಯನ್ನುಂಟು ಮಾಡುವುದರಿಂದ ಕಡಿತವು ಪ್ರಧಾನ ಲಕ್ಷಣಗಳಲ್ಲೊಂದು.

ಕಡಿತದ ಚಿಕಿತ್ಸೆ ಎಲ್ಲರೂ ತಿಳಿದುಕೊಂಡಿರುವಷ್ಟು ಸುಲಭವಲ್ಲ. ದೀರ್ಘ ಕಾಲದಿಂದ ಬಳಲುವ ವ್ಯಕ್ತಿಗಳ ಚಿಕಿತ್ಸೆ ಬಹು ಜಟಿಲ. ಕಾರಣಗಳು

ಸಂಕೀರ್ಣತೆಯಿಂದ ಕೂಡಿರುವುದರಿಂದ ಚಿಕಿತ್ಸೆ ಸಮಸ್ಯಾತ್ಮಕ. ಆದುದರಿಂದ ಕಡಿತವು ನೂರಾರು ಕಾಯಿಲೆಗಳಲ್ಲಿ ಮತ್ತು ಸಾವಿರಾರು ಸಂದರ್ಭಗಳಲ್ಲಿ ಪ್ರಧಾನ ಲಕ್ಷಣವಾಗಿ ಕಾಣಿಸಿಕೊಳ್ಳುವುದರಿಂದ ಪ್ರತಿಯೊಂದಕ್ಕೂ ಕಾರಣಗಳನ್ನು ಪತ್ತೆಹಚ್ಚಿ ನಿರ್ದಿಷ್ಟ ಕಾರಣಗಳನ್ನು ಹತ್ತಿಕ್ಕುವುದರಿಂದ ಇಚ್ಚಿಂಗ್ ಅರ್ಥಾತ್ ಕಡಿತವನ್ನು ಕೊನೆಗಾಣಿಸಬಹುದು ಅಥವ ಶಮನಗೊಳಿಸಬಹುದು. ಆಂಟಿಹಿಸ್ಟಮಿನ್ ಹಾಗೂ ಶಮನಕಾರಿ ಮಾತ್ರೆಗಳು ತತ್ಕಾಲದ ಶಮನವನ್ನು ನೀಡುತ್ತವೆ.

* * * * *

15. ಕಲ್ಲೊತ್ತು

ಕೈದಿಗಳು ಜೀವಾವಧಿ ಸಜ ಅನುಭವಿಸಿ 14 ವರ್ಷಗಳಲ್ಲಿ ಶಿಕ್ಷೆಯಿಂದ ಮುಕ್ತಿ ಪಡೆಯುತ್ತಾರೆ, ಆದರೆ ಒಮ್ಮೆ ಕಲ್ಲೊತ್ತು ಬೇನೆ ಶುರುವಾದರೆ ವ್ಯಕ್ತಿಯೊಬ್ಬ ಜೀವನ ಪರ್ಯಂತ ಈ ಬೇನೆಯ ಶಿಕ್ಷೆ ಅನುಭವಿಸಬೇಕಾಗುತ್ತದೆ. ಕಲ್ಲೊತ್ತಿನ ಬಗ್ಗೆ ಅರಿತು ಎಚ್ಚರಿಕೆ ವಹಿಸಿದರೆ ಬೇನೆ ಬರದಂತೆ ನೋಡಿಕೊಳ್ಳಬಹುದು. ಸಾವಿರಾರು ಜನರು ಅಂಗಾಲಿನ ಕಲ್ಲೊತ್ತುಗಳಿಂದ ಯಾವ ಕೆಲಸವನ್ನೂ ಮಾಡಲಾಗದ ಸ್ಥಿತಿ ತಲುಪುತ್ತಾರೆ. ಇದರಿಂದ ಕೆಲವು ವ್ಯಕ್ತಿಗಳು ನಡೆಯುವ ಧಾಟಿಯೇ ಬದಲಾಗಿ ಅಂಗವಿಕಲರಂತಾಗಿರುವುದನ್ನೂ ಕಾಣಬಹುದು. ಕಲ್ಲೊತ್ತುವಿಗೆ ಆಣಿ, ಐರು, ಕಾರ್ನ್ ಮುಂತಾದ ಹೆಸರುಗಳಿವೆ.

ಕಲ್ಲೊತ್ತುಗಳು ಬರಿ ಕಾಲಿನಲ್ಲಿ, ಓಡಾಡುವ, ಆಟವಾಡುವ ಮತ್ತು ಕೆಲಸ ಮಾಡುವವರಲ್ಲಿ ಮಾತ್ರ ಕಾಣಿಸಿಕೊಳ್ಳುತ್ತವೆ. ನಮ್ಮ ದೇಶದ ಬಡ ಜನರು, ಕೂಲಿಕಾರರು, ರೈತರು ಮತ್ತು ಬರಿ ಕಾಲಿನಲ್ಲಿ ಆಟವಾಡುವವರಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುವುದು. ಪಾಶ್ಚಿಮಾತ್ಯ ದೇಶಗಳಲ್ಲಿ ಪ್ರತಿಯೊಬ್ಬರೂ ಬೂಟ್ಸ್ ಅಥವಾ ಚಪ್ಪಲಿ ಧರಿಸಿ ಕೆಲಸ ಮಾಡುವುದರಿಂದ ಕಲ್ಲೊತ್ತುಗಳಿರುವ ಜನರು ಸಿಗುವುದೇ ಅಪರೂಪ.

ಹೆಸರೇ ಹೇಳುವಂತೆ ಬರಿ ಕಾಲಿನಲ್ಲಿ ಓಡಾಡುವಾಗ ಕಲ್ಲುಗಳು ಅಥವ ಇನ್ನಾವುದೇ ಗಟ್ಟಿ ವಸ್ತುಗಳು ನಿರಂತರ ಅಂಗಾಲಿನ ಚರ್ಮವನ್ನು ಒತ್ತುವುದರಿಂದ ಅಂಗಾಲಿನ ಉಬ್ಬುಗಳಲ್ಲಿ ಸಾಮಾನ್ಯವಾಗಿ ಇದು ಕಾಣಿಸಿಕೊಳ್ಳುತ್ತದೆ. ಕೆಲವೊಮ್ಮೆ ಮೂತಿ ಚೂಪಾದ, ಕಿರಿದಾದ ಮತ್ತು ಒರಟಾದ ಬೂಟ್ಸ್ ಅಥವ ಪಾದರಕ್ಷೆಗಳನ್ನು ಉಪಯೋಗಿಸುವುದರಿಂದ ಕಾಲು ಬೆರಳುಗಳ ಅಥವ ಅಂಗಾಲಿನ ಬದಿಗಳಲ್ಲಿಯೂ ಸಹ ಕಲ್ಲೊತ್ತುಗಳು ಕಾಣಿಸಿಕೊಳ್ಳಬಹುದು.

ಹುಟ್ಟಿನಿಂದಲೂ ಸೂಕ್ಷ್ಮ ಚರ್ಮದ ವ್ಯಕ್ತಿಗಳ ಅಂಗಾಲಿನಲ್ಲಿ ನಿರಂತರ ಬಾಹ್ಯ ವಸ್ತುಗಳ ಪೆಟ್ಟುಗಳಿಂದ ಒಳಗಿನ ಅಂಗಾಂಶಗಳಿಗೆ ತೊಂದರೆ ಆಗದಂತೆ ನೋಡಿಕೊಳ್ಳಲು ಪ್ರಕೃತಿದತ್ತ ಪ್ರತಿಕ್ರಿಯೆಯಾಗಿ ಈ ಕಲ್ಲೊತ್ತುಗಳು ಬಂದಿರಬಹುದು.

ಒಮ್ಮೆ ಕಲ್ಲೊತ್ತುಗಳು ಆರಂಭವಾದ ಮೇಲೆ ಯಾವುದೇ ಗಟ್ಟಿ ವಸ್ತು ಕಲ್ಲೊತ್ತುಗಳ ಮೇಲೆ ಒತ್ತಿದಾಗ ವಿಪರೀತ ನೋವುಂಟಾಗುತ್ತದೆ. ಆ ನೋವನ್ನು ಸಹಿಸಲಾರದೆ ಕಲ್ಲೊತ್ತಿರುವ ಜನರು ಮುಂದೆ ಕಲ್ಲೊತ್ತುಗಳಿಗೆ ಯಾವುದೇ ಕಲ್ಲು

ಅಥವ ಗಟ್ಟಿ ವಸ್ತುಗಳು ತಾಗದಂತೆ ನಡೆಯುವುದರಿಂದ ನಡಿಗೆಯ ಶೈಲಿಯೇ ಬದಲಾಗಿ ಅಂಗವಿಕಲರಂತೆ ನಡೆಯುತ್ತಾರೆ.

ಎರಡು ಮಿ. ಮೀ. ನಿಂದ ಒಂದು ಸೆ. ಮೀ. ನಷ್ಟು ಸುತ್ತಳತೆ ಇರಬಹುದಾದ ಒಂದರಿಂದ ಕೆಲವಾರು ಕಲ್ಲೊತ್ತುಗಳು ಅಂಗಾಲಿನ ಉಬ್ಬುಗಳಲ್ಲಿ ಕಾಣಿಸಿಕೊಳ್ಳಬಹುದು. ಬೆಳಕಿನಲ್ಲಿ ನೋಡಿದಾಗ ಮಧ್ಯದಲ್ಲಿ ಬುಗುರಿಯಾಕಾರದ ಮತ್ತು ಗಡುಸಾದ ತಿರುಳು ಅಥವ ಹಾರ್ಡ್ ಕೋರ್ ಇರುತ್ತದೆ. ಚೂಪಿನ ಭಾಗ ಚರ್ಮದಿಂದ ಒಳಗಡೆ ಹೋಗಿರುತ್ತದೆ. ಕಣ್ಣಿಗೆ ದಪ್ಪನೆ ಭಾಗ ಮಾತ್ರ ಕಾಣಿಸುತ್ತದೆ. ಈ ಭಾಗದ ಮೇಲೆ ಕಲ್ಲು ಅಥವ ಯಾವುದೇ ವಸ್ತು ಒತ್ತಿದಾಗ ಬಹಳ ನೋವುಂಟಾಗುತ್ತದೆ.

ಕೆಲವೊಮ್ಮೆ ವೈರಸ್ ಅಣು ಜೀವಿಗಳಿಂದ ಬರುವಂತಹ ಕಾಮನ್‌ವಾರ್ಟ್ ಅಥವ ಹುಲಿಯುಗುರುಗಳು ಅಂಗಾಲಿನಲ್ಲಿ ಬಂದಾಗ ಅನೇಕ ಜನರು ಕಲ್ಲೊತ್ತು ಎಂದು ನಂಬಿರುತ್ತಾರೆ. ಇವುಗಳನ್ನು ಕರೆಂಟ್ ಅಥವಾ ಆ್ಯಸಿಡ್‌ನಿಂದ ಸುಟ್ಟು ವಾಸಿ ಮಾಡಬಹುದು.


ಕಲ್ಲೊತ್ತುಗಳನ್ನು ಯಾವುದೇ ಚಿಕಿತ್ಸೆಯಿಂದ ಗುಣಪಡಿಸುವುದು ಬಹಳ ಕಷ್ಟ. ಕಲ್ಲೊತ್ತಿನ ಮೇಲೆ ಶೇ. 20 ರಿಂದ 40 ರಷ್ಟು ಭಾಗದ ಸಲಿಸಿಲಿಕ್ ಆ್ಯಸಿಡ್ ಮುಲಾಮನ್ನು ದಿನ ರಾತ್ರಿ ಹಚ್ಚಿದರೆ ಮೃದುವಾಗುತ್ತದೆ. ಆಮೇಲೆ ತಿರುಳನ್ನು ಕೆರೆದು ತೆಗೆದು ಹಾಕಬಹುದು. ಸ್ವಲ್ಪ ದಿನ ನೋವು ಇರುವುದಿಲ್ಲ. ಆದರೆ ತಿರುಳು ಪುನಃ ಬೆಳೆದುಕೊಂಡು ಉಪದ್ರವ ಕೊಡುತ್ತದೆ.

ಇದಕ್ಕೆ ಶಸ್ತ್ರ ಚಿಕಿತ್ಸೆಯೂ ಅಷ್ಟು ಉತ್ತಮ ಚಿಕಿತ್ಸೆಯಾಗಲಾರದು. ಏಕೆಂದರೆ ಶಸ್ತ್ರಕ್ರಿಯೆಯಿಂದ ಕಲ್ಲೊತ್ತುಗಳು ಸಂಪೂರ್ಣ ಗುಣವಾದರೂ, ತೆಗೆದಾದ ಮೇಲೆ ಉಳಿಯುವ ಶಾಶ್ವತ ಮಚ್ಚೆ ಅಥವಾ ಕಲೆಯ ಮೇಲೆ ಕಲ್ಲು ಅಥವ ಗಟ್ಟಿ ವಸ್ತು ಒತ್ತಿದಾಗ ಕಲ್ಲೊತ್ತಿನಷ್ಟೇ ನೋವನ್ನು ಜೀವನ ಪರ್ಯಂತ ಅನುಭವಿಸಬೇಕಾಗಬಹುದು.

ಔಷಧದಿಂದಾಗಲಿ ಅಥವ ಶಸ್ತ್ರ ಚಿಕಿತ್ಸೆಯಿಂದಾಗಲೀ ಪೂರ್ಣ ವಾಸಿ ಮಾಡಲು ಸಾಧ್ಯವಿಲ್ಲದ್ದರಿಂದ ಪ್ರತಿಯೊಬ್ಬರೂ ಚಿಕ್ಕಂದಿನಿಂದಲೇ ಬರಿಕಾಲಿನಲ್ಲಿ ನಡೆಯದೆ ಮೃದುವಾದ ಸರಿ ಅಳತೆಯ ಮತ್ತು ಮೂತಿ ವಿಶಾಲವಾದ ಬೂಟ್ಸ್ ಅಥವ ಪಾದರಕ್ಷೆಗಳನ್ನು ಉಪಯೋಗಿಸಿ ತಮ್ಮ ದೈನಂದಿನ ಕೆಲಸ ಕಾರ್ಯಗಳಲ್ಲಿ ಭಾಗಿಯಾದರೆ ಕಲ್ಲೊತ್ತು ಮೂಡದಂತೆ ನೋಡಿಕೊಳ್ಳಬಹುದು.

* * * * *

16. ಸೋರಿ ಯಾಸಿಸ್



ಪ್ರಪಂಚದಾದ್ಯಂತ ಲಕ್ಷಾಂತರ ಜನರು ತಮ್ಮ ಮೈಮೇಲೆ ಮೂಡುವ ಈ ಕಾಯಿಲೆಯ ಅಸಹ್ಯ ಲಕ್ಷಣಗಳನ್ನು ನೋಡಿ ಇತರರು ವ್ಯಕ್ತಪಡಿಸುವ ಪ್ರತಿಕ್ರಿಯೆಯಿಂದ ಮಾನಸಿಕವಾಗಿ ಬಳಲುತ್ತಾರೆ. ಯಾವುದೇ ಸಭೆ ಸಮಾರಂಭಗಳಲ್ಲಿ ಭಾಗವಹಿಸಲು ಸಾಧ್ಯವಾಗದಂಥ ಸ್ಥಿತಿಯಲ್ಲಿರುತ್ತಾರೆ.

ಬಹಳಷ್ಟು ವರ್ಷಗಳಿಂದ ವೈದ್ಯ ಲೋಕದ ಸಂಶೋಧಕರು ಶ್ರಮ ವಹಿಸಿ ಸಂಶೋಧಿಸಿದ ವರದಿಗಳು ಪ್ರಕಟವಾಗುತ್ತಿದ್ದರೂ ಕಾಯಿಲೆ ಮರುಕಳಿಸದೆ ಸಂಪೂರ್ಣ ವಾಸಿಯಾಗುವಂಥಹ ಔಷಧಿ ಜಗತ್ತಿನಲ್ಲಿ ಇದುವರೆಗೆ ಲಭ್ಯವಾಗಿಲ್ಲ.

2000 ವರ್ಷಗಳಷ್ಟು ಹಳೆಯದಾದ ಪ್ರತಿ ಶತ ಒಂದರಿಂದ ಮೂರು ಜನರಲ್ಲಿ (ಪುರುಷ ಮಹಿಳೆ ಅಥವ ಮಕ್ಕಳು ಎಂಬ ಭೇದ ಭಾವವಿಲ್ಲದೆ) ಕಾಣಿಸಿಕೊಳ್ಳುವ ಆದರೆ ಒಬ್ಬರಿಂದ ಇನ್ನೊಬ್ಬರಿಗೆ ಅಂಟಿಕೊಳ್ಳದ ಈ ಕಾಯಿಲೆ ಹೆಚ್ಚಾಗಿ 20 ರಿಂದ 40 ವರ್ಷದ ವಯಸ್ಸಿನವರಲ್ಲಿ ಜಾಸ್ತಿ. ಎಪ್ಪತ್ತು ವರ್ಷದ ನಂತರ ಶುರುವಾಗುವುದು ಅಪರೂಪ.

ಕಾಯಿಲೆ ಬರಲು ನಿಖರವಾಗಿ ಕಾರಣಗಳು ಇದುವರೆಗೆ ಗೊತ್ತಿಲ್ಲದಿದ್ದರೂ ಅನುವಂಶಿಕತೆ, ಅಲರ್ಜಿ, ಮಾನಸಿಕ ಒತ್ತಡ, ಹವಾಮಾನದಲ್ಲಿ ವ್ಯತ್ಯಾಸ,

ಅಣುಜೀವಿಗಳಿಂದ ಉಂಟಾಗುವ ಸೋಂಕುಗಳು ಮತ್ತು ಕೆಲವು ಔಷಧಿಗಳು ಈ ಕಾಯಿಲೆ ಬರಲು ಪ್ರಚೋದನೆ ನೀಡಬಹುದೆಂಬ ಶಂಕೆ ಇದೆ.

ಚರ್ಮ, ಉಗುರು ಮತ್ತು ಕೀಲುಗಳಲ್ಲಿ ಮಾತ್ರ ಕಾಣಿಸಿಕೊಳ್ಳುವ ಈ ಕಾಯಿಲೆ ಬಹುಪಾಲು ಜನರಲ್ಲಿ ಉಗುರು ಮತ್ತು ಚರ್ಮದಲ್ಲಿ ಮಾತ್ರ ಕಾಯಿಲೆಯ ಚಿಹ್ನೆಗಳು ಕಾಣಿಸಿಕೊಳ್ಳುತ್ತವೆ.

ಅಪರೂಪವಾಗಿ ಕೆಲವರಲ್ಲಿ ಮಾತ್ರ ಚರ್ಮ ಮತ್ತು ಉಗುರಿನ ಜೊತೆಗೆ ಕೀಲುಗಳಲ್ಲಿಯೂ ಕಾಣಿಸಿಕೊಳ್ಳುವ ಈಕಾಯಿಲೆ ಸಾಮನ್ಯವಾಗಿ ನಡುವಿನ (ಸೊಂಟ) ಕೀಲುಗಳು ಹಾಗೂ ಕೈ ಮತ್ತು ಕಾಲಿನ ಬೆರಳುಗಳ ತುದಿಯ ಕೀಲುಗಳು ಸೋಂಕಿಗೆ ಒಳಪಟ್ಟು ಕೆಲವರಲ್ಲಿ ಕೀಲುಗಳ ಊನತೆಗೂ ಕಾರಣವಾಗುತ್ತದೆ.

ಸೋರಿಯಾಸಿಸ್‌ನಿಂದ ಬಳಲುತ್ತಿರುವ ವ್ಯಕ್ತಿಗಳಲ್ಲಿ ಸುಮಾರು ಶೇ. 10 ರಿಂದ 50 ಬಾಗದಷ್ಟು ಜನರರಲ್ಲಿ ಮಾತ್ರ ಉಗುರಿನ ಮೇಲೆ ಸೂಜಿ ಮೊನೆಯ ಗಾತ್ರದ ಗುಳಿ ಅಥವ ಗುಂಡಿಗಳು, ಬಿಳಿ ಮತ್ತು ಕಪ್ಪು ಕಲೆಗಳು ಅಥವ ಅಡ್ಡ ಗೆರೆಗಳು ಕಾಣಿಸಿಕೊಳ್ಳಬಹುದು. ಉಗುರು ಒರಟಾಗಿ ದಪ್ಪವಾಗುತ್ತಾ ಹೋದಂತೆ ತಳಭಾಗದಲ್ಲಿ ಹೊಟ್ಟಿನ ಮುದ್ದೆ ಶೇಖರವಾಗುತ್ತದೆ, ಗಟ್ಟಿಯಾಗಿ ಕೆರೆದರೆ ಹೊಟ್ಟಿನಂತೆ ಉದುರುತ್ತದೆ. ತೀವ್ರ ರೀತಿಯ ಕಾಯಿಲೆಯಲ್ಲಿ ಉಗುರುಗಳು ನಾಶವಾಗಲೂಬಹುದು.

ಒಂದೆರಡು ಮಿಲಿ ಮೀಟರ್‌ನಿಂದ ಕೆಲವಾರು ಸೆಂಟಿ ಮಿಾಟರ್ ಅಗಲದ ನಸುಗೆಂಪು ಬಣ್ಣದ ಮಚ್ಚೆಗಳು ಮೈಮೇಲೆಲ್ಲಾ ಹರಡಿಕೊಂಡಿರುತ್ತವೆ. ಮಚ್ಚೆಗಳು ಚರ್ಮದಿಂದ ಸ್ವಲ್ಪ ಉಬ್ಬಿದ್ದು ಮುತ್ತಿನ ಅಥವ ಬೆಳ್ಳಿಯ ಬಣ್ಣದ ಹುರುಪೆ (ಹೊಟ್ಟು) ಯಿಂದ ಕೂಡಿರುತ್ತವೆ. ಹುರುಪೆಯನ್ನು ಕೆರೆದು ತೆಗೆದಾಗ ಮೇಲೆ ರಕ್ತ ಕಾಣಬಹುದು. ಮಚ್ಚೆಗಳ ಮೇಲಿನ ಪರಿಜ್ಞಾನ ಚೆನ್ನಾಗಿದ್ದು ಕೆಲವರಲ್ಲಿ ಸ್ವಲ್ಪ ಕಡಿತವಿರುತ್ತದೆ.

ಒಂದೆರಡು, ಕೆಲವಾರು ಅಥವ ನೂರಾರು ಮಚ್ಚೆಗಳು ಹಸ್ತ, ಪಾದ, ತಲೆ ಮತ್ತು ಗುಪ್ತಾಂಗ ಸೇರಿದಂತೆ ಮೈತುಂಬ ಹರಡಿರಬಹುದು. ಮಚ್ಚೆಗಳ ಸಂಖ್ಯೆ ಮತ್ತು **ತೀವ್ರತೆ** ಪ್ರತಿಯೊಬ್ಬರಲ್ಲಿಯೂ ಒಂದೇ ಸಮನಾಗಿರುವುದಿಲ್ಲ. ಕೆಲವರಲ್ಲಿ ಜೀವನ ಪರ್ಯಂತ ಲಘು ಪ್ರಮಾಣದಲ್ಲಿಯೇ ಕೆಲವಾರು ಮಚ್ಚೆಗಳಿದ್ದರೆ ಮತ್ತೆ ಕೆಲವರು ತೀವ್ರ ರೀತಿಯಲ್ಲಿ ನೂರಾರು ಮಚ್ಚೆಗಳಿಂದ ಬಳಲುತ್ತಿರುತ್ತಾರೆ. ಕೆಲವರಲ್ಲಿ ಮಚ್ಚೆಗಳು ಕೀವು ಗುಳ್ಳೆಗಳಾಗಿ ಜೀವಕ್ಕೆ

ಅಪಾಯ ಒದಗಬಹುದು, ಮತ್ತೆ ಕೆಲವರಲ್ಲಿ ಅಪರೂಪವಾಗಿ ಮೈಮೇಲೆಲ್ಲಾ ಕಾಯಿಲೆ ಆವರಿಸಿ ಇಡೀ ಶರೀರದ ಬಣ್ಣವೇ ನಸುಗೆಂಪು ಬಣ್ಣಕ್ಕೆ ತಿರುಗಿ ಗಂಡಾಂತರಕಾರಿಯಾಗಬಹುದು.

ಆದರೆ ಬಹಳಷ್ಟು ಜನರಲ್ಲಿ ಸಾಮಾನ್ಯವಾಗಿ ಲಘು ಪ್ರಮಾಣದಲ್ಲಿ ತಲೆ, ಮೊಣಕೈ, ಮಂಡಿ, ಮೊಣಕಾಲು, ಹಸ್ತ, ಪಾದ ಮತ್ತು ಬೆನ್ನಿನ ಮೇಲೆ ಕೆಲ ಮಚ್ಚೆಗಳು ಕಾಣಿಸಿಕೊಳ್ಳುವುದೇ ಜಾಸ್ತಿ.


ಜೀವನ ಪರ್ಯಂತ ಇರುವ ಈ ಕಾಯಿಲೆ ಬಹುಪಾಲು ವ್ಯಕ್ತಿಗಳಲ್ಲಿ ಔಷಧದ ಸಹಾಯವಿಲ್ಲದೆ ತನ್ನಷ್ಟಕ್ಕೆ ತಾನೆ ಕೆಲವು ತಿಂಗಳು ವಾಸಿಯಾದಂತೆ ಶಮನವಾಗಿ ಮಚ್ಚೆಗಳು ನಿರ್ಗಮಿಸಿ ಆಗಾಗ್ಗೆ ಅಂದರೆ ಪ್ರತಿ ವರ್ಷ, ಒಂದೆರಡು ವರ್ಷ ಅಥವ ನಾಲ್ಕೈದು ವರ್ಷಗಳಿಗೊಮ್ಮೆ ಮರುಕಳಿಸಿ ಕೆಲವಾರು ತಿಂಗಳು ಕಾಡುತ್ತದೆ. ಶಮನದ ಹಂತದಲ್ಲಿ ಮಚ್ಚೆಗಳೆಲ್ಲಾ ನಿರ್ಗಮಿಸಿ ಪುನಃ ಮರುಕಳಿಸುವವರೆಗೂ ಕಾಯಿಲೆ ಇತ್ತು ಎಂಬ ಸುಳಿವು ಕೂಡಾ ಸಿಗದಂತೆ 'ಸೋರಿಯಾಸಿಸ್' ವ್ಯಕ್ತಿಗಳು ಆರೋಗ್ಯದಿಂದಿರುತ್ತಾರೆ. ಸೋರಿಯಾಸಿಸ್ ಮಚ್ಚೆಗಳು ಬಹುಪಾಲು ಜನರಲ್ಲಿ ಬೇಸಿಗೆ ವೇಳೆ ನಿರ್ಗಮಿಸಿ ಚಳಿಗಾಲದಲ್ಲಿ ಬರುತ್ತವೆ.

ಕೊಬ್ಬರಿ ಎಣ್ಣೆ, ಹರಳೆಣ್ಣೆ ಅಥವ ಆಲೀವ್ ಎಣ್ಣೆ ಸವರಿ ಮಚ್ಚೆಗಳ ಹುರುಪೆಯನ್ನು ಕಡಿಮೆ ಮಾಡಿಕೊಳ್ಳಬಹುದು. ತಲೆಯಲ್ಲಿ ಹುರುಪೆ ಜಾಸ್ತಿ ಇದ್ದರೆ ಮಾರುಕಟ್ಟೆಯಲ್ಲಿ ದೊರೆಯುವ ಶ್ಯಾಂಪೂಗಳನ್ನು ಉಪಯೋಗಿಸಿ ಕಡಿಮೆ ಮಾಡಿಕೊಳ್ಳಬೇಕು. ತೀವ್ರ ತರಹದ ಸೋರಿಯಾಸಿಸ್ ಇರುವವರು ತಜ್ಞ ವೈದ್ಯರ ಸಹಾಯ ಪಡೆಯಬೇಕು.

ಸೋರಿಯಾಸಿಸ್ ಕಾಯಿಲೆ ಮರುಕಳಿಸದಂತೆ ಸಂಪೂರ್ಣವಾಗಿ ಗುಣಪಡಿಸುವ ಔಷಧಿಗಳು ಪ್ರಸ್ತುತ ಲಭ್ಯವಿಲ್ಲ ಎಂಬುದನ್ನು ಮನಗಂಡು ಮಾನಸಿಕ ನೆಮ್ಮದಿ ಕಳೆದುಕೊಳ್ಳದೆ, ಡೋಂಗಿ ವೈದ್ಯರ ಬಲೆಗೆ ಬೀಳದೆ ಪ್ರಸುತ ದೊರೆಯುವ ಶಮನಕಾರಿ ಔಷಧಿಗಳನ್ನು ಆವಶ್ಯಕತೆ ಬಿದ್ದಾಗ ಕಾಯಿಲೆಯ ತೀವ್ರತೆಗೆ ತಕ್ಕಂತೆ ವೈದ್ಯರ ಸಲಹೆ ಮೇರೆಗೆ ಉಪಯೋಗಿಸಿ ಮಚ್ಚೆಗಳನ್ನು ತಹಬಂದಿಗೆ ತಂದು ಇತರ ಆರೋಗ್ಯವಂತರಂತೆ ಜೀವನವನ್ನು ನಡೆಸುವುದನ್ನು ಕಲಿಯಬೇಕು.

* * * * *

17. ಸ್ಕೇಬಿಸ್ (ತುರಿ ಕಜ್ಜಿ)



ಹಳ್ಳಿಗಳು, ನಗರದ ಕೊಳೆಗೇರಿಗಳು, ಅನಾಥಾಲಯ, ಬಡ ವಿದ್ಯಾರ್ಥಿಗಳಿಗೆ ನಡೆಸುತ್ತಿರುವ ಹಾಸ್ಟೆಲ್‌ಗಳು, ರಿಮ್ಯಾಂಡ್ ಹೋಂಗಳು ಮುಂತಾದ ಕಡೆ ವಾಸಿಸುವ ರೈತರು, ಬಡಜನರು, ಅವಿದ್ಯಾವಂತರು ಮತ್ತು ಚಿಕ್ಕವರಲ್ಲಿ ಸಾಂಕ್ರಾಮಿಕ ರೋಗದಂತೆ ಹರಡಿಕೊಂಡಿರುವ ಈ ಖಾಯಿಲೆ ಸಾರ್ಕಾಪ್ಟಸ್ ಸ್ಕೇಬೈ ಎಂಬ ಕ್ರಿಮಿಯಿಂದ ಬರುತ್ತದೆ.

ಒಬ್ಬರಿಗೆ ಅಂಟಿದರೆ ಮನೆಮಂದಿಗೆಲ್ಲಾ ತಗಲುವ ಮನೆಯವರಿಂದ ಇಡೀ ವಠಾರಕ್ಕೆ ಹಬ್ಬುವ ವಠಾರದಿಂದ ಇಡೀ ಊರಿಗೆ ಹರಡುವ ಈ ಕಾಯಿಲೆಯನ್ನು ಪ್ರಾರಂಭದಲ್ಲಿಯೆ ಗುಣಪಡಿಸಿಕೊಳ್ಳದಿದ್ದರೆ ಮುಂದೆ ಈ ಕಾಯಿಲೆಯಿಂದ ವಿಮುಕ್ತಿ ಸಿಗುವುದೇ ಕಷ್ಟ.

ವೈದ್ಯರು, ಸರ್ಕಾರ, ಸಮಾಜ ಸೇವಾ ಸಂಸ್ಥೆಗಳು ಮತ್ತು ವಿದ್ಯಾವಂತರು, ತಿಳಿಯದವರಿಗೆ ಈ ಅಂಟು ಜಾಡ್ಯದ ಬಗ್ಗೆ ವೈಜ್ಞಾನಿಕವಾಗಿ ಎಚ್ಚರಿಗೆ ನೀಡಿ ರೋಗದಿಂದ ನರಳುತ್ತಿರುವ ಇಡೀ ಕುಟುಂಬ, ವಠಾರ, ಅನಾಥಾಲಯ ಅಥವ ಹಾಸ್ಟೆಲ್‌ಗಳಿಗೆ ಉಚಿತವಾಗಿ ಔಷಧಿಗಳನ್ನು ವಿತರಿಸಿ ಸಾಮೂಹಿಕವಾಗಿ ಚಿಕಿತ್ಸೆ ಮಾಡದ ಹೊರತು ಈ ಕಾಯಿಲೆಯಿಂದ ಬಿಡುಗಡೆ ಇಲ್ಲ.

ಈ ಕ್ರಿಮಿಗಳನ್ನು ಇಸವಿ 1687 ರಷ್ಟು ಹಿಂದೆಯೆ ಪತ್ತೆ ಹಚ್ಚಿದ್ದು ಸುಮಾರು 0.4ಮಿ.ಮಿ ನಷ್ಟು ಗಾತ್ರವಿರುತ್ತದೆ. ನೋಡಲು ಆಮೆಯಾಕಾರದಂತೆ,

ಮೇಲ್ಮೈ ಉಬ್ಬಿದ್ದು ಚಪ್ಪಟೆಯಾಗಿರುತ್ತದೆ. ನಾಲ್ಕು ಜೊತೆ ಕಾಲಿನ ಈ ಕ್ರಿಮಿಯ ಮೈಮೇಲೆಲ್ಲಾ ರೋಮಗಳಿದ್ದು ಮುಂಗಾಲುಗಳ ತುದಿಯಲ್ಲಿ ಈರಿಕೆಗಳು ಇರುತ್ತವೆ.

ಭೂತ ಕನ್ನಡಿಯಿಂದ (ಮ್ಯಾಗ್ನಿಫೈಡ್ ಲೆನ್ಸ್) ನೋಡಬಹುದಾದಂತಹ ಈ ಕ್ರಿಮಿಗಳು ಚರ್ಮದ ಸಂದುಗಳಲ್ಲಿ ಅಂದರೆ ತೊಡೆ, ಬೆರಳು, ಸ್ಥನಗಳ ಸಂದುಗಳು ಮತ್ತು ಕೆಳಭಾಗ, ಜನನಾಂಗದ ಸುತ್ತಮುತ್ತ ಮತ್ತು ಕಂಕುಳು ಮುಂತಾದ ಕಡೆಗಳ ಚರ್ಮದಲ್ಲಿ ಇರುತ್ತವೆ. ಗಂಡು ಕ್ರಿಮಿ ಹೆಣ್ಣಿಗೆ ಗರ್ಭವನ್ನು ದಾನ ಮಾಡಿದ ನಂತರ ಸಾಯುತ್ತದೆ. ಗರ್ಭವತಿಯಾದ ಹೆಣ್ಣು ಕ್ರಿಮಿ ಚರ್ಮದ ಮೇಲು ಪದರವನ್ನು ವಕ್ರವಾಗಿ ಆಳಕ್ಕೆ ಕೊರೆಯುತ್ತಾ ಪ್ರತಿ ದಿನ ಎರಡು ಮೂರು ಮೊಟ್ಟೆಗಳನ್ನು ಒಂದೆರಡು ವಾರ ಇಟ್ಟು ನಂತರ ಸಾಯುತ್ತದೆ. ಈ ಮೊಟ್ಟೆಗಳು ಕೆಲವೇ ದಿನಗಳಲ್ಲಿ ಮರಿಗಳಾಗಿ ನಂತರ ಪ್ರಾಪ್ತ ವಯಸ್ಸಿಗೆ ಬಂದು ಸಂತಾನಾಭಿವೃದ್ಧಿಯಲ್ಲಿ ತೊಡಗುತ್ತವೆ.

10 ರಿಂದ 15 ಕ್ರಿಮಿಗಳಷ್ಟಾದ ಮೇಲೆ ಕ್ರಿಮಿಗಳಿರುವ ಜಾಗದಲ್ಲೆಲ್ಲಾ ಕಡಿತ ಶುರುವಾಗಿ ಚರ್ಮವನ್ನು ಪರೀಕ್ಷಿಸಿದಾಗ ಚರ್ಮದ ಸಂದುಗಳಲ್ಲಿ ಸಣ್ಣ ಗುಳಿಗಳು ಅಥವ ತೂತುಗಳು ಮತ್ತು ಸೂಜಿಯ ಗುಂಡಿನ ಗಾತ್ರದ ಗುಳ್ಳೆಗಳು ಕಾಣಿಸುತ್ತವೆ. ಗುಳ್ಳೆಗಳನ್ನು ಒಡೆದರೆ ದ್ರವ ಬರಬಹುದು.

ಕಡಿತ ದಿನಕಳೆದಂತೆಲ್ಲಾ ಜಾಸ್ತಿಯಾಗುತ್ತ ಕೊಳೆ ತುಂಬಿರುವ ಉಗುರುಗಳಿಂದ ಒಂದೆ ಸಮನೆ ಕೆರೆಯುತ್ತಿದ್ದಾಗ ಚರ್ಮ ಜಖಂ, ಗೊಂಡು, ಹೊರಗಿನಿಂದ ಮೇಲು ಸೋಂಕು ತಗಲಿ ಕೀವು ಗುಳ್ಳೆಗಳಾಗುತ್ತವೆ. ಬಹಳಷ್ಟು ಜನರು ಕೀವು ಗುಳ್ಳೆಗಳಾದ ನಂತರವೇ ಚಿಕಿತ್ಸೆಗೆ ಬರುತ್ತಾರೆ.

ಸ್ಕೇಬಿಸ್ ಕ್ರಿಮಿಗಳು ಮಾತ್ರೆಗಳಿಂದ ಮತ್ತು ಇಂಜೆಕ್ಷನ್‌ಗಳಿಂದ ಸಾಯುವುದಿಲ್ಲವಾದುದರಿಂದ ಮೈಮೇಲೆ ಹಚ್ಚುವ ಕ್ರಿಮಿನಾಶಕ ಔಷಧಿಗಳಾದ ಶೇ. 5ರ ಗಂಧಕದ ಮೂಲಾಮು, ಶೇ. 1ರ ಗ್ಯಾಮೆಕ್ಸೀನ್ ಅಥವ ಶೇ. 25ರ ಬಿ.ಬಿ.ಲೋಶನ್ ಮುಂತಾದ ಔಷಧಗಳನ್ನು ಉಪಯೋಗಿಸಬೇಕು. ಕೀವು ಗುಳ್ಳೆಗಳಿದ್ದಾಗ ಮಾತ್ರ ಆಂಟಿಬಯಾಟಿಕ್ಸ್ ಔಷಧಗಳನ್ನು ಬಳಸಬೇಕು.

ಒಬ್ಬರಿಗೆ ಸ್ಕೇಬೀಸ್ ಬಂದು ಕಡಿತ ಶುರುವಾದಾಗ ರೋಗಿಯ ಜೊತೆಗೆ ಮನೆಮಂದಿಗೆಲ್ಲಾ ಒಂದೆರಡು ಸ್ಕೇಬೀಸ್ ಕ್ರಿಮಿಗಳು ತಗಲಿರುವ ಸಂಭವ ಇರಬಹುದಾದ್ದರಿಂಧ ಪ್ರಾರಂಭದಲ್ಲಿಯೆ ಎಚ್ಚರಿಕೆ ವಹಿಸಿ ಕಡಿತ ಇರಲಿ ಅಥವಾ ಇಲ್ಲದಿರಲಿ ಪ್ರತಿಯೊಬ್ಬರೂ ಔಷಧವನ್ನು ಕತ್ತಿನಿಂದ ಕಾಲಿನವರೆಗೆ

ಎಣ್ಣೆ ಹಚ್ಚಿದಂತೆ ಸವರಿ ಮೈಮೇಲೆ ಒಣಗಲು ಬಿಡಬೇಕು. ಸ್ಕೇಬೀಸ್ ಕ್ರಿಮಿಗಳು ಔಷಧಿಯಿಂದ ತಪ್ಪಿಸಿಕೊಳ್ಳದಂತೆ ಎಚ್ಚರಿಕೆ ವಹಿಸಿ ಯಾವ ಜಾಗವನ್ನು ಬಿಡದಂತೆ ಸವರಬೇಕು. 48 ಘಂಟೆಗಳ ನಂತರ ಜುಂಗು ಅಥವ ಬ್ರಷ್‌ನಿಂದ ಉಜ್ಜಿ ಸ್ನಾನ ಮಾಡಿ ಶುಭ್ರ ಬಟ್ಟೆಗಳನ್ನು ಧರಿಸಬೇಕು ಮತ್ತು ತೊಡುವ ಬಟ್ಟೆಗಳನ್ನು ಬಿಸಿ ನೀರಿನಿಂದ ಕುದಿಸಬೇಕು ಅಥವ ಇಸ್ತ್ರಿ ಮಾಡಿಸಬೇಕು. ಹೀಗೆ ಪ್ರತಿಯೊಬ್ಬರು ವಾರಕ್ಕೆ ಒಂದು ಸಾರಿ ಎರಡು ಮೂರು ವಾರ ಮಾಡುತ್ತಿರಬೇಕು.

ಪ್ರತಿಯೊಬ್ಬರು ತಾವು ಸ್ಕೇಬಿಸ್ ಕ್ರಿಮಿಯಿಂದ ಬಿಡುಗಡೆಯಾದ ನಂತರ ಅಕ್ಕಪಕ್ಕದ ಮನೆಯವರಲ್ಲಿ, ಸ್ನೇಹಿತರಲ್ಲಿ ಮತ್ತು ಸಂಬಂಧಿಕರಲ್ಲಿ ಈ ಕಾಯಿಲೆ ಇದ್ದರೆ ಅವರಿಗೂ ತಮ್ಮಂತೆಯೇ ಚಿಕಿತ್ಸೆ ಮಾಡಿಸಿಕೊಳ್ಳುವಂತೆ ನಿಗಾ ವಹಿಸಬೇಕು, ಇಲ್ಲದಿದ್ದರೆ ಪುನಃ ಸ್ಕೇಬಿಸ್ ಕ್ರಿಮಿಗಳ ಕಾಟ ತಪ್ಪುವುದಿಲ್ಲ.

ಮಕ್ಕಳ ಚರ್ಮ ಬಹಳ ಸೂಕ್ಷ್ಮವಾಗಿರುವುದರಿಂದ ಕಾಯಿಲೆಯ ಲಕ್ಷಣಗಳು ಚರ್ಮದ ಸಂದುಗಳ ಜೊತೆಗೆ ಕೆನ್ನೆ, ಹಣೆ ಮತ್ತು ಕೈಕಾಲುಗಳಲ್ಲಿಯೂ ಕಾಣಿಸಿಕೊಳ್ಳಬಹುದು. ಔಷಧವನ್ನು ಸವರಿ 6 ಘಂಟೆಯ ನಂತರ ಸ್ನಾನ ಮಾಡಿಸಿದರೆ ಒಳ್ಳೆಯದು ಮತ್ತು ಕಣ್ಣಿಗೆ ಔಷಧ ಸೋಕದಂತೆ ಎಚ್ಚರಿಕೆ ವಹಿಸಬೇಕು.

ಕೆಲವರು ಔಷಧಗಳನ್ನು ಪ್ರತಿದಿನ ಕೆಲವು ವಾರ ಒಂದೆ ಸಮನೆ ಹಚ್ಚುವುದರಿಂದ ಕ್ರಿಮಿಗಳು ನಾಶವಾಗಿದ್ದರೂ ಅಲರ್ಜಿ ಶುರುವಾಗಿ ಕಡಿತ ಮತ್ತಷ್ಟು ಜಾಸ್ತಿಯಾಗಬಹುದು. ಕ್ರಿಮಿನಾಶಕ ಔಷಧಗಳು ಮಕ್ಕಳ ಕೈಗೆ ಸಿಗದಂತೆ ಎಚ್ಚರಿಕೆ ವಹಿಸಬೇಕು.

ಆಹಾರದ ಕೊರತೆ, ವೃಧ್ಧಾಪ್ಯ, ಸಕ್ಕರೆ ರೋಗ, ಕ್ಯಾನ್ಸರ್ ಅಥವ ಏಯ್ಡ್ಸ್ ಕಾಯಿಲೆ ಮುಂತಾದ ಕಾರಣಗಳಿಂದ ರೋಗ ನಿರೋಧಕಶಕ್ತಿ ಕುಂಠಿತಗೊಂಡಿರುವ ವ್ಯಕ್ತಿಗಳ ಚರ್ಮದಲ್ಲಿ ಸ್ಕೇಬಿಸ್ ಕ್ರಿಮಿಗಳು ಸಾವಿರಾರು ಪ್ರಮಾಣದಲ್ಲಿದ್ದು ರೋಗದ ಲಕ್ಷಣಗಳು ವ್ಯಾಪಕವಾಗಿ ಕಾಣಿಸಿಕೊಂಡು ಚಿಕಿತ್ಸೆ ಕಷ್ಟವಾಗಿ ಪ್ರಾಣಕ್ಕೆ ಆತಂಕಕಾರಿಯಾಗಬಹುದು. ಈ ಪ್ರಕಾರದ ರೋಗವನ್ನು ನಾರ್ವೇಜಿಯನ್ ಸ್ಕೇಬಿಸ್ ಎಂದು ಕರೆಯುತ್ತೇವೆ.


ಸ್ಕೇಬಿಸ್ ಕ್ರಿಮಿಯ ಮತ್ತೊಂದು ತಳಿಯು (ಅನಿಮಲ್ ಸ್ಕೇಬಿಸ್) ನಾಯಿ, ಬೆಕ್ಕು, ಕೋಳಿ, ಕುರಿ, ಕುದುರೆ ಮತ್ತು ಕೋತಿ ಮುಂತಾದ ಪ್ರಾಣಿಗಳಿಗೂ ಸಹ ಉಪದ್ರವಕಾರಿಯಾಗಿದ್ದು ಅಂತಹ ಪ್ರಾಣಿಗಳು ಕಾಯಿಲೆಯಿಂದ ನರಳುತ್ತಿದ್ದರೆ ಅವುಗಳ ಸಂಗದಿಂದ ಮನುಷ್ಯರಿಗೂ ಕಾಯಿಲೆ ಆಕಸ್ಮಿಕವಾಗಿ ಅಂಟಬಹುದು.

ಪ್ರಾಣಿಗಳ ಸ್ಕೇಬೀಸ್ ಕ್ರಿಮಿಯು ಮನುಷ್ಯರ ಮೈಮೇಲೆ ಜಾಸ್ತಿದಿನ ಬದುಕಲು ಅಸಾಧ್ಯವಾಗಿ ಬೇಗ ಪ್ರಾಣವನ್ನಪ್ಪುವುದರಿಂದ ಮನುಷ್ಯರಿಗೆ ಲಘು ಪ್ರಮಾಣದಲ್ಲಿ ಸೋಂಕುಕಾರಕವಾಗಿ ಕಾಡಿ ಕೆಲವು ದಿನಗಳಲ್ಲಿಯೆ ಮಾಮೂಲಿ ಔಷಧದಿಂದ ಗುಣಮುಖವಾಗಬಹುದು.

ಸಾಕ್ಷರತೆ, ಸ್ವಚ್ಛತೆ, ಪೌಷ್ಟಿಕ ಆಹಾರದ ಸೌಲಭ್ಯತೆ ಮತ್ತು ಸ್ಕೇಬಿಸ್ ಕಾಯಿಲೆಯ ಬಗ್ಗೆ ತಿಳುವಳಿಕೆ ಬಹು ಜನರಿಗೆ ಲಭ್ಯವಾದರೆ ಈ ಸಾಂಕ್ರಾಮಿಕ ಪಿಡುಗಿನಿಂದ ಜನರು ಮುಕ್ತಿಯನ್ನು ಪಡೆಯುತ್ತಾರೆ.

* * * * *

18. ಪೆಡಿಕ್ಯುಲೋಸಿಸ್ (ಹೇನಿನ ಕಾಟ)



ಹೆಂಗಸರು ಮಕ್ಕಳು ಬಡವರು ಮತ್ತು ಅವಿದ್ಯಾವಂತರಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುವ ಹೇನುಗಳು ಒಟ್ಟಿಗೆ ಮಲಗುವುದು ಹಾಗೂ ಅತಿ ಸಮೀಪ ಸಂಪರ್ಕದಿಂದ ಒಬ್ಬರಿಂದ ಬೇರೊಬ್ಬರಿಗೆ ಸ್ಥಳಾಂತರಗೊಂಡು ಹರಡುತ್ತಿರುತ್ತದೆ.

ತಲೆ, ಮೈ, ಕಣ್ಣಿನ, ರೆಪ್ಪೆ, ಕಂಕಳು ಮತ್ತು ಜನನಾಂಗದ ಸುತ್ತಮುತ್ತ ಕಾಣಿಸಿಕೊಳ್ಳುವ ಹೇನುಗಳು ಚರ್ಮ ಮತ್ತು ಕೂದಲುಗಳಿಗೆ ಬಲವಾಗಿ ಅಂಟಿಕೊಂಡು ಚರ್ಮವನ್ನು ಚುಚ್ಚಿ, ಉಗುಳನ್ನು ಉಗಿದು, ರಕ್ತವನ್ನು ಹೀರುತ್ತದೆ. ಉಗುಳಿನ ಅಲರ್ಜಿಯಿಂದ ಕಡಿತ ಉಂಟಾಗುತ್ತದೆ.

ಗಂಡು ಹೆಣ್ಣಿಗಿಂತ ಗಾತ್ರದಲ್ಲಿ ಸಣ್ಣದಾಗಿದ್ದು ಹೆಣ್ಣಿನ ಜೊತೆ ಮಿಲನವಾದ ನಂತರ ಮರಣವನ್ನಪ್ಪುತ್ತದೆ. ಗರ್ಭವತಿಯಾದ ಹೆಣ್ಣು ಜಾಸ್ತಿ ರಕ್ತವನ್ನು ಹೀರುತ್ತ ಸಂತಾನಾಭಿವೃದ್ಧಿಯಲ್ಲಿ ತೊಡಗಿ ಹೇನುಗಳು ಜಾಸ್ತಿ ಆದಾಗ ಕಡಿತ ಶುರುವಾಗುತ್ತದೆ. ಕೊಳೆ ತುಂಬಿದ ಉಗುರುಗಳ ಕೆರೆತದಿಂದ ಚರ್ಮ ಜಖಂ ಗೊಂಡು ಬ್ಯಾಕ್ಟೀರಿಯಾಗಳಿಂದ ಮೇಲು ಸೋಂಕು ತಗಲಿ ಕೀವು ಗುಳ್ಳೆಗಳಾಗುತ್ತವೆ. ಕೀವುಗುಳ್ಳೆಗಳಿಂದ ಬರಗಳ್ಳೆ ಕಟ್ಟಬಹುದು.

ಕಡಿತ ಶುರುವಾದ ಪ್ರಾರಂಭದಲ್ಲಿಯೇ ಲಿಂಡೇನ್, ಬಿಬಿ ಲೋಶನ್, ಕ್ರೊಟಮಿಟಾನ್ ಮುಂತಾದ ಕ್ರಿಮಿ ನಾಶಕಗಳನ್ನು ಬಳಸಿ ಚಿಕಿತ್ಸೆ ತೆಗೆದುಕೊಂಡು

ಹೇನುಗಳು ಸಂಪೂರ್ಣ ನಾಶವಾಗುವಂತೆ ನೋಡಿಕೊಳ್ಳ ಬೇಕು. ಕೀವು ಗುಳ್ಳೆಗಳಿದ್ದರೆ ಮೊದಲು ಆ್ಯಂಟಿಬಯಾಟಿಕ್ಸ್ ಔಷಧಿಗಳಿಂದ ಗಾಯಗಳನ್ನು ಗುಣಪಡಿಸಿಕೊಳ್ಳಬೇಕು. ಬಾಚಣಿಗೆ, ಟೋಪಿ, ಸ್ಕಾರ್ಫ್, ಟವೆಲ್ ಮುಂತಾದ ವಸ್ತುಗಳನ್ನು ಬಿಸಿನೀರಿನಲ್ಲಿ ಕುದಿಸಿ ಹೇನುಗಳು ಸಾಯುವಂತೆ ನೋಡಿಕೊಳ್ಳಬೇಕು.


ಹೇನುಗಳಿರುವ ಮನೆ ಮಂದಿಯೆಲ್ಲಾ ಜೊತೆಯಾಗಿಯೆ ಔಷಧಿ ಹಚ್ಚಿಕೊಳ್ಳಬೇಕು. ಹೇನುಗಳು ಅತಿಯಾಗಿ ಗೂಡು ಕಟ್ಟಿದ್ದರೆ ಕೂದಲು ತೆಗೆಸುವುದು ಒಳ್ಳೆಯದು. ಔಷಧಿಯಿಂದ ಹೇನುಗಳು ಸತ್ತು ಕೆಲವು ಸಾರಿ ಮೊಟ್ಟೆಗಳು ಉಳಿದುಕೊಳ್ಳಬಹುದು. ಹೇನುಗಳ ಮೊಟ್ಟೆಗಳು ಕೂದಲಿಗೆ ಒಂದು ಪಾರ್ಶ್ವದಲ್ಲಿ ಅಂಟಿಕೊಂಡಿದ್ದರೂ ಮೊಟ್ಟೆಯಿಂದ ಕೂದಲಿನ ಸುತ್ತಲು ಒಂದು ಬಲವಾದ ಕೊಂಡಿಯನ್ನು ನಿರ್ಮಿಸಿಕೊಂಡಿರುತ್ತದೆ. ಕೂದಲಿನ ಒಂದು ಮಗ್ಗಲಿನಿಂದ ಕೀಳಲು ಹೋದರೆ ಸುಲಭವಾಗಿ ಬರುವುದಿಲ್ಲ. ಕೂದಲಿನ ಸುತ್ತ ಇರುವ ಕೊಂಡಿಯನ್ನು ಕೂದಲಿನಿಂದ ಮೇಲಕ್ಕೆ ಎಳೆದು ತೆಗೆಯಬೇಕು. ಬಾಚಣಿಗೆ, ಸೀರಣಿಗೆ ಅಥವಾ ಚಿಮಟ ಉಪಯೋಗಿಸುವುದು ಒಳ್ಳೆಯದು.

ವೃದ್ಧರು, ಬಡವರು ಮತ್ತು ಮಲಿನತೆಯಿಂದ ಇರುವವರ ಮೈಯಲ್ಲಿ ಕಾಣಿಸಿಕೊಳ್ಳುವ ಹೇನುಗಳನ್ನು ಕೆಲವರು ಕೂರೆಗಳೆಂದೂ ಕರೆಯುತ್ತಾರೆ ಸಾಮಾನ್ಯವಾಗಿ ಚರ್ಮಕ್ಕಿಂತ ಹೊದೆಯುವ ಮತ್ತು ತೊಡುವ ಬಟ್ಟೆಗಳ ಒಳಭಾಗದ ಹೊಲಿಗೆಯ ಜಾಗಗಳಲ್ಲಿ ರಕ್ಷಣೆ ಪಡೆದು ಚರ್ಮವನ್ನು ಚುಚ್ಚಿ ರಕ್ತವನ್ನು ಹೀರುತ್ತದೆ. ಮೈ ಹೇನುಗಳಿಂದ ಕಡಿತ ಶುರುವಾಗಿ ಸಣ್ಣ ಸಣ್ಣ ಗುಳ್ಳೆಗಳು ಮತ್ತು ಉಗುರಿನಿಂದ ಪರಚಿದ ಗೆರೆಗಳು ಕಾಣುತ್ತವೆ. ಇಡೀ ಶರೀರಕ್ಕೆ ಕ್ರಿಮಿನಾಶಕ ಔಷಧಿಯನ್ನು ಹಚ್ಚುವುದರ ಜೊತೆಗೆ ಹೊದೆಯುವ, ಹಾಸುವ ಮತ್ತು ತೊಡುವ ಬಟ್ಟೆಗಳನ್ನು ಬಿಸಿ ನೀರಿನಲ್ಲಿ ಕುದಿಸಿ ಅಥವ ಇಸ್ತ್ರಿ ಮಾಡಿಸಿ ಹೇನುಗಳು ಸಂಪೂರ್ಣ ನಾಶವಾಗುವಂತೆ ನೋಡಿಕೊಳ್ಳಬೇಕು.

ದೊಡ್ಡವರ ಜನನಾಂಗದ ಸುತ್ತ ಮುತ್ತ ಕಾಣಿಸಿಕೊಳ್ಳುವ ಹೇನುಗಳು ತಲೆ ಹೇನುಗಳಿಗಿಂತ ನೋಡಲು ಭಿನ್ನವಾಗಿ ಅಂದರೆ ಉದ್ದಕ್ಕಿಂತ ಅಗಲ ಜಾಸ್ತಿ ಇದ್ದು ಏಡಿ ಮರಿ (ನಳ್ಳಿ) ಗಳಂತೆ ಕಾಣುತ್ತವೆ. ಸಾಮಾನ್ಯವಾಗಿ ಬೇರೆಯವರ ಜೊತೆ ಅನೈತಿಕ ಲೈಂಗಿಕ ಸಂಬಂಧದಿಂದ ವ್ಯಕ್ತಿಯಿಂದ ವ್ಯಕ್ತಿಗೆ ಹರಡುತ್ತದೆ. ಗುಪ್ತಾಂಗದ ಕೂದಲನ್ನು ಶೇವ್ ಮಾಡಿ ತೆಗೆದು ಸಂಗಾತಿಗಳಿಬ್ಬರೂ ಕ್ರಿಮಿನಾಶಕದ ದ್ರಾವಣವನ್ನು ಹಚ್ಚಿ ಹೇನುಗಳಿಂದ ಬಿಡುಗಡೆ ಹೊಂದಬಹುದು.

* * * * *

19. ಪೈತ್ಯ (ಪಿತ್ತಗಂಧೆ)



ಮನುಷ್ಯರನ್ನು ಆಗಾಗ್ಗೆ ಕಾಡುವ ಚರ್ಮದ ಉಪದ್ರವಗಳಲ್ಲಿ ಮುಖ್ಯವಾದದ್ದು ಪೈತ್ಯ ಆರ್ಥಾತ್ ಪಿತ್ತ ಗಂಧೆಗಳು, ಅರ್ಟಿಕೇರಿಯಾ ಎಂದು ಇಂಗ್ಲಿಷ್‌ನಲ್ಲಿ ಕರೆಯುವ ಪೈತ್ಯ ಮಕ್ಕಳಿಂದ ಹಿಡಿದು ವೃದ್ಧರಾದಿಯಾಗಿ ಹೆಣ್ಣು ಗಂಡು ಭೇದ ಭಾವವಿಲ್ಲದೆ ಯಾರಿಗೆ ಬೇಕಾದರೂ ಬರಬಹುದು. ಜೀವಿತದ ಕಾಲದಲ್ಲಿ ಪೈತ್ಯದ ಅನುಭವವನ್ನು ಪಡೆಯದವರು ವಿರಳ ಎನ್ನಬಹುದು.

ಪೈತ್ಯವನ್ನು ಕಾಯಿಲೆ ಎನ್ನುವುದಕ್ಕಿಂತ ಕಾಯಿಲೆಗಳಲ್ಲಿ ಅಥವ ಶರೀರಕ್ಕೆ ಸೌಖ್ಯವಿಲ್ಲದಿದ್ದಾಗ ಅಸೌಖ್ಯದ ಲಕ್ಷಣವಾಗಿ ಕಾಣಿಸಿಕೊಳ್ಳುವ ಕುರುಹು ಅಥವ ಚಿಹ್ನೆ ಎನ್ನಬಹುದು.

ಕೆಂಪೇರಿದ ಕಡಿತದಿಂದ ಕೂಡಿದ ಕ್ಷಣಿಕವಾಗಿ ಕಾಣಿಸಿಕೊಳ್ಳುವ ಚರ್ಮದ ಗುಳ್ಳೆ ಅಥವ ಮಚ್ಚೆಗಳೇ ಪೈತ್ಯ. ಕ್ಷಣಿಕ ಅಂದಾಗ ಕೆಲವಾರು ನಿಮಿಷಗಳು, ಹಲವಾರು ಗಂಟೆಗಳು ಅಥವ ಒಂದೆರಡು ದಿನಗಳು ಚರ್ಮದಲ್ಲಿ ತಳ ಊರಬಹುದು.

ಲಕ್ಷಣಗಳೇನು?

ಪೈತ್ಯದ ಗುಳ್ಳೆ ಅಥವ ಮಚ್ಚೆಗಳು ಚರ್ಮದಿಂದ ಎದ್ದು ಕಾಣುವಂತೆ ಅಗಲವಾಗಿ ಒಂದೆರಡು ಮಿಲಿ ಮೀಟರನಿಂದ ಕೆಲವೊಮ್ಮೆ ಸೆಂಟಿಮೀಟರ್‌ಗಳಷ್ಟು ವಿಸ್ತೀರ್ಣ ಉಳ್ಳದ್ದಾಗಿರಬಹುದು ಅಥವ ದೊಡ್ಡದಾದ ಹಲವಾರು ಪೈತ್ಯದ ಮಚ್ಚೆಗಳು ಒಂದಕ್ಕೊಂದು ಸೇರಿಕೊಂಡು ಭೂಗೋಳದ ಭೂಪಟದಂತೆ ಕಾಣಬಹುದು. ಕೆಲವರಲ್ಲಿ ಇಡೀ ಶರೀರವೇ ಪೈತ್ಯದ ಗುಳ್ಳೆ ಮತ್ತು ಮಚ್ಚೆಗಳಿಂದ ಆವೃತಗೊಂಡಿರಬಹುದು. ಕೆರೆತದ ಜತೆಗೆ ಬಿರಿದಂತೆ, ಚುಚ್ಚಿದಂತೆ, ಕಡಿದಂತೆ, ಉರಿದಂತೆ ಅಥವ ಜೋಮು ಹಿಡಿದಂತೆ ಭಾಸವಾಗಬಹುದು. ಅನೇಕರಲ್ಲಿ ಪೈತ್ಯ ಜಾಸ್ತಿ ಇದ್ದಾಗ ಜ್ವರದ ಜೊತೆಗೆ ನಾಡಿ ಮಿಡಿತ ಮತ್ತು ಹೃದಯದ ಬಡಿತವು ಹೆಚ್ಚುಗೊಂಡಿರಬಹುದು. ಅಲರ್ಜಿ ಇರುವವರಲ್ಲಿ ದಮ್ಮು ಸೀನು ಮತ್ತು ಹೊಟ್ಟೆ ನೋವು ಸಹ ಕಾಣಿಸಿ ಕೊಳ್ಳಬಹುದು.

ಪೈತ್ಯವು ಚರ್ಮದ ಜೊತೆಗೆ ತಳಭಾಗದ ಸಬ್‌ಕ್ಯೂಟೇನಿಯಸ್ ಅಂಗಾಂಶವನ್ನು ಆಕ್ರಮಿಸಿದಾಗ ಅಥವಾ ತುಟಿ ಮೂಗಿನ ಒಳಭಾಗ ಕಣ್ಣು ಮತ್ತು ಗಂಟಲು ಮುಂತಾದ ಮ್ಯೂಕಸ್ ಮೆಂಬ್ರೇನ್ (ಲೋಳೆಪೊರೆ) ಜಾಗಗಳನ್ನು ಆವರಿಸಿಕೊಂಡಾಗ ಆ್ಯಂಜಿಯೊಎಡಿಮ ಎಂದು ಕರೆಯುತ್ತೇವೆ. ಆ್ಯಂಜಿಯೊಎಡಿಮ ತೀಕ್ಷ್ಣವಾದ ಪೈತ್ಯದ ಲಕ್ಷಣ ಅಪಾಯಕರ ಭಾಗಗಳಲ್ಲಿ ಉಂಟಾದಾಗ ಉದಾಹರಣೆಗೆ ಗಂಟಲಿನ ವಾಯು ನಾಳದ ಸುತ್ತ ಕಾಣಿಸಿಕೊಂಡರೆ ಉಸಿರು ಕಟ್ಟಿ ಸಾವು ಸಹ ಸಂಭವಿಸುವ ಅಪಾಯ ಉಂಟು.

ಬಹುಪಾಲು ಪೈತ್ಯದ ಉದ್ಭವಕ್ಕೆ ಅಲರ್ಜಿಯೇ ಕಾರಣ. ಅಂದರೆ ದೇಹದ ಸಂಪರ್ಕ ಪಡೆದ ಯಾವುದೇ ವಸ್ತುಗಳು ಶರೀರಕ್ಕೆ ಒಗ್ಗದಿರುವುದರಿಂದ ತದ ನಂತರ ದೇಹದೊಳಗೆ ಉಂಟಾಗುವ ಅಹಿತಕರ ಪ್ರತಿಕ್ರಿಯೆಗಳ ನಿಮಿತ್ತ ಚರ್ಮದೊಳಗಿನ ರಕ್ತನಾಳಗಳಿಂದ ದ್ರವವು ಹೊರ ಬಂದು ಚರ್ಮದಲ್ಲಿ ಶೇಖರಗೊಂಡ ಕಾರಣ ಪೈತ್ಯ ಉಂಟಾಗುತ್ತದೆ. ಈ ಪ್ರತಿಕ್ರಿಯೆಯಲ್ಲಿ ಅಲರ್ಜಿ ಉಂಟಾಗಲು ಕಾರಣವಾಗುವ, ಒಗ್ಗದಿರುವ ವಸ್ತುಗಳನ್ನು ಅಲರ್ಜನ್ ಎಂದು ಕರೆಯುತ್ತೆವೆ.

ಅಲರ್ಜನ್‌ಗಳು

ಬಾಹ್ಯ ಪ್ರಪಂಚದಲ್ಲಿ ಸಾವಿರಾರು ಅಲರ್ಜನ್ ವಸ್ತುಗಳಿವೆ. ಹಲವಾರು ಹೂವಿನ ಪರಾಗಗಳು, ಫಂಗಸ್ ಮತ್ತು ಮೌಲ್ಡ್ಸ್ ಮುಂತಾದ ಅಣಬೆಗಳ

ಸ್ಪೋರ್ಸ್‌ಗಳು, ಭೂಮಿಯ ಮೇಲೆ ಬೆಳೆಯುವ ವಿವಿಧ ರೀತಿಯ ಹುಲ್ಲಿನ ಪರಾಗಗಳು, ಪ್ರಾಣಿ ಮತ್ತು ಪಶು ಪಕ್ಷಿಗಳ ಕೂದಲು ಮತ್ತು ರೆಕ್ಕೆ ಪುಕ್ಕಗಳು, ದವಸ ಧಾನ್ಯಗಳ ಬೂಸ ಮುಂತಾದ ವಸ್ತುಗಳು ಗಾಳಿ ಮತ್ತು ಧೂಳಿನ ಮೂಲಕ ದೇಹದ ಸಂಪರ್ಕ ಪಡೆದಾಗ ನಿರ್ದಿಷ್ಟ ವಸ್ತುಗಳ ಅಲರ್ಜಿ ಇರುವವರ ಚರ್ಮದಲ್ಲಿ ಪೈತ್ಯ ಉದ್ಭವಿಸುತ್ತದೆ.

ವರ್ಷದ ಎಲ್ಲಾ ಕಾಲದಲ್ಲೂ ಒಂದಲ್ಲ ಒಂದು ರೀತಿಯ ಹೂವುಗಳು ಮರ ಗಿಡಗಳಲ್ಲಿ ನಿರ್ದಿಷ್ಟ ದಿನಗಳವರೆಗೆ ಕಂಗೊಳಿಸುತ್ತಿರುತ್ತವೆ. ನಿರ್ದಿಷ್ಟ ಹೂವಿನ ಪರಾಗಗಳ ಅಲರ್ಜಿ ಇರುವವರು ಆ ಮರಗಿಡಗಳು ಹೂವು ಬಿಡುವ ಕಾಲದ ಪೂರ್ಣ ಅವಧಿಯವರೆಗೆ ಪೈತ್ಯದ ತೊಂದರೆಯಿಂದ ಬಳಲಬಹುದು. ಆ ಕಾಲದಲ್ಲಿ ಪೈತ್ಯವನ್ನು ಶಮನಕಾರಿ ಔಷಧಿಗಳಿಂದ ಶಮನಗೊಳಿಸಿಕೊಳ್ಳಬೇಕು. ಹೂವು ಬಿಡುವ ಕಾಲ ಕೊನೆಗೊಂಡಂತೆ ಪೈತ್ಯವು ಆ ವ್ಯಕ್ತಿಗಳ ಚರ್ಮದಿಂದ ತನ್ನಷ್ಟಕ್ಕೆ ತಾನೆ ನಿರ್ಗಮಿಸುತ್ತದೆ.

ಬ್ಯಾಕ್ಟೀರಿಯಾ ಫಂಗಸ್ ಮತ್ತು ವೈರಸ್ ಅಣುಜೀವಿಗಳಿಂದ ಸೋಂಕು ತಗಲಿದಾಗ ಉದಾಹರಣೆಗೆ ಕಿಡ್ನಿ ಮತ್ತು ಪಲ್ವಿಕ್ ಇನ್‌ಫೆಕ್ಷನ್, ಸೀರಮ್‌ಹೆಪಟೈಟಿಸ್ ಟಾನ್ಸಿಲೈಟಿಸ್ ಹುಳುಕು ಹಲ್ಲು ಮತ್ತು ದೇಹದ ಒಳಗೆ ಕೀವು ತುಂಬಿಕೊಳ್ಳುವುದು ಮುಂತಾದ ಸಂದರ್ಭಗಳಲ್ಲಿ ಶರೀರದೊಳಗೆ ಅಲರ್ಜಿಯುಂಟಾಗಿ ಪೈತ್ಯ ಕಾಣಿಸಿಕೊಳ್ಳುವುದನ್ನು ನಾವು ಅನೇಕ ಸಲ ನೋಡುತ್ತೇವೆ. ಕರುಳಿನೊಳಗೆ ಜಂತು ಹುಳು, ಕೊಕ್ಕೆ ಹುಳು, ಲಾಡಿ ಹುಳು ಮತ್ತು ಚಿಲುಮೆ ಹುಳು ಮುಂತಾದ ಹೆಲ್ಮಿಂತಿಕ್ಸ್ ಇನ್ವೆಸ್ಟೇಷನ್‌ಗಳಲ್ಲಿಯೂ ಸಹ ಆ ಹುಳುಗಳಿಂದ ಅಲರ್ಜಿಯುಂಟಾಗಿ ಕೆಲವರಲ್ಲಿ ಪೈತ್ಯ ಉದ್ಭವಿಸುತ್ತದೆ.

ಅನೇಕ ಕ್ಯಾನ್ಸರ್ ಕಾಯಿಲೆಗಳಲ್ಲಿಯೂ ಮುನ್ಸೂಚನೆಯಂತೆ ಕೆಲವರಲ್ಲಿ ಪೈತ್ಯ ತಲೆದೋರುತ್ತದೆ.

ಅನೇಕ ಆಹಾರ ಪದಾರ್ಥಗಳು ಬಹಳಷ್ಟು ಜನರಿಗೆ ಒಗ್ಗದೆ ಪೈತ್ಯ ಮೂಡುವುದು ಸಾಮಾನ್ಯ. ನಿರ್ದಿಷ್ಟ ಆಹಾರ ಪದಾರ್ಥಗಳ ಅಲರ್ಜಿ ಇರುವವರು ತಿನ್ನುವುದನ್ನು ನಿಲ್ಲಿಸುವುದರಿಂದ ಮಾತ್ರ ಪೈತ್ಯದಿಂದ ವಿನಾಯಿತಿ ಪಡೆಯಬಹುದು.

ಹಲವರು ಸೂರ್ಯನ ಕಿರಣ, ಬಿಸಿ ಮತ್ತು ಬಿಸಿಲಿಗೆ, ಕೆಲವರು ತಣ್ಣೀರು, ಮಂಜು ಮತ್ತು ಮಂಜು ಗಡ್ಡೆಗೆ, ಮತ್ತೆ ಕೆಲವರು ಚಳಿಗೆ ಅಲರ್ಜಿಯುಂಟಾಗಿ ಪೈತ್ಯದಿಂದ ಬಳಲುವರು ಎಂಬುದನ್ನು ತಿಳಿದರೆ ವಿಸ್ಮಯವಾಗಬಹುದು.

ಕ್ರಿಮಿ ಕೀಟಗಳಿಂದ ಒಸರುವ ವಿಷ ವಸ್ತುಗಳು ಔಷಧಗಳು, ರಾಸಾಯನಿಕ ವಸ್ತುಗಳು, ಖನಿಜ ಪದಾರ್ಥಗಳು ಸಹ ಕೆಲವರಲ್ಲಿ ಅಲರ್ಜಿಕಾರಕಗಳಾಗಿ ಪೈತ್ಯಕ್ಕೆ ಕಾರಣವಾಗಬಹುದು.

ಪೈತ್ಯದಿಂದ ಬಳಲುವ ವ್ಯಕ್ತಿಯ ಶರೀರದೊಳಗೆ ಅಥವ ಹೊರಗೆ ನಿಸರ್ಗದಲ್ಲಿ ಸಾವಿರಾರು ವಸ್ತುಗಳು ಕಾರಣಾಂತರಗಳಿಂದ ಪೈತ್ಯ ಕಾರಕಗಳಾಗಿ ಮಾರ್ಪಾಡಾಗಿ ಪೈತ್ಯ ಬರಲು ಅನುವು ಮಾಡಿಕೊಡುತ್ತವೆ.

ಆದುದರಿಂದ ಪೈತ್ಯಕ್ಕೆ ಕಾರಣಗಳನ್ನು ಪತ್ತೆ ಹಚ್ಚಿ ಶರೀರದ ಸಂಪರ್ಕದಿಂದ ದೂರಾಗಿಸುವುದರ ಮೂಲಕ ಪೈತ್ಯದ ಲಕ್ಷಣಗಳಿಂದ ಬಿಡುಗಡೆಗೊಳ್ಳಬಹುದು.

ಪೈತ್ಯ ಬಂದಾಗ ನುರಿತ ವೈದ್ಯರ ಕೂಲಂಕುಷ ತಪಾಸಣೆಯಿಂದ ದೇಹದ ಒಳಗಿರುವ ಅಸೌಖ್ಯದ ಚಿಹ್ನೆಗಳನ್ನು ಹುಡುಕಿ ಕಾಯಿಲೆಗಳನ್ನು ಪತ್ತೆಹಚ್ಚಿ ಸಂಪೂರ್ಣ ವಾಸಿ ಮಾಡುವುದು, ಸಾಧ್ಯವಾಗದಿದ್ದರೆ ತಹ ಬಂದಿಗೆ ತರುವುದರಿಂದ ಪೈತ್ಯದ ಲಕ್ಷಣವನ್ನು ಕೊನೆಗಾಣಿಸಬಹುದು.

ಕೆಲವರು ಪೈತ್ಯವನ್ನು ಈಡಿಯೋಪ್ಯಾತಿಕ್ ಅರ್ಟಿಕೇರಿಯಾ ಎಂದು ಹೆಸರಿಸಿ ಶಮನಕಾರಿ ಚಿಕಿತ್ಸೆಯಿಂದ ಶಮನಗೊಳಿಸುವುದೊಂದೇ ವೈದ್ಯರು ಕಂಡುಕೊಂಡಿರುವ ಮಾರ್ಗ.

* * * * *

20. ಎಕ್ಜಿಮಾ



ಚರ್ಮದ ರೋಗಗಳಲೆಲ್ಲಾ ಮೊದಲನೆ ಸ್ಥಾನದಲ್ಲಿರುವ ಕಾಯಿಲೆ ಎಕ್ಜಿಮಾ ಅರ್ಥಾತ್ ಡೆರ್ಮಟೈಟಿಸ್, ಈ ಕಾಯಿಲೆಯನ್ನು ಇಸಬು, ಕರವಾಣಿ, ತದ್ದು, ಕೆಸರುಹುಣ್ಣು, ನಾಗರು, ನಾಗರುಸಿಕ್ಕು, ಅರ್ಸ್ಥಿ ಮುಂತಾದ ಅಸ್ಪಷ್ಟ ಹೆಸರುಗಳಿಂದಲೂ ಕರೆಯುತ್ತಾರೆ. ಕೆಲವು ತರದ ಎಕ್ಜಿಮಾಗಳನ್ನು ಹುಳುಕಡ್ಡಿ, ಕಜ್ಜಿ, ನೀರುಹುಣ್ಣು ಎಂದು ಜನರು ತಪ್ಪಾಗಿ ಅರ್ಥೈಸುವುದೂ ಉಂಟು. ವಿಶ್ವದಾದ್ಯಂತ ಪರಿಚಯವಿರುವ ಪದಗಳಾದ ಎಕ್ಜಿಮಾ ಅಥವ ಡೆರ್ಮಟೈಟಿಸ್ ಎಂದು ಕರೆಯುವುದು ಸಮಂಜಸವಾಗಬಹುದು.

ವಿಶ್ವದಲ್ಲಿ ಸರ್ವವ್ಯಾಪಿಯಾಗಿ ಈ ಕಾಯಿಲೆಯು ಬಹಳಷ್ಟು ಜನರನ್ನು ಕಾಡುತ್ತಿದೆ. ಬಹುಪಾಲು ಜನರು ತಮ್ಮ ಜೀವಿತದ ಸಮಯದಲ್ಲಿ ಯಾವಾಗಲಾದರು ಒಂದೆರಡು ಬಾರಿಯಾದರೂ ಅನೇಕ ತೆರನಾದ ಎಕ್ಜಿಮಾ ಲಕ್ಷಣಗಳಿಂದ ಬಳಲಬಹುದು.

ಎಕ್ಜಿಮಾ ಬರಲು ಅಲರ್ಜಿ ಪ್ರಮುಖ ಪಾತ್ರ ವಹಿಸುತ್ತದೆ. ಬಾಹ್ಯ ಪ್ರಪಂಚದಲ್ಲಿರುವ ಕೆಲವು ಜೀವಿ ಮತ್ತು ನಿರ್ಜೀವಿ ವಸ್ತುಗಳು ಶರೀರದಲ್ಲಿನ ಜೀವ ಕಣಗಳ ಸಂಪರ್ಕ ಪಡೆದಾಗ, ಆ ವಸ್ತುಗಳು ಜೀವ ಕಣಗಳಿಗೆ ಒಗ್ಗದೆ ಜೀವ ಕಣಗಳಲ್ಲಿ ನಡೆಯುವ ಅಹಿತಕರ ಕ್ರಿಯೆಗಳಿಂದ ಉತ್ಪತ್ತಿಯಾಗುವ ರಾಸಾಯನಿಕ ವಸ್ತುಗಳ ಉಪ ದ್ರವಗಳಿಂದ ಉಂಟಾಗುವ ಲಕ್ಷಣಗಳನ್ನು "ಅಲರ್ಜಿ" ಎನ್ನುತ್ತೇವೆ.

ಇದೇ ರೀತಿ ಕೆಲವೊಂದು ಕಾಯಿಲೆಗಳಲ್ಲಿ ಉದಾಹರಣೆಗೆ ಟೇಪ್ ವರ್ಮ್ (ಲಾಡಿ ಹುಳು), ಹುಕ್‌ವರ್ಮ್ (ಕೊಕ್ಕೆ ಹುಳು), ಬ್ಯಾಕ್ಟೀರಿಯಾ, ಫಂಗಸ್ ಮತ್ತು ವೈರಸ್ ಮುಂತಾದ ಸೋಂಕು ಕಾಯಿಲೆಗಳಲ್ಲಿ ಕಾಯಿಲೆಗಳ ನಿಮಿತ್ತ ಕೆಲವೊಂದು ರಾಸಾಯನಿಕ ವಸ್ತುಗಳು ಶರೀರದೊಳಗೆ ಉತ್ಪತ್ತಿಯಾಗಿ ಅಲರ್ಜಿ ಕಾರಕಗಳಾಗಿ ಪರಿಣಮಿಸಿದಾಗಲೂ ಎಕ್ಜಿಮಾಗಳು ಉಂಟಾಗುತ್ತವೆ.

ಆಹಾರ ಪದಾರ್ಥಗಳಲ್ಲಿ, ಔಷಧಗಳಲ್ಲಿ ಮತ್ತು ಪರಿಸರದಲ್ಲಿ ಹಲವು ವಸ್ತುಗಳು ನಿರಂತರ ಮಾನವನ ಸಂಪರ್ಕವನ್ನು ಪಡೆಯುತ್ತಿದ್ದರೂ ಯಾವುದೇ ಅಹಿತಕರ ಪರಿಣಾಮವಾಗದೆ, ಆ ವ್ಯಕ್ತಿಗೆ ಒಗ್ಗುವಂತಹ ಪದಾರ್ಥಗಳಾಗಿರುತ್ತವೆ, ಆದರೆ ಕೆಲವು ವ್ಯಕ್ತಿಗಳಲ್ಲಿ ನಾನಾ ಕಾರಣಗಳಿಂದ ಭವಿಷ್ಯದಲ್ಲಿ ಯಾವಾಗ ಬೇಕಾದರೂ ಆ ವಸ್ತುಗಳು ಅಲರ್ಜಿಕಾರಕಗಳಾಗಿ (ಒಗ್ಗದೆ) ಬದಲಾಗಿ ಎಕ್ಜಿಮಾ ಲಕ್ಷಣಗಳು ಉದ್ಭವಿಸಬಹುದು. ಒಮ್ಮೆ ಅಲರ್ಜಿಕಾರಕಗಳಾಗಿ ಮಾರ್ಪಟ್ಟರೆ ಬಹುಪಾಲು ಜೀವನ ಪರ್ಯಂತ ಅಲರ್ಜಿ ಕಾರಕ ವಸ್ತುಗಳಾಗಿಯೆ ಮುಂದುವರೆದು ಆ ವ್ಯಕ್ತಿಯನ್ನು ಎಕ್ಜಿಮಾದಿಂದ ಕಾಡುತ್ತವೆ.

ಹೂವುಗಳಲ್ಲಿನ ಪರಾಗ, ಬೂಸ್ಟುಗಳಲ್ಲಿನ ಸ್ಪೋರ್ಸ್‌ಗಳು, ಪಶುಪಕ್ಷಿ ಮತ್ತು ಮನುಷ್ಯರೂ ಸೇರಿದಂತೆ ಪ್ರಾಣಿಗಳ ಕೂದಲು ಅಥವ ಗಿಡಗಂಟೆಗಳಲ್ಲಿನ ಯಾವುದೇ ಭಾಗ ಬೇಕಾದರೂ ಶರೀರದ ಸಂಪರ್ಕ ಪಡೆದಾಗ ಕೆಲವರಲ್ಲಿ ಒಗ್ಗದೆ ಅಲರ್ಜಿ ಶುರುವಾಗಿ ಎಕ್ಜಿಮಾ ಬರಬಹುದು.

ಹುಟ್ಟಿನಿಂದ ಸೂಕ್ಷ್ಮ ಚರ್ಮದವರು, ಅಟೋಪಿಕ್ ಅಲರ್ಜಿ, ಭೌತಿಕ ವಾತಾವರಣದ ಏರು ಪೇರುಗಳು, ದೈಹಿಕ ಮತ್ತು ಮಾನಸಿಕ ಒತ್ತಡದಲ್ಲಿನ ವ್ಯತ್ಯಾಸ ಹಾಗೂ ಅನುವಂಶಿಕತೆಯ ಲಕ್ಷಣಗಳು ಎಕ್ಜಿಮಾ ಬರಲು ಪ್ರಚೋದನೆಯನ್ನು ನೀಡುತ್ತವೆ.

ಒಮ್ಮೆ ಎಕ್ಜಿಮಾ ಶುರುವಾದ ಮೇಲೆ ನಿರಂತರ ಒಂದೆ ಸಮನಾಗಿರುವುದಿಲ್ಲ. ಕೆಲವಾರು ವರ್ಷಗಳಿಗೊಮ್ಮೆ ಕಾಣಿಸಿಕೊಂಡು ಹಲವಾರು ತಿಂಗಳು ಕಾಡಿ ತನ್ನಷ್ಟಕ್ಕೆ ತಾನೆ ಶಮನಗೊಳ್ಳಬಹುದು ಅಥವ ಪ್ರತಿ ವರ್ಷ ನಿರ್ದಿಷ್ಟವಾಗಿ ಕೆಲವಾರು ತಿಂಗಳು ಮರುಕಳಿಸುತ್ತಿರಬಹುದು. ಎಕ್ಜಿಮಾಗಳು, ಅನೇಕರಲ್ಲಿ ಕೆಲವಾರು ತಿಂಗಳು ಅಥವ ವರ್ಷಗಳು ಕಾಡಿ ಸಂಪೂರ್ಣವಾಗಿ ಮರುಕಳಿಸದೆ ಆ ವ್ಯಕ್ತಿಗಳ ಚರ್ಮದಿಂದಲೆ ಶಾಶ್ವತವಾಗಿ ಕಣ್ಮರೆಯಾಗಬಹುದು.

ಕಡಿತ, ಕೆಂಪನೆಯ ಗುಳ್ಳೆಗಳು ಅಥವಾ ನೀರುಗುಳ್ಳೆಗಳ ಲಕ್ಷಣಗಳು ಪ್ರಮುಖವಾಗಿ ಹೊಸದರಲ್ಲಿ ಕಾಣಿಸಿಕೊಳ್ಳುತ್ತವೆ. ಈ ತೆರನಾದ ಎಕ್ಜಿಮಾಗಳನ್ನು ಅಕ್ಯೂಟ್ ಎಕ್ಜಿಮಾಗಳೆನ್ನುತ್ತೇವೆ.

ಕಡಿತವನ್ನು ತಡೆಯಲಾರದೆ ಕೆರೆಯಲು ಶುರುಮಾಡಿದ ವ್ಯಕ್ತಿಗಳ ಮನಸ್ಸಿನಲ್ಲಾಗುವ ಆನಂದವನ್ನು ಅನುಭವಿಸಲು ಮತ್ತಷ್ಟು ಜೋರಾಗಿ ಕೆರೆದುಕೊಳ್ಳಲು ಶುರುಮಾಡಿ ಕೆಲವಾರು ತಿಂಗಳಲ್ಲಿ ಚರ್ಮವು ಮತ್ತಷ್ಟು ಒರಟಾಗುತ್ತದೆ. ಈ ತೆರನಾದ ಎಕ್ಜಿಮಾಗಳನ್ನು ಕ್ರಾನಿಕ್ ಎಕ್ಜಿಮಾಗಳೆನ್ನುತ್ತೇವೆ. ಕೆಲವೊಮ್ಮೆ ಕೆರೆದು ಚರ್ಮವು ಜಖಂ ಗೊಂಡಾಗ ಉಗುರಿನ ಸಂದಿಗಳ ಕೊಳೆಗಳಲ್ಲಿರುವ ಬ್ಯಾಕ್ಟೀರಿಯಾಗಳಿಂದ ಸೋಂಕು ತಗಲಿ ಕೀವು ಗುಳ್ಳೆಗಳಿಂದ ಸೆಪ್ಟಿಕ್ ಆಗಿ ಎಕ್ಜಿಮಾ ಭಾಗವು ಊತದಿಂದ ಕೂಡಿ ಜ್ವರ ಸಹ ಬರಬಹುದು. ಇಂತಹ ಎಕ್ಜಿಮಾಗಳನ್ನು ಇನ್‌ಫೆಕ್ಟಡ್ ಎಕ್ಜಿಮಾಗಳೆನ್ನುತ್ತೇವೆ.

ಚರ್ಮದ ಸೂಕ್ಷ್ಮ ಭಾಗಗಳಾದ ಮುಖ, ಹೆಗ್ಗತ್ತು, ಗದ್ದದ ತಳಭಾಗ, ಮಂಡಿಯ ಹಿಂಭಾಗ, ಕಾಲಿನ ಮುಂಭಾಗ, ಮೊಣಸಂದು ಮತ್ತು ಮಕ್ಕಳ ಕೆನ್ನೆಯ ಭಾಗಗಳಲ್ಲಿ ಹೆಚ್ಚಾಗಿ ಎಕ್ಜಿಮಾಗಳು ಕಾಣಿಸಿ ಕೊಳ್ಳುತ್ತವೆ.

ಎಕ್ಜಿಮಾಗಳು ಸೋಂಕು ರಹಿತವಾದುದರಿಂದ ಒಬ್ಬರಿಂದ ಮತ್ತೊಬ್ಬರಿಗೆ ಅಂಟಿ ಹರಡುವ ಭಯವಿರುವುದಿಲ್ಲ. ಒಮ್ಮೆ ಅಲರ್ಜಿಕಾರಕ ವಸ್ತುಗಳನ್ನು ಎಕ್ಜಿಮಾಗಳಿಂದ ಬಳಲುತ್ತಿರುವ ವ್ಯಕ್ತಿಗಳ ಸಂಪರ್ಕದಿಂದ ನಿರಂತರ ಬೇರ್ಪಡಿಸಿದರೆ ಎಕ್ಜಿಮಾಗಳಿಂದ ಸಂಪೂರ್ಣವಾಗಿ ಮುಕ್ತವಾಗಬಹುದು.

ಅಲರ್ಜಿಕಾರಕ ವಸ್ತುಗಳನ್ನು ಎಕ್ಜಿಮಾಗಳಿಂದ ಬಳಲುತ್ತಿರುವ ವ್ಯಕ್ತಿಗಳೆ ಪತ್ತೆ, ಹಚ್ಚಬೇಕು. ಔಷಧಗಳನ್ನು ಸೇವಿಸುವಾಗ, ಆಹಾರ ಪದಾರ್ಥಗಳನ್ನು ತಿನ್ನುವಾಗ, ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಹೋದಾಗ ಆಗುವ ಬದಲಾವಣೆಗಳನ್ನು ಗಮನಿಸಿ ತಮಗೆ ಒಗ್ಗದ ವಸ್ತುಗಳನ್ನು ತಮ್ಮ ದಿನಚರಿಯಲ್ಲಿ ಕಂಡುಕೊಂಡು ಒಗ್ಗದ ವಸ್ತುಗಳ ತ್ಯಾಜ್ಯದ ಮಾತ್ರದಿಂದಲೆ ಎಕ್ಜಿಮಾಗಳಿಂದ ಬಿಡುಗಡೆಯಾಗಬಹುದು.

ಎಕ್ಜಿಮಾಗಳಿಂದ ಬಳಲುತ್ತಿರುವ ವ್ಯಕ್ತಿಗಳ ಚರ್ಮದೊಳಗೆ ಇಂಜೆಕ್ಷನ್ ಮೂಲಕ ಒಗ್ಗದ ವಸ್ತುಗಳನ್ನು ಪರೀಕ್ಷಾರ್ಥ ಚುಚ್ಚಿ ಪ್ಯಾಚ್‌ಟೆಸ್ಟ್ ಎಂಬ ವಿಧಾನದಿಂದ ವೈದ್ಯರು ಒಗ್ಗದ ವಸ್ತುಗಳನ್ನು ಕಂಡು ಹಿಡಿದು ಚಿಕಿತ್ಸೆ ಮತ್ತು ಸಲಹೆಯನ್ನು ನೀಡುವುದುಂಟು.

ಎಕ್ಜಿಮಾ ವ್ಯಕ್ತಿಗಳು ಕೆರೆದುಕೊಳ್ಳುವುದನ್ನು ನಿಲ್ಲಿಸಿ ಚರ್ಮ ಘಾಸಿಗೊಳ್ಳದಂತೆ ತಡೆಯಬೇಕು. ಕಡಿತ ಶಮನಗೊಳ್ಳಲು ಆಂಟಿಹಿಸ್ಟಮಿನ್ ಮಾತ್ರೆಗಳನ್ನು ವೈದ್ಯರ ಸಲಹೆ ಮೇರೆಗೆ ತೆಗೆದುಕೊಳ್ಳುತ್ತಿರಬೇಕು. ಚರ್ಮವು ಒರಟಾಗುತ್ತಿದ್ದರೆ ಅಥವ ಕಡಿತ ತಡೆಯಲು ಸಾಧ್ಯವಾಗದಿದ್ದರೆ ಮಾತ್ರೆಗಳ

ಜೊತೆಗೆ ಸ್ಟೀರ್ರ್ಯಾಡ್ ಮುಲಾಮುಗಳನ್ನು ಪ್ರತಿ ದಿನ ಒಂದೆರಡು ಸಾರಿ ಸವರಿ ಎಕ್ಸಿಮಾಗಳನ್ನು ತಹಬಂದಿಗೆ ತಂದು ಸ್ಟೀರ್ರ್ಯಾಡ್ ಮುಲಾಮುಗಳನ್ನು ನಿಲ್ಲಿಸಬೇಕು.

ಕೆಲವೊಮ್ಮೆ ಸೃಷ್ಟಿಯ ವೈಪರೀತ್ಯದಿಂದ ಅಥವ ಅನುವಂಶಿಕ ಏರುಪೇರುಗಳಿಂದ ಕೆಲವು ವ್ಯಕ್ತಿಗಳಲ್ಲಿ ತೀವ್ರರೀತಿಯ ಎಕ್ಸಿಮಾಗಳು ಮೈಯಲ್ಲಾ ಆವರಿಸಿ ಸಮಸ್ಯಾತ್ಮಕವಾಗಿ ಜೀವಕ್ಕೆ ಅಪಾಯ ಒದಗುವ ಸಂಭವವುಂಟು. ಅಂತಹ ಸಂದರ್ಭಗಳಲ್ಲಿ ವೈದ್ಯರ ಸಲಹೆ ಮೇರೆಗೆ ಚಿಕಿತ್ಸೆಯನ್ನು ತೆಗೆದುಕೊಂಡು ಜೀವನ ಸಾಗಿಸಬೇಕು.

* * * * *

21. ಸೌಂದರ್ಯವರ್ಧಕಗಳು ಎಷ್ಟು ಸುರಕ್ಷಿತ?



ಚರ್ಮ ಹೂವಿನಂತೆ ಬಹು ಸೂಕ್ಷ್ಮ. ಅತಿಯಾದ ಬಿಸಿಲು, ಮಳೆ, ಗಾಳಿ, ಧೂಳನ್ನು ತಡೆಯುವುದು ಚರ್ಮಕ್ಕೆ ತುಸು ತ್ರಾಸದಾಯಕ. ಚರ್ಮದ ರಕ್ಷಣೆ ಮತ್ತು ಪೋಷಣೆಯನ್ನು ಮಾಡಿಕೊಳ್ಳದಿದ್ದರೆ ಚರ್ಮದ ನಾನಾ ತೊಂದರೆಗಳಿಗೆ ಸಿಲುಕಬಹುದು ಅಥವ ಸೌಂದರ್ಯಕ್ಕೆ ಕುಂದಾಗಬಹುದು. ವ್ಯಾಯಾಮ ಮಾಡುವುದು; ಕುರೂಪಕ್ಕೆ ಕಾರಣವಾದ ಅನುವಂಶಿಕ ಕಾರಣಗಳ ನಿವಾರಣಾ ಉಪಾಯಗಳು; ಪರಿಸರದ ಮತ್ತು ಆಹಾರದ ಸೇವನೆಯ ಸಮತೋಲನ ಕಾಪಾಡುವುದು; ಸೋಂಕು ರಹಿತ ಜೀವನ ಮತ್ತು ದುರಭ್ಯಾಸಗಳಿಂದ ಮುಕ್ತವಾದ ವ್ಯಕ್ತಿತ್ವ ಚರ್ಮದ ಆರೋಗ್ಯಕ್ಕೆ ಶಕ್ತಿವರ್ಧಕಗಳು.

ಆರೋಗ್ಯ ಭಾಗ್ಯ ಚರ್ಮದಲ್ಲಿ ಕನ್ನಡಿಯಂತೆ ಪ್ರತಿ ಬಿಂಬಿಸುತ್ತದೆ. ಆದ್ದರಿಂದ ರೋಗರಹಿತ ಶಿಸ್ತಿನ ಜೀವನ ಪ್ರಕೃತಿದತ್ತ ನೈಜ ಚರ್ಮದ ಅಂದಕ್ಕೆ ಮೆರಗು ಕೊಡುತ್ತದೆ. ಈ ಸಹಜ ರೂಪಿಗೆ ಒತ್ತಾಸೆಯಾಗಿ ಮಾತ್ರ ಸೌಂದರ್ಯವರ್ಧಕಗಳು ಉಪಯೋಗಕ್ಕೆ ಬರುತ್ತವೆ.

ಕೃತಕ ಸೌಂದರ್ಯವರ್ಧಕಗಳನ್ನು ಮೂರು ಭಾಗಗಳನ್ನಾಗಿ ವಿಂಗಡಿಸಬಹುದು. (1) ಉಡುಪುಗಳು (2) ಆಭರಣಗಳು ಮತ್ತು (3) ಸೌಂದರ್ಯ ಮಿಶ್ರಣಗಳು ಅರ್ಥಾತ್ ಕಾಸ್ಮೆಟಿಕ್ಸ್‌ಗಳು. ಬಗೆ ಬಗೆಯ ಕ್ರೀಮ್‌ಗಳು,

ಪೌಡರ್‌ಗಳು, ಸ್ನೋ, ಲಿಪ್‌ಸ್ಟಿಕ್, ಲಿಪ್‌ಗ್ಲೋಸ್, ಉಗುರು ಪಾಲಿಶ್, ಕಣ್ಣು ಕಪ್ಪು, ಕೂದಲಿನ ಬಣ್ಣಗಳು, ಎಣ್ಣೆಗಳು, ಸ್ಟಿಕರ್ಸ್ ಶೃಂಗಾರವರ್ಧಕಗಳಲ್ಲಿ ಕೆಲವು ಮಾತ್ರ. ಹೀಗೆ ಬಳಸುವ ಎಲ್ಲಾ ಶೃಂಗಾರವರ್ಧಕಗಳಲ್ಲಿ ಅಧಿಕವಾಗಿರುವ ಅನೇಕ ರಾಸಾಯನಿಕ ವಸ್ತುಗಳಲ್ಲಿ ಮುಖ್ಯವಾದವು ಸುಗಂಧ ದ್ರವ್ಯಗಳು, ಕೆಡದಂತಿಡಲು ಬಳಸುವ ರಕ್ಷಣಾ ಸಾಧನಗಳು ಅಥವ ಪ್ರಿಸರ್ವೇಟಿವ್ಸ್, ಒಂದುಗೂಡಿಸುವಂತಹ ಎಮಲ್ಸಿಫೈಯರ್ಸ್, ಸ್ಟೆಬೆಲೈಸರ್ಸ್, ಸ್ಪಿರಿಟ್, ಕೊಬ್ಬು, ಆಲ್ಕೋಹಾಲ್ ಮತ್ತು ಎಣ್ಣೆಗಳು.

ಈ ಶೃಂಗಾರವರ್ಧಕಗಳಲ್ಲಿ ಅಡಕವಾಗಿರುವ ಬಗೆ ಬಗೆಯ ರಾಸಾಯನಿಕ ವಸ್ತುಗಳಲ್ಲಿ ಕೆಲವು ಅನೇಕರಲ್ಲಿ ಚರ್ಮಕ್ಕೆ ಅಥವ ದೇಹಕ್ಕೆ ವಿವಿಧ ರೀತಿಯ ಕೆಡಕನ್ನು ಉಂಟು ಮಾಡುತ್ತದೆ. ಚರ್ಮ, ಕೂದಲು ಉಗುರು ಮತ್ತು ಹಲ್ಲುಗಳನ್ನು ಶುಚಿಯಾಗಿ, ಕಾಂತಿಯುತವಾಗಿ, ಸುವಾಸನಾ ಯುತವಾಗಿ ಮತ್ತು ಅಂದವಾಗಿ ಕಾಣಲು ಸೌಂದರ್ಯವರ್ಧಕಗಳನ್ನು ಬಳಸುತ್ತೇವೆ. ಅತಿಯಾಗಿ ಶೃಂಗಾರ ಸಾಧನಗಳನ್ನು ಬಳಸಿದರೆ, ಮೊಡವೆಗಳು ಬರಬಹುದು, ಚರ್ಮ ಬಿಳಿಯಾಗಬಹುದು ಅಥವ ಕಪ್ಪಾಗಬಹುದು, ಪಿತ್ತದ ಗುಳ್ಳೆಗಳು, ಸನ್‌ಬರ್ನ್ ಅಥವ ಇಸುಬು ಕಾಣಿಸಿಕೊಳ್ಳಬಹುದು. ಸೌಂದರ್ಯವರ್ಧಕಗಳನ್ನು ಬಳಸುವವರಲ್ಲಿ ಕಾಣಬರುವ ಅಹಿತಕರ ಪರಿಣಾಮಗಳಲ್ಲಿ ಸಾಮಾನ್ಯವಾದದ್ದೆಂದರೆ ಅಲರ್ಜಿ. ಅಲರ್ಜಿ ಎಂದರೆ ಒಗ್ಗದಿರುವುದು. ಅಂದರೆ ಯಾವುದೇ ಒಂದು ವಸ್ತು ದೇಹದೊಳಗಿನ ಅಥವ ದೇಹದ ಮೇಲಿನ ಚರ್ಮದ ಸಂಪರ್ಕವನ್ನು ನಿರಂತರ ಪಡೆಯುತ್ತಿದ್ದರೆ, ಆ ವ್ಯಕ್ತಿಗೆ ಯಾವಾಗಲಾದರೂ ಆ ವಸ್ತುವಿನಿಂದ ಅಹಿತಕರ ಪ್ರತಿಕ್ರಿಯೆ ಉಂಟಾಗುತ್ತದೆ.ಅಂತಹ ಅಹಿತಕರ ಪ್ರತಿಕ್ರಿಯೆಯನ್ನು ಅಲರ್ಜಿ ಎನ್ನುತ್ತೇವೆ. ಚರ್ಮದ ಮೇಲೆ ಉಂಟಾಗುವ ಅಲರ್ಜಿಯನ್ನು ಡರ್ಮಟೈಟಿಸ್ ಎನ್ನುತ್ತಾರೆ.

ಅಲರ್ಜಿ ಇರುವವರಲ್ಲಿ ಅಂದರೆ ದಮ್ಮು, ಸೀನು, ಕಡಿತ ಅಥವ ಪಿತ್ತ ಕಾಣಿಸಿಕೊಳ್ಳುವವರಲ್ಲಿ ಅಥವ ಅಲರ್ಜಿ ಇತಿಹಾಸವುಳ್ಳ ಕುಟುಂಬದವರಲ್ಲಿ ಚರ್ಮದ ಅಲರ್ಜಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ಕೂದಲಿಗೆ ಬಳಸುವ ಬಣ್ಣಗಳು ಸೇರಿದಂತೆ ವಿವಿಧ ಬಗೆಯ ಸೌಂದರ್ಯವರ್ಧಕಗಳಲ್ಲಿ ಅಡಕವಾಗಿರುವ ಮಿಥೈಲ್ ಪ್ಯಾರಾಬೆನ್, ಇಥೈಲ್ ಪ್ಯಾರಾಬೆನ್, ಕೋಲೋಪೋನಿ, ಬಾಲಸಮ್ ಪೆರು, ಬೇಸವ್ಯಾಕ್ಸ್, ಸಿಂಧೂರ್‌ನಲ್ಲಿರುವ ಆಲ್ಕಲಿ, ಉಡುಪುಗಳಲ್ಲಿರುವ ಬಣ್ಣಗಳು, ಡೈಕ್ರೋಮೇಟ್ ಮುಂತಾದ ರಾಸಾಯನಿಕಗಳು ಚರ್ಮದ ಆಲರ್ಜಿ ಉಂಟು ಮಾಡಬಹುದು.

ಆಭರಣಗಳಲ್ಲಿರುವ ತಾಮ್ರ, ಅಲ್ಯೂಮಿನಿಯಂ, ಮರ್ಕ್ಯೂರಿ, ಕಬ್ಬಿಣ, ಕ್ರೋಮೇಟ್ ಮತ್ತು ಕೊಬಾಲ್ಟ್‌ಗಳು ಅಲರ್ಜಿಗೆ ಕಾರಣವಾಗಬಹುದು. ಚಿನ್ನ ಅಪರೂಪವಾಗಿ ಅಲರ್ಜಿಯನ್ನುಂಟು ಮಾಡಿದರೆ ಚಿನ್ನಕ್ಕೆ ಸೇರಿಸುವ ನಿಕ್ಕಲ್ (ತವರ) ನಿಂದ ಸಾಮಾನ್ಯವಾಗಿ ಅಲರ್ಜಿ ಉಂಟಾಗುತ್ತದೆ.


ಸಾಮಾನ್ಯವಾಗಿ ಸೌಂದರ್ಯವರ್ಧಕಗಳಲ್ಲಿರುವ ರಾಸಾಯನಿಕ ವಸ್ತುಗಳು ತಗುಲುವ ಚರ್ಮದ ಭಾಗಗಳಲ್ಲಿ ಕಡಿತ, ಉರಿ, ಕೆಂಪಾಗುವುದು, ಗುಳ್ಳೆಗಳು, ನೀರು ಗುಳ್ಳೆಗಳು, ಬೊಕ್ಕೆಗಳು ಮುಂತಾದ ಲಕ್ಷಣಗಳು ಕಾಣಿಸಿಕೊಳ್ಳಬಹುದು. ಅಪರೂಪವಾಗಿ ಅಲರ್ಜಿ ಲಕ್ಷಣಗಳು ದೇಹದ ಇತರ ಭಾಗಕ್ಕೂ ಆವರಿಸಿಕೊಳ್ಳಬಹುದು ಅಥವ ದೇಹದ ಇತರ ಅಂಗಾಂಗಗಳನ್ನು ಕಾಡಿ ಜೀವಕ್ಕೆ ಅಪಾಯವನ್ನುಂಟು ಮಾಡಬಹುದು. ಅರಿಸಿನ ಪುಡಿಯಿಂದ ಕುಂಕುಮ ತಯಾರಿಸುವುದು ಎಲ್ಲರಿಗೂ ಗೊತ್ತು. ಆದರೆ ಅರಿಸಿನ ಪುಡಿಯ ಜೊತೆ ಸೇರಿಸುವ ರಾಸಾಯನಿಕಗಳು ಅಲರ್ಜಿಗೆ ಕಾರಣವಾಗುವುದರಿಂದ ಕುಂಕುಮವನ್ನು ಉಪಯೋಗಿಸುವ ಅನೇಕ ವ್ಯಕ್ತಿಗಳಲ್ಲಿ ಅಲರ್ಜಿ ಕಾಣಿಸಿಕೊಳ್ಳುತ್ತದೆ. ಹಾಗೆಯೇ ಸ್ಟಿಕರ್ಸ್‌ಗೆ ಅಲರ್ಜಿ ಸಾಮಾನ್ಯ.

ಕೆಲವರಲ್ಲಿ ಸೌಂದರ್ಯ ಮಿಶ್ರಣಗಳು ಚರ್ಮದ ಮೇಲಿದ್ದಾಗ ಯಾವ ಅಲರ್ಜಿಯನ್ನು ಉಂಟು ಮಾಡದಿದ್ದರೂ ಚರ್ಮದ ಮೇಲಿದ್ದಾಗ ಸೂರ್ಯನ ಕಿರಣಗಳು ಬಿದ್ದರೆ ಅಲರ್ಜಿ ಕಾಣಿಸಿ ಕೊಳ್ಳಬಹುದು.

ಅಲರ್ಜಿಯನ್ನುಂಟು ಮಾಡಿದ ಸೌಂದರ್ಯವರ್ಧಕಗಳನ್ನು ಬಿಟ್ಟುಬಿಡಿ. ಬದಲಿ ರಾಸಾಯನಿಕ ವಸ್ತುವಿನಿಂದ ಕೂಡಿದ ಸೌಂದರ್ಯವರ್ಧಕಗಳು ಲಭ್ಯವಿದ್ದರೆ ಪ್ರಾಯೋಗಿಕವಾಗಿ ಬಳಸಿ ಅಲರ್ಜಿ ಬರದಿದ್ದರೆ ಅವನ್ನು ಬಳಸಬಹುದು. ಪ್ರಾಯೋಗಿಕವಾಗಿ ಸ್ವಲ್ಪ ವಸ್ತುವನ್ನು ತೊಡೆಯ ಒಳಭಾಗ ಅಥವ ತೋಳಿನ ಒಳಭಾಗದ ಚರ್ಮದ ಮೇಲೆ ಒಂದು ಸೆಂ.ಮೀ. ಸುತ್ತಳತೆಯಷ್ಟು ಸವರಿ ಒಣಗಲು ಬಿಟ್ಟು 48 ಘಂಟೆ ನಂತರ ಯಾವ ಲಕ್ಷಣ ಸವರಿದ ಜಾಗದಲ್ಲಿ ಉಂಟಾಗದಿದ್ದರೆ ಅಲರ್ಜಿ ಇಲ್ಲ ಎಂದು ತಿಳಿದು ಕೊಳ್ಳಬೇಕು. ಸೌಂದರ್ಯವರ್ಧಕಗಳ ಅಲರ್ಜಿಯಿಂದ ಚರ್ಮವು ಘಾಸಿಗೊಂಡರೆ ತಕ್ಷಣ ತಜ್ಞ ವೈದ್ಯರನ್ನು ಕಂಡು ಪರಿಹಾರವನ್ನು ಕಂಡುಕೊಳ್ಳಬೇಕು.

* * * * *

22. ಮೊಡವೆ (ಅಕ್ನೆವೊಲ್ಗ್ಯಾರಿಸ್)



ಡಾಕ್ಟ್ರೆ, "ನನ್ಗೆ 35 ವರ್ಷ, ಮೊದಲು ನನ್ನ ಮುಖ ಬಹಳ ಚೆನ್ನಾಗಿತ್ತು ಆಮೇಲೆ ಮೊಡವೆ ಬಂದು ಕಪ್ಪು ಕಲೆ ಮತ್ತು ಗಂಟುಗಳು ಉಳಿದುಕೊಂಡು ಮುಖ ಬಹಳ ಹಾಳಾಗಿದೆ. ಯಾರು ನೋಡಿದ್ರೂ ಇದೇನು ಮುಖದಲ್ಲಿ? ಎನ್ನುತ್ತಾರೆ. ಸ್ವಲ್ಪ ದಿನ ವೈದ್ಯರಿಗೆ ತೋರಿಸಿದ್ದೆ. ಆ ನಂತರ ಮೊಡವೆಗಳಿಗೆ ಇಂಗ್ಲಿಷ್ ಔಷಧಿ ಇಲ್ಲ ಎಂದು ಯಾರೋ ಹೇಳಿದ್ದರಿಂದ ಪಂಡಿತರ ಔಷಧಿ, ಹೋಮಿಯೋಪತಿ, ಹೀಗೆ ನೂರಾರು ತರಹ ಔಷಧಿ ಮಾಡಿ ಹಣ ಕಳೆದುಕೊಂಡರೂ ಪ್ರಯೋಜನವಾಗಲಿಲ್ಲ. ಮನಸ್ಸಿಗೆ ನೆಮ್ಮದಿ ಇಲ್ಲ", ಇದು ಒಬ್ಬ ಹೆಣ್ಣು ಮಗಳ ಗೋಳಾಟ. ಹೀಗೆ ಮುಖ ಅಂದಗೆಟ್ಟು ನನ್ನ ಹತ್ತಿರ ಬರುವ 20 ರಿಂದ 35 ವರ್ಷದ ಬಹಳಷ್ಟು ವ್ಯಕ್ತಿಗಳು ಚಿಕ್ಕಂದಿನಲ್ಲಿ ಮೊಡವೆಗಳನ್ನು ತಜ್ಞರ ಸಲಹೆಯಂತೆ ಹತೋಟಿಗೆ ತರದೆ, ಮೊಡವೆಗಳನ್ನು ಉಪದ್ರವಕಾರಿಗಳಾಗಲು ಬಿಟ್ಟು, ಕಲೆ ಮತ್ತು ಗಂಟುಗಳು ಶಾಶ್ವತವಾಗಿ ಉಳಿದುಕೊಂಡ ಮೇಲೆ ಕೊನೆಯಲ್ಲಿ ಏನಾದರೂ ಆಗಲಿ ಎಷ್ಟು ಖರ್ಚಾದರೂ ಸರಿ ನನ್ನ ಮುಖವನ್ನು ಸರಿ ಮಾಡಿಕೊಡಿ ಎಂದು ಅಂಗಲಾಚುವವರೆ?

ಶೇಕಡಾ 85 ರಷ್ಟು ಜನ ಹದಿಹರೆಯದವರ ದೇಹದ ಒಂದು ಅವಿಭಾಜ್ಯ ಅಂಗ ಎಂಬಂತಿದೆ ಮೊಡವೆ. ಹೆಣ್ಣು ಗಂಡು ಎಂಬ ಭೇದ ಭಾವವಿಲ್ಲದೆ

ಸಾಮಾನ್ಯವಾಗಿ 13 ವರ್ಷದಲ್ಲಿ ಶುರುವಾಗಿ 19 ವರ್ಷ ಹತ್ತಿರವಾಗುತ್ತಿದ್ದಂತೆ ಕಡಿಮೆಯಾಗುತ್ತಾ ಅನಂತರ ಅಪರೂಪವಾಗುವ ಅಕ್ನೆವೊಲ್ಯಾರಿಸ್ (ಮೊಡವೆ) ಉಂಟಾಗಲು ನಿಖರವಾದ ಕಾರಣ ಅಸ್ಪಷ್ಟ. ಕೆಲವು ವ್ಯಕ್ತಿಗಳಲ್ಲಿ 13 ವರ್ಷಕ್ಕೆ ಬದಲು ನಿಧಾನವಾಗಿ ಶುರುವಾಗಿ 20 ವರ್ಷಗಳ ಅನಂತರವೂ ಮೊಡವೆಗಳು ಮುಂದುವರಿಯುತ್ತವೆ. 16 ರಿಂದ 17 ವರ್ಷದ ಗಂಡುಗಳಲ್ಲಿ ಮತ್ತು 15 ರಿಂದ 16 ವರ್ಷದ ಹೆಣ್ಣುಗಳಲ್ಲಿ ಮೊಡವೆಗಳು ಉಚ್ಛ್ರಾಯ ಸ್ಥಿತಿಯಲ್ಲಿರುತ್ತವೆ. ಹೆಂಗಸರಿಗಿಂತಲೂ ಗಂಡಸರಲ್ಲಿ ಮೊಡವೆಗಳ ಭೀಕರತೆ ಸ್ವಲ್ಪ ಹೆಚ್ಚು. ಮಕ್ಕಳು ಹುಟ್ಟಿದ ಆರು ತಿಂಗಳ ಒಳಗೆ ತಾಯಿಯ ಹಾರ್ಮೋನುಗಳ ಪ್ರಭಾವದಿಂದ ಮೊಡವೆಗಳು ಕಾಣಿಸಿಕೊಳ್ಳಬಹುದು. ಅನುವಂಶಿಕವಾಗಿಯೂ ಅಂದರೆ ಮೊಡವೆಗಳ ಇತಿಹಾಸವಿದ್ದ ಕುಟುಂಬದಲ್ಲಿ ಸುಮಾರು ಶೇಕಡ ಐವತ್ತು ಭಾಗದಷ್ಟು ಮಕ್ಕಳು ಅವರ ಪ್ರಾಪ್ತ ವಯಸ್ಸಿನಲ್ಲಿ ಮೊಡವೆಗಳ ಕಾಟಕ್ಕೆ ಸಿಲುಕಬಹುದು. ಕೆಲವರಲ್ಲಿ ಮೊಡವೆಗಳು ಚಳಿಗಾಲದಲ್ಲಿ ಜಾಸ್ತಿಯಾಗಬಹುದು. ಸ್ತ್ರೀಯರಲ್ಲಿ ತಿಂಗಳ ಮುಟ್ಟು ಹತ್ತಿರವಾಗುತ್ತಿದ್ದಂತೆ ಹೆಚ್ಚಾಗಬಹುದು.

ಕಾರಣಗಳೇನು?

ಮುಖ, ತೋಳು, ಭುಜ ಹಾಗೂ ಎದೆಯ ಮುಂದೆ ಮತ್ತು ಹಿಂದೆ ಕಾಣಿಸಿಕೊಳ್ಳುವ ಮೊಡವೆಗಳು ಮೊದಲಿಗೆ ಮುಖದಲ್ಲಿ ಆರಂಭವಾಗುತ್ತವೆ. ಕೆಲವರಲ್ಲಿ ಮುಖದಲ್ಲಿ ಕಡಿಮೆಯಾಗುತ್ತಿದ್ದಂತೆ ಕ್ರಮೇಣ ಇನ್ನಿತರ ಸ್ಥಳಗಳಲ್ಲಿ ಶುರುವಾಗುತ್ತವೆ. ಅಪರೂಪವಾಗಿ ಹೆಂಗಸರಿಗಿಂತ ಕೆಲವು ಗಂಡಸರಲ್ಲಿ ಗಂಟು ಮತ್ತು ಕುರುಗಳ ಸಹಿತ ಮೊಡವೆಗಳು ಅತಿ ಪ್ರಮಾಣದಲ್ಲಿ ಮಾಮೂಲಿ ಜಾಗದ ಜತೆಗೆ ಕುತ್ತಿಗೆ, ಕುಂಡಿ ಮತ್ತು ತೊಡೆಗಳಲ್ಲಿಯೂ ಕಾಣಿಸಿಕೊಂಡು ವಯಸ್ಸಾದರೂ ಕಾಡುತ್ತಿರುತ್ತವೆ. ಮೂವತ್ತು ಮತ್ತು ನಲ್ವತ್ತು ವರ್ಷಗಳಲ್ಲಿ ಮೊಡವೆಗಳು ಬರುವುದೇ ವಿರಳ. ಈ ವಯಸ್ಸಿನ ಬಹಳಷ್ಟು ವ್ಯಕ್ತಿಗಳಲ್ಲಿ ಕಾಣಿಸಿ ಕೊಳ್ಳುವ ಗುಳ್ಳೆಗಳು ಸಾಮಾನ್ಯವಾಗಿ ಮೊಡವೆಗಳಿಗಿಂತ ಇನ್ನಿತರ ಕಾರಣಗಳಿಂದ ಬರುವುದೇ ಹೆಚ್ಚು.

ಪ್ರಕೃತಿದತ್ತ ಸಹಜ ಕ್ರಿಯೆಯಾಗಿ ಪ್ರಾಯಕ್ಕೆ ಬಂದ ವ್ಯಕ್ತಿಗಳ ಒಳಚರ್ಮ (ಡರ್ಮಿಸ್) ದಲ್ಲೆಲ್ಲಾ ಅಂಗೈ ಮತ್ತು ಅಂಗಾಲನ್ನು ಹೊರತುಪಡಿಸಿ, ಕೂದಲಿನ ಚೀಲದ (ಹೇರ್‌ಫಾಲಿಕಲ್) ಜತೆಯಲ್ಲಿಯೇ ಸೆಬೇಶಿಯಸ್ ಗ್ಲ್ಯಾಂಡ್ಸ್ ಅರ್ಥಾತ್ ಜಿಡ್ಡಿನ ಗ್ರಂಥಿಗಳು ಹಾರ್ಮೋನುಗಳ ಪ್ರಭಾವದಿಂದ ವಿಪುಲವಾಗಿ ಬೆಳವಣಿಗೆಗೊಂಡು ಉತ್ಪತ್ತಿ ಮಾಡಿದ ಸೆಬಮ್ ಅಂದರೆ ಜಿಡ್ಡು ತಮ್ಮ ಗ್ರಂಥಿಗಳ ನಾಳದ ಮೂಲಕ ಕೂದಲು ನಾಳವನ್ನು ಸೇರಿ, ಅಲ್ಲಿಂದ ಚರ್ಮದ ಹೊರಕ್ಕೆ

ಬಂದು ಚರ್ಮವನ್ನು ಚಿಗುಟಾಗಿ ಇಡುವುದರಿಂದ ಚರ್ಮವು ಮೃದುವಾಗಿರುತ್ತದೆ ಸಬೇಶಿಯಸ್ ಗ್ರಂಥಿಗಳು ಮುಖ ಎದೆ, ತಲೆ, ತೊಡೆಯ ಸಂದು ಗುಪ್ತಾಂಗ, ಮಲದ್ವಾರದ ಸುತ್ತ ಮತ್ತು ಕಂಕುಳುಗಳಲ್ಲಿ ಹೇರಳವಾಗಿರುತ್ತವೆ.

ಪ್ರಾಪ್ತ ವಯಸ್ಸಿನಲ್ಲಿ ಆ್ಯಂಡ್ರೋಜನ್ ಎಂಬ ಹಾರ್ಮೋನ್‌ನ ಪ್ರಭಾವದಿಂದ ಸಬೇಶಿಯಸ್ ಗ್ರಂಥಿಗಳಲ್ಲಿ ಸೆಬಮ್ ಪ್ರಮಾಣ ಅತಿಯಾಗಿ ಉತ್ಪತ್ತಿಯಾಗುವುದು ಮತ್ತು ಸೆಬಮ್ ಚರ್ಮದಿಂದ ಹೊರಕ್ಕೆ ಬರಲು ಇರುವ ನಾಳದ ದಾರಿಯ ಮಧ್ಯದಲ್ಲಿ ಎಲ್ಲಿಯಾದರೂ ಪಿ–ಅಕ್ನೆ ಮುಂತಾದ ಬ್ಯಾಕ್ಟೀರಿಯಾಗಳು ಇದ್ದಾಗ ಅವು ಶರವೇಗದಲ್ಲಿ ವೃದ್ಧಿಸಿ, ಸೆಬಮ್‌ನೊಡನೆ ಉಂಟುಮಾಡುವ ರಾಸಾಯನಿಕ ಕ್ರಿಯೆಯಲ್ಲಿ ಬಿಡುಗಡೆಯಾಗುವ ಫ್ರೀ ಫ್ಯಾಟೀ ಆಸಿಡ್‌ನ ಪ್ರಭಾವದಿಂದ ಕೂದಲು ನಾಳದ ಒಳಭಾಗವು ಸಂಕುಚಿತಗೊಂಡು ಸೆಬಮ್ ಹೊರ ಹೋಗಲು ಅಡಚಣೆಯಾಗಿ, ಚರ್ಮದಲ್ಲಿಯೇ ಶೇಖರಗೊಂಡು, ಒಳಗೆ ಒತ್ತಡ ಹೆಚ್ಚಿ ಕೂದಲುನಾಳ ಮತ್ತು ಅದರ ಸುತ್ತ ಇರುವ ಕೂದಲು ಚೀಲವು ಒಡೆದು ಜಖಂಗೊಂಡ ಅನಂತರ ಅದನ್ನು ನಿರೋಧಿಸಲು ಅಲ್ಲಿಗೆ ಲಗ್ಗೆ ಇಡುವ ದೇಹದಲ್ಲಿರುವ ವಿವಿಧ ರಾಸಾಯನಿಕ ವಸ್ತುಗಳು ಮತ್ತು ಜೀವ ಕಣಗಳಿಂದ ಉಂಟಾದ ಬದಲಾವಣೆಗಳನ್ನೇ ನಾವೆಲ್ಲರೂ ಮೊಡವೆಗಳ ಆರಂಭದಿಂದ ಕೊನೆಯವರೆಗಿನ ವಿವಿಧ ಹಂತಗಳಲ್ಲಿ ನೋಡುತ್ತೇವೆ.

ಸಂಕುಚಿತಗೊಂಡ ಕೂದಲು ನಾಳವು ಪೂರ್ಣ ಮುಚ್ಚಿಕೊಳ್ಳದಿದ್ದಾಗ ಒಳಗಿನ ಅಂಶವು ಹೊರಬಂದು ಒಣಗಿ, ದ್ವಾರದಲ್ಲಿ ಕಪ್ಪು ಮುಸುರೆಯಂತೆ ಉಳಿದುಕೊಂಡಿರುತ್ತದೆ. ಇದನ್ನೇ ಬ್ಲ್ಯಾಕ್‌ಹೆಡ್ ಎಂದು ಕರೆಯುತ್ತೇವೆ. ಮೆಲ್ಯಾನಿನ ಪಿಗ್‌ಮೆಂಟ್ ಮಿಶ್ರಣಗೊಂಡಿರುವುದೇ ಕಪ್ಪು ಬಣ್ಣಕ್ಕೆ ಕಾರಣವಾಗಿದೆ. ಕೂದಲು ನಾಳ ಪೂರ್ಣ ಮುಚ್ಚದಿದ್ದುರಿಂದ ಒಳಗೆ ಒತ್ತಡ ಕಡಿಮೆ ಇದ್ದು ನಾಳ ಜಖಂಗೊಳ್ಳುವುದು ಕಡಿಮೆ ಆದುದರಿಂದ ಬ್ಲ್ಯಾಕ್‌ಹೆಡ್‌ಗಳಲ್ಲಿ ಸೋಂಕಿನ ಲಕ್ಷಣಗಳಾದ ಗುಳ್ಳೆ ಕೆಂಪಾಗುವುದು, ಕುರು, ನೋವು ಅಥವ ಕೀವು ಕಾಣಿಸಿಕೊಳ್ಳುವುದಿಲ್ಲ.

ಕೂದಲಿನ ದ್ವಾರವು ಬಹುಪಾಲು ಮುಚ್ಚಿ, ಒಳಗಿನ ಅಂಶವು ಹೊರ ಹೋಗಲು ಅಡಚಣೆಯಾಗಿ ಕೂದಲು ಚೀಲವು ಜಖಂ ಗೊಂಡಾಗ ಗುಳ್ಳೆಗಳು (ವೈಟ್ ಹೆಡ್ಸ್) ಕಾಣಿಸಿಕೊಂಡು ಅನಂತರ ನೋವು, ಊತ, ಕುರು ಅಥವ ಕೀವು ಮುಂತಾದ ಸೋಂಕು ಲಕ್ಷಣಗಳು ಉಂಟಾಗಿ ಸಮಯಕ್ಕೆ ತಕ್ಕ ಚಿಕಿತ್ಸೆ ತೆಗೆದುಕೊಳ್ಳದಿದ್ದರೆ ಕಡೆಯಲ್ಲಿ ಸೂಜಿ ಗುಂಡಿನ ಅಥವ ಕಾಳಿನ ಗಾತ್ರದ ಕಪ್ಪು ಕಲೆಗಳು, ಗುಂಡಿಗಳು, ಗಂಟುಗಳು, ಚರ್ಮ ಸುಕ್ಕುಗಟ್ಟುವುದು ಅಥವ ಮುಳ್ಳು

ಮುಖ ಮುಂತಾದ ಲಕ್ಷಣಗಳು ಶಾಶ್ವತವಾಗಿ ಉಳಿದುಕೊಂಡು ಮುಖದ ಚರ್ಯೆಯೇ ಬದಲಾಗುತ್ತದೆ. ವೈಟ್‌ಹೆಡ್‌ಗಳನ್ನು ಶುರುವಿನಲ್ಲೇ ಚಿವುಟುವುದು ಅಥವ ಹಿಸುಕುವುದರಿಂದ ಒಳಭಾಗ ಮತ್ತಷ್ಟು ಜಖಂ ಗೊಂಡು ಮುಖ ಕುರೂಪಗೊಳ್ಳುವುದೇ ಹೆಚ್ಚು.

ನಿವಾರಣೆ

ಕೆಲವು ಪತ್ರಿಕೆಗಳಲ್ಲಿ ಮೊಡವೆಗಳು ಬರದಂತೆ ನೋಡಿಕೊಳ್ಳಲು ಊಟದಲ್ಲಿ ಪಥ್ಯ ಮತ್ತು ಮನೆ ಮದ್ದಿನ ಬಗ್ಗೆ ಪುಟಗಟ್ಟಲೆ ಲೇಖನಗಳನ್ನು ನೀವೆಲ್ಲಾ ನೋಡಿರಬಹುದು. ಆಹಾರದಿಂದಲೇ ಮೊಡವೆಗಳು ಬರುತ್ತವೆ ಎಂಬುದಕ್ಕೆ ಕರಾರುವಾಕ್ಕಾದ ಯಾವುದೇ ಆಧಾರ ಇಲ್ಲದೆ ಇರುವುದರಿಂದ ಸಮತೂಕ ಆಹಾರವನ್ನು ಉಪಯೋಗಿಸುವುದು ಒಳ್ಳೆಯದು.

ಬಹುಪಾಲು ವ್ಯಕ್ತಿಗಳಲ್ಲಿ ಕಾಣಿಸಿಕೊಳ್ಳುವ ಲಘು ಪ್ರಮಾಣದ ಮೊಡವೆಗಳನ್ನು ಕೇವಲ ಚರ್ಮವನ್ನು ಒಣಗುವಂತೆ ಮತ್ತು ಮುಖದಲ್ಲಿ ಹುರುಪೆ (ಸ್ಕೇಲ್ಸ್) ಏಳುವಂತೆ ನೋಡಿಕೊಳ್ಳುವುದರಿಂದ ಮೊಡವೆಗಳನ್ನು ತಡೆಗಟ್ಟಬಹುದು. ಮಾರುಕಟ್ಟೆಯಲ್ಲಿ ದೊರೆಯುವ ವಿವಿಧ ರೀತಿಯ ಟಾಯಲೆಟ್ ಸಾಬೂನುಗಳನ್ನು ಉಪಯೋಗಿಸಿ ಪದೇ ಪದೇ ಮುಖವನ್ನು ತೊಳೆಯುವುದರಿಂದ ಈ ಕೆಲಸವನ್ನು ನಿರ್ವಹಿಸಬಹುದು. ಇದಕ್ಕೂ ಕಡಿಮೆಯಾಗದಿದ್ದರೆ ಸಾಬೂನಿನಂತೆಯೇ ಕೆಲಸ ಮಾಡುವ, ಮೊಡವೆಗಳಿಗಾಗಿಯೇ ದೊರೆಯುವ ವಿವಿಧ ರೀತಿಯ ಕ್ರೀಮ್ ಅಥವ ಮುಲಾಮುಗಳನ್ನು ರಾತ್ರಿ ಹೊತ್ತು ಮುಖ ತೊಳೆದು ಹಚ್ಚುವುದರಿಂದ ಮೊಡವೆಗಳನ್ನು ತಹಬಂದಿಗೆ ತರಬಹುದು.

ಮಧ್ಯಮ ಪ್ರಮಾಣದ ಮೊಡವೆಗಳಿರುವ ಕೆಲವು ವ್ಯಕ್ತಿಗಳಲ್ಲಿ ಮೇಲಿನ ಚಿಕಿತ್ಸೆಯನ್ನು ಮುಂದುವರಿಸುತ್ತಿದ್ದರೂ ವೈಟ್ ಹೆಡ್‌ಗಳು, ಅಂದರೆ ಕೆಂಪು ಮೊಡವೆ ಗುಳ್ಳೆಗಳು, ಜತೆಗೆ ನೋವು, ಕೀವು ತುಂಬಿದ ಸಣ್ಣ ಸಣ್ಣ ಪಸ್ಟೂಲ್‌ಗಳು ಒಂಟಿಯಾಗಿ ಅಥವ ಜತೆಯಾಗಿ ಕಾಣಿಸಿಕೊಳ್ಳಬಹುದು. ಅಂತವರು ಸೋಂಕು ನಿವಾರಕ ಆಂಟಿಬಯಾಟಿಕ್ಸ್ ಕ್ರೀಮ್‌ಗಳನ್ನು ದಿನಕ್ಕೆ ಎರಡು ಮೂರು ಸಾರಿ ಮುಖ ತೊಳೆದು ಆರೇಳು ದಿನಗಳ ಕಾಲ ಹಚ್ಚುವುದರಿಂದ ಇದನ್ನು ಹಿಡಿತಕ್ಕೆ ತಂದು, ಪುನಃ ಮೇಲಿನ ಮಾಮೂಲಿ ಚಿಕಿತ್ಸೆಗೆ ಮೊರೆ ಹೋಗಬೇಕು. ಅತಿ ಪ್ರಮಾಣದ ಮೊಡವೆಗಳಿರುವವರಲ್ಲಿ ಮೊಡವೆಗಳು ಮೇಲಿನ ಚಿಕಿತ್ಸೆಗೆ ಬಗ್ಗದಿದ್ದಾಗ ವೈದ್ಯರ ಸುಪರ್ದಿನಲ್ಲಿ ದೀರ್ಘಕಾಲ ಅವರ ಸಲಹೆಯನ್ನು ಪಡೆದು ಚಿಕಿತ್ಸೆಯನ್ನು ಮುಂದುವರಿಸುತ್ತಿದ್ದರೆ ಶೇಕಡಾ 99 ಭಾಗದಷ್ಟು ವ್ಯಕ್ತಿಗಳ

ಮುಖ ವಿರೂಪಗೊಳ್ಳುವುದನ್ನು ತಡೆಗಟ್ಟಬಹುದು. ಕೆಲವರಲ್ಲಿ ದಪ್ಪನೆಯ ಮೊಡವೆಗಳು ಶುರುವಿನಲ್ಲೆ ಚರ್ಮದ ಒಳಗೆ ಕಾಯಿಗಟ್ಟಿ ನೋವಿನ ಸಹಿತ ಊತದಿಂದ ಕೂಡಿರುತ್ತದೆ. ಪ್ರಾರಂಭದಲ್ಲಿಯೇ ವೈದ್ಯರ ಸಲಹೆ ಪಡೆದರೆ ಮಾತ್ರ ಊತ ಇಳಿದು, ಮೊಡವೆ ಪೂರ್ಣ ಕರಗುತ್ತದೆ. ನಿಧಾನಿಸಿದರೆ ಕೀವು ತುಂಬಿ ಕುರುವಾಗುತ್ತದೆ. ಕೀವನ್ನು ತಜ್ಞ ವೈದ್ಯರಿಂದ ತೆಗೆಸಲೇಬೇಕು. ತೆಗೆಸದೆ ಹಾಗೆಯೇ ಗುಣಪಡಿಸಿದರೆ ಶಾಶ್ವತವಾಗಿ ಗಂಟು ಉಳಿದುಕೊಳ್ಳಬಹುದು ಅಥವ ಕುರು ವೈದ್ಯರಿಗೆ ತೋರಿಸುವ ಮುಂಚೆಯೇ ಒಡೆದರೆ ಕುರು ವಾಸಿಯಾದ ಅನಂತರವೂ ಮಚ್ಚೆ ಅಥವ ಗುಳಿ ಶಾಶ್ವತವಾಗಿ ಉಳಿದುಕೊಳ್ಳಬಹುದು.


ಮೊಡವೆಗಳಿಂದ ಶಾಶ್ವತವಾಗಿ ಮುಖ ಕಾಂತಿಹೀನಗೊಂಡ ಲಘು ಪ್ರಮಾಣದ ವಿರೂಪವನ್ನು ನವೀನ ರೀತಿಯಲ್ಲಿ ಕ್ರಯೋಸ್ಲಷ್, ಅಲ್ಟ್ರಾ ವೈಲೆಟ್ ರೇಸ್, ಶಸ್ತ್ರಕ್ರಿಯೆ, ರೇಡಿಯೋ ಥೆರಪಿ, ಇಂಟ್ರಾಲೀಷನಲ್ ಸ್ಟೀರ್ಯಾಡ್ ಮತ್ತು ಡರ್ಮಾಬ್ರೇಷನ್ ಮುಂತಾದ ಚಿಕಿತ್ಸಾ ವಿಧಾನಗಳಿಂದ ಸಾಧ್ಯವಾದಷ್ಟು ಮಟ್ಟಿಗೆ ಸರಿಪಡಿಸಬಹುದು.

ಮೊಡವೆಗಳಿಗೆ ಔಷಧವಿಲ್ಲ, ಮನೆ ಮದ್ದೇ ಚಂದ ಮುಂತಾದ ಗಾಳಿ ಮಾತಿಗೆ ಬೆಲೆ ಕೊಡದೆ ಟಿವಿ ಮತ್ತು ಸುದ್ದಿ ಮಾಧ್ಯಮಗಳ ನವೀನ ಜಾಹೀರಾತುಗಳಿಗೆ ಬಲಿಯಾಗದೆ, ಬ್ಯೂಟೀ ಪಾರ್ಲರ್‌ಗಳು ಹೇಳಿದ್ದೆಲ್ಲಾ ವೇದ ವಾಕ್ಯ ಎಂದು ತಿಳಿಯದೆ, ಅವಶ್ಯಕತೆ ಇದ್ದಷ್ಟು ಮಾತ್ರ ಅವರೆಲ್ಲರ ಹೇಳಿಕೆಗಳನ್ನು ಪಾಲಿಸಲು ಅಣಿಯಾಗಿ, ಮೊಡವೆಗಳು ಶುರುವಾಗುವ ಮೊದಲೇ ಮೊಡವೆಗಳ ಅನಂತರದ ಪರಿಣಾಮಗಳನ್ನು ಮನಸ್ಸಿನಲ್ಲಿ ಕರಗತ ಮಾಡಿಕೊಂಡು ಮೊಡವೆಗಳು ಆರಂಭಗೊಂಡ ಅನಂತರ ಶಾಶ್ವತವಾಗಿ ತಮ್ಮಷ್ಟಕ್ಕೆ ತಾವೇ ಅಂತ್ಯವಾಗುವವರೆಗೂ ಮೊಡವೆಗಳ ವಿವಿಧ ಹಂತಗಳಿಗೆ ಮತ್ತು ಪ್ರಮಾಣಕ್ಕೆ ತಕ್ಕಂತೆ ಸ್ವತಃ ಅಥವ ಅವಶ್ಯಕತೆ ಇದ್ದಾಗ ವೈದ್ಯರ ಸಲಹೆ ಮೇರೆಗೆ ಶಮನಕಾರಿ ಚಿಕಿತ್ಸೆಯನ್ನು ತೆಗೆದುಕೊಳ್ಳಿ, ಮೊಡವೆಗಳ ಭೀಕರತೆಯ ದುಷ್ಪರಿಣಾಮಗಳನ್ನು ತಡೆಗಟ್ಟಿದರೆ ಶಾಶ್ವತವಾಗಿ ಮಾನಸಿಕ ಮತ್ತು ದೈಹಿಕ ಕಿರಿಕಿರಿಯಿಂದ ಪಾರಾಗಬಹುದು.

* * * * *

ಭಾಗ - ೨

23. ಫೈಲೇರಿಯಾಸಿಸ್ (ಆನೆ ಕಾಲು ರೋಗ)



ಕರಾವಳಿ ಪ್ರದೇಶಗಳಾದ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುವ ಈ ಕಾಯಿಲೆ ಕ್ಯೂಲೆಕ್ಸ್ ಮತ್ತು ಅನಾಫಿಲೀಸ್ ಮುಂತಾದ ಸೊಳ್ಳೆಗಳ ಕಡಿತದಿಂದ ಒಬ್ಬರಿಂದ ಬೇರೊಬ್ಬರಿಗೆ ಹರಡುತ್ತದೆ. ಭಾರತ, ಆಫ್ರಿಕಾ, ಮಲಯ, ಶ್ರೀಲಂಕಾ, ಚೈನಾ ಮುಂತಾದ ದೇಶಗಳಲ್ಲಿ ಸುಮಾರು ಇಪ್ಪತ್ತು ಕೋಟಿಗೂ ಮಿಗಿಲಾಗಿ ಜನರು ಈ ಕಾಯಿಲೆಯಿಂದ ನರಳುತ್ತಿದ್ದಾರೆ. ಉಚರೇರಿಯಾ ಬ್ಯಾನ್ ಕ್ರಾಫ್ಟಿ ಮತ್ತು ಬ್ರುಗಯ ಮಲಯ ಮುಂತಾದ ಕ್ರಿಮಿಗಳಿಂದ ಬರುವ ಈ ಕಾಯಿಲೆಯಲ್ಲಿ ಕ್ರಿಮಿಗಳು ಹಾಲು ಬಣ್ಣದ ನೂಲಿನಂತೆ 4 ರಿಂದ 8 ಸೆಂ. ಮಿ. ಉದ್ದವಿರುತ್ತದೆ. ಶರೀರದಲ್ಲೆಲ್ಲಾ ಹರಡಿಕೊಂಡಿರುವ ಲಿಂಫ್ ನೋಡ್ಸ್ ಗ್ರಂಥಿಗಳನ್ನು ಸೇರುವ ಲಿಂಫ್ ನಾಳಗಳಲ್ಲಿ ಕ್ರಿಮಿಗಳು ರಕ್ಷಣೆ ಪಡೆದು ಒಂದು ವರ್ಷದೊಳಗೆ ಹೆಣ್ಣು ಗರ್ಭಗೊಂಡು ಅಣು ಫೈಲೇರಿಯಾಗಳಿಗೆ (ಮೈಕ್ರೋಫೈಲೇರಿಯಾ) ಜನನ ಕೊಟ್ಟು, ಫೈಲೇರಿಯಾ ಅಣು ಜೀವಿಗಳನ್ನು ಲಿಂಫ್ ನಾಳಗಳಿಂದ ರಕ್ತ ನಾಳದೊಳಕ್ಕೆ ಆಗಾಗ್ಗೆ ಹೆಚ್ಚಾಗಿ ರಾತ್ರಿ ಹೊತ್ತು ಕಳುಹಿಸುತ್ತಿರುತ್ತವೆ. ರಕ್ತದಲ್ಲಿ ಫೈಲೇರಿಯಾ ಅಣು ಜೀವಿಗಳು ಕಾಣಿಸಿಕೊಂಡಾಗ ಚಳಿ, ಜ್ವರ, ನಡುಕ ಬರುವುದು ಈ ಕಾಯಿಲೆಯ ಸಾಮಾನ್ಯ ಲಕ್ಷಣಗಳಲ್ಲೊಂದು ಈ ಸಂದರ್ಭದಲ್ಲಿಯೆ ಸೊಳ್ಳೆಗಳ ಕಡಿತದಿಂದ ಅಣು ಜೀವಿಗಳು ಸೊಳ್ಳೆಗಳ ದೇಹವನ್ನು ಸೇರಿ ಬೆಳೆದು 10 ದಿನದೊಳಗೆ ಮರಿ ಫೈಲೇರಿಯಾಗಳಾಗುತ್ತವೆ. "ವಂಶಾಭಿವೃದ್ಧಿಗೆ ಮರಿಗಳು ಮನುಷ್ಯರ ದೇಹದಿಂದ ಸೊಳ್ಳೆಗಳ ದೇಹಕ್ಕೆ ಸ್ಥಳಾಂತರಗೊಂಡು ಬೆಳೆಯಲೇ ಬೇಕು. ಇಲ್ಲದಿದ್ದರೆ

ಮನುಷ್ಯರ ದೇಹದಲ್ಲಿ ಸಾವನ್ನಪ್ಪುತ್ತವೆ. ಈ ಸಮಯದಲ್ಲಿಯೆ ಸೊಳ್ಳೆಗಳು ಬೇರೆಯವರಿಗೆ ಕಚ್ಚಿದಾಗ ಮರಿಫೈಲೇರಿಯಾಗಳು ಮನುಷ್ಯರ ಲಿಂಫ್ ನಾಳವನ್ನು ಹೊಕ್ಕಿ ಬೆಳೆದು, ಬಲಿತ ಹೆಣ್ಣು ಗಂಡುಗಳು ಸಂತಾನಾಭಿವೃದ್ಧಿಯಲ್ಲಿ ತೊಡಗುತ್ತವೆ. ಹೀಗೆ ನಿರಂತರ ಸೊಳ್ಳೆಗಳ ಕಡಿತದಿಂದ ಫೈಲೇರಿಯಾ ಕ್ರಿಮಿಗಳು ಲಿಂಫ್ ನಾಳಗಳಲ್ಲಿ ಜಾಸ್ತಿಯಾಗಿ ಲಿಂಫ್ ರಸದ ಚಲನೆಗೆ ಅಡಚಣೆಯಾಗಿ "ಲಿಂಫ್ಯಾಂಜೈಟಿಸ್" ಉಂಟಾಗಿ ತೊಂದರೆಗೊಳಪಟ್ಟು ಅಂಗಗಳು ಕೆಂಪು ಗಟ್ಟಿ ಊದಿಕೊಂಡು ನೋವು, ಜ್ವರ, ಮುಂತಾದ ಲಕ್ಷಣಗಳು ಹಂಗಾಮಿಯಾಗಿ ಸ್ವಲ್ಪ ದಿನಗಳು ಬಂದು ತನ್ನಷ್ಟಕ್ಕೆ ತಾನೆ ಕಡಿಮೆಯಾಗುತ್ತಿರುತ್ತದೆ. ಈ ಹಂತದಲ್ಲಿಯೇ ಚಿಕಿತ್ಸೆಯಿಂದ ಕಾಯಿಲೆ ಗುಣಪಡಿಸಿಕೊಂಡು ಸೊಳ್ಳೆಗಳ ಕಾಟದಿಂದ ಮುಕ್ತಿ ದೊರಕಿಸಿಕೊಂಡರೆ ಮುಂದೆ ಒದಗಬಹುದಾದ ಅಂಗ ಊನತೆಯನ್ನು ತಡೆಗಟ್ಟಬಹುದು.

ಆ ನಂತರ ಚಿಕಿತ್ಸೆ ತೆಗೆದುಕೊಳ್ಳದೆ ಕ್ರಿಮಿಗಳು ಜಾಸ್ತಿಯಾಗಿ ಕಾಯಿಲೆ ಅತಿಯಾದಾದ ಲಿಂಫ್ ರಸದ ಚಲನೆ ಪೂರ್ಣ ನಿಂತು, ಲಿಂಫ್ ರಸದ ಶೇಖರಣೆ ಅಂಗಾಂಗಗಳಲ್ಲಿ ಜಾಸ್ತಿ ಆಗುತ್ತ ಒತ್ತಡ ಜಾಸ್ತಿಯಾಗಿ ಅಂಗಾಂಶ ನಾಶವಾಗುತ್ತ ಅಂಗಗಳು ನಿರಂತರ ಊದಿಕೊಳ್ಳುತ್ತ ಆನೇಕಾಲಿನ ರೀತಿಯಂತಾಗುತ್ತದೆ. ದೇಹದ ಯಾವುದೇ ಭಾಗಗಳ ಅಂಗಗಳಿಗೆ ಊನತೆ ಬರಬಹುದಾದರೂ ಹೆಚ್ಚಾಗಿ ಕಾಲು ವೃಷಣ, ಜನನಾಂಗ ಸ್ತನಗಳು ಮತ್ತು ಕೈಗಳಲ್ಲಿ ಒಟ್ಟಿಗೆ, ಜೊತೆಯಾಗಿ ಅಥವ ಒಂಟಿಯಾಗಿ ಕಾಣಬರುತ್ತವೆ.

ಈ ಹಂತದಲ್ಲಾದರೂ ಚಿಕಿತ್ಸೆ ತೆಗೆದುಕೊಂಡು ಸೊಳ್ಳೆಗಳ ಕಡಿತದಿಂದ ತಪ್ಪಿಸಿಕೊಂಡು ಜೀವನ ಸಾಗಿಸಿದರೆ ಮುಂದೆ ಅಂಗವಿಕಲತೆ ಜಾಸ್ತಿ ಆಗದಂತೆ ನೋಡಿಕೊಂಡು ಕಾಯಿಲೆ ಬೇರೆಯವರಿಗೆ ಹರಡದಂತೆ ನೋಡಿಕೊಳ್ಳಬಹುದು.

ಶರೀರದ ಯಾವುದೇ ಅಂಗಗಳು ಆನೆ ಕಾಲಿನಂತೆ ಅಥವ ಊದಿಕೊಂಡು ಆನೆ ಚರ್ಮದಂತಾದ ಮೇಲೆ ಯಾವ ರೀತಿಯ ಚಿಕಿತ್ಸೆಯೂ ಪ್ರಯೋಜನಕಾರಿಯಾಗುವುದಿಲ್ಲ. ಸೊಳ್ಳೆಗಳ ನಿರ್ಮೂಲನೆ, ಸೊಳ್ಳೆ ಪರದೆ ಉಪಯೋಗಿಸುವುದು ಮತ್ತು ಕಾಯಿಲೆಯ ಶುರುವಿನಲ್ಲೆ ಚಿಕಿತ್ಸೆ ತೆಗೆದುಕೊಳ್ಳುವುದರಿಂದ ಕಾಯಿಲೆಯ ಭೀಕರತೆಯಿಂದ ಪಾರಾಗಬಹುದು.

* * * * *

24. ಗಂಡು - ಹೆಣ್ಣು ಪರಸ್ಪರ ಆಕರ್ಷಣೆ



ಗಂಡು ಮತ್ತು ಹೆಣ್ಣುಗಳ ಪರಸ್ಪರ ಆಕರ್ಷಣೆ ಪ್ರಕೃತಿದತ್ತ ನಿಯಮ. ಈ ಗುಣವನ್ನು ಪಶು ಪಕ್ಷಿಗಳೂ ಸೇರಿದಂತೆ ಇತರ ಪ್ರಾಣಿಗಳಲ್ಲೂ ನೋಡಬಹುದಾಗಿದೆ.

ಬಾಲ್ಯಾವಸ್ಥೆಯಲ್ಲಿಯೇ ಈ ಆಕರ್ಷಣೆ ಸಹಜವಾಗಿಯೇ ಕಾಣುತ್ತದೆ. ಬಾಲ್ಯವಸ್ಥೆ ಸರಿದು ಪ್ರಾಯದ ಹಂತ ತಲುಪುತ್ತಿದ್ದಂತೆ ಮಾನಸಿಕವಾಗಿ ಮತ್ತು ದೈಹಿಕವಾಗಿ ಲೈಂಗಿಕ ಅರಿವು ಮೂಡಿ ಹೆಣ್ಣು ಗಂಡುಗಳ ನಡುವೆ ಲೈಂಗಿಕಾರ್ಷಣೆ ಇಮ್ಮಡಿಗೊಂಡು ಹೆಮ್ಮರವಾಗಿ ಬೆಳೆಯುತ್ತದೆ. ಹೀಗೆ ಬೆಳೆದ ಹೆಣ್ಣು ಗಂಡಿನ ಲೈಂಗಿಕಾಸಕ್ತಿ ಮುಂದೆ ಲೈಂಗಿಕ ಕ್ರಿಯೆ, ಲೈಂಗಿಕ ಸಂತೃಪ್ತಿ ಮತ್ತು ವಂಶಾಭಿವೃದ್ಧಿಯಲ್ಲಿ ತೊಡಗುವದೆಲ್ಲವೂ ಪ್ರಕೃತಿದತ್ತವಾದ ನಿಯಮ. ಈ ನಿಯಮವನ್ನು ಸುಸೂತ್ರವಾಗಿ ಪಾಲಿಸಲೆಂದು ಜೀವನ ಪರ್ಯಂತ ಸಂಗಾತಿಗಳಿಬ್ಬರಲ್ಲಿಯೇ ಪರಸ್ಪರ ಲೈಂಗಿಕ ಸಂಯೋಗ ಮತ್ತು ಸಂಬಂಧಗಳು ಮುಡಿಪು. ಇದೊಂದು ಸುವ್ಯವಸ್ಥೆ. ಈ ಕ್ರಮ ಕುಟುಂಬ ಜೀವನಕ್ಕೆ ನಾಂದಿ. ಸಂಗಾತಿಗಳು ಹಾದಿ ತಪ್ಪಿ ತಿಳಿದೋ ತಿಳಿಯದೆಯೋ ಲೈಂಗಿಕ ರೋಗಗಳಿರುವವರ ಜೊತೆ ಲೈಂಗಿಕ ಸಂಪರ್ಕ ಪಡೆದರೆ ಅಥವಾ ಲೈಂಗಿಕ ಸ್ವೇಚ್ಛಾಚಾರಕ್ಕಿಳಿದರೆ ಲೈಂಗಿಕ ರೋಗಗಳ ಉದ್ಭವವಾಗುತ್ತದೆ.

ಈ ರೀತಿ ಮಾನವನ ವಂಶಾಭಿವೃದ್ಧಿಯಲ್ಲಿ ಮತ್ತು ಲೈಂಗಿಕ ಜೀವನದಲ್ಲಿ ಅತ್ಯುತ್ತಮ ಪಾತ್ರ ವಹಿಸುವ ಪುರುಷ ಮತ್ತು ಸ್ತ್ರೀ ಜನನೇಂದ್ರಿಯಗಳ ರಚನೆಯ

ಬಗ್ಗೆ ತಿಳಿದುಕೊಳ್ಳುವುದು ಆರೋಗ್ಯದ ಮತ್ತು ಲೈಂಗಿಕ ಸ್ವಚ್ಛತೆಯ ದೃಷ್ಟಿಯಿಂದ ಕ್ಷೇಮಕರ.

ಪುರುಷ ಜನನೇಂದ್ರಿಯದ ರಚನೆ

ಮೂತ್ರನಾಳ (ಯುರೇತ್ರ), ಶಿಶ್ನ (ಪೆನ್ನಿಸ್) ಪ್ರಾಸ್ಟೇಟ್, ವೃಷಣ ಅರ್ಥಾತ್ ಬೀಜ (ಟೆಸ್ಟಿಸ್) ವೀರ್ಯನಾಳ (ಎಪಿಡೈಡಿಮಿಸ್) ಮತ್ತು ವೀರ್ಯಕೋಶಗಳು (ಸಮ್ಮೈನಲ್ ವೆಸಿಕಲ್ಸ್) ಪುರುಷ ಜನನೇಂದ್ರಿಯದ ಮುಖ್ಯವಾದ ಭಾಗಗಳು.

ಮೂತ್ರನಾಳವು ಮೂತ್ರ ಕೋಶ (ಬ್ಲಾಡರ್)ದಿಂದ ಪ್ರಾರಂಭವಾಗಿ ಸುಮಾರು 20 ಸೆಂ. ಮಿೀ ಉದ್ದವಿದ್ದು ಮೂತ್ರ ದ್ವಾರದಲ್ಲಿ ಕೊನೆಗೊಳ್ಳುತ್ತದೆ. ಪ್ರಾಸ್ಟೇಟ್ ಗ್ರಂಥಿಯು ಮೂತ್ರ ಕೋಶದ ಕೆಳಭಾಗದಲ್ಲಿದ್ದು ಇದರ ಮುಖಾಂತರ ಮೂತ್ರ ನಾಳವು ಹಾಯ್ದು ಹೋಗುತ್ತದೆ. ಪ್ರಾಸ್ಟೇಟ್ ಗ್ರಂಥಿಯ ಹಿಂಭಾಗದ ಮೇಲುಗಡೆ ಮೂತ್ರ ಕೋಶ ಮತ್ತು ರೆಕ್ಟಮ್ (ನೆಟ್ಟ ಕರುಳು) ಗಳ ನಡುವೆ ಎಡ ಮತ್ತು ಬಲಭಾಗದ ವೀರ್ಯ ಕೋಶಗಳಿದ್ದು ವೃಷಣಗಳಿಂದ ಉತ್ಪತ್ತಿಯಾದ ವೀರ್ಯ (ಸೆಮನ್) ವೀರ್ಯನಾಳಗಳ ಮೂಲಕ ವೀರ್ಯ ಕೋಶಗಳಲ್ಲಿ ಬಂದು ಶೇಖರವಾಗುತ್ತದೆ. ಸ್ಖಲನದ ಸಮಯದಲ್ಲಿ ಪ್ರಾಸ್ಟೇಟ್ ಒಳಭಾಗದಲ್ಲಿರುವ ಮೂತ್ರ ನಾಳದೊಳಕ್ಕೆ ವೀರ್ಯ ಹರಿಯುವಾಗ ಪ್ರಾಸ್ಟೇಟ್ ರಸವೂ ಸೇರಿಕೊಳ್ಳುತ್ತದೆ.

ಮೂತ್ರ ದ್ವಾರದಿಂದ ಉದ್ದದ ಸುಮಾರು ಮುಕ್ಕಾಲು ಭಾಗದಷ್ಟು ಇರುವ ಮೂತ್ರ ನಾಳವು ಶಿಶ್ನವು ಉದ್ರೇಕಗೊಳ್ಳಲು ಸಹಾಯ ಮಾಡುವ ಸ್ನಾಯುಗಳು ರಕ್ತ ನಾಳಗಳು ಮತ್ತು ನರ ತಂತುಗಳಿಂದ ಸುತ್ತುವರೆದಿರುತ್ತದೆ. ಈ ಭಾಗವನ್ನೆ ನಾವು ಶಿಶ್ನವೆನ್ನುವುದು. ಶಿಶ್ನದ ಮೇಲು ಭಾಗವನ್ನು ಕಾಂಡವೆಂದು (ಶ್ಯಾಫ್ಟ್) ಮತ್ತು ತುದಿಯ ಮೂತ್ರ ದ್ವಾರದ ಸುತ್ತವಿರುವ ಅಡಿಕೆಯ ಉಂಡೆಯಂತೆ ಕಾಣುವ ಚರ್ಮ ರಹಿತವಾದ ಭಾಗವನ್ನು ಗ್ಲ್ಯಾನ್ಸ್ ಪೆನ್ನಿಸ್ (ಬಳ್ಳಿ) ಎಂದು ಕರೆಯುತ್ತೇವೆ.

ಪುರುಷತ್ವದ ಹಾರ್ಮೋನ್ ಮತ್ತು ವೀರ್ಯಾಣುಗಳನ್ನು ಉತ್ಪಾದಿಸುವ ಎರಡು ವೃಷಣಗಳು ದೇಹದೊಳಗಿನ ಶಾಖವನ್ನು ತಡೆಯಲು ಅಸಾಧ್ಯವಾದುದರಿಂದ ದೇಹದ ಹೊರಗಡೆ ಶಿಶ್ನದ ಬುಡದ ತಳಭಾಗದಲ್ಲಿ ಚರ್ಮದಿಂದ ಆವೃತವಾದ ವೃಷಣದ ಚೀಲದಲ್ಲಿ ಸಂರಕ್ಷಿಸಲ್ಪಟ್ಟಿವೆ.

ವೀರ್ಯ ಮತ್ತು ಮೂತ್ರವು ಒಂದೇ ಮೂತ್ರ ನಾಳದಿಂದ ಬೇರೆ ಬೇರೆ ಸಮಯದಲ್ಲಿ ಹೊರದೂಡಲ್ಪಡುತ್ತದೆ.

ಸ್ತ್ರೀ ಜನನೇಂದ್ರಿಯದ ರಚನೆ

ಸ್ತ್ರೀ ಜನನೇಂದ್ರಿಯದ ಹೊರ ಭಾಗದ ಸುತ್ತ ಮುತ್ತಲಿನ ಜಾಗವನ್ನು ಅಂದರೆ ತೊಡೆಗಳ ನಡುವೆ ಮತ್ತು ಕಿಬ್ಬೊಟ್ಟೆಯ ಕೆಳಗಡೆ ಇರುವ ಕೂದಲಿನ ಪ್ರದೇಶ (ಮಾನ್ಸವೆನೆರಿಸ್)ಗಳ ನಡುವಿನ ಜಾಗವನ್ನು "ವಲ್ವಾ" ಎಂದು ಕರೆಯುತ್ತೇವೆ. ವಲ್ವಾದಲ್ಲಿನ ಲೇಬಿಯಾ ಮೇಜೋರಾ (ಯೋನಿಯ ಹೊರದಂಡೆ) ಲೇಬಿಯಾ ಮೈನೋರಾ (ಯೋನಿಯ ಒಳದಂಡೆ) ಕ್ಲೈಟೋರಿಸ್ (ಚಂದ್ರನಾಡಿ) ವೆಸ್ಟಿಬ್ಯೂಲ್, ಮೂತ್ರದ್ವಾರ, ಯೋನಿದ್ವಾರ, ಯೋನಿ (ವಜೈನ) ಗರ್ಭಕೋಶ (ಯುಟೆರಸ್) ಗರ್ಭದ್ವಾರ (ಸರ್ವಿಕ್ಸ್) ಗರ್ಭನಾಳ ಅರ್ಥಾತ್ ಅಂಡನಾಳ (ಫೆಲೋಪಿಯನ್ ಟ್ಯೂಬ್) ಮತ್ತು ಅಂಡಾಶಯ (ಓವರಿ) ಸ್ತ್ರೀ ಜನನೇಂದ್ರಿಯದ ಮುಖ್ಯವಾದ ಭಾಗಗಳು.

ಯೋನಿಯ ದ್ವಾರದಿಂದ ಗರ್ಭದ್ವಾರದ ನಡುವೆ ಕಿರಿದಾದ ರಬ್ಬರ್ ಚೀಲದಂತೆ ಇರುವ ಭಾಗವೆ ಯೋನಿ. ಇದನ್ನು ಗರ್ಭಕೋಶದ ಕಾಲುವೆ ಎನ್ನಬಹುದು. ಯೋನಿಯು ಹಿಗ್ಗುವ ಮತ್ತು ಕುಗ್ಗುವ ಶಕ್ತಿಯನ್ನು ಹೊಂದಿದ್ದು ಲೈಂಗಿಕ ಕ್ರಿಯೆ ಮತ್ತು ಹೆರಿಗೆಯ ಸಮಯದಲ್ಲಿ ಹಿಗ್ಗುತ್ತದೆ.

ಯೋನಿಯ ದ್ವಾರವು ಎರಡು ಮೃದುವಾದ ಉಬ್ಬಿದ ಕೂದಲಿನಿಂದಾವೃತವಾದ ಲೇಬಿಯಾ ಮೇಜೋರಾಗಳಿಂದ ಮುಚ್ಚಲ್ಪಟ್ಟಿದೆ. ಮಧ್ಯದಿಂದ ಸರಿಸಿ ನೋಡಿದಾಗ ಯೋನಿಯ ದ್ವಾರ ಕಾಣುತ್ತದೆ. ಲೇಬಿಯಾ ಮೆಜೋರಾಗಳ ಒಳಭಾಗದಲ್ಲಿ ಕೂದಲೂ ರಹಿತವಾದ ಸೂಕ್ಷ್ಮವಾದ ಲೇಬಿಯಾ ಮೈನೋರಾಗಳಿವೆ. ಈ ಎರಡು ಕಡೆಯ ಲೇಬಿಯಾ ಮೈನೋರಾಗಳ ನಡುವಿನ ವಜ್ರಾಕೃತಿಯಂತೆ ಕಾಣುವ ಜಾಗವನ್ನು ವೆಸ್ಟಿಬ್ಯೂಲ್ ಎಂದು ಕರೆಯುತ್ತೇವೆ. ವೆಸ್ಟಿಬ್ಯೂಲ್‌ನ ಕೆಳಭಾಗದಲ್ಲಿ ಯೋನಿದ್ವಾರ ಮತ್ತು ಮಧ್ಯ ಭಾಗದಲ್ಲಿ ಮೂತ್ರದ್ವಾರವಿದೆ. ಮೇಲುಗಡೆ ಲೇಬಿಯಾ ಮೈನೋರಾಗಳೆರಡೂ ಒಂದಕ್ಕೊಂದು ಸೇರಿ ಕೊಂಡ ಜಾಗವನ್ನು ಕ್ಲೈಟೋರಿಸ್ ಎಂದು ಕರೆಯುತ್ತೇವೆ. ಉದ್ರೇಕದ ಅಂಗಾಂಶವನ್ನು ಹೊಂದಿರುವ ಶಿಶ್ನವನ್ನು ಪ್ರತಿನಿಧಿಸುವ ಮತ್ತು ಅತಿ ಸೂಕ್ಷ್ಮವಾದ ಕ್ಲೈಟೋರಿಸ್ ಲೈಂಗಿಕ ಸಂತೃಪ್ತತೆಯಲ್ಲಿ ಬಹಳಷ್ಟು ಪಾತ್ರ ವಹಿಸುತ್ತದೆ. ಸಾಮಾನ್ಯವಾಗಿ ಯೋನಿದ್ವಾರವು ಹೈಮನ್ (ಯೋನಿಯ ಪೊರೆ) ನಿಂದ ಮುಚ್ಚಲ್ಪಟ್ಟಿದೆ. ಈ ತೆಳುವಾದ ಪೊರೆಯು ಋತುಮತಿಯ ಸಮಯದಲ್ಲಿ ತನ್ನ ರಂಧ್ರದ ಮೂಲಕ ಋತುಸ್ರಾವ ಹೊರ ಸೂಸಲು ಅನುವು ಮಾಡಿಕೊಡುತ್ತದೆ. ಸಂಸಾರಿಕ ಜೀವನ ಶುರುವಾದ ಮೇಲೆ ಪೂರ್ಣ ಹರಿಯುತ್ತದೆ. ದೈಹಿಕ ಶ್ರಮ,

ಆಟ, ವ್ಯಾಯಾಮ ಮತ್ತಿತರ ಚಟುವಟಿಕೆಗಳಿಂದ ಬಹಳಷ್ಟು ಹೆಣ್ಣು ಮಕ್ಕಳಲ್ಲಿ ಮದುವೆಯ ಮುಂಚೆಯೇ ಈ ಹೈಮನ್ ಹರಿದಿರುತ್ತದೆ.

ತ್ರಿಕೋನಾಕಾರದ ಮಾಂಸಖಂಡ (ಸ್ನಾಯು) ಗಳಿಂದಾವೃತವಾದ ದಪ್ಪನೆಯ ಮೈ ಉಳ್ಳ ಗರ್ಭ ಕೋಶದ ಒಳ ವ್ಯಾಸವು ಸುಮಾರು 5 ಸೆಂ. ಮಿೀ. ಅಗಲ ಮತ್ತು 8 ಸೆಂ. ಮಿೀ. ಉದ್ದವಿದೆ. ಕೆಳಗೆ ಗರ್ಭದ್ವಾರವು ಯೋನಿಯ ಒಳಗೆ ತಲೆ ಹಾಕಿ ಕೊನೆಗೊಳ್ಳುತ್ತದೆ. ಗರ್ಭಕೋಶವು ಯೋನಿಯಿಂದ ಮೇಲೆ ಕಮಾನಿನಂತೆ ಬಾಗಿ ಮುಂದಕ್ಕೆ ಚಾಚಿ ಮೂತ್ರ ಕೋಶದ ಹಿಂದೆ ಇಕ್ಕೆಲ್ಲಗಳಲ್ಲಿ ಬ್ರಾಡ್ ಲಿಗಮೆಂಟ್‌ಗಳಿಂದ ಒಂದು ನಿರ್ದಿಷ್ಟ ಜಾಗದಲ್ಲಿ ಬಂಧಿಸಲ್ಪಟ್ಟಿದೆ. ಗರ್ಭಕೋಶದ ಮೇಲ್ಭಾಗದ ಎರಡು ಕಡೆಯೂ ಮೊಟ್ಟೆಯಾಕಾರದ 5 ಸೆಂ. ಮಿೀ. ಉದ್ದದ ಒಂದೊಂದು ಅಂಡಾಶಯವಿದ್ದು ಅಲ್ಲಿ ಬಿಡುಗಡೆಯಾದ ಅಂಡಾಣುವು ಗರ್ಭಕೋಶದ ಇಕ್ಕೆಲಗಳಲ್ಲಿರುವ ಗರ್ಭನಾಳವನ್ನು ತಲುಪಿ ಗರ್ಭಧಾರಣೆಗೆ ಕಾಯುತ್ತಿರುತ್ತದೆ.

* * * * *

25. ಲೈಂಗಿಕ ರೋಗಗಳು

"ಎಸ್ ಟಿ ಡಿ" ಅರ್ಥಾತ್ ಸೆಕ್ಸುಯಲಿ ಟ್ರಾನ್ಸ್‌ಮಿಟೆಡ್ ಡಿಸೀಸ್ ಎಂದು ಇಂಗ್ಲೀಷಿನಲ್ಲಿ ಕರೆಯುವ ಈ ರೋಗವನ್ನು ಜನರು ವಿ.ಡಿ. ಕಾಯಿಲೆಗಳು, ಗುಪ್ತ ರೋಗಗಳು, ಗುಹ್ಯ ರೋಗಗಳು ಅಥವ ರತಿ ರೋಗಗಳು ಮುಂತಾದ ಹೆಸರಿನಿಂದಲೂ ಕರೆಯುತ್ತಾರೆ.

ಈ ರೋಗಗಳು ಒಬ್ಬರಿಂದ ಇನ್ನೊಬ್ಬರಿಗೆ ಹೆಣ್ಣು ಗಂಡು ಎಂಬ ಭೇದ ಭಾವವಿಲ್ಲದೆ ಶಾಸ್ತ್ರ ವಿರೋಧ ಮತ್ತು ಸ್ವಚ್ಛಂದ ಲೈಂಗಿಕ ಚಟುವಟಿಕೆಗಳಿಂದ ಬರುವಂತಹ ಕಾಯಿಲೆಗಳಾಗಿವೆ.

ವೇಶ್ಯೆಯರಲ್ಲಿ, ಸಲಿಂಗ ಕಾಮಿಗಳಲ್ಲಿ ವ್ಯಭಿಚಾರಿಗಳಲ್ಲಿ ಲೈಂಗಿಕ ರೋಗಗಳು ಜಾಸ್ತಿ. ಪತಿ ಅಥವಾ ಪತ್ನಿಗೆ ಗೊತ್ತಾಗದಂತೆ ಇತರರೊಡನೆ ಲೈಂಗಿಕ ಸಂಬಂಧಇರಿಸಿ ಕೊಂಡಿರುವವರಲ್ಲಿಯೂ ಇಂಥ ಲೈಂಗಿಕ ರೋಗಗಳು ಹೆಚ್ಚಾಗಿವೆ. ವೇಶ್ಯಾವೃತ್ತಿಯಲ್ಲಿ ಭಾಗವಹಿಸಿದೆ ಯಾವೊಬ್ಬ ವ್ಯಕ್ತಿ ಹಣಕ್ಕಾಗಿ ಅಥವ ಬೇರೆ ಬೇರೆ ಕಾರಣಗಳಿಂದ ಇತರರ ಜೊತೆ ದೈಹಿಕ ಸಂಬಂಧ ಇಟ್ಟುಕೊಂಡಿರುವವರಲ್ಲಿಯೂ ಲೈಂಗಿಕ ರೋಗಗಳನ್ನು ನಾವು ಹೆಚ್ಚಾಗಿ ನೋಡುತ್ತೇವೆ.

ಲೈಂಗಿಕ ರೋಗಗಳಿರುವ ಪ್ರೌಢ ವ್ಯಕ್ತಿಗಳು ಬಲವಂತರಾಗಿ ಅಪ್ರಾಪ್ತ ವಯಸ್ಕರ ಜೊತೆ ಲೈಂಗಿಕ ದೌರ್ಜನ್ಯ ನಡೆಸಿ ಅನೇಕ ಮಕ್ಕಳು ಲೈಂಗಿಕ ರೋಗಗಳಿಗೆ ಗುರಿಯಾಗಿರುವುದೂ ಉಂಟು.

ಲೈಂಗಿಕ ದೇಹ ಸಂಬಂಧವಿಲ್ಲದೆ ಅನೇಕ ಬಾರಿ ಇತರರಿಗೆ ಲೈಂಗಿಕ ರೋಗಗಳು ಅಂಟಬಹುದು. ಲೈಂಗಿಕ ರೋಗವಿರುವ ವ್ಯಕ್ತಿಯ ರಕ್ತವನ್ನು ಪರೀಕ್ಷಿಸದೆ ಇತರರಿಗೆ ರಕ್ತದಾನ ಮಾಡಿದಾಗ, ಲೈಂಗಿಕ ರೋಗಿಗೆ ಕೊಟ್ಟ ಇಂಜೆಕ್ಷನ್ ಸೂಜಿ ಮತ್ತು ಸಿರಂಜನ್ನು ಸ್ಟೆರಿಲೈಜ್ ಮಾಡದೆ (ರೋಗಾಣು ನಾಶವಾಗುವಂತೆ ಕುದಿಸದೆ) ಇತರರಿಗೆ ಚುಚ್ಚಿದಾಗ ಲೈಂಗಿಕ ರೋಗಗಳು ಅಂಟಬಹುದು.

ಬ್ಯಾಕ್ಟೀರಿಯ, ವೈರಸ್, ಫಂಗಸ್, ಟ್ರಿಪನೀಮಾ, ಕ್ಲಾಮಿಡಿಯಾ, ಪ್ರೊಟೋಜೊವಾ ಮತ್ತು ಮೈಕೊಪ್ಲಾಸ್ಮ ಮುಂತಾದ ಅಣು ಜೀವಿಗಳು ಲೈಂಗಿಕ ರೋಗಗಳು ಬರಲು ಕಾರಣವಾಗಿದೆ.

ಸಿಫಿಲಿಸ್, ಗೊನೋರಿಯಾ, ಶ್ಯಾಂಕ್ರ್ಯಾಡ್, ಲಿಂಪೋಗ್ರ್ಯಾನ್ಯುಲೋಮ ವೆನೇರಿಯಮ್, ಗ್ರ್ಯಾನ್ಯುಲೋಮ ವೆನೆರಿಯಮ್, ನಾನ್‌ಗೋನೊಕಾಕಲ್ ಯುರೈತ್ರೈಟಿಸ್, ವೆನರಿಯಲ್ ವಾರ್ಟ್, ಜನೈಟಲ್ ಹರ್ಪಿಸ್, ಹೆಪಟೈಟಿಸ್-ಬಿ ಮತ್ತು ಏಡ್ಸ್ ರೋಗಗಳು ಬಹು ಮುಖ್ಯವಾದ ಕಾಯಿಲೆಗಳು.

ಲೈಂಗಿಕ ರೋಗಗಳ ಲಕ್ಷಣಗಳು ಸಾಮಾನ್ಯವಾಗಿ ರೋಗಿಯ ಲೈಂಗಿಕ ಸಂಪರ್ಕ ಪಡೆದ ನಂತರದಿಂದ ಮೂರು ತಿಂಗಳ ಒಳಗಾಗಿ ಕಾಣಿಸಿಕೊಳ್ಳುತ್ತದೆ. ರೋಗದ ಲಕ್ಷಣಗಳ ಮೊದಲ ಚಿನ್ಹೆಗಳು ಎಲ್ಲಿ ಲೈಂಗಿಕ ರೋಗಾಣುಗಳು ದೇಹವನ್ನು ಮೊದಲು ಹೊಕ್ಕುತ್ತದೆಯೊ ಆ ಜಾಗದಲ್ಲಿ ಕಾಣಿಸಿಕೊಳ್ಳುತ್ತವೆ. ಗುಳ್ಳೆಗಳು, ಗಂಟುಗಳು, ಅಲ್ಸರ್, ಉರಿಮೂತ್ರ, ಕೀವಿನ ಮೂತ್ರ, ಲಿಂಫ್ ಗ್ರಂಥಿಗಳ ಊತ, ನೋವು, ಜ್ವರ ಮುಂತಾದ ಲಕ್ಷಣಗಳಲ್ಲಿ ಯಾವುದಾದರೂ ಒಂಟಿಯಾಗಿ, ಜೊತೆಯಾಗಿ ಅಥವ ಒಟ್ಟಿಗೆ ಕಾಣಿಸಿಕೊಳ್ಳಬಹುದು. ಸಿಫಿಲಿಸ್, ಏಡ್ಸ್ ಮುಂತಾದ ಕಾಯಿಲೆಗಳಲ್ಲಿ ಕೆಲವು ವರ್ಷಗಳ ತನಕ ಯಾವೊಂದು ಲಕ್ಷಣಗಳು ಕಾಣಿಸಿಕೊಳ್ಳದೆ ಇರಬಹುದು, ಅಕಸ್ಮತ್ತಾಗಿ ರಕ್ತದ ಪರೀಕ್ಷೆಯಿಂದ ಕಾಯಿಲೆಯ ಇರುವಿಕೆ ಗೊತ್ತಾಗಬಹುದು. ರಕ್ತ ಪರೀಕ್ಷೆಯಿಂದ ಎಲ್ಲಾ ಲೈಂಗಿಕ ಕಾಯಿಲೆಗಳನ್ನು ಪತ್ತೆ ಹಚ್ಚಲು ಸಾಧ್ಯವಾಗುವುದಿಲ್ಲ. ಬಹಳಷ್ಟು ಕಾಯಿಲೆಗಳನ್ನು ವೈದ್ಯರು ಖುದ್ದು ಪರೀಕ್ಷೆಯಿಂದಲೆ ಪತ್ತೆ ಹಚ್ಚಬೇಕಾಗಬಹುದು.

ಲೈಂಗಿಕ ರೋಗಗಳ ಅಸ್ತಿತ್ವ ಬಹಳಷ್ಟು ಹಳೆಯದಾದರೂ ಇತ್ತೀಚೆಗೆ ಕಾಲಿರಿಸಿದ ಜನೈಟಲ್ ಹರ್ಪಿಸ್, ಹೆಪಟೈಟಿಸ್-ಬಿ, ಎನ್.ಜಿ.ಯು ಹಾಗು ಏಡ್ಸ್ ಮುಂತಾದ ಲೈಂಗಿಕ ಕಾಯಿಲೆಗಳು ಎಲ್ಲಾ ಕಾಯಿಲೆಗಳನ್ನು ಹಿಂದಕ್ಕೆ ಹಾಕಿ ವಿಶ್ವದಲ್ಲೆಲ್ಲಾ ಉಪದ್ರವಕಾರಿಗಳಾಗಿ ಪರಿಣಮಿಸಿದೆ.

ಮಹಿಳೆ ಮತ್ತು ಪುರುಷರ ಬಂಜೆತನಕ್ಕೆ ಅಸಹಜ ಗರ್ಭಧಾರಣೆಗೆ, ಗರ್ಭಪಾತಕ್ಕೆ, ಮಕ್ಕಳ ಆಜನ್ಮ ವಿಕಲಾಂಗಕ್ಕೆ, ಮಹಿಳೆಯ ಕಿಬ್ಬೊಟ್ಟೆಯೊಳಗಿನ ಸೋಂಕಿಗೆ ಬಹಳಷ್ಟು ಈ ಲೈಂಗಿಕ ರೋಗಗಳು ಕಾರಣವಾಗಿ ಕೆಲವೊಮ್ಮೆ ಪ್ರಾಣಕ್ಕೂ ಅಪಾಯಕಾರಿಯಾಗುವುದುಂಟು.

ಲೈಂಗಿಕ ರೋಗ ತಗಲಿದ ತಕ್ಷಣವೆ ವೈದ್ಯರಿಂದ ಪರೀಕ್ಷಿಸಿಕೊಂಡು ಸರಿಯಾಗಿ ಔಷಧಗಳನ್ನು ತೆಗೆದುಕೊಂಡರೆ ಬಹುಪಾಲು ರೋಗಗಳನ್ನು ಪೂರ್ಣವಾಗಿ ಗುಣಪಡಿಸಬಹುದು.

ಲೈಂಗಿಕ ರೋಗಗಳ ಬಗ್ಗೆ ಪ್ರತಿಯೊಬ್ಬರು ಎಚ್ಚರಿಕೆಯಿಂದಿದ್ದು ತಮ್ಮ ಜೀವನದಲ್ಲಿ ಶಿಸ್ತನ್ನು ಅಳವಡಿಸಿಕೊಂಡು ಅನೀತಿಯುತ ಲೈಂಗಿಕ ಸಂಪರ್ಕದ ತ್ಯಾಗದಿಂದ ಮಾತ್ರ ಲೈಂಗಿಕ ರೋಗಗಳನ್ನು ಬರದಂತೆ ನೋಡಿಕೊಳ್ಳಬಹುದು. ಏಕ ಸಂಗಾತಿ ನಿಷ್ಠೆ ಬಹಳ ಅಗತ್ಯ.

* * * * *

26. ಲೈಂಗಿಕ ರೋಗ - ಸಿಫಿಲಿಸ್, ಗೊನೋರಿಯಾ

ಸಿಫಿಲಿಸ್

ಲೈಂಗಿಕ ರೋಗಗಳಲ್ಲಿ ಬಹು ಮುಖ್ಯವಾದ ಬಹಳಷ್ಟು ಹಳೆಯದಾದ ಪ್ರಪಂಚದಾದ್ಯಂತ ಹರಡಿ ಕೊಂಡಿರುವ ಈ ಕಾಯಿಲೆ ಲೈಂಗಿಕ ರೋಗಪೀಡಿತರ ಜೊತೆಗಿನ ಲೈಂಗಿಕ ಸಂಬಂಧದಿಂದ ಒಬ್ಬರಿಂದ ಬೇರೋಬ್ಬರಿಗೆ ಹರಡುತ್ತದೆ. ಟ್ರಿಪನೀಮ ಪ್ಯಾಲಿಡಮ್ ಎಂಬ ರೋಗಾಣು ಈ ರೋಗಕ್ಕೆ ಕಾರಣವಾಗಿದೆ.

ಒಮ್ಮೆ ಶರೀರವನ್ನು ಹೊಕ್ಕರೆ ದೇಹದ ಪ್ರತಿಯೊಂದು ಅಂಗಗಳು ಮತ್ತು ಅಂಗಾಂಶಗಳನ್ನು ಬಿಡದೆ ಕಾಡಿ ಸೋಂಕಿನ ಉಪದ್ರವದಿಂದ ಆ ವ್ಯಕ್ತಿಯ ಜೀವಿತದ ಯಾವುದೇ ಅವಧಿಯಲ್ಲಿ ಬೇಕಾದರು ವಿವಿಧ ರೀತಿಯ ಕೆಡಕನ್ನು ತರಬಲ್ಲದು. ಕಾಯಿಲೆ ತಗಲಿರುವ ವ್ಯಕ್ತಿಯ ಜೊತೆ ಲೈಂಗಿಕ ಕ್ರಿಯೆಯಲ್ಲಿ ತೊಡಗುವ ವ್ಯಕ್ತಿಗಳಿಗೆ ಸುಲಭವಾಗಿ ಈ ರೋಗ ಅಂಟಿದರೂ ಲೈಂಗಿಕ ಕ್ರಿಯೆಯಲ್ಲಿ ಭಾಗಿಯಾಗದ ಇತರರಿಗೂ ರೋಗಿಯ ಚರ್ಮ ತಾಗಿದಾಗ ರೋಗಿಗೆ ಕೊಟ್ಟ ಇಂಜೆಕ್ಷನ್ ಅನ್ನು ಸರಿಯಾಗಿ ಸ್ಟೆರಿಲೈಜ್ ಮಾಡದೆ ಅಥವ ಬಿಸಿನೀರಿನಲ್ಲಿ ಕುದಿಸದೆ ಇತರರಿಗೆ ಚುಚ್ಚಿದಾಗ, ಪರೀಕ್ಷಿಸದೆ ರೋಗದ ವ್ಯಕ್ತಿಯ ರಕ್ತವನ್ನು ಇತರರಿಗೆ ಕೊಟ್ಟಾಗ ಮತ್ತು ರೋಗವಿರುವ ತಾಯಿಗೆ ಹುಟ್ಟುವ ಮಗುವಿಗೂ ಈ ಕಾಯಿಲೆ ಅಂಟುತ್ತದೆ.

ಒಮ್ಮೆ ರೋಗಾಣು ಶರೀರವನ್ನು ಹೊಕ್ಕಿದ ಮೇಲೆ 2 ವರ್ಷಗಳವರೆಗೆ ಬಹಳ ಚಟುವಟಿಕೆಯಿಂದ ಇದ್ದು ಕಾಯಿಲೆ ಇತರರಿಗೆ ತೀಕ್ಷ್ಣವಾಗಿ ಅಂಟುತ್ತದೆ. ರೋಗದ ಲಕ್ಷಣಗಳು ಬಹಳ ಸಂಕೀರ್ಣತೆಯಿಂದ ಕೂಡಿರುವುದರಿಂದ ಈ ಕಾಯಿಲೆಯ ಅವಧಿಯನ್ನು 4 ಹಂತಗಳಾಗಿ ವಿಂಗಡಿಸಬಹುದು.

(ಅ) ಪ್ರೈಮರಿ ಸಿಫಿಲಿಸ್ (ಪ್ರಾಥಮಿಕ ಹಂತ) (ಆ) ಸೆಕೆಂಡರಿ ಸಿಫಿಲಿಸ್ (ದ್ವಿತೀಯ ಹಂತ) (ಇ) ಲೇಟೆಂಟ್ ಸಿಫಿಲಿಸ್ (ನಿದ್ರಾವಸ್ಥೆಯ ಹಂತ) (ಈ) ಲೇಟ್ ಸಿಫಿಲಿಸ್ (ಅಂತಿಮ ಹಂತ)

ಅ) ಪ್ರೈಮರಿ ಸಿಫಿಲಿಸ್

9 ದಿನಗಳಿಂದ 3 ತಿಂಗಳಲ್ಲಿ ಸಾಮಾನ್ಯವಾಗಿ 3 ವಾರದಳೊಳಗೆ ರೋಗಾಣು ದೇಹವನ್ನು ಹೊಕ್ಕಿದ ಜಾಗದಲ್ಲಿ ಮಾತ್ರ ರೋಗದ ಲಕ್ಷಣ

ಕಾಣಿಸಿಕೊಳ್ಳುತ್ತದೆ. ಸಾಮಾನ್ಯವಾಗಿ ಜನನೇಂದ್ರಿಯಗಳ ಮೇಲೆ ಸುತ್ತಮುತ್ತ ಅಥವ ಒಳಭಾಗದಲ್ಲಿ, ಅಪರೂಪವಾಗಿ ಚುಂಬನದಿಂದ ತುಟಿ, ನಾಲಿಗೆ, ಬಾಯಿಯ ಒಳಭಾಗ ಮತ್ತು ಸ್ತನಗಳ ಮೇಲೆ, ಗುದದ್ವಾರ ಸಂಭೋಗದಿಂದ ಗುದದ್ವಾರದ ಸುತ್ತ ಮತ್ತು ಬೆರಳುಗಳ ಸ್ಪರ್ಶದಿಂದ ಬೆರಳಿನ ತುದಿಗಳಲ್ಲಿ ಸೋಂಕಿನ ಲಕ್ಷಣವಾದ ನೋವಿಲ್ಲದ ಒಂದೆರಡು ಸೆಂ. ಮೀ. ಅಗಲದ ಒಂದು ಅಥವ ಎರಡು ಅಲ್ಸರ್ (ಹುಣ್ಣು)ಗಳು ಕಾಣಿಸಿಕೊಳ್ಳುತ್ತವೆ ಮತ್ತು ಅಲ್ಸರ್ ಹತ್ತಿರ ಕೆಲವು ಲಿಂಫ್ ನೋಡ್ ಗ್ರಂಥಿಗಳು ಹರಳಿಕೊಂಡಿರುತ್ತವೆ. (ಬರಗಳ್ಳೆ ಕಟ್ಟುವುದು) ಔಷಧಿ ತೆಗೆದುಕೊಳ್ಳದಿದ್ದರೂ 3 ರಿಂದ 10 ವಾರಗಳಲ್ಲಿ ತನ್ನಷ್ಟಕ್ಕೆ ತಾನೇ ಈ ಅಲ್ಸರ್ ಒಣಗಿ ಹೋಗುತ್ತದೆ.

ಔಷಧವಿಲ್ಲದೆ ಅಲ್ಸರ್ ತನ್ನಷ್ಟಕ್ಕೆ ತಾನೆ ಒಣಗಿ ಹೋದಾಗ ಕಾಯಿಲೆ ವಾಸಿಯಾಗಿದೆ ಎಂದು ತಿಳಿದುಕೊಳ್ಳಬಾರದು. ರೋಗಾಣು ದ್ವಾರದ ಹುಣ್ಣಿನಿಂದ ಒಳನುಗ್ಗಿ ನಂತರ ದೇಹದೊಳಗೆ ವೃದ್ಧಿಸಿ ರಕ್ತದ ಮೂಲಕ ದೇಹದ ವಿವಿಧ ಭಾಗಗಳಿಗೆ ಪಸರಿಸಿ ದ್ವಿತೀಯ ಹಂತಕ್ಕೆ ಕಾಲಿರಿಸುತ್ತದೆ. ಪ್ರೈಮರಿ ಸಿಫಿಲಿಸ್‌ನ ಅಲ್ಸರ್ ಮಹಿಳೆಯರ ಜನನೇಂದ್ರಿಯದ ಒಳಭಾಗದಲ್ಲಿದ್ದ ಪಕ್ಷದಲ್ಲಿ ರೋಗಿಗಳ ಗಮನಕ್ಕೆ ಬಾರದೆ ಒಮ್ಮೆಗೆ ಸೆಕೆಂಡರಿ ಸಿಫಿಲಿಸ್ ರೋಗದ ಚಿಹ್ನೆಗಳಿಂದ ವೈದ್ಯರ ಹತ್ತಿರ ಬರಬಹುದು.

ಆ) ಸೆಕೆಂಡರಿ ಸಿಫಿಲಿಸ್

ಪ್ರೈಮರಿ ಸಿಫಿಲಿಸ್‌ನ ಅಲ್ಸರ್ ಕಾಣಿಸಿಕೊಂಡ ಒಂದು ತಿಂಗಳ ನಂತರದಿಂದ 6 ತಿಂಗಳಿನಲ್ಲಿ ಸಾಮಾನ್ಯವಾಗಿ 6 ರಿಂದ 8 ವಾರದೊಳಗೆ ದ್ವಿತೀಯ ಹಂತದ ರೋಗದ ಲಕ್ಷಣಗಳಾದ ವಿವಿಧ ರೀತಿಯ ಕಡಿತವಿಲ್ಲದ ಕಂದು ಬಣ್ಣದ ಗುಳ್ಳೆಗಳು ಮೈ ಮೇಲೆಲ್ಲಾ ಸುಮಾರು ಮುಕ್ಕಾಲು ಭಾಗದಷ್ಟು ರೋಗಿಗಳಲ್ಲಿ ಕಾಣಿಸಿಕೊಳ್ಳುತ್ತದೆ. ಸುಮಾರು ಅರ್ಧ ದಷ್ಟು ರೋಗಿಗಳ ದೇಹದ ವಿವಿಧ ಭಾಗಗಳಲ್ಲಿ ಚರ್ಮದ ಕೆಳಗಡೆ ಇರುವ ಲಿಂಫ್ಸ್ ನೋಡ್ಸ್ ಗ್ರಂಥಿಗಳು ಹರಳಿಕೊಂಡಿರುತ್ತವೆ. ಶೇ. ಮೂರನೇ ಒಂದು ಭಾಗ ದಷ್ಟು ರೋಗಿಗಳ ಬಾಯಿಯ ಒಳಭಾಗದಲ್ಲಿ ಅಲ್ಸರ್ ಮುಂತಾದ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ ಮತ್ತು ಶೇ. 10 ಭಾಗದ ರೋಗಿಗಳು ಮೆದುಳು, ನರಗಳು, ಕಣ್ಣು ಮೂಳೆ ಮತ್ತು ಜೀರ್ಣಾಂಗಗಳಲ್ಲಿ ರೋಗದ ಲಕ್ಷಣಗಳು ಕಾಣಿಸಿಕೊಂಡು ಸಾವನ್ನಪ್ಪಬಹುದು.

ಇ) ಲೇಟೆಂಟ್ ಸಿಫಿಲಿಸ್

ಔಷಧಿ ತೆಗೆದುಕೊಳ್ಳದಿದ್ದರೂ ದ್ವಿತೀಯ ಹಂತದ ರೋಗದ ಲಕ್ಷಣಗಳೆಲ್ಲಾ ತನ್ನಷ್ಟಕ್ಕೆ ತಾನೆ ಕಡಿಮೆಯಾಗಿ 2 ವರ್ಷಗಳ ನಂತರ ನಿದ್ರಾವಸ್ಥೆಯ ಹಂತಕ್ಕೆ ರೋಗಿ ಕಾಲಿರಿಸುತ್ತಾನೆ. ಶರೀರದಲ್ಲಿ ರೋಗದ ಯಾವುದೇ ಲಕ್ಷಣಗಳು ಗೋಚರಿಸದೆ ರಕ್ತದಲ್ಲಿ ಮಾತ್ರ ಕಾಯಿಲೆಯ ಇರುವಿಕೆಯನ್ನು ವಿ.ಡಿ ಆರ್ ಎಲ್ ಮುಂತಾದ ಪರೀಕ್ಷೆಗಳಿಂದ ಪತ್ತೆ ಹಚ್ಚಿ ಕಾಯಿಲೆಯನ್ನು ಗುಣಪಡಿಸಬಹುದು. ಇಲ್ಲದಿದ್ದರೆ ಮುಂದೆ ರೋಗಿಯ ಸಹಜ ರೋಗ ನಿರೋಧಕ ಗುಣವನ್ನು ಅವಲಂಬಿಸಿ ಜೀವನದ ಯಾವುದೇ ಅವಧಿಯಲ್ಲಿ ಬೇಕಾದರೂ ರೋಗದ ಬೆಳವಣಿಗೆ ಕಾಣಿಸಿಕೊಂಡು ಅಂತಿಮ ಹಂತಕ್ಕೆ ರೋಗಿ ಜಿಗಿಯುತ್ತಾನೆ.

ಈ) ಲೇಟ್ ಸಿಫಿಲಿಸ್

ರೋಗಾಣು ದೇಹವನ್ನು ಹೊಕ್ಕಿದ 3 ವರ್ಷದಿಂದ ಜೀವನದ ಯಾವುದೇ ಅವಧಿಯಲ್ಲಿ ಸಾಮಾನ್ಯವಾಗಿ 10 ವರ್ಷದೊಳಗೆ ಶರೀರದ ಪ್ರತಿಯೊಂದು ಅಂಗ ಮತ್ತು ಅಂಗಾಂಶಗಳಲ್ಲಿಯೂ ರೋಗ ಪಸರಿಸಿ ಚರ್ಮ ಮತ್ತು ಗಂಟಲಿನಲ್ಲಿ ಅಲ್ಸರ್‌ಗಳು, ಮೂಳೆ ಮುರಿತ, ಮೂಗಿನ ಊತ, ಸಿರೋಸಿಸ್, ನಪುಂಸಕತೆ ಮುಂತಾದ ಲಕ್ಷಣಗಳು ಕಾಣಿಸಿಕೊಂಡು ಪ್ರಾಣಕ್ಕೆ ಭೀತಿಯಾಗಬಹುದು. ಮುಂದೆ ರೋಗ ಬಲಿಯುತ್ತಾ 20 ವರ್ಷದೊಳಗೆ ವಿವಿಧ ಹೃದ್ರೋಗಗಳು ನರ ದೌರ್ಬಲ್ಯ, ಬುದ್ಧಿಭ್ರಮಣೆ ಮತ್ತು ಲಕ್ವ ಮುಂತಾದ ಲಕ್ಷಣಗಳಿಂದ ರೋಗಿ ಕೊನೆಯುಸಿರೆಳೆಯುತ್ತಾನೆ.

ಸಿಫಿಲಿಸ್ ರೋಗ ತಗಲಿರುವ ಮಹಿಳೆಯರು ಗರ್ಭಿಣಿಯರಾದರೆ ಗರ್ಭಪಾತ ಉಂಟಾಗಬಹುದು ಅಥವ ಹುಟ್ಟುವಾಗಲೆ ಮಗು ಸತ್ತಿರಬಹುದು. ಒಂದು ವೇಳೆ ಬದುಕಿದ್ದರೆ ರೋಗ ವೃದ್ಧಿಸಬಹುದು. ವಿ.ಡಿ. ಆರ್. ಎಲ್ ರಕ್ತ ಪರೀಕ್ಷೆಯಿಂದ ಹಲವು ಸಾರಿ ಕಾಯಿಲೆಯ ಇರುವಿಕೆ ಗೊತ್ತಾಗುವುದಿಲ್ಲ. ಆದುದರಿಂದ ವೈದ್ಯರ ಖುದ್ದು ಪರೀಕ್ಷೆ ಅತಿ ಮುಖ್ಯ. ಜೊತೆಗೆ ವಿಶಿಷ್ಟ ಪರೀಕ್ಷಾ ವಿಧಾನಗಳಿಂದ ಕಾಯಿಲೆಯ ಇರುವಿಕೆಯನ್ನು ಖಚಿತ ಪಡಿಸಿಕೊಳ್ಳಬಹುದು.

ಬೆನ್ಜಾತಿನ್ ಪೆನ್ಸಿಲಿನ್ ಈ ಕಾಯಿಲೆಗೆ ವರದೌಷಧವಾಗಿದ್ದು ಅನುಮಾನ ಇದ್ದವರು ವೈದ್ಯರಿಂದ ಪರೀಕ್ಷಿಸಿಕೊಂಡು ಚಿಕಿತ್ಸೆ ತೆಗೆದುಕೊಂಡರೆ ಸೋಂಕು ಸಂಪೂರ್ಣ ಗುಣವಾಗಿ ಮುಂದೆ ಒದಗಬಹುದಾದ ಅಪಾಯದಿಂದ ಪಾರಾಗಬಹುದು. ಒಬ್ಬರಿಗೆ ಕಾಯಿಲೆ ಇದ್ದರೆ ಪತಿ ಪತ್ನಿಯರಿಬ್ಬರೂ ಚಿಕಿತ್ಸೆ ತೆಗೆದುಕೊಳ್ಳಬೇಕು. ಗರ್ಭಿಣಿಯರಾಗುವುದಕ್ಕಿಂತ ಮುಂಚೆ ಅಥವ

ಗರ್ಭಿಣಿಯರಾದ 3 ತಿಂಗಳೊಳಗೆ ಕಾಯಿಲೆ ಪತ್ತೆ ಹಚ್ಚಿ ತಕ್ಕ ಚಿಕಿತ್ಸೆ ತೆಗೆದುಕೊಂಡರೆ ಗರ್ಭದಲ್ಲಿರುವ ವಂಶದ ಕುಡಿಯನ್ನು ರೋಗದಿಂದ ಪಾರು ಮಾಡಬಹುದು.

ಗೊನೋರಿಯಾ

ಲೈಂಗಿಕ ರೋಗಗಳಲ್ಲೆಲ್ಲಾ ಬಹಳ ಸಾಮಾನ್ಯ ಮತ್ತು ಸರ್ವಾಂತರ್ಯಾಮಿಯಾದ ಈ ಕಾಯಿಲೆ ಗೊನೋಕಾಕ್ಕೈ ಎಂಬ ಬ್ಯಾಕ್ಟೀರಿಯಾದಿಂದ ಬರುತ್ತದೆ. ಈ ರೋಗವಿರುವ ವ್ಯಕ್ತಿಯ ಜೊತೆ ಲೈಂಗಿಕ ಸಂಪರ್ಕ ಪಡೆದವರಿಗೆ ಕಾಯಿಲೆ ಅಂಟುತ್ತದೆ. ಲೈಂಗಿಕ ಸಂಪರ್ಕವಿಲ್ಲದೆಯೆ ರೋಗವಿರುವ ತಾಯಿಯ ಜನನೇಂದ್ರಿಯದಿಂದ ಹೆರಿಗೆ ಸಮಯದಲ್ಲಿ ಮಕ್ಕಳ ಕಣ್ಣು ಮತ್ತು ಜನನೇಂದ್ರಿಯಗಳಿಗೆ ರೋಗ ಅಂಟಬಹುದು. ರೋಗಾಣುವಿರುವ ರೋಗಿಯ ಮೂತ್ರ ಅಥವ ಜನನೇಂದ್ರಿಯದ ರಸ ಅಥವ ಕೀವು ತಾಗಿ, ರೋಗಿ ಉಪಯೋಗಿಸುವ ಉಡುಪು ಮುಂತಾದ ವಸ್ತುಗಳನ್ನು ಇತರರು ಆಕಸ್ಮಿಕವಾಗಿ ಉಪಯೋಗಿಸಿದಾಗ, ಕಣ್ಣು ಮತ್ತು ಜನನೇಂದ್ರಿಯಗಳಿಗೆ ತಾಗಿದರೆ ರೋಗ ಅಂಟಬಹುದು.

ಪುರುಷ ಮತ್ತು ಸ್ತ್ರೀ ವೇಶ್ಯೆಯರು, ಸಲಿಂಗರತಿ ಕ್ರೀಡೆಯಲ್ಲಿ ಭಾಗವಹಿಸುವವರು, ಮಾದಕ ವಸ್ತುಗಳ ಚಟವಿರುವವರು ಹಾಗೂ ಅನೈತಿಕ ಲೈಂಗಿಕ ಸಂಪರ್ಕ ಪಡೆಯುವ ಇತರ ವ್ಯಕ್ತಿಗಳಲ್ಲಿಯೂ ಈ ಕಾಯಿಲೆ ಜಾಸ್ತಿ. ಲೈಂಗಿಕ ಕ್ರಿಯೆ ಸಮಯದಲ್ಲಿ ರೋಗಿಯ ಶಿಶ್ನವು ಬಾಯಿ ಅಥವ ಗುದದ್ವಾರದ ಸಂಪರ್ಕ ಪಡೆದರೆ ಆ ಜಾಗಗಳೂ ಸೋಂಕಿಗೆ ಗುರಿಯಾಗುತ್ತದೆ. ಸೋಂಕು ತಗಲಿದ ಎರಡದಿಂದ ಹತ್ತು ದಿನಗಳಲ್ಲಿ ಕಾಯಿಲೆಯ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಸ್ತ್ರೀಯರಲ್ಲಿ ನಿಧಾನವಾಗಿ ಕಾಣಿಸಿಕೊಳ್ಳಬಹುದು. ಪುರುಷರಲ್ಲಿ ಮೊದಲಿಗೆ ಶಿಶ್ನದ ಭಾಗದಲ್ಲಿರುವ ಮೂತ್ರ ನಾಳದಲ್ಲಿ ಮೂತ್ರ ವಿಸರ್ಜನೆಯ ಸಮಯದಲ್ಲಿ ಉರಿ ಕಾಣಿಸಿಕೊಂಡು ಒಂದೆರಡು ದಿನಗಳಲ್ಲಿ ನೋವಿನ ಸಹಿತ ಕೀವು ಮೂತ್ರ ದ್ವಾರದಿಂದ ಸೋರುತ್ತದೆ. ಚಿಕಿತ್ಸೆ ತೆಗೆದುಕೊಳ್ಳದಿದ್ದರೆ ಸೋಂಕು ಮೇಲಿನ ಭಾಗದ ಮೂತ್ರ ನಾಳ, ಪ್ರಾಸ್ಟೇಟ್ ಮುಂತಾದ ಭಾಗಗಳಿಗೆ ಹರಡಿ ಊದಿಕೊಂಡು ಕೀವು ಕಟ್ಟಿ ಕುರುಗಳಾಗಿ ಒಡೆದು ಅಥವ ರಕ್ತ ಮಿಶ್ರಿತ ಕೀವು ರಂಧ್ರ ಮಾಡಿಕೊಂಡು ಶಿಶ್ನದ ಚರ್ಮದ ಮೂಲಕ ಅಥವ ಮೂತ್ರ ನಾಳದ ಮೂಲಕ ಹೊರ ಸೂಸಿ ಪ್ರಾಣಾಪಾಯಕ್ಕೀಡಾಗಬಹುದು.

ಸ್ತ್ರೀಯರಲ್ಲಿ ಮೊದಲಿಗೆ ಗರ್ಭದ್ವಾರ ಮತ್ತು ಮೂತ್ರ ನಾಳಗಳು ಸೋಂಕಿಗೆ ತುತ್ತಾಗಿ ಮೂತ್ರ ವಿಸರ್ಜನೆಯಲ್ಲಿ ಉರಿ ನಂತರ ಕೀವು ಸೋರುತ್ತ, ರೋಗ ಗರ್ಭ ನಾಳಕ್ಕೂ ಹರಡುತ್ತದೆ. ಚಿಕಿತ್ಸೆ ತೆಗೆದುಕೊಳ್ಳದೆ ನಿರ್ಲಕ್ಷಿಸಿದರೆ ಸೋಂಕು ದೇಹದ ವಿವಿಧ ಅಂಗಾಂಗಗಳಿಗೂ ಹರಡಿ ಕೆಡಕನ್ನುಂಟು ಮಾಡಬಹುದು.

ಕಾಯಿಲೆಯ ಚಿಗುರಿನಲ್ಲಿಯೇ ತಕ್ಕ ಚಿಕಿತ್ಸೆ ತೆಗೆದುಕೊಳ್ಳದಿದ್ದರೆ ಅಥವ ಚಿಕಿತ್ಸೆ ಸಂಪೂರ್ಣವಾಗದಿದ್ದರೆ ಸೋಂಕು ಪೂರ್ಣ ತೊಲಗದೆ ದೀರ್ಘಾವಧಿಯವರೆಗೆ ಮಂದಗತಿಯಲ್ಲಿ ಮುಂದುವರೆದು ಪುರುಷರಲ್ಲಿ ಉರಿ ಮೂತ್ರ ವಿಸರ್ಜನೆ, ಶಿಶ್ನ ಮತ್ತು ಗುದದ್ವಾರದ ನಡುವೆ ಉರಿ ಮತ್ತು ನೋವು (ಪ್ರಾಸ್ಟಟೈಟಿಸ್), ಮೂತ್ರ ವಿಸರ್ಜನೆಯಲ್ಲಿ ಅಡಚಣೆ (ಸ್ಟ್ರಿಕ್ಚರ್‌ಯುರೇತ್ರ) ನಿರ್ವೀರ್ಯತೆ (ಸ್ಟೆರಿಲಿಟಿ) ಮುಂತಾದ ಲಕ್ಷಣಗಳು ಮತ್ತು ಸ್ತ್ರೀಯರಲ್ಲಿ ಕಿಬ್ಬೊಟ್ಟೆಯ ನೋವು, ಮುಟ್ಟಿನ ತೊಂದರೆ, ಸಂಭೋಗದ ಸಮಯದಲ್ಲಿ ನೋವು (ಪೆಲ್ವಿಕ್ ಇನ್ಫೆಕ್ಷನ್) ಬಂಜೆತನ (ಸಾಲ್ಪನ್‌ಜೈಟಿಸ್) ಮುಂತಾದ ಲಕ್ಷಣಗಳು ಯಾವ ಚಿಕಿತ್ಸೆಯಿಂದಲೂ ತಹಬಂದಿಗೆ ಬರದೆ ಜೀವನ ಪರ್ಯಂತ ಕಾಡಬಹುದು.

ಪೆನ್ಸಿಲಿನ್ ಔಷಧಿಗೆ ಸುಲಭವಾಗಿ ಸಾಯುತ್ತಿದ್ದ ರೋಗಾಣುಗಳು ಈಗ ನಿರೋಧಕ ಶಕ್ತಿಯನ್ನು ಗಳಿಸಿ ಕೊಂಡಿರುವುದರಿಂದ ಬಹಳಷ್ಟು ರೋಗಿಗಳನ್ನು ಹೊಸ ರೀತಿಯ ಸ್ಪೆಕ್ಟಿನೋಮೈಸಿನ್, ನಾರ್ಫ್ಲಾಕ್ಸಿಸಿನ್ ಮುಂತಾದ ಔಷಧಗಳಿಂದ ಪ್ರಾರಂಭದಲ್ಲಿ ಸಂಪೂರ್ಣವಾಗಿ ಗುಣಪಡಿಸಬಹುದು.

* * * * *

27. ವಿವಿಧ ಲೈಂಗಿಕ ರೋಗಗಳು

ಪಿ.ಜಿ.ಯು (ಪೋಸ್ಟ್ ಗೋನೋಕಾಕಲ್ ಯುರೈತ್ರೈಟಿಸ್)

ಗೋನೋಕಾಕೈ ಬ್ಯಾಕ್ಟೀರಿಯಾಗಳ ಜೊತೆಯಲ್ಲಿ ಅನೇಕ ರೋಗಕಾರಕ ಅಣು ಜೀವಿಗಳು ಮೂತ್ರ ನಾಳದೊಳಕ್ಕೆ ನುಸುಳಿ ಕೊಂಡು ಗೋನೋರಿಯಾವನ್ನು ಔಷಧಗಳಿಂದ ಸಂಪೂರ್ಣವಾಗಿ ಗುಣಪಡಿಸಿದರೂ ಉಳಿದ ರೋಗಾಣುಗಳ ಉಪದ್ರವದಿಂದೊದಗುವ ಹೊಸ ರೀತಿಯ ಕಾಯಿಲೆಯನ್ನು ಪಿ.ಜಿ.ಯು. ಎನ್ನುತ್ತೇವೆ.

ಸಾಮಾನ್ಯವಾಗಿ ಮಹಿಳೆಯರಿಗಿಂತ ಪುರುಷರಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುವ ಈ ಕಾಯಿಲೆ ಗೊನೋರಿಯಾವನ್ನು ಸಂಪೂರ್ಣ ಗುಣಪಡಿಸಿಕೊಂಡ ಕೆಲವು ದಿನಗಳಿಂದ ಕೆಲವು ತಿಂಗಳ ನಂತರ ಈ ಕಾಯಿಲೆಯ ಲಕ್ಷಣಗಳೂ ಕಾಣಿಸಿಕೊಳ್ಳುತ್ತವೆ.

ಕಾಯಿಲೆಯ ಲಕ್ಷಣಗಳು ಮಂದಗತಿಯಲ್ಲಿ ಲಘು ಪ್ರಮಾಣದಲ್ಲಿ ಗೊನೋರಿಯಾ ಕಾಯಿಲೆಯ ಲಕ್ಷಣಗಳಿಗೆ ಹೋಲುವಂತಿದ್ದು ಚಿಕಿತ್ಸೆಯಿಂದ ಸ್ವಲ್ಪ ದಿನ ಶಮನವಾಗಿ ಮರುಕಳಿಸುತ್ತದೆ. ಇತ್ತೀಚಿನ ದಿನಗಳಲ್ಲಿ ಈ ಕಾಯಿಲೆಯಿಂದ ಬಳಲುತ್ತಿರುವ ವ್ಯಕ್ತಿಗಳು ಹೆಚ್ಚಾಗಿದ್ದು ಸಾಮಾನ್ಯವಾಗಿ ಮೂತ್ರ ನಾಳದಲ್ಲಿ ಅದರಲ್ಲಿಯೂ ಮೂತ್ರ ದ್ವಾರದ ಹತ್ತಿರ ಕಡಿತ, ಚುಚ್ಚುವಿಕೆ, ಬಿಸಿ ಮತ್ತು ಮೂತ್ರ ವಿಸರ್ಜನೆಯ ಸಮಯದಲ್ಲಿ ಉರಿ, ಕೆಲವೊಮ್ಮೆ ಲೋಳೆ ಮಿಶ್ರಿತ ಕೀವು ಕಾಣಿಸಿಕೊಳ್ಳಬಹುದು. ಇದಕ್ಕೆ ಟೆಟ್ರಾಸೈಕ್ಲಿನ್ ಔಷಧವನ್ನು ಉಪಯೋಗಿಸಬಹುದು.

ಶ್ಯಾಂಕ್ರೈಡ್

ರೋಗ ಪೀಡಿತರೊಡನೆ ಲೈಂಗಿಕ ಕ್ರಿಯೆಯಲ್ಲಿ ತೊಡಗುವುದರಿಂದ ಒಬ್ಬರಿಂದ ಮತ್ತೊಬ್ಬರಿಗೆ ಹರಡುವ ಹಿಮೋಫಿಲಿಸ್ ಡ್ಯೂಕ್ರಿ ಎಂಬ ರೋಗಾಣುವಿನಿಂದ ಬರುವ ಈ ಕಾಯಿಲೆ ರೋಗಾಣು ಸೇರಿದ ಜಾಗದಲ್ಲಿ 3 ರಿಂದ 5 ದಿನಗಳಲ್ಲಿ ಸಾಮಾನ್ಯವಾಗಿ ಜನನೇಂದ್ರಿಯ ಮತ್ತು ಅದರ ಸುತ್ತ ಮುತ್ತ ಮಾತ್ರ ನೋವಿನ ಮೆದು ಹುಣ್ಣು (ಅಲ್ಸರ್)ಗಳು ಕಾಣಿಸಿಕೊಳ್ಳುತ್ತವೆ.

ಮೂತ್ರ ವಿಸರ್ಜನೆಯ ಸಮಯದಲ್ಲಿ ಜನನೇಂದ್ರಿಯದ ಒಳಭಾಗದಲ್ಲಿರುವ ಕಣ್ಣಿಗೆ ಕಾಣದ ಅಲ್ಸರ್ ಮೇಲೆ ಮೂತ್ರ ಬಿದ್ದಾಗ ಉರಿ

ಕಾಣಿಸಿಕೊಂಡು ತಡೆಯಲಾರದೆ ಬಹಳಷ್ಟು ಮಹಿಳೆಯರು ವೈದ್ಯರ ಹತ್ತಿರ ಚಿಕಿತ್ಸೆಗೆ ಬರುತ್ತಾರೆ. ಚಿಕಿತ್ಸೆ ತೆಗೆದುಕೊಳ್ಳದಿದ್ದರೆ ಮುಂದೆ ಕಾಯಿಲೆಯು ಇಂಗ್ವೈನಲ್ (ತೊಡೆ ಮತ್ತು ಹೊಟ್ಟೆಯ ನಡುವೆ) ಸ್ಥಳದಲ್ಲಿರುವ ಲಿಂಫ್ ಗ್ರಂಥಿಗಳಿಗೆ ರೋಗ ಹರಡಿ ಬರಗಳ್ಳೆ ಕಟ್ಟಿ ಕುರುವಾಗಿ ಒಡೆದು ಕೀವು ಸೋರುತ್ತದೆ.

ದೃಢಕಾಯರಲ್ಲದ ಮತ್ತು ರೋಗ ನಿರೋಧಕ ಶಕ್ತಿ ಕುಂಠಿತಗೊಂಡ ವ್ಯಕ್ತಿಗಳಿಗೆ ಈ ಕಾಯಿಲೆ ಬಂದರೆ ಕೆಲವು ಸಾರಿ ಅಲ್ಸರ್‌ಗಳು ಬಹಳ ದೊಡ್ಡದಾಗಿ, ಇಡೀ ಜನನೇಂದ್ರಿಯವೇ ನಾಶವಾಗಬಹುದು. ಊನತೆ ಉಂಟಾಗುವ ಮುಂಚೆಯೇ ವೈದ್ಯರನ್ನು ಕಂಡು ಟೆಟ್ರಾಸೈಕ್ಲಿನ್ ಮತ್ತು ಸ್ಟ್ರೆಪ್ಟೋಮೈಸಿನ್ ಮುಂತಾದ ಔಷಧಿಗಳಿಂದ ಕಾಯಿಲೆಯನ್ನು ಪೂರ್ಣ ಗುಣಪಡಿಸಬಹುದು.

ಗ್ರ್ಯಾನ್ಯುಲೋಮ ಡೊನೊವಾನಿ

ವೇಶ್ಯೆಯರೊಂದಿಗೆ ನಡೆಸುವ ಲೈಂಗಿಕ ಸಂಪರ್ಕದಿಂದ ಹೆಚ್ಚಾಗಿ ದಕ್ಷಿಣ ಭಾರತದಲ್ಲಿ ಕಾಣಿಸಿಕೊಳ್ಳುವ ಈ ಕಾಯಿಲೆಗೆ ಡೋನೊವಾನಿಯ ಗ್ರ್ಯಾನ್ಯುಲೊಮ್ಯಾಟಿಸ್ ಎಂಬ ಬ್ಯಾಕ್ಟೀರಿಯಾ ಕಾರಣವಾಗಿದೆ. ರೋಗಾಣು ಒಳ ಸೇರಿದ ಜಾಗದಲ್ಲಿ ಕೆಲವು ದಿನಗಳಿಂದ ಕೆಲವು ತಿಂಗಳಲ್ಲಿ ಸಾಮಾನ್ಯವಾಗಿ ಒಂದು ತಿಂಗಳೊಳಗೆ ನೋವಿಲ್ಲದ ಅಲ್ಸರ್ ಕಾಣಿಸಿಕೊಂಡು ವೃತ್ತಾಕಾರದಲ್ಲಿ ದೊಡ್ಡದಾಗುತ್ತ ಕೆಂಪು ವೆಲ್ವೆಟ್ ಬಟ್ಟೆಯಂತೆ ಎದ್ದು ಕಾಣುತ್ತದೆ. ಚಿಕಿತ್ಸೆ ತೆಗೆದುಕೊಳ್ಳದಿದ್ದರೆ ಕೆಲವು ಸೆಂ.ಮೀ. ನಷ್ಟು ದೊಡ್ಡದಾಗುತ್ತಾ ಗುದದ್ವಾರ ಮತ್ತು ಇಂಗ್ವೈನಲ್ ಸ್ಥಳ (ಹೊಟ್ಟೆ ಮತ್ತು ತೊಡೆಯ ನಡುವೆ) ಮತ್ತು ವೃಷಣದವರೆಗೂ ವಿಸ್ತರಿಸಬಹುದು. ಮಹಿಳೆಯರಲ್ಲಿ ಗರ್ಭದ್ವಾರಕ್ಕೂ ಹಬ್ಬಬಹುದು. ದೀರ್ಘಕಾಲದ ಅಲ್ಸರ್ ಕೆಲವೊಮ್ಮೆ ಕ್ಯಾನ್ಸರ್‌ಗೆ ತಿರುಗಬಹುದು.

ದೀರ್ಘಕಾಲದ ಅಲ್ಸರ್ ಇರುವವರಲ್ಲಿ ಸಲ್ಫ, ಟೆಟ್ರಾಸೈಕ್ಲಿನ್ ಅಥವ ಸ್ಟ್ರೆಪ್ಟೋಮೈಸಿನ್ ಮುಂತಾದ ಔಷಧಗಳಿಂದ ಸಂಪೂರ್ಣವಾಗಿ ಕಾಯಿಲೆ ವಾಸಿಯಾಗಿ ಅಲ್ಸರ್ ಗುಣವಾದರೂ ತೊಂದರೆಗೊಳಪಟ್ಟ ಜಾಗದ ಊತ ಕಡಿಮೆಯಾಗದೆ ಚರ್ಮ ಆನೆಯ ಚರ್ಮದಂತೆ ಒರಟಾಗಿ ಶಾಶ್ವತವಾಗಿ ಉಳಿದುಕೊಳ್ಳಬಹುದು.

ಲಿಂಫೋಗ್ರ್ಯಾನ್ಯುಲೋಮ ವೆನೆರಿಯಂ

ಈ ಲೈಂಗಿಕ ರೋಗ ಕ್ಲ್ಯಾಮಿಡಿಯಾ ಎಂಬ ರೋಗಾಣುವಿನಿಂದ ಬರುತ್ತದೆ. ರೋಗಿಯ ಸಂಪರ್ಕ ಪಡೆದು ರೋಗಾಣು ದೇಹವನ್ನು ಪ್ರವೇಶಿಸಿದ

ಜಾಗದಲ್ಲೆ 3 ರಿಂದ 5 ವಾರದೊಳಗೆ ಸಣ್ಣನೆಯ ಕಂದು ಗುಳ್ಳೆ ಅಥವ ಅಲ್ಸರ್ ಕಾಣಿಸಿಕೊಂಡು ಬಹಳಷ್ಟು ಜನರಲ್ಲಿ ಪ್ರಜ್ಞೆಗೆ ಬಾರದಷ್ಟು ಜಾಗ್ರತೆ, ಗಾಯ ಮಾಯುತ್ತದೆ. ನಂತರ ಅಲ್ಲಿಂದ ರೋಗಾಣುಗಳು ಒಳಭಾಗದಲ್ಲಿ ಹರಡಿಕೊಂಡಿರುವ ಲಿಂಫ್ ನಾಳಗಳು ಮತ್ತು ಲಿಂಫ್ ಗ್ರಂಥಿಗಳಲ್ಲಿ ಆಶ್ರಯ ಪಡೆದು ಗ್ರಂಥಿಗಳು ಊದಿಕೊಂಡು ಬರಗುಳ್ಳೆ ಕಟ್ಟಿ (ಲಿಂಫಡಿನೈಟಿಸ್) ಆ ಮೇಲೆ ಕುರುವಾಗಿ ಒಡೆದು ಕೀವು ಸೋರುತ್ತದೆ.

ಒಂದಕ್ಕಿಂತ ಹೆಚ್ಚಿನ ಲಿಂಫ್ ಗ್ರಂಥಿಗಳು ಸೋಂಕಿಗೆ ತುತ್ತಾಗಿ ಇಂಗ್ವೈನಲ್ ಸ್ಥಳದಲ್ಲಿ ಅಂದರೆ ಹೊಟ್ಟೆ ಮತ್ತು ತೊಡೆಯ ನಡುವಿನ ಜಾಗದಲ್ಲಿ ಬರಗಳ್ಳೆ ಕಟ್ಟುವುದು ಅಥವ ಕಟ್ಟಿ ಕುರುವಾಗಿ ಒಡೆದು ಕೀವು ಸೋರುವುದು ಪುರುಷರಲ್ಲಿ ಸ್ತ್ರೀಯರಿಗಿಂತ ಸಾಮಾನ್ಯ.

ಮಹಿಳೆಯರಲ್ಲಿ ಹೆಚ್ಚಾಗಿ ಯೋನಿಯ ಒಳಭಾಗದಿಂದ ರೋಗಾಣುಗಳು ಪ್ರವೇಶಿಸುವುದರಿಂದ ಕಿಬ್ಬೊಟ್ಟೆಯ ಒಳಗಿನ ಲಿಂಫ್ ಗ್ರಂಥಿಗಳು ಸೋಂಕಿಗೆ ತುತ್ತಾಗಿ ಕಿಬ್ಬೊಟ್ಟೆ ನೋವು ಕಾಣಿಸಿಕೊಳ್ಳುತ್ತದೆ. ಯೋನಿಯ ಸಮೀಪವೆ ಗುದದ್ವಾರವಿರುವುದರಿಂದ ಗುದದ್ವಾರಕ್ಕೂ ಕಾಯಿಲೆ ಹರಡಿ ಮಲ ವಿಸರ್ಜನೆಯಲ್ಲಿ ನೋವು ರಕ್ತ ಕೀವು ಮುಂತಾದ ಲಕ್ಷಣಗಳೊಡನೆ ಅಲ್ಸರ್, ಫಿಸ್ಟುಲಾ, ಸ್ಟ್ರಿಕ್ಚರ್ ಮುಂತಾದ ಬಾಧೆಗಳಿಗೆ ನಿಧಾನವಾಗಿ ಗುರಿಯಾಗಬಹುದು.

ಊನತೆ ಕಾಣಿಸಿಕೊಳ್ಳುವ ಮುಂಚೆಯೆ ಚಿಕಿತ್ಸೆ ತೆಗೆದುಕೊಂಡರೆ ಕಾಯಿಲೆಯನ್ನು ಸಂಪೂರ್ಣವಾಗಿ ಗುಣಪಡಿಸಬಹುದು. ಚಿಕಿತ್ಸೆ ತೆಗೆದುಕೊಳ್ಳದಿದ್ದರೆ ದೀರ್ಘಾವಧಿಯಲ್ಲಿ ತೊಂದರೆಗೊಳಪಟ್ಟ ಭಾಗವು ನಿರಂತರ ಊದಿಕೊಂಡು ದಪ್ಪವಾಗುತ್ತಾ ಈ ಭಾಗದ ಚರ್ಮವು ಆನೆಯ ಚರ್ಮದಂತೆ ಒರಟಾಗುತ್ತದೆ (ಎಲಿಫೆಂಟಿಯೂಸಿಸ್), ಸಾಮಾನ್ಯವಾಗಿ ಪುರುಷರಲ್ಲಿ ಶಿಶ್ನ ಮತ್ತು ವೃಷಣ ಹಾಗೂ ಮಹಿಳೆಯರಲ್ಲಿ ಇಡೀ ಜನನೇಂದ್ರಿಯದ ಹೊರ ಭಾಗವೆ (ವಲ್ವಾ) ಕೆಲವು ಸೆಂ. ಮೀ. ನಷ್ಟು ದಪ್ಪವಾಗಬಹುದು. ಅಪರೂಪವಾಗಿ ಊತ ಕಾಲಿಗೂ ಆವರಿಸಿ ಆನೆ ಕಾಲಿನಂತಾಗಬಹುದು. ಈ ಸಮಯದಲ್ಲಿ ಔಷಧದಿಂದ ಕಾಯಿಲೆ ಸಂಪೂರ್ಣವಾಗಿ ಗುಣವಾದರೂ ಊನತೆ ಶಾಶ್ವತವಾಗಿ ಉಳಿದುಕೊಳ್ಳುತ್ತದೆ. ಶಸ್ತ್ರ ಕ್ರಿಯೆಯಿಂದ ಕೊಂಚ ಮಟ್ಟಿಗೆ ಊನತೆಯನ್ನು ಕಡಿಮೆ ಮಾಡಿಕೊಳ್ಳಬಹುದು.

ಸಲ್ಫ ಮತ್ತು ಟೆಟ್ರಾಸೈಕ್ಲಿನ್ ಔಷಧಗಳಿಂದ ರೋಗಾಣು ಸಂಪೂರ್ಣ ನಾಶವಾಗಿ ಕಾಯಿಲೆಯನ್ನು ಗುಣಪಡಿಸಬಹುದು.

* * * * *

28. ವೆನೆರಿಯಲ್ ವಾರ್ಟ್ (ಕಾಡೈಲೋಮ ಅಕ್ಯುಮಿನೇಟಾ)

ಕಾಂಡೈಲೋಮ ಅಕ್ಯುಮಿನೇಟಾ ಅರ್ಥಾತ್ ವೆನೆರಿಯಲ್ ವಾರ್ಟ್ ಒಂದು ಲೈಂಗಿಕ ಕಾಯಿಲೆಯಾಗಿದ್ದು ಹ್ಯೂಮನ್ ಪ್ಯಾಪಿಲೋಮ ವೈರಸ್ ಜಾತಿಯ ಕೆಲವು ತಳಿಗಳು ಈ ರೋಗಕ್ಕೆ ಕಾರಣವಾಗಿದೆ. ಇದೇ ಜಾತಿಯ ಕೆಲವು ವೈರಾಣುಗಳಿಂದ ಹುಲ್‌ಉಗುರು ಅರ್ಥಾತ್ ಕಾಮನ್ ವಾರ್ಟ್‌ಗಳು ಮಕ್ಕಳಲ್ಲಿ ಸಾಮಾನ್ಯವಾಗಿ ಕಾಣಿಸಿಕೊಳ್ಳುತ್ತವೆ.

ವೇಶ್ಯೆಯರು, ವ್ಯಭಚಾರಿಗಳು ಮತ್ತು ಯುವಕರಲ್ಲಿ ಈ ಕಾಯಿಲೆ ಅತಿ ಹೆಚ್ಚು, ಇತರ ಲೈಂಗಿಕ ಕಾಯಿಲೆಯಿಂದ ಬಳಲುತ್ತಿರುವುವರಲ್ಲಿಯೂ ಈ ರೋಗ ಜಾಸ್ತಿ.

ರೋಗಾಣು ಶರೀರವನ್ನು ಹೊಕ್ಕಿದ ಜಾಗದಲ್ಲಿ 3 ವಾರಗಳಿಂದ 8 ವಾರಗಳೊಳಗೆ ರೋಗದ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಲೈಂಗಿಕಾಂಗ, ಮೂತ್ರಧ್ವಾರ,ಮಲದ್ವಾರ, ಗರ್ಭದ್ವಾರ ಅಥವ ಗುಪ್ತಾಂಗದ ಚರ್ಮದಲ್ಲಿ ಒರಟಾದ ಸಣ್ಣನೆಯ ಸೂಜಿ ಗುಂಡಿನ ಗಾತ್ರದ ಗುಳ್ಳೆಗಳು ಅರ್ಥಾತ್ ವಾರ್ಟ್‌ಗಳು ಕಾಣಿಸಿಕೊಳ್ಳುತ್ತವೆ. ನೋವು ಮತ್ಯಾವುದೇ ತೊಂದರೆಗಳು ಇರುವುದಿಲ್ಲ. ಚಿಕಿತ್ಸೆ ತೆಗೆದುಕೊಳ್ಳದಿದ್ದರೆ ಗುಳ್ಳೆಗಳು ಜಾಸ್ತಿಯಾಗುತ್ತಾ ಮತ್ತು ಕೆಲವು ಗುಳ್ಳೆಗಳು ಗುಂಪುಗೂಡುತ್ತಾ ಕಾಳಿನ ಗಾತ್ರದಿಂದ ಗೋಲಿಯ ಗಾತ್ರಕ್ಕೆ ಅಥವ ಚೆಂಡಿನ ಗಾತ್ರದಷ್ಟು ದಪ್ಪವಾಗಬಹುದು. ಹಲವು ಸಾರಿ ಈ ಬೇನೆ ನೋಡಲು ಹೂಕೋಸಿನಂತೆ ಕಾಣುತ್ತದೆ. ಚರ್ಮದ ಮೇಲಿದ್ದರೆ ಚರ್ಮದ ಬಣ್ಣಕ್ಕೆ ಅಥವಾ ಅದಕ್ಕಿಂತ ಕಪ್ಪಾಗಿರುತ್ತದೆ. ಲೋಳೆಪೊರೆ ಅಂದರೆ ಮ್ಯೂಕಸ್ ಮೆಂಬ್ರೇನ್ ಮೇಲಿರುವ ವಾರ್ಟ್‌ಗಳು ಸನುಗೆಂಪು ಬಣ್ಣಕ್ಕೆ ತಿರುಗಿರುತ್ತವೆ.

ಸೋಂಕಿನ ಭಾಗವಾದ ಲೈಂಗಿಕಾಂಗ, ಬೇರೆಯವರ ಬಾಯಿ ಅಥವ ಮಲದ್ವಾರದ ಸಂಪರ್ಕ ಪಡೆದಿದ್ದರೆ ಆ ಜಾಗಗಳಲ್ಲಿಯೂ ಬೇನೆಯ ಲಕ್ಷಣಗಳು ಗೋಚರಿಸುತ್ತವೆ. ಚಿಕಿತ್ಸೆ ತೆಗೆದುಕೊಳ್ಳದಿದ್ದರೆ ದೀರ್ಘಾವಧಿಯಲ್ಲಿ ಈ ವಾರ್ಟ್‌ಗಳು ಅತಿ ದೊಡ್ಡದಾಗಿ ಕ್ಯಾನ್ಸರ್‌ಗೂ ತಿರುಗಬಹುದು.

ವಾರ್ಟ್‌ಗಳು ಒಂದೆರಡು ಸೆಂಟಿಮೀಟರ್‌ನಷ್ಟು ಸಣ್ಣದಾಗಿದ್ದಾಗ ಪೋಡೋಫಿಲನ್, ಕಾಟರಿ, ಶಸ್ತ್ರಕ್ರಿಯೆ ಅಥವ ಕ್ರಯೋಥೆರಪಿಯಿಂದ ಸುಲಭವಾಗಿ ಗುಣಪಡಿಸಬಹುದು.

* * * * *

29. ಹರ್ಪಿಸ್ ಜನೈಟಾಲಿಸ್

ಕೆಲವು ವರ್ಷಗಳಿಂದೀಚೆಗೆ ಬಹಳ ಸಾಮಾನ್ಯವಾಗಿ ಕಾಣಿಸಿಕೊಳ್ಳುತ್ತಿರುವ ಲೈಂಗಿಕ ಕಾಯಿಲೆ ಇದು. ಹರ್ಪಿಸ್ ಸಿಂಪ್ಲೆಕ್ಸ್ ವೈರಸ್‌ನ ಎರಡು ತಳಿಗಳಲ್ಲಿ ಎರಡನೆಯ ವೈರಾಣು ಈ ಕಾಯಿಲೆಗೆ ಕಾರಣವಾಗಿದೆ. ಶರವೇಗದಲ್ಲಿ ಜಗತ್ತಿನಲ್ಲೆಲ್ಲಾ ಹರಡಿಕೊಂಡಿರುವ ಈ ಕಾಯಿಲೆ ಒಮ್ಮೆ ತಗಲಿದರೆ ರೋಗಿಯನ್ನು ದೀರ್ಘಕಾಲದ ವರೆಗೆ ಬಿಡದೆ ಕಾಡುತ್ತದೆ.

ಇದು ವ್ಯಭಿಚಾರಿಗಳಲ್ಲಿ ಮತ್ತು ವೇಶ್ಯೆಯರಲ್ಲಿ ಅತಿ ಹೆಚ್ಚು. ಅನೈತಿಕ ಕೃತ್ಯದಿಂದ ದಂಪತಿಗಳಲ್ಲಿ ಒಬ್ಬರು ಈ ಕಾಯಿಲೆಗೆ ಗುರಿಯಾದರೆ ಇನ್ನೊಬ್ಬರಿಗೂ ಈ ಕಾಯಿಲೆ ಅಂಟುವುದು ಸ್ವಾಭಾವಿಕ.

ರೋಗಾಣು ಲೈಂಗಿಕಾಂಗಗಳನ್ನು ಪ್ರವೇಶಿಸಿದ 3 ರಿಂದ 6 ದಿನಗಳ ಒಳಗೆ ಕಾಯಿಲೆಯ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಮೊದಲನೆ ಸಲ ಸೋಂಕು ತಗಲಿದಾಗ ಈ ಕಾಯಿಲೆಯ ಲಕ್ಷಣಗಳು ತೀಕ್ಷಣವಾಗಿ ಜಾಸ್ತಿಯಾಗಿದ್ದು ನಂತರ ಕಡಿಮೆಯಾಗಿ ಗುಣವಾದರೂ ವೈರಾಣುಗಳು ದೇಹದಿಂದ ತೊಲಗದೆ ಬೇನೆ ಕಾಣಿಸಿಕೊಂಡ ಜಾಗದ ತಳಭಾಗದಲ್ಲಿರುವ ನರಗಳಲ್ಲಿ ರಕ್ಷಣೆ ಪಡೆದು ನಿದ್ರಾವಸ್ಥೆಯಲ್ಲಿರುತ್ತವೆ. ಕೆಲವು ವಾರ ಅಥವ ಕೆಲವು ತಿಂಗಳಿಗೊಮ್ಮೆ ಎಚ್ಚರಗೊಂಡಾಗ ಕಾಯಿಲೆಯ ಲಕ್ಷಣಗಳು ಮರುಕಳಿಸುತ್ತವೆ.

ಮೊದಲಿಗೆ ಚುಚ್ಚಿದಂತೆ, ಉರಿದಂತೆ ಅಥವ ಕೊರೆದಂತೆ ರೋಗಾಣು ಪ್ರವೇಶಿಸಿದ ಜಾಗದಲ್ಲಿ ಅರಿವಾಗಬಹುದು, ಅಥವ ಯಾವ ಸೂಚನೆಯೂ ಇಲ್ಲದೆ ಕೆಂಪನೆಯ ಗುಳ್ಳೆಗಳು ಪ್ರಾರಂಭವಾಗಿ ನೀರು ಗುಳ್ಳೆಗಳಾಗಿ ಒಡೆದು ಸಣ್ಣನೆಯ ಅಲ್ಸರ್‌ಗಳಾಗಿ ಬದಲಾಗಿ ಒಂದೆರಡು ವಾರಗಳಲ್ಲಿ ಒಣಗಿಹೋಗುತ್ತವೆ. ಮೊದಲನೆ ಸಲ ಸೋಂಕಿನಿಂದ ಬಳಲಿದಾಗ ಜ್ವರ ಮತ್ತು ನೋವಿನ ಜೊತೆಗೆ ತೊಡೆಯಲ್ಲಿ ಬರಗಳ್ಳೆ ಕಟ್ಟಬಹುದು.


ಪುರುಷರಲ್ಲಿ ಲೈಂಗಿಕಾಂಗದ ಸುತ್ತಮುತ್ತ ಕಾಣಿಸಿಕೊಂಡು ಆಗಾಗ್ಗೆ ಸ್ಥಳೀಯವಾಗಿ ಕಾಡುವ ಈ ಬೇನೆ ಮಹಿಳೆಯರಲ್ಲಿ ಲೈಂಗಿಕಾಂಗದ ಸುತ್ತ ಮುತ್ತ ಒಳಭಾಗ, ಗರ್ಭಕೋಶದ ದ್ವಾರ ಮುಂತಾದ ಕಡೆ ಕಾಣಿಸಿಕೊಳ್ಳುತ್ತದೆ. ಒಮ್ಮೆ ಆಶ್ರಯ ಪಡೆದರೆ ನಿರಂತರ ಕಾಡುವ ಈ ಬೇನೆ ಇರುವ ಮಹಿಳೆಯರ ಗರ್ಭದ್ವಾರಕ್ಕೆ ಭವಿಷ್ಯದಲ್ಲಿ ಕ್ಯಾನ್ಸರ್ ತಗಲುವ ಸಂಭವ ಅಪರೂಪವಾಗಿ ಇರುವುದರಿಂದ ಒಂದೆರಡು ವರ್ಷಗಳಿಗೊಮ್ಮೆ ತಜ್ಞ ವೈದ್ಯರಿಂದ ಕ್ಯಾನ್ಸರ್

ಇಲ್ಲದಿರುವಿಕೆಯ ಬಗ್ಗೆ ಖಚಿತಪಡಿಸಿಕೊಳ್ಳುವುದು ಉತ್ತಮ. ಗರ್ಭವತಿಯರಾದರೆ ಹುಟ್ಟುವ ಮಕ್ಕಳಿಗೆ ಹೆರಿಗೆ ಸಮಯದಲ್ಲಿ ಅಂಟುವ ಸಂಭವವಿರುತ್ತದೆ. ಆದುದರಿಂದ ಸಿಸೇರಿಯನ್ ಅಪರೇಶನ್ ಮಾಡಿ ಮಗು ತೆಗೆಯುವುದು ಮಗುವಿನ ಆರೋಗ್ಯದ ದೃಷ್ಟಿಯಿಂದ ಕ್ಷೇಮಕರ. ಪತಿ ಪತ್ನಿಯಲ್ಲಿ ಒಬ್ಬರು ಈ ಕಾಯಿಲೆಯಿಂದ ಬಳಲುತ್ತಿದ್ದರೆ ನಿರೋಧ್ ಉಪಯೋಗಿಸಿ ಇನ್ನೊಬ್ಬರಿಗೆ ರೋಗ ಅಂಟದಂತೆ ಎಚ್ಚರ ವಹಿಸಬೇಕು.

ಈ ಕಾಯಿಲೆ ಮರುಕಳಿಸಿ ರೋಗದ ಚಿಹ್ನೆಗಳಿದ್ದಾಗ ಲೈಂಗಿಕ ಕ್ರಿಯೆಯನ್ನು ಬಹಿಷ್ಕರಿಸಿ ರೋಗ ಇನ್ನೊಬ್ಬರಿಗೆ ಅಂಟದಂತೆ ನೋಡಿಕೊಳ್ಳಬೇಕು. ಎಸ್ಸೈಕ್ಲೊವೀರ್, ಮುಂತಾದ ಔಷಧಗಳನ್ನು ಶಮನಕಾರಿಯಾಗಿ ಉಪಯೋಗಿಸಬಹುದು.

* * * * *

೩೦. ಔಷಧಿಯಿಲ್ಲದ ರೋಗಕ್ಕೆ ಎಚ್ಚರವೇ ಮದ್ದು



ಅಕ್ವೈರ್ಡ್ ಇಮ್ಯುನೊ ಡೆಫಿಷಿಯನ್ಸಿ ಸಿಂಡ್ರೋಮ್ ಎಂಬ ಕಾಯಿಲೆಯ ಸಂಕ್ಷಿಪ್ತ ಹೆಸರೇ ಏಯ್ಡ್ಸ್. ಈ ಕಾಯಿಲೆಯು ಎಲ್ಲಾ ರೋಗಗಳನ್ನು ಹಿಂದಕ್ಕೆ ಹಾಕಿ ನಾಗಾ ಲೋಟದಿಂದ ಮುನ್ನುಗ್ಗುತ್ತಿದ್ದು ಜನರನ್ನು ಮರಣದ ಅಂಚಿಗೆ ಕೊಂಡೊಯ್ಯುತ್ತಿದೆ.

ಹೆಚ್.ಐ.ವಿ ವೈರಸ್ ರೋಗಾಣುಗಳ ಎರಡು ತಳಿಗಳು ಈ ಕಾಯಿಲೆಗೆ ಕಾರಣವಾಗಿದೆ. ಈ ರೋಗಾಣುಗಳು ಮನುಷ್ಯನ ದೇಹವನ್ನು ಹೊಕ್ಕಿದ ನಂತರ ಪೂರ್ಣ ಪ್ರಮಾಣದಲ್ಲಿ ಸೋಂಕಿನ ಉಪದ್ರವ ಕಾಣಿಸಿಕೊಂಡಾಗ ಮಾತ್ರ ಹೆಚ್ ಐ ವಿ ಸೋಂಕನ್ನು ಏಯ್ಡ್ಸ್ ಕಾಯಿಲೆ ಎಂದು ಕರೆಯುತ್ತೇವೆ. ಅಲ್ಲಿಯವರೆಗೆ ಹೆಚ್ ಐ ವಿ ಸೋಂಕು ಎಂದೇ ಈ ಕಾಯಿಲೆಯನ್ನು ಹೆಸರಿಸುವುದು ರೂಢಿ.

ಅಮೇರಿಕದ ಸಲಿಂಗ ಕಾಮಿಯೊಬ್ಬ 1981 ರಲ್ಲಿ ಶ್ವಾಸಕೋಶದ ನ್ಯೂಮೋನಿಯಾದಿಂದ ಸಾವನ್ನಪ್ಪಿದಾಗ ಅಕಸ್ಮಾತಾಗಿ ಈ ಕಾಯಿಲೆಯನ್ನು ಅವನಲ್ಲಿ ಪತ್ತೆ ಹಚ್ಚಲಾಯಿತು. 1982ರಲ್ಲಿ ಈ ಕಾಯಿಲೆಗೆ ಏಯ್ಡ್ಸ್ ಎಂದು ನಾಮಕರಣ ಮಾಡಲಾಯಿತು. 1984 ರಲ್ಲಿ ಈ ಕಾಯಿಲೆಗೆ ಕಾರಣವಾದ ರೋಗಾಣುವನ್ನು ಪತ್ತೆಹಚ್ಚಲಾಯಿತು.

ವಿಶ್ವ ಆರೋಗ್ಯ ಸಂಸ್ಥೆಯ 2008 ಜುಲೈ ವರದಿಯ ಪ್ರಕಾರ ಪ್ರಪಂಚದಲ್ಲಿ 1981 ರಿಂದ ಇಲ್ಲಿಯವರೆಗೆ ಸುಮಾರು 2.5 ಕೋಟಿಯಷ್ಟು ಜನರು ಏಡ್ಸ್ ಮಾರಿಯಿಂದ ಅಸುನೀಗಿದ್ದಾರೆ.

ವೇಶ್ಯಾವೃತ್ತಿ ನಡೆಸುತ್ತಿರುವವರಲ್ಲಿ, ವ್ಯಭಚಾರಿಗಳಲ್ಲಿ, ಸಲಿಂಗ ಕಾಮಿಗಳಲ್ಲಿ, ಮದ್ಯಪಾನ ಮತ್ತು ಮಾದಕ ಪದಾರ್ಥಗಳ ವ್ಯಸನಿಗಳಲ್ಲಿ ಹಾಗೂ ತಮ್ಮ ಜೀವನಬಾಳ ಸಂಗಾತಿಗಳ ಕಣ್ಣತಪ್ಪಿಸಿ ಇತರರೊಡನೆ ಲೈಂಗಿಕ ಕ್ರಿಯೆಯಲ್ಲಿ ತೊಡಗುವವರಲ್ಲಿ ಈ ಕಾಯಿಲೆ ಹೆಚ್ಚಾಗಿ ಕಾಣಿಸಿಕೊಂಡಿದೆ.

ಅನೈತಿಕ ಲೈಂಗಿಕ ಚಟುವಟಿಕೆಯಿಂದ ಈ ಕಾಯಿಲೆ ಹೆಚ್ಚಾಗಿ ಕಾಣಿಸಿಕೊಂಡರೂ ಅಪರೂಪವಾಗಿ ರಕ್ತನಿಧಿ ಬ್ಯಾಂಕುಗಳು ಏಯ್ಡ್ಸ್ ಕಾಯಿಲೆ ಇರುವಿಕೆಯನ್ನು ಪರೀಕ್ಷಿಸದೆ ರಕ್ತವನ್ನು ತೆಗೆದು ಬೇರೆಯವರಿಗೆ ಕೊಡುವುದರಿಂದ ಕಾಯಿಲೆ ಆರೋಗ್ಯವಂತರಿಗೆ ತಗಲುತ್ತದೆ. ಹಣಕ್ಕಾಗಿ ರಕ್ತವನ್ನು ಕೊಡುವವರಲ್ಲಿ ಏಯ್ಡ್ಸ್ ಮತ್ತು ಇತರ ಲೈಂಗಿಕ ರೋಗಿಗಳು ಹೆಚ್ಚಾಗಿದ್ದು ಹಿಮೋಫೀಲಿಯಾ ಮುಂತಾದ ಕಾಯಿಲೆಗಳಿರುವ ವ್ಯಕ್ತಿಗಳು ಆಗಾಗ್ಗೆ ರಕ್ತವನ್ನು ತೆಗೆದುಕೊಳ್ಳ ಬೇಕಾಗುವುದರಿಂದ ಬಹಳಷ್ಟು ಹಿಮೋಫೀಲಿಯಾ ವ್ಯಕ್ತಿಗಳು ಏಯ್ಡ್ಸ್ ಕಾಯಿಲೆಗೆ ಗುರಿಯಾಗಿದ್ದಾರೆ. ರೋಗಿಗೆ ಕೊಟ್ಟ ಇಂಜೆಕ್ಷನ್‌ನ ಸೂಜಿ ಮತ್ತು ಸಿರಿಂಜಿನಿಂದ ಸ್ಟೆರಿಲೈಸ್ ಮಾಡದೆ ಬೇರೆಯವರಿಗೆ ಕೊಡುವುದರಿಂದ ಸುಲಭವಾಗಿ ರೋಗಾಣುಗಳು ಆರೋಗ್ಯವಂತರ ದೇಹದೊಳಕ್ಕೆ ನುಸುಳಿ ಕಾಯಿಲೆ ಉಂಟಾಗುತ್ತದೆ. ಮಾದಕ ವಸ್ತುಗಳ ಚಟವಿರುವ ವ್ಯಕ್ತಿಗಳಲ್ಲಿ ಅನೈತಿಕ ಲೈಂಗಿಕ ಚಟುವಟಿಕೆಗಳು ಜಾಸ್ತಿ ಇವೆ ಮತ್ತು ಒಂದೇ ಇಂಜೆಕ್ಷನ್ ಸೂಜಿ ಮತ್ತು ಸಿರಿಂಜನಿಂದ ಮಾದಕ ವಸ್ತುಗಳನ್ನು ಸ್ನೇಹಿತರೆಲ್ಲರೂಹಂಚಿಕೊಂಡು ತಮ್ಮ ದೇಹದೊಳಕ್ಕೆ ಚುಚ್ಚಿಕೊಳ್ಳುವುದರಿಂದ ಏಯ್ಡ್ಸ್ ಕಾಯಿಲೆಯು ಈ ತರದ ಜನರಲ್ಲೆ ಜಾಸ್ತಿ. ಹೆಚ್ ಐ ವಿ ಸೋಂಕಿನಿಂದ ಬಳಲುತ್ತಿರುವ ತಾಯಿಗೆ ಹುಟ್ಟಿದ ಮಗುವೂ ಸಹ ಸೊಂಕಿಗೆ ಒಳಗಾಗಬಹುದು.

ರೋಗದಿಂದ ಬಳಲುತ್ತಿರುವ ವ್ಯಕ್ತಿಯ ರಕ್ತ, ವೀರ್ಯ, ಕಣ್ಣೀರು, ಜೊಲ್ಲು, ಮೂತ್ರ, ಎದೆಹಾಲು ಮತ್ತು ಜನನೇಂದ್ರಿಯಗಳ ರಸಗಳಲ್ಲಿ ವೈರಸ್ ರೋಗಾಣುಗಳಿರುತ್ತವೆ. ಈ ವಸ್ತುಗಳ ಮೂಲಕ ಒಮ್ಮೆ ರೋಗಾಣು ಆರೋಗ್ಯವಂತರ ದೇಹದೊಳಕ್ಕೆ ನಾನಾ ಕಾರಣಗಳಿಂದ ನುಸುಳಿ ರೋಗಾಣುವಿನ ಬೀಜಾಂಕುರಕ್ಕೆ ಎಡೆ ಮಾಡಿಕೊಟ್ಟಂತಾಗುತ್ತದೆ. ರೋಗಾಣುಗಳು ವೃದ್ಧಿಸಿ ಶರೀರದಲ್ಲಿ ರೋಗ ನಿರೋಧಕ ಶಕ್ತಿ ಇರುವ ಜೀವ ಕಣಗಳ ಮೇಲೆ ಆಕ್ರಮಣ ಮಾಡಿ ಆ ವ್ಯಕ್ತಿಯ ರೋಗ ನಿರೋಧಕಶಕ್ತಿಯನ್ನು

ಕುಂಠಿತಗೊಳಿಸಿ ಅಥವ ಸಂಪೂರ್ಣ ನಿಷ್ಕ್ರಿಯಗೊಳಿಸುವುದರಿಂದ ಕಾಯಿಲೆಯ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಕಾಯಿಲೆಯ ಲಕ್ಷಣಗಳನ್ನು 3 ಭಾಗಗಳನ್ನಾಗಿ ವಿಂಗಡಿಸಬಹುದು.

ಸಾಮಾನ್ಯವಾಗಿ, ರೋಗಾಣುಗಳು (ಅಂಟಿಜೆನ್) ಆರೋಗ್ಯವಂತರ ದೇಹವನ್ನು ಹೊಕ್ಕಿದ 8 ರಿಂದ 12 ದಿನದೊಳಗೆ ದೇಹದಲ್ಲಿ ರೋಗಾಣುವಿನ ವಿರುದ್ಧ ಪ್ರತಿರೋಧ ವಸ್ತುಗಳು (ಆಂಟಿಬಾಡಿ) ಉತ್ಪತ್ತಿಯಾಗುವ ಕಾಲದಲ್ಲಿ ಕೆಲವರಲ್ಲಿ ಇನ್‌ಫ್ಲುಯೆಂಜಾ ಮಾದರಿಯಲ್ಲಿ ಜ್ವರ, ತಲೆ, ಕೀಲು, ಗಂಟಲು ಮತ್ತು ಮೈ ಕೈ ನೋವುಗಳು ಐದಾರು ದಿನಗಳವರೆಗೆ ಕಾಣಿಸಿಕೊಳ್ಳಬಹುದು. ಅಪರೂಪವಾಗಿ 8 ರಿಂದ 12 ವಾರಗಳೂ ತೆಗೆದುಕೊಳ್ಳಬಹುದು ಕಾಯಿಲೆಯ ಲಕ್ಷಣಗಳು ಗೋಚರಿಸಲು. ನಂತರದಲ್ಲಿ ರೋಗಾಣುವಿನಿಂದ ಪ್ರತಿರೋಧ ವಸ್ತು ಉತ್ಪತ್ತಿಯಾಗಿ ರಕ್ತ ಪರೀಕ್ಷೆಯಿಂದ ಕಾಯಿಲೆಯನ್ನು ಪತ್ತೆ ಹಚ್ಚಬಹುದು. ಆದರೆ ಕಾಯಿಲೆಯ ಯಾವೊಂದು ಲಕ್ಷಣವೂ ಗೋಚರವಾಗದೆ ರೋಗಾಣುಗಳು ನಿದ್ರಾವಸ್ಥೆಯಲ್ಲಿರುವ ಕಾಲವಾಗಿರುತ್ತದೆ. ಈ ಕಾಲವು ಎಲ್ಲಾ ವ್ಯಕ್ತಿಗಳಲ್ಲಿಯೂ ಒಂದೇ ಸಮನಾಗಿರುವುದಿಲ್ಲ. ಸೋಂಕು ತಗಲಿದ ವ್ಯಕ್ತಿಯ ಅನುವಂಶಿಕತೆ, ದೃಢಕಾಯತೆ ಮತ್ತು ದುರಭ್ಯಾಸಗಳ ಆಧಾರದ ಮೇಲೆ ಕೆಲವು ತಿಂಗಳಿನಿಂದ ಹತ್ತು ವರ್ಷಗಳವರೆಗೂ ಮುಂದುವರಿಯಬಹುದು. ನಿದ್ರಾವಸ್ಥೆಯಕಾಲದಲ್ಲಿ ಕಾಯಿಲೆಯು ಇತರರಿಗೆ ಅಂಟಬಹುದು. ಅಂತಿಮವಾಗಿ ರೋಗ ಲಕ್ಷಣಗಳ ಕಾಲವು ಶುರುವಾಗಿ ಸೋಂಕಿನಿಂದ ಕೂಡಿದ ವ್ಯಕ್ತಿಯ ಶರೀರದ ವಿವಿಧ ಭಾಗಗಳಲ್ಲಿ ಹೆಚ್ಚಾಗಿ ಕುತ್ತಿಗೆಯ ಸುತ್ತ ಮೊಳಸಂದು, ಕಂಕುಳು, ತೊಡೆ ಮತ್ತು ಕಿಬ್ಬೊಟ್ಟೆಯನಡುವೆ ಹಾಗೂ ಮಂಡಿಯ ಹಿಂಭಾಗ ಲಿಂಫ್‌ನೋಡ್ ಗ್ರಂಥಿಗಳು ಊದಿಕೊಂಡು ವೈದ್ಯರ ಕೈಬೆರಳುಗಳಿಂದ ಪರೀಕ್ಷೆಗೆ ಸಿಲುಕುತ್ತದೆ ಕಾಯಿಲೆ ಬಲಿಯುತ್ತಿದ್ದಂತೆ ಸುಸ್ತು, ಜ್ವರ, ಬೇಧಿ, ನಿಶ್ಯಕ್ತಿ, ಬಡಕಲಾಗುವುದು, ಹಸಿವು ಇಲ್ಲದಿರುವುದು ಮುಂತಾದ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಕಾಯಿಲೆ ಮುಂದುವರಿಯುತ್ತಿದ್ದಂತೆ ಬ್ಯಾಕ್ಟೀರಿಯಾ ವೈರಸ್, ಪ್ರೋಟೋಜೋವಾ ಮತ್ತು ಫಂಗಸ್ ಮುಂತಾದ ವಿವಿಧ ರೀತಿಯ ಅಣು ಜೀವಿಗಳ ಸೋಂಕುಗಳಿಗೆ ಗುರಿಯಾಗುತ್ತಾರೆ.

ಏಯ್ಡ್ಸ್ ಇಲ್ಲದವರಿಗೆ ಈ ತರಹದ ಸೋಂಕುಗಳು ಕಾಣಿಸಿಕೊಂಡಾಗ ಸುಲಭವಾಗಿ ಔಷಧಿಗಳಿಂದ ವಾಸಿ ಮಾಡಬಹುದು. ಆದರೆ ಏಯ್ಡ್ಸ್ ರೋಗಿಗಳಲ್ಲಿ ಮೇಲು ಸೋಂಕಾಗಿ ಅತಿಕ್ರಮಿಸಿರುವ ಯಾವುದೇ ರೋಗಾಣುವು ಯಾವುದೇ ಔಷಧಿಗೆ ಜಗ್ಗದೆ ಆ ಸೋಂಕಿನಉಪದ್ರವಗಳಿಂದಲ್ಲೇ ಕೊನೆಯುಸಿರೆಳೆಯಬೇಕಾಗುತ್ತದೆ. ಪ್ರಸ್ತುತ ಏಯ್ಡ್ಸ್ ವೈರಸ್ ರೋಗಾಣುಗಳನ್ನು ಕೊಂದು ಅದರ

ಹೆಸರನ್ನು ನಿರ್ನಾಮ ಮಾಡುವಂತಹ ಔಷಧಗಳು ಲಭ್ಯವಿಲ್ಲದಿರುವುದರಿಂದ ಸಧ್ಯಕ್ಕೆ ಕಾಯಿಲೆಯನ್ನು ಬರದಂತೆ ನೋಡಿಕೊಳ್ಳುವುದು ಮತ್ತು ಕಾಯಿಲೆಯ ವ್ಯಕ್ತಿಗಳಿಂದ ಇತರರಿಗೆ ರೋಗ ಅಂಟದಂತೆ ಎಚ್ಚರಿಕೆ ವಹಿಸುವುದೇ ಉಳಿದಿರುವ ಮಾರ್ಗಗಳು.

ವೇಶ್ಯೆಯರಿಗೆ ಕಾಯಿಲೆಯ ಬಗ್ಗೆ ಎಚ್ಚರಿಕೆ ನೀಡಿ, ಬದಲಿ ವೃತ್ತಿಯಲ್ಲಿ ತೊಡಗುವಂತೆ ಪ್ರೋತ್ಸಾಹಿಸಬೇಕು. ಸಾಧ್ಯವಾಗದಿದ್ದರೆ ನಿರೋಧ್ ಉಪಯೋಗಿಸುವುದನ್ನು ಕಡ್ಡಾಯ ಮಾಡಬೇಕು. ರಕ್ತದ ಬ್ಯಾಂಕುಗಳು ರಕ್ತವನ್ನು ತೆಗೆದುಕೊಳ್ಳುವ ಮುಂಚೆ ಹೆಚ್ ಐ ವಿ ಇಲ್ಲದಿರುವಿಕೆಯ ಬಗ್ಗೆ ಖಚಿತಪಡಿಸಿಕೊಂಡ ಬಳಿಕವೇ ರಕ್ತವನ್ನು ತೆಗೆದು ಬೇರೆಯವರಿಗೆ ನೀಡುವುದನ್ನು ಕಡ್ಡಾಯ ಮಾಡಬೇಕು. ಹಣಕ್ಕಾಗಿ ರಕ್ತವನ್ನು ನೀಡುವ ವ್ಯಕ್ತಿಗಳಲ್ಲಿ ಏಯ್ಡ್ಸ್ ಮತ್ತಿತರ ಲೈಂಗಿಕ ಕಾಯಿಲೆಗಳು ಜಾಸ್ತಿ ಇರುವುದರಿಂದ ರಕ್ತ ಬೇಕಾದಾಗ ರಕ್ತದಾನಿಗಳಿಂದ ಅಥವ ಸ್ನೇಹಿತರು, ಸಂಬಂಧಿಕರ ರಕ್ತವನ್ನು ಬಳಸುವುದು ಕ್ಷೇಮಕರ. ಮಾದಕ ವಸ್ತುಗಳು ಸುಲಭವಾಗಿ ಯುವ ಜನತೆಗೆ ದೊರೆಯದಂತೆ ಸರ್ಕಾರ ಎಚ್ಚರ ವಹಿಸಬೇಕು. ತೀರಾ ಅವಶ್ಯಕತೆ ಇದ್ದಾಗ ಮಾತ್ರ ಇಂಜೆಕ್ಷನ್ ಉಪಯೋಗಿಸಬೇಕು. ಇಂಜೆಕ್ಷನ್ ನೀಡುವ ಮುಂಚೆ ಸೂಜಿ ಮತ್ತು ಸಿರಿಂಜ್‌ಗಳನ್ನು ಕುದಿಯುವ ನೀರಿನಲ್ಲಿ ಕುದಿಸ ಬೇಕು ಅಥವ ಅಟೋಕ್ಲೇವ್‌ನಲ್ಲಿ ಸ್ಟೆರಿಲೈಜ್ ಮಾಡಿ ಉಪಯೋಗಿಸ ಬೇಕು. ಬದಲಾಗಿ ಡಿಸ್ಪೋಸಬಲ್ ಸಿರಿಂಜ್, ಸೂಜಿಯನ್ನು ಉಪಯೋಗಿಸಬಹುದು.

ಏಯ್ಡ್ಸ್ ರೋಗಿಯ ಆರೈಕೆಯಲ್ಲಿ ನಿರತರಾಗಿರುವವರು ರೋಗಿಯ ರಕ್ತ ಮಲ ಮೂತ್ರ ಮತ್ತು ಇತರ ದೇಹದ ಧ್ರವಗಳನ್ನು ಮುಟ್ಟುವಾಗ ರಬ್ಬರ್ ಗ್ಲೌಸ್‌ಗಳನ್ನು ಉಪಯೋಗಿಸುವುದರಿಂದ ಸೋಂಕನ್ನು ತಡೆಗಟ್ಟಬಹುದು. ರೋಗಿ ಉಪಯೋಗಿಸಿದ ವಸ್ತುಗಳನ್ನು ನೀರಿನಲ್ಲಿ ಕುದಿಸುವುದರಿಂದ;ಮನೆಯಲ್ಲಿ ಉಪಯೋಗಿಸುವ ಹೈಪೊಕ್ಲೋರೈಡ್ ಕ್ರಿಮಿನಾಶಕಗಳಿಂದ ರೋಗಾಣುಗಳನ್ನು ನಾಶಪಡಿಸಬಹುದು.

* * * * *

31. ಟ್ರೈಕೊಮೋನಿಯಾಸಿಸ್

ಇದು ಲೈಂಗಿಕ ಸಂಬಂಧವಾಗಿ ಹರಡುವ ಮುಖ್ಯವಾದ ಒಂದು ಕಾಯಿಲೆ. ಟ್ರೈಕಮೋನ ವೆಜೈನಾಲಿಸ್ ಎಂಬ ಏಕ ಕಣ ಪರತಂತ್ರ ಜೀವಿಯು ಈ ಸೋಂಕಿಗೆ ಕಾರಣವಾಗಿದೆ.

ಲೈಂಗಿಕ ಜೀವನದ ಉತ್ತುಂಗ ಸ್ಥಿತಿಯಲ್ಲಿರುವ ಪುರುಷ ಮತ್ತು ಮಹಿಳೆಯರಲ್ಲಿ ಈ ಕಾಯಿಲೆ ಜಾಸ್ತಿ. ಸೋಂಕಾಣುಗಳು ಪುರುಷರ ಮೂತ್ರ ನಾಳವನ್ನು ಹೊಕ್ಕಿ ಸೋಂಕಿಗೆ ಗುರಿಯಾದ ಅನೇಕ ವ್ಯಕ್ತಿಗಳು ಚಿಕಿತ್ಸೆಗೆ ಬಂದರೂ ಬಹಳಷ್ಟು ವ್ಯಕ್ತಿಗಳಲ್ಲಿ ಸೋಂಕಿದ್ದರು ಸೋಂಕಿನಿಂದ ಯಾವ ತೊಂದರೆಯೂ ಉಂಟಾಗುವುದಿಲ್ಲ. ಅಂತಹ ವ್ಯಕ್ತಿಗಳು ಚಿಕಿತ್ಸೆಯನ್ನು ತೆಗೆದುಕೊಳ್ಳದೆ ಸೋಂಕನ್ನು ಇನ್ನೊಬ್ಬರಿಗೆ ಹರಡುತ್ತಾರೆ.

ಈ ಸೋಂಕಿನಿಂದ, ಮೂತ್ರ ನಾಳದಿಂದ ಲೋಳೆ ಮಿಶ್ರಿತ ದ್ರವ ಮತ್ತು ಕೆಲವು ಸಾರಿ ಕೀವು ಕಾಣಿಸಿಕೊಳ್ಳಬಹುದು. ಕೆಲವೊಮ್ಮೆ ಮೂತ್ರ ಧ್ವಾರದಲ್ಲಿ ಕಡಿತ ಕಾಣಿಸಿಕೊಳ್ಳಬಹುದು.

ಯೋನಿಯ ಹೊರಭಾಗದಲ್ಲಿ ಕಡಿತ ಉಂಟಾಗುವ ವ್ಯಕ್ತಿಗಳಲ್ಲಿ ಪ್ರತಿ ಶತ ಅರ್ಧದಷ್ಟು ಮಹಿಳೆಯರು ಈ ಕಾಯಿಲೆಯಿಂದ ಬಳಲುತ್ತಿರಬಹುದು. ಬಹಳಷ್ಟು ಸಂದರ್ಭಗಳಲ್ಲಿ ಲೈಂಗಿಕ ಸಂಬಂಧವಿಲ್ಲದೆ ಸೋಂಕು ತಗಲಿರುವ, ವ್ಯಕ್ತಿಗಳ ಒಳ ಉಡುಪು, ಟವಲ್ ಮುಂತಾದ ವಸ್ತುಗಳನ್ನು ಹಂಚಿಕೊಂಡು ಉಪಯೋಗಿಸುವುದರಿಂದ ಮತ್ತು ಗುಪ್ತಾಂಗ ಮತ್ತು ಕೈ ಬೆರಳು ಮಲಿನತೆಯಿಂದ ಕೂಡಿರುವದರಿಂದಲೂ ಈ ಕಾಯಿಲೆ ಒಬ್ಬರಿಂದ ಮತ್ತೊಬ್ಬರಿಗೆ ಅಂಟಬಹುದು.

ಯೋನಿಯು ಸೋಂಕಿಗೆ ಒಳಗಾಗಿ ಚಿಕಿತ್ಸೆ ತೆಗೆದುಕೊಳ್ಳದಿದ್ದರೆ ಕಾಯಿಲೆಯು ಮೂತ್ರ ನಾಳ, ಸ್ಕೆನ್ಸ್ ಮತ್ತು ಬಾರ್ತೋಲಿನ ಗ್ರಂಥಿಗಳು ಹಾಗೂ ಗರ್ಭಕೋಶದ ಕೊರಳಿಗೂ ಹರಡಿ ಕಾಯಿಲೆ ಉಲ್ಬಣಗೊಳ್ಳುತ್ತದೆ.

ಸಾಮಾನ್ಯವಾಗಿ ಯೋನಿಯಿಂದ ಹೆಚ್ಚಿನ ಪ್ರಮಾಣದಲ್ಲಿ ಸೋಂಕಿನ ದ್ರವ ಹೊರಸೂಸುತ್ತದೆ. ದುರ್ಗಂಧಯುಕ್ತ ತಿಳಿ ಹಸಿರು ಅಥವ ಹಳದಿ ಬಣ್ಣದಿಂದ ಕೂಡಿರುತ್ತದೆ. ಈ ದ್ರವವು ಯೋನಿಯ ಹೊರಭಾಗದ ಚರ್ಮಕ್ಕೂ

ತಾಗುವುದರಿಂದ ಸುತ್ತಮುತ್ತಲಿನ ಜಾಗವು (ವಲ್ವಾ) ಕೂಡ ಸೋಂಕಿನಿಂದ ಕೆಂಪಾಗಿದ್ದು ಉರಿ, ಕಡಿತ ಉಂಟಾಗಬಹುದು.

ಜನನೇಂದ್ರಿಯದ ನೈರ್ಮಲ್ಯತೆಯನ್ನು ಕಾಪಾಡುವುದರ ಜೊತೆಗೆ ಮೆಟ್ರನಿಡಜೋಲ್ ಅಥವ ಟಿನಿಡಾಜೋಲ್ ಮುಂತಾದ ಸೋಂಕು ವಿವಾರಕಗಳಿಂದ ಕಾಯಿಲೆಯನ್ನು ಗುಣಪಡಿಸಬೇಕು. ಒಬ್ಬರು ಕಾಯಿಲೆಗೆ ಗುರಿಯಾಗಿದ್ದರೆ ಅವರ ಲೈಂಗಿಕ ಸಂಗಾತಿಯು ಚಿಕಿತ್ಸೆಯನ್ನು ತೆಗೆದುಕೊಳ್ಳಬೇಕು.

* * * * *

32. ಇನ್ಫೆಕ್ಷಿಯಸ್ ಮಾನೊನ್ಯೂಕ್ಲಿಯೋಸಿಸ್

ಎಪ್‌ಸ್ಟಿನ್ ಬಾರ್ ಎಂಬ ವೈರಸ್ ರೋಗಾಣುವಿನಿಂದ ಬರುವ ಈ ಕಾಯಿಲೆ ಪ್ರಪಂಚದಲ್ಲೆಲ್ಲಾ ಹರಡಿಕೊಂಡಿದೆ. ಸಾಮಾನ್ಯವಾಗಿ ಚುಂಬನದಿಂದ ಒಬ್ಬರಿಂದ ಮತ್ತೊಬ್ಬರಿಗೆ ಹರಡುವ ಈ ಕಾಯಿಲೆಯನ್ನು ಕಿಸ್ಸಿಂಗ್ ಡಿಸೀಸ್ ಎಂದು ಸಹ ಪಾಶ್ಚಿಮಾತ್ಯ ದೇಶಗಳಲ್ಲಿ ಕರೆಯುತ್ತಾರೆ.

ಮೊದಲಿಗೆ ಗಂಟಲು ಮತ್ತು ಜೊಲ್ಲಿನ ಗ್ರಂಥಿಗಳು ಸೋಂಕಿಗೆ ತಗಲಿ ನಂತರ ಅಲ್ಲಿರುವ ಬಿ – ಲಿಂಫೋಸೈಟ್ ಜೀವಕಣಗಳ ಮೂಲಕ ದೇಹದ ವಿವಿಧ ಭಾಗಗಳಿಗೆ ಸೋಂಕು ಪಸರಿಸುತ್ತದೆ. ಜೊಲ್ಲಿನ ಮೂಲಕ ಒಬ್ಬರಿಂದ ಇನ್ನೊಬ್ಬರಿಗೆ ಅಂಟುತ್ತದೆ.

ಮಕ್ಕಳಿಗೆ ದೊಡ್ಡವರು ಮುತ್ತು ಕೊಡುವದರಿಂದ ಅಥವ ಜೊತೆಗೂಡಿ ಆಟ ಪಾಠಗಳಲ್ಲಿ ಭಾಗಿಯಾಗುವ ಮಕ್ಕಳಲ್ಲಿ ಒಬ್ಬರಿಂದ ಮತ್ತೊಬ್ಬರಿಗೆ ಈ ಸೋಂಕು ತಗಲಿದರೂ ಬಹುಪಾಲು ಮಕ್ಕಳಲ್ಲಿ ಸೋಂಕಿನ ಲಕ್ಷಣಗಳು ತಂದೆ ತಾಯಿಗಳಿಗೆ ಗೊತ್ತಾಗುವುದೆ ಇಲ್ಲ ಅಥವ ಫ್ಲೂ ತರಹ ಕೆಮ್ಮು, ಗಂಟಲು ನೋವು ಮುಂತಾದ ಲಕ್ಷಣಗಳಿಂದ ಕೆಲವು ದಿನ ಬಳಲುತ್ತಾರೆ.

ಪ್ರಾಯದ ಹಂತ ತಲುಪುತ್ತಿರುವ, ತಲುಪಿರುವ ಮತ್ತು ಪ್ರಾಯದವರಲ್ಲಿ ಈ ಸೋಂಕು ಬಹುಪಾಲು ಚುಂಬನದಿಂದಲೆ ಒಬ್ಬರಿಂದ ಮತ್ತೊಬ್ಬರಿಗೆ ಅಂಟುತ್ತದೆ. ಸೋಂಕು ತಗಲಿದ ಒಂದೆರಡು ತಿಂಗಳಲ್ಲಿ ಮೊದಲಿಗೆ ನಾಲ್ಕೈದು ದಿನಗಳ ತನಕ ಮೈ ಕೈ ನೋವು, ತಲೆ ನೋವು, ಸುಸ್ತು ಉಂಟಾಗಬಹುದು. ನಂತರ ಜ್ವರ, ಗಂಟಲು ನೋವು ಮತ್ತು ಕುತ್ತಿಗೆಯ ಸುತ್ತಲಿನ ಲಿಂಫ್ ಗ್ರಂಥಿಗಳು ಊತದಿಂದ ಕೂಡಿರುತ್ತವೆ. ಕೆಲವರಲ್ಲಿ ಇಡೀ ಶರೀರದ ಚರ್ಮದ ತಳಭಾಗದಲ್ಲಿರುವ ಲಿಂಫ್ ಗ್ರಂಥಿಗಳಲ್ಲಿ ಕೆಲವಾರು ಕಡೆ ಹಲವು ಗ್ರಂಥಿಗಳು ಊತದಿಂದ ಕೂಡಿದ್ದು ಕೈ ಬೆರಳಿನ ಪರೀಕೆಗೆ ಸಿಲುಕಿ ಅದುಮಿದರೆ ನೋವುಂಟಾಗಬಹುದು. ಚರ್ಮದಲ್ಲೆಲ್ಲಾ ಕಂದು ಬಣ್ಣದ ವಿವಿಧ ರೀತಿಯ ಗುಳ್ಳೆಗಳು ಕಾಣಿಸಿಕೊಳ್ಳಬಹುದು.

ಬಹುಪಾಲು ವ್ಯಕ್ತಿಗಳು ಒಂದೆರಡು ತಿಂಗಳಲ್ಲಿ ಸೋಂಕಿನ ಉಪದ್ರವದಿಂದ ಪಾರಾದರೂ ಜೀವನ ಪರ್ಯಂತ ಸೋಂಕನ್ನು ಮತ್ತೊಬ್ಬರಿಗೆ ಪರಡುತ್ತಿರಬಹುದು.

ಎಯ್ಡ್ಸ್ ಮುಂತಾದ ಕಾಯಿಲೆಯಿಂದ ರೋಗ ನಿರೋಧಕ ಶಕ್ತಿ ಕುಂಠಿತಗೊಂಡವರಲ್ಲಿ ಈ ಕಾಯಿಲೆಯಿಂದಲೆ ವಿವಿಧ ರೀತಿಯ ಕೆಡಕಾಗಿ ಕೊನೆಯುಸಿರಳೆಯಬಹುದು.

* * * * *

33. ಸೈಟೊಮೆಗಲೊ ವೈರಸ್ ಸೋಂಕು (ಸಿ ಎಂ ಪಿ)

ಸೈಟೊಮೆಗಲ ವೈರಸ್ ಎಂಬ ವೈರಾಣು ಈ ಸೋಂಕಿಗೆ ಕಾರಣವಾಗಿದ್ದು ಮುಂದುವರಿದ ದೇಶಗಳಲ್ಲಿ ಪ್ರತಿ ಶತ 40 ರಿಂದ 80 ಭಾಗದಷ್ಟಿನ ವ್ಯಕ್ತಿಗಳು ಪ್ರಾಯಾವಸ್ಥಯಲ್ಲೆ ಈ ಸೋಂಕಿಗೆ ಒಳಗಾಗುತ್ತಾರೆ.

ಗರ್ಭಾವಸ್ಥೆಯಲ್ಲಿ ತಾಯಿಯಿಂದ ಮಗುವಿಗೆ, ಹೆರಿಗೆ ಸಮಯದಲ್ಲಿ ಮತ್ತು ಎದೆಹಾಲಿನ ಮೂಲಕ ಮಕ್ಕಳಿಗೆ ಸೋಂಕು ಅಂಟುತ್ತದೆ. ಪ್ರಾಯದವರಲ್ಲಿ ಅನೀತಿಯುತ ಲೈಂಗಿಕ ಚಟುವಟಿಕೆಯಿಂದ ಈ ಸೋಂಕು ಒಬ್ಬರಿಂದ ಬೇರೊಬ್ಬರಿಗೆ ಅಂಟುತ್ತದೆ.

ಅರೋಗ್ಯವಂತರಲ್ಲಿ ಈ ಸೋಂಕು ತಗಲಿದಾಗ ಇನ್ಫೆಕ್ಷಿಯಸ್ ಮಾನೊನ್ಯೂಕ್ಲಿಯೋಸಿಸ್ ಕಾಯಿಲೆಯಲ್ಲಿ ಕಾಣಿಸಿಕೊಳ್ಳುವ ರೋಗದ ಲಕ್ಷಣಗಳಂತೆಯೇ ಈ ಕಾಯಿಲೆಯೂ ಕಾಣಿಸಿಕೊಳ್ಳುತ್ತದೆ.

ದೀರ್ಘ ಕಾಲದ ಕಾಯಿಲೆಗಳಲ್ಲಿ, ಕ್ಯಾನ್ಸರ್‌ಗಳಲ್ಲಿ, ಕಿಡ್ನಿ ಮುಂತಾದ ಅವಯವಗಳನ್ನು ಬೇರೆಯವರಿಂದ ಅಳವಡಿಸಿಕೊಂಡವರಲ್ಲಿ ರೋಗ ವಿರೋಧಕ ಶಕ್ತಿ ಕಡಿಮೆ ಇದ್ದು ಈ ಕಾಯಿಲೆ ತೀವ್ರ ರೀತಿಯಲ್ಲಿ ಕಾಣಿಸಿಕೊಂಡು ಜೀವಕ್ಕೆ ಅಪಾಯ ಒದಗುತ್ತದೆ.

ಎಯ್ಡ್ಸ್ ಕಾಯಿಲೆಯ ಹಾವಳಿ ಶುರುವಾದ ಮೇಲಂತೂ ಮುಂದುವರಿದ ದೇಶಗಳಲ್ಲಿ ಈ ಕಾಯಿಲೆಯಿಂದ ಸಾವನ್ನಪ್ಪುವುದು ಜಾಸ್ತಿಯಾಗುತ್ತಿದೆ.

* * * * *

34. ಬಿಳಿ ಸೆರಗು (ವೆಜೈನಲ್ ಡಿಸ್ಚಾರ್ಜ್)

ಮಕ್ಕಳು ವೃದ್ದೆಯರು ಸೇರಿದಂತೆ ಬಹಳಷ್ಟು ಮಹಿಳೆಯರು ಬಿಳಿ ಸೆರಗು ಅರ್ಥಾತ್ ಬಿಳಿ ಬಟ್ಟೆ ಅಥವಾ ವೆಜೈನಲ್ ಡಿಸ್ಚಾರ್ಜ್ ತೊಂದರೆಯಿಂದ ವೈದ್ಯರಲ್ಲಿಗೆ ಬರುವುದು ಬಹಳ ಸಾಮಾನ್ಯ. ಯೋನಿ ಮತ್ತು ಸರ್ವಿಕ್ಸ್‌ಗಳು ಬಿಳಿ ಸೆರಗಿನ ಉಗಮ ಸ್ಥಾನಗಳು.

ವೆಜೈನಲ್ ಡಿಸ್ಚಾರ್ಜ್ ಅಂದರೆ ಯೋನಿಯ ಸೋರಿಕೆಯು ಅನೇಕ ಕಾರಣಗಳಿಂದ ಉಂಟಾಗುತ್ತದೆ. ಮುಖ್ಯವಾಗಿ ಗರ್ಭಧ್ವಾರದ ಬೇನೆಗಳಾದ ಸರ್ವಿಸೈಟಿಸ್, ಎರೋಷನ್ ಮತ್ತು ಪಾಲಿಪ್ ಮುಂತಾದ ತೊಂದರೆಗಳಲ್ಲಿ ಲೋಳೆಯಾಕಾರದ ದ್ರವವು ಸ್ರವಿಸಿ ಯೋನಿಯ ಮೂಲಕ ಹೊರ ಬರುವುದರಿಂದ ಮಹಿಳೆಯರು ಬೆಳಿ ಸೆರಗಿನ ಲಕ್ಷಣಗಳೊಡನೆ ಚಿಕಿತ್ಸೆಗೆ ಬರುತ್ತಾರೆ. ಈ ಬೇನೆಗಳಿಗೆ ಪ್ರತಿಯೊಂದಕ್ಕೂ ಅದರದ್ದೇ ಆದ ನಿರ್ದಿಷ್ಟ ಚಿಕಿತ್ಸಾ ಕ್ರಮಗಳಿವೆ.

ಕಾರಣಗಳೇನು?

ಯೋನಿಯ ಒಳಗೋಡೆಯಿಂದ ಮತ್ತು ಗರ್ಭದ್ವಾರ ಅಥವಾ ಸರ್ವಿಕ್ಸ್‌ನಲ್ಲಿರುವ ಗ್ರಂಥಿಗಳು ಮತ್ತು ಜೀವಕಣಗಳಿಂದ ಮ್ಯೂಕಸ್ ಮುಂತಾದ ದ್ರವಗಳು ಸ್ರವಿಸುತ್ತಿರುತ್ತವೆ. ವಯಸ್ಕ ಮಹಿಳೆಯರು ಲೈಂಗಿಕವಾಗಿ ಪ್ರಚೋದನೆಗೊಂಡಾಗ, ಅಂಡಾಶಯದಿಂದ ಅಂಡಾಣು ಬಿಡುಗಡೆಯಾಗುವ ಸಮಯದಲ್ಲಿ, ಗರ್ಭಿಣಿಯರಲ್ಲಿ ಮತ್ತು ತಿಂಗಳ ಮುಟ್ಟಿನ ಕೆಲವು ದಿನಗಳ ಮುಂಚೆ ಯೋನಿಯ ದ್ರವವು ಜಾಸ್ತಿ ಉತ್ಪತ್ತಿಯಾಗುವುದರಿಂದ ಯೋನಿಯು ತೇವದಿಂದ ಒದ್ದೆಯಾಗಿರುತ್ತದೆ. ಇಂತಹ ಸಮಯಗಳಲ್ಲಿ ಈ ಸ್ರಾವವು ಸಹಜವಾದ ಲಕ್ಷಣ ಎಂದು ತಿಳಿಯಬೇಕು.

ಯೋನಿಯ ರೋಗನಿರೋಧಕತೆ

ಋತುಮತಿಯಾದ ಅನಂತರದಿಂದ ಅಂತಿಮವಾಗಿ ಋತು ಚಕ್ರ ಶಾಶ್ವತವಾಗಿ ನಿಲ್ಲುವವರೆಗೂ ಮಹಿಳೆಯರಲ್ಲಿ ಈಸ್ಟ್ರೋಜನ್ ಹಾರ್ಮೋನ್ ಪ್ರಭಾವದಿಂದ ಯೋನಿಯಲ್ಲಿ ಡೋಡರಲೆನ್ ಬ್ಯಾಸಿಲೆಗಳು ಇರುತ್ತವೆ. ಈ ಬ್ಯಾಕ್ಟೀರಿಯಾಗಳು ನಿರಂತರ ಯೋನಿಯಲ್ಲಿ ಠಿಕಾಣಿ ಹೂಡಿ, ಉತ್ಪತ್ತಿ ಮಾಡುವ ಲ್ಯಾಕ್ಟಿಕ್ ಆಸಿಡ್‌ನಿಂದ ಅಮ್ಲತೆ ಹೆಚ್ಚಾಗಿ ಯಾವುದೇ ಸೋಂಕು

ಕಾರುವ ಬ್ಯಾಕ್ಟೀರಿಯಾಗಳು ಸಾಮಾನ್ಯವಾಗಿ ಯೋನಿಯನ್ನು ಪ್ರವೇಶಿಸದಂತೆ ಪ್ರಕೃತಿದತ್ತ ನಿರೋಧಕ ವ್ಯವಸ್ಥೆ ಇರುತ್ತದೆ.

ಮಕ್ಕಳಲ್ಲಿ, ವಯಸ್ಸಾಗಿ ಮುಟ್ಟು ನಿಂತಿರುವವರಲ್ಲಿ ಮತ್ತು ಗರ್ಭಿಣಿಯರಲ್ಲಿ ಈಸ್ಟ್ರೋಜನ್ ಹಾರ್ಮೋನು ಕಡಿಮೆ ಇರುವುದರಿಂದ ಡೋಡೆರ್‌ಲೆನ್ ಬ್ಯಾಕ್ಟೀರಿಯಾಗಳ ಕೊರತೆಯಿಂದಾಗಿ ಯೋನಿಯಲ್ಲಿ ಆಮ್ಲತೆ ಕಡಿಮೆಯಾದಾಗ ವಿವಿಧ ರೀತಿಯ ಬ್ಯಾಕ್ಟೀರಿಯಾಗಳಿಂದ ಸೋಂಕು ತಗಲುವುದು ಇತರರಿಗಿಂತ ಜಾಸ್ತಿ.

ವಲ್ವೊವೆಜೈನೈಟಿಸ್ (ಮಕ್ಕಳಲ್ಲಿ)

ಮೊದಲೆ ತಿಳಿಸಿರುವಂತೆ ಪ್ರಾಯದ ಹಂತ ತಲುಪುವ ಮುಂಚೆ ಮಕ್ಕಳ ದೇಹದಲ್ಲಿ, ಈಸ್ಟ್ರೋಜನ್ ಹಾರ್ಮೋನ್ ಪ್ರಮಾಣ ಕಡಿಮೆ ಇದ್ದು ಯೋನಿಯಲ್ಲಿ ಆಮ್ಲತೆಯ ಕೊರತೆಯುಂಟಾಗಿರುವುದರಿಂದ ಸೋಂಕಿಗೆ ಹಾದಿ ಸುಗಮವಾಗಿರುತ್ತದೆ. ಈ-ಕೋಲೈ, ಸ್ಟೆಪ್ಟೊ ಮತ್ತು ಸ್ಟೆಪ್ಲೈಲೊಕಾಕಸ್ ಬ್ಯಾಕ್ಟೀರಿಯಾಗಳು ಸಾಮಾನ್ಯವಾಗಿ ಮತ್ತು ಟ್ರೈಕೊಮಾನ, ಮೊನಿಲಿಯಾ, ಥ್ರೆಡ್‌ವರ್ಮ್‌ಗಳು ಅಪರೂಪವಾಗಿ ಯೋನಿ ಯೊಳಗೆ ಸೇರಿ ಸೋಂಕು ಉಂಟು ಮಾಡುತ್ತದೆ.

ಮಕ್ಕಳು ತಮ್ಮ ಕೈ ಬೆರಳುಗಳು, ಉಡುವ ಮತ್ತು ಉಪಯೋಗಿಸುವ ವಸ್ತುಗಳನ್ನು ಶುಭ್ರವಾಗಿರುವಂತೆ ನೋಡಿಕೊಳ್ಳದಿದ್ದರೆ ರೋಗಾಣುಗಳು ಸುಲಭವಾಗಿ ಯೋನಿಯ ಒಳನುಗ್ಗಿ ಸೋಂಕನ್ನು ತರುತ್ತವೆ. ಯೋನಿಯ ಸೋರುವಿಕೆಯಿಂದ ಯೋನಿಯ ಹೊರಭಾಗವಾದ ವಲ್ವಾ ಕೂಡ ಸೋಂಕಿಗೆ ಒಳಪಡುತ್ತದೆ. ಆದುದರಿಂದ ಈ ಬೇನೆಯನ್ನು ವಲ್ವೋ ವೆಜೈನೈಟಿಸ್ ಎಂದು ಕರೆಯುತ್ತೇವೆ. ಈ ಸೋಂಕಿನಲ್ಲಿ ವಾಸನೆಯಿಂದ ಕೂಡಿದ ಕೀವು ಮಿಶ್ರಿತದ್ರವ, ಯೋನಿಯಿಂದ ಸೋರುವುದರಿಂದ ಯೋನಿಯ ಹೊರ ಭಾಗದ ಸುತ್ತಮುತ್ತಲಿನ ಸ್ಥಳವೂ (ವಲ್ವಾ) ಘಾಸಿಗೊಂಡು ಊತದಿಂದ ಕೂಡಿದ್ದು ಕಡಿತ, ಉರಿ, ನೋವು ಕಾಣಿಸಿಕೊಳ್ಳಬಹುದು.

ಈಸ್ಟ್ರೋಜನ್ ಹಾರ್ಮೋನ್ ಉಪಯೋಗಿಸಿ ಯೋನಿಯ ಆಮ್ಲತೆಯನ್ನು ಹೆಚ್ಚುವಂತೆ ನೋಡಿಕೊಳ್ಳುವುದು, ಗುಪ್ತಾಂಗದ ನೈರ್ಮಲ್ಯವನ್ನು ಕಾಪಾಡುವುದು ಮುಖ್ಯವಾದ ಅಂಶಗಳು, ಜತೆಗೇ ಅವಶ್ಯಕತೆ ಇದ್ದರೆ ಸೋಂಕು ನಿವಾರಕ ಔಷಧಿಗಳನ್ನು ಉಪಯೋಗಿಸಿ, ಈ ಸೋಂಕಿನಿಂದ ಪಾರಾಗಬಹುದು.

ವೆಜೈನೈಟಿಸ್ (ವೃದ್ದೆಯರಲ್ಲಿ)

ಮೊದಲೇ ವಿವರಿಸಿದಂತೆ ವೃದ್ದೆಯರ ಶರೀರದಲ್ಲಿಯೂ ಈಸ್ಟ್ರೋಜನ್ ಹಾರ್ಮೋನಿನ ಪ್ರಮಾಣ ಕಡಿಮೆಯಾಗಿರುವುದರಿಂದ ಆಮ್ಲತೆಯು ಕಮ್ಮಿ ಇದ್ದು ಯೋನಿಯ ಜೀವ ಕಣಗಳು ಕುಗ್ಗಿ, ನಿಷ್ಕ್ರಿಯಗೊಂಡಿರುವುದರಿಂದ ಯೋನಿಯು ಸೋಂಕಿಗೆ ಆಹ್ವಾನವೀಯುತ್ತದೆ. ಶರೀರದ ಸ್ವಚ್ಛತೆಯನ್ನು ಮತ್ತು ಗುಪ್ತಾಂಗದ ನೈರ್ಮಲ್ಯವನ್ನು ಕಾಪಾಡದ ಮಹಿಳೆಯರಲ್ಲಿ ಯೋನಿಯ ಸೋಂಕು ಇತರರಿಗಿಂತ ಜಾಸ್ತಿ.

ಕೀವು ಮಿಶ್ರಿತ ಅಥವ ಒಮ್ಮೊಮ್ಮೆ ರಕ್ತವು ಸಹ ಕೀವಿನ ಜತೆ ಸೇರಿ ಯೋನಿಯಿಂದ ಸೋರಬಹುದು. ಕಡಿತ, ನೋವು ಸಾಮಾನ್ಯವಾದ ಲಕ್ಷಣಗಳು, ಅನೇಕ ಬಾರಿ ಮೂತ್ರದ ಸೋಂಕೂ ಸೇರಿ ಮೂತ್ರ ವಿಸರ್ಜನೆಯಲ್ಲಿ ಉರಿ ಕಾಣಿಸಿಕೊಳ್ಳಬಹುದು. ಯೋನಿಯು ಮೊದಲಿಗಿಂತ ಕೆಂಪು ಬಣ್ಣಕ್ಕೆ ತಿರುಗಿ ಕೈ ಬೆರಳಿನಿಂದ ಅದುಮಿದರೆ ನೋವು ಕಾಣಿಸಿಕೊಳ್ಳಬಹುದು. ಸಕಾಲದಲ್ಲಿ ಚಿಕಿತ್ಸೆ ತೆಗೆದುಕೊಳ್ಳದಿದ್ದರೆ ಸೋಂಕು ಜನನೇಂದ್ರಿಯದ ಹೊರಭಾಗ ಮತ್ತು ಗರ್ಭಕೋಶಕ್ಕೂ ಹಬ್ಬಬಹುದು. ಸೋಂಕು ನಿವಾರಕದ ಔಷಧಗಳ ಜೊತೆಗೆ ಈಸ್ಟ್ರೋಜನ್ ಹಾರ್ಮೋನ್ ಉಪಯೋಗಿಸಿ ಆಮ್ಲತೆಯ ಸಮತೋಲನವನ್ನು ಕಾಪಾಡಿ, ಬೇನೆಯನ್ನು ಗುಣಪಡಿಸಬಹುದು.

ನಾನ್ ಸ್ಪೆಸಿಫಿಕ್ ವೆಜೈನೈಟಿಸ್

ಅನೇಕ ಮಹಿಳೆಯರಲ್ಲಿ ಹೆಚ್ಚಾಗಿ ಶರೀರದ ಶುಭ್ರತೆಯನ್ನು ಕಾಪಾಡದ ಮತ್ತು ಜನನೇಂದ್ರಿಯದ ನೈರ್ಮಲ್ಯವನ್ನು ಕಡೆಗಣಿಸಿದ ಮಹಿಳೆಯರಲ್ಲಿ ಸಾಮಾನ್ಯವಾಗಿ ಕೀವು ತರುವಂತಹ ಬ್ಯಾಕ್ಟೀರಿಯಾಗಳಾದ ಸ್ಟೆಪ್ಟೋಕಾಕ್ಕೈ ಸ್ಟೆಪೈಲೊಕಾಕ್ಕೈ ಈಕೊಲೈ ಮುಂತಾದ ರೋಗಾಣುಗಳು ನಾನಾ ರೀತಿಯಲ್ಲಿ ಯೋನಿಯೊಳಗೆ ನುಸುಳಿ ಸೋಂಕನ್ನು ತರುತ್ತವೆ.

ಜನನೇಂದ್ರಿಯದೊಳಗೆ ಮತ್ತು ಸುತ್ತಮುತ್ತ ಉಪಯೋಗಿಸುವ ವಸ್ತುಗಳಾದ ರಾಸಾಯನಿಕಗಳು, ಔಷಧಗಳು, ವಿವಿಧ ರೀತಿಯ ಗರ್ಭನಿರೋಧಕ ಸಾಧನಗಳು, ವೀರ್ಯನಾಶಕಗಳು, ಸ್ಯಾನಿಟರಿ ಪ್ಯಾಡ್‌ಗಳು ಮುಂತಾದವು ಮತ್ತು ವಿರಳವಾಗಿ ಶಸ್ತ್ರಚಿಕಿತ್ಸೆಯ ಮೂಲಕ ರೋಗಾಣುಗಳು ಯೋನಿಯ ಒಳನುಸುಳಿ ಸೋಂಕನ್ನುಂಟು ಮಾಡುತ್ತವೆ.

ಯೋನಿಯು ಕೆಂಪಗಾಗಿ ಊತದಿಂದ ಕೂಡಿದ್ದು ಯೋನಿಯ ಹೊರಭಾಗವು ಸೋಂಕಿಗೆ ಒಳಗಾಗಬಹುದು. ಮೂತ್ರ ಮಾಡಲು ಅಗಾಗ್ಗೆ ಮನಸ್ಸಾಗಿ ಮೂತ್ರದ ಸಮಯದಲ್ಲಿ ಉರಿ ಕಾಣಿಸಿಕೊಳ್ಳಬಹುದು. ಯೋನಿಯಲ್ಲಿ ನೋವು ಕಡಿತ ಮತ್ತು ಸೋರಿಕೆ ಸಾಮಾನ್ಯವಾದ ಲಕ್ಷಣಗಳು

ಯೋನಿಯಲ್ಲಿ ಕೃತಕ ವಸ್ತುಗಳಿದ್ದರೆ ಅವುಗಳನ್ನು ಹೊರ ತೆಗೆದು ಕೈ ಬೆರಳು ಮತ್ತು ಗುಪ್ತಾಂಗದ ನೈರ್ಮಲ್ಯವನ್ನು ಕಾಪಾಡಿಕೊಂಡು ಸೋಂಕು ನಿವಾರಕ ಔಷಧಿಗಳಿಂದ ಈ ಸೋಂಕನ್ನು ತಹಬಂದಿಗೆ ತರಬಹುದು.

* * * * *

35. ವೀರ್ಯ ಸ್ಖಲನ

ಪುರುಷರ ಲೈಂಗಿಕಾಂಗಗಳಲ್ಲಿರುವ ಲೈಂಗಿಕ ಗ್ರಂಥಿಗಳಿಂದ ಉತ್ಪತ್ತಿಯಾಗುವ ವಸ್ತುವೇ ಸಮೆನ್ ಅರ್ಥಾತ್ ವೀರ್ಯ. ಇದು ಬಿಳಿ ಲೋಳೆಯಂತ ದ್ರವ ಪದಾರ್ಥ. ವೀರ್ಯಾಣುಗಳು, ವೃಷಣ ಅರ್ಥಾತ್ ಟೆಸ್ಟಿಸ್‌ನಲ್ಲಿ ಉತ್ಪತ್ತಿಯಾಗುತ್ತವೆ. ಇದರ ಜೊತೆಗೆ ವೀರ್ಯನಾಳ, ವೀರ್ಯಚೀಲ ಮತ್ತು ಪ್ರಾಸ್ಟೇಟ್ ಗ್ರಂಥಿಗಳು ಸ್ರವಿಸುವ ರಸಗಳು ಮಿಶ್ರಣಗೊಂಡು ವೀರ್ಯವಾಗಿ ಹೊರ ಚೆಲ್ಲುವುದನ್ನು ವೀರ್ಯಸ್ಖಲನ ಎನ್ನುತ್ತೇವೆ.

ಒಂದು ಸಾರಿಗೆ 2 ರಿಂದ 5 ಎಂ. ಎಲ್ ನಷ್ಟು ಹೊರ ಚೆಲ್ಲುವ ವೀರ್ಯದಲ್ಲಿ ಸುಮಾರು 60 ರಿಂದ 120 ದಶಲಕ್ಷದಷ್ಟು ವೀರ್ಯಾಣು (ಸ್ಪೆರ್ಮ್ಸ್) ಗಳಿರುತ್ತವೆ. ಆದರೂ ಮಹಿಳೆಯರ ಗರ್ಭಧಾರಣೆ ಯಶಸ್ವಿಯಾಗಲು ಏಕಮಾತ್ರ ವೀರ್ಯಾಣು ಸಾಕಾಗುತ್ತದೆ.

ವೀರ್ಯನಾಶ ಪುರುಷರ ನಿಶ್ಯಕ್ತಿಗೆ ಮೂಲ ಎಂಬುದು ತಪ್ಪು ಅಭಿಪ್ರಾಯ, ಹಾಗೆಯೇ ವೀರ್ಯ ರಕ್ತಕ್ಕಿಂತ ಉತ್ಕೃಷ್ಟವಾದದ್ದು ಎಂಬ ಅಭಿಪ್ರಾಯವು ತಪ್ಪು. ಪ್ರಾಯದ ಹಂತ ತಲುಪಿದ ಮೇಲೆ ನಿರಂತರವಾಗಿ ವೀರ್ಯವು ಲೈಂಗಿಕ ಗ್ರಂಥಿಗಳಿಂದ ಉತ್ಪತ್ತಿಯಾಗುತ್ತಿರುತ್ತದೆ. ಲೈಂಗಿಕ ಬಯಕೆ ಅತಿಯಾದಾಗ ಅಥವ ಲೈಂಗಿಕವಾಗಿ ಮನಸ್ಸು ಚಿಂತನಾಶೀಲವಾದಾಗ ವೀರ್ಯದ ಉತ್ಪತ್ತಿ ಜಾಸ್ತಿಯಾಗಿ ವೀರ್ಯಸಲ್ಖನವಾಗುವುದು ಸ್ವಭಾವಿಕ ಕ್ರಿಯೆ. ಈ ಸ್ವಾಭಾವಿಕ ಕ್ರಿಯೆ ತಿಂಗಳಲ್ಲಿ ಅಥವ ವರ್ಷದಲ್ಲಿ ಕೆಲವಾರು ಬಾರಿ ಸಂಭವಿಸಬಹುದು. ಪುರುಷರ ಮನಸ್ಸು ಯಾವ ರೀತಿ ಲೈಂಗಿಕವಾಗಿ ಪ್ರಚೋದನೆಗೊಳ್ಳುತ್ತದೆ. ಅದರ ಅಧಾರದ ಮೇಲೆ ವೀರ್ಯ ಸಲ್ಖನವಾಗಬಹುದು. ವೀರ್ಯ ಸಲ್ಖನವು ರಾತ್ರಿಯಲ್ಲಿ ಅಥವ ಹಗಲಿನಲ್ಲಿ ಯಾವಾಗ ಬೇಕಾದರೂ ಸಂಭವಿಸಬಹುದು. ಸಾಮಾನ್ಯವಾಗಿ ದಿನವೆಲ್ಲ ಅಶ್ಲೀಲ ಸಿನಿಮಾ ಮತ್ತ ಟಿವಿ ಮುಂತಾದ ಸುದ್ದಿ ಮಾಧ್ಯಮಗಳಿಂದ ಅಥವ ಸ್ನೇಹಿತರೊಡನೆ ಲೈಂಗಿಕ ಚರ್ಚೆಯಲ್ಲಿ ಭಾಗಿಯಾಗಿ ರಾತ್ರಿಯಲ್ಲಿ ಮಲಗಿಕೊಂಡಾಗ ಮನಸ್ಸು ಕಾಮೋದ್ರೇಕಗೊಳ್ಳುವುದು ಸ್ವಾಭಾವಿಕ ಅಥವ ಸ್ವಪ್ನದಲ್ಲೂ ಲೈಂಗಿಕ ಸಂಭಾಷಣೆಯ ಚಿತ್ರಗಳೇ ಮೂಡುವುದು ಸಹಜವಾದುದರಿಂದ ನಿದ್ರೆಯಲ್ಲಿ ಅಥವ ಸ್ವಪ್ನ ಕಾಣಿಸಿಕೊಂಡಾಗ ವೀರ್ಯ ಸಲ್ಖನವಾಗುವುದು ಹೆಚ್ಚು. ಯಾವಾಗಲೂ ಲೈಂಗಿಕವಾಗಿ ಪ್ರಚೋದನೆಗೊಳ್ಳುವಂತಹ ಜೀವನ ಶೈಲಿಯ ಬಗ್ಗೆ ಜಾಗರೂಕತೆಯಿಂದಿದ್ದು ಮನಸ್ಸು ಲಾಭದಾಯಕ ಕಸಬುಗಳತ್ತ ತಿರುಗಿಸಿದರೆ ರಾತ್ರಿಯಲ್ಲಿ ಅಥವ ಸ್ವಪ್ನದಲ್ಲಿ ಅಗಾಗ್ಗೆ ವೀರ್ಯಸಲ್ಖನವಾಗುವುದು ತಪ್ಪುತ್ತದೆ.

ಮದುವೆಯ ನಂತರ ಸಂಗಾತಿಯೊಡನೆ ನಿಗದಿಯಾಗಿ ನಿರಂತರ ಲೈಂಗಿಕ ಕ್ರಿಯೆಯಲ್ಲೆ ವೀರ್ಯ ಸಲ್ಪನವಾಗುವುದರಿಂದ ನಿದ್ರೆಯಲ್ಲಿ ಅಥವ ಸ್ವಪ್ನದಲ್ಲಿ ವೀರ್ಯ ಸಲ್ಪನವಾಗುವುದು ತಪ್ಪುತ್ತದೆ.

ವೀರ್ಯವು ಲೈಂಗಿಕಾಂಗಗಳಿಂದ ಹೊರಚಲ್ಲಲು ಸ್ನಾಯುಗಳು ದೃಢತೆಯಿಂದ ಸಂಕುಚಿತಗೊಂಡು ಕೊಂಚ ಶಕ್ತಿಯು ವ್ಯಯವಾಗಿ ಸ್ವಲ್ಪ ಸೊಂಟದ ಸುತ್ತ ಒಂದು ರೀತಿಯ ನಿಶ್ಯಕ್ತಿಯ ಅನುಬವವಾಗುವುದು ಸ್ವಭಾವಿಕ. ಈ ಅನುಭವ ವೀರ್ಯನಾಶದಿಂದ ಎಂದು ತಿಳಿಯುವುದು ಮೂಢ ನಂಬಿಕೆ. ಕೆಲವರಲ್ಲಿ ಕೆಲವೊಮ್ಮೆ ಮೂತ್ರದ ವಿಸರ್ಜನೆ ಸಮಯದಲ್ಲಿ ಶುರುವಿನಲ್ಲಿ ಅಥವ ಕೊನೆಯಲ್ಲಿ ಮಜ್ಜಿಗೆ ಬಣ್ಣದಂತಹ ಮೂತ್ರ ವಿಸರ್ಜನೆಯಾಗಬಹುದು ಅಥವ ಲೋಳೆಯಂತಹ ದ್ರವ ಕಾಣಿಸಿಕೊಳ್ಳಬಹುದು. ಅಂತಹ ಸಮಯದಲ್ಲಿ ಮೂತ್ರದಲ್ಲಿ ವೀರ್ಯ ವಿಸರ್ಜನೆಯಾಗುತ್ತಿದೆ ಎಂದು ಬಹಳಷ್ಟು ಯುವಕರು ತಪ್ಪು ಅಭಿಪ್ರಾಯ ಉಳ್ಳವರಾಗಿರುತ್ತಾರೆ. ತಮ್ಮಲ್ಲಿ ಉಂಟಾಗುವ ಎಲ್ಲಾ ನಿಶ್ಯಕ್ತಿಗೆ ಈ ರೀತಿ ವೀರ್ಯನಾಶವೆ ಕಾರಣ ಎಂದು ತಪ್ಪು ತಿಳಿಯುತ್ತಾರೆ. ಲೈಂಗಿಕಾಂಗಗಳಲ್ಲಿರುವ ಯುರೇತ್ರಲ್ ಮತ್ತು ಪ್ರಾಸ್ಟೇಟ್ ಗ್ರಂಥಿಗಳು ಸ್ರವಿಸುವ ರಸಗಳು ಒಮ್ಮೊಮ್ಮೆ ಮೂತ್ರದ ಜೊತೆಗೆ ಬೆರಕೆಯಾಗುವುದೆ ಕಾರಣ, ಮೂತ್ರವನ್ನು ಪರೀಕ್ಷಿಸಿದಾಗ ವೀರ್ಯಾಣುಗಳು ಇಲ್ಲದಿರುವುದು ದೃಢಪಟ್ಟಿದೆ. ಆದುದರಿಂದ ಯುವಕರು ಮೂತ್ರದ ಬಣ್ಣದ ವ್ಯತ್ಯಾಸದಿಂದ ಭಯಗೊಂಡು ಕೊರಗಬಾರದು.

ಲೈಂಗಿಕ ಕ್ರಿಯೆಯ ಸಮಯದಲ್ಲಿ ಹೊರ ಚೆಲ್ಲುವ ವೀರ್ಯದ ಬಣ್ಣ, ಪ್ರಮಾಣ ಮತ್ತು ಸಾಂದ್ರತೆಯು ಲೈಂಗಿಕ ಪ್ರಚೋದನೆಯ ತೀವ್ರತೆ, ವಯಸ್ಸು, ಹಾರ್ಮೋನ್‌ಗಳ ಮಟ್ಟ, ಸಂಗಾತಿಯೊಡನೆ ಸಾಮರಸ್ಯ ಮತ್ತು ಪುರುಷರ ಆರೋಗ್ಯ ಸ್ಥಿತಿಯನ್ನು ಅವಲಂಬಿಸಿದೆ. ವಯಸ್ಸಾದಂತೆ ವೀರ್ಯದ ಬಣ್ಣವು ತಿಳು ಹಳದಿ ಬಣ್ಣಕ್ಕೆ ತಿರುಗಬಹುದು. ಸಾಮಾನ್ಯವಾಗಿ ಕಾಣಿಸಿಕೊಳ್ಳುವ ಕಾಯಿಲೆಗಳ ನಿಮಿತ್ತ ಹಾಗೂ ವಯಸ್ಸು ಜಾಸ್ತಿಯಾಗುತ್ತಿದ್ದಂತೆ ವೀರ್ಯದ ಪ್ರಮಾಣ ಕಡಿಮೆಯಾಗಬಹುದು. ವೀರ್ಯ ಸ್ಖಲನದಿಂದ ಯಾವುದೇ ನಿಶ್ಯಕ್ತಿಯಾಗಲಿ, ನರದೌರ್ಬಲ್ಯಗಳಾಗಲಿ ಉಂಟಾಗುವುದಿಲ್ಲ. ವೀರ್ಯದ ಬಗ್ಗೆ ಆತಂಕ ಉಳ್ಳವರು ವೈದ್ಯರನ್ನು ಬೇಟಿ ಮಾಡಿ ವೀರ್ಯ ಪರೀಕ್ಷೆ ಮಾಡಿಸಿಕೊಂಡು ವೀರ್ಯವು ಮಾಮೂಲಿಯಾಗಿ ಸಹಜ ಸ್ಥಿತಿಯಲ್ಲಿದ್ದರೆ ನೆಮ್ಮದಿಯಾಗಿ ಮದುವೆಗೆ ಸಿದ್ಧಗೊಳ್ಳಬಹುದು. ಮದುವೆಯಾಗಿರುವ ಪುರುಷರು ಮಕ್ಕಳನ್ನು ಪಡೆದಿದ್ದರೆ ವೀರ್ಯದ ಬಗ್ಗೆ ತಲೆ ಕೆಡಿಸಿಕೊಳ್ಳದೆ ಜೀವನ ಸಾಗಿಸಬೇಕು.

* * * * *

36. ಸ್ವಯಂಲೈಂಗಿಕ ಪ್ರಚೋದನೆ

ಪ್ರಾಯ ತಲುಪಿದ ನಂತರ ಹೆಣ್ಣು ಅಥವ ಗಂಡು ತನ್ನ ಕೈಗಳಿಂದ ಅಥವ ಕೃತಕ ವಸ್ತುಗಳನ್ನು ಉಪಯೋಗಿಸಿ ತಮ್ಮ ಲೈಂಗಿಕಾಂಗಗಳನ್ನು ಸ್ವತಹ ಪ್ರಚೋದಿಸಿ ಪಡೆಯುವ ಉದ್ರೇಕದ ಉಲ್ಲಾಸವನ್ನು ಸ್ವಯಂ ಲೈಂಗಿಕ ಪ್ರಚೋದನೆ ಎಂದು ಕರೆಯುತ್ತೇವೆ. ಇದನ್ನು ಮ್ಯಾಸ್ಟರಬೇಷನ್, ಹಸ್ತ ಮೈಥುನ ಅಥವ ಮುಷ್ಠಿ ಮೈಥುನ ಎಂದೂ ಸಹ ಕರೆಯುತ್ತಾರೆ.

ಗಂಡಿನಲ್ಲಿ ಶಿಶ್ನದ ಉದ್ರೇಕದಿಂದ ಶುರುವಾದ ಲೈಂಗಿಕ ಪ್ರಚೋದನೆ ವೀರ್ಯ ಸ್ಖಲನದ ಸಮಯದಲ್ಲಿ ಉತ್ತುಂಗಕ್ಕೇರಿ ವೀರ್ಯ ಹೊರ ಚೆಲ್ಲಿದ ನಂತರ ಮಾನಸಿಕ ತುಡಿತ ಕಡಿಮೆಯಾಗಿ ಶಾಂತ ಸ್ವರೂಪವನ್ನು ಪಡೆದರೆ, ಹೆಣ್ಣಿನಲ್ಲಿ ಯೋನಿಯೊಳಗಿನ ತಾಡನ ಅಥವ ಕ್ಲೈಟೋರಿಸ್ ಅಂಗದ ನಿರಂತರ ಸ್ಪರ್ಶದ ಒತ್ತಡದಿಂದ ಶುರುವಾದ ಲೈಂಗಿಕ ಪ್ರಚೋದನೆ ಕೆಲವು ನಿಮಿಷಗಳ ನಂತರ ಸಂತೃಪ್ತಿಯನ್ನು ತಲುಪಿ ಮಾನಸಿಕ ತುಡಿತ ಕಡಿಮೆಯಾಗುತ್ತದೆ.

ಹಸ್ತಮೈಥುನ ಕುರಿತಂತೆ ಜನರಲ್ಲಿ ಅನೇಕ ತಪ್ಪು ನಂಬಿಕೆಗಳಿವೆ. ಹಸ್ತಮೈಥುನ ಬಿಡಲಾಗದೆ ಅನೇಕರು ಮಾನಸಿಕ ರೋಗಿಗಳಾಗಿರುವುದೂ ಉಂಟು. ಅನೇಕ ವೃತ್ತ ಪತ್ರಿಕೆಗಳಲ್ಲಿ ಸ್ವಯಂ ಲೈಂಗಿಕ ಪ್ರಚೋದನೆಯ ಬಗ್ಗೆ ಓದುಗರು ಕೇಳಿದ ಪ್ರಶ್ನೆಗಳಿಗೆಲ್ಲಾ ಹಸ್ತಮೈಥುನ ಒಂದು ಸಹಜ ಸ್ವಾಭಾವಿಕ ಕ್ರಿಯೆ ಅಥವ ಹಸ್ತಮೈಥುನವು ವೇಶ್ಯೆಯರ ಸಹವಾಸದಿಂದ ಮುಕ್ತವಾಗಿರಲು ಒಂದು ಒಳ್ಳೆಯ ಸಾಧನ ಅಥವ ಹಸ್ತ ಮೈಥುನದಿಂದ ಯಾವುದೇ ರೀತಿಯ ತೊಂದರೆ ಉಂಟಾಗುವುದಿಲ್ಲ ಮುಂತಾದ ಪ್ರೋತ್ಸಾಹದಾಯಕ ಉತ್ತರಗಳು ಜನರನ್ನು ಸ್ವಯಂ ಲೈಂಗಿಕ ಪ್ರಚೋದನೆಯ ಚಟಕ್ಕೆ ಮಾರು ಹೋಗಲು ಇತ್ತೀಚೆಗೆ ಮತ್ತಷ್ಟು ಸಹಾಯಕವಾಗಿವೆ ಎಂಬುದು ನಿಜ. ಆದರೆ ಅದೇ ಒಂದು ಚಟವಾದರೆ ಜೀವನದ ಇತರ ಮುಖ್ಯ ವಿಚಾರಗಳತ್ತ ನಿರ್ಲಕ್ಷ್ಯ ಮನೋಭಾವ ಬೆಳೆಯುವುದರಿಂದ ಸಾಧ್ಯವಾದಷ್ಟು ಆ ಚಟದಿಂದ ಮುಕ್ತವಾಗುವುದು ಒಳಿತು.

ಸ್ತ್ರೀಯಾಗಲಿ ಅಥವ ಪುರುಷನಾಗಲಿ ಪ್ರಾಯದ ಹಂತ ತಲುಪಿದ ಮೇಲೆ ಲೈಂಗಿಕ ಬಯಕೆಯ ಆಸಕ್ತಿ ಮೂಡುವುದು ಸಹಜ. ಈ ಬಯಕೆಯನ್ನು ಒಂದು ಮಿತಿಯಲ್ಲಿ ಇಡುವುದು ಬುದ್ಧಿವಂತರ ಲಕ್ಷಣ. ಲೈಂಗಿಕ ಬಯಕೆಗಿಂತ ಮುಖ್ಯವಾದ ಬಯಕೆಗಳಾದ ವಿದ್ಯಾಭ್ಯಾಸ, ನಂತರ ಉದ್ಯೋಗ ಮತ್ತು

ಸ್ವತಂತ್ರವಾಗಿ ತಮ್ಮ ಕಾಲ ಮೇಲೆ ನಿಂತು ಬದುಕುವುದರತ್ತ ಮನಸ್ಸನ್ನು ಕೇಂದ್ರೀಕರಿಸಿ ಮುಂದೆ ಭವಿಷ್ಯದಲ್ಲಿ ತನ್ನ ಲೈಂಗಿಕ ಬಯಕೆಯನ್ನು ಜೀವನ ಬಾಳ ಸಂಗಾತಿಯ ಜೊತೆಗೂಡಿ ಹಿಂಗಿಸಿಕೊಳ್ಳಬಹುದು. ಅಲ್ಲಿಯವರೆಗೆ ಪ್ರತಿಯೊಬ್ಬರೂ ಅದರಲ್ಲಿಯೂ ಯುವಕ ಯುವತಿಯರು ತಮ್ಮ ಆಸಕ್ತಿಯನ್ನು ಜೀವನದಲ್ಲಿ ಅನಿವಾರ್ಯವಾದ ತಮ್ಮ ತಮ್ಮ ಮನೆಯವರ ಮತ್ತು ಸಮಾಜದ ಅಭಿವೃದ್ಧಿಯ ಕಡೆಗೆ ಗಮನ ಕೇಂದ್ರೀಕರಿಸಿದರೆ ಲೈಂಗಿಕವಾಗಿ ಉದ್ರೇಕಗೊಂಡು ಮಾನಸಿಕವಾಗಿ ಗಲಿಬಿಲಿಗೊಳ್ಳುವುದನ್ನು ತಡೆಗಟ್ಟಬಹುದು.

ಕಡಿವಾಣ ಅಗತ್ಯ

ಲೈಂಗಿಕ ಬಯಕೆಯ ಪ್ರಚೋದನೆಗಳಾದ ಅಶ್ಲೀಲ ಸಿನಿಮಾ ಮತ್ತು ಛಾಯಾಚಿತ್ರಗಳು ಹಾಗೂ ದ್ವಂದ್ವಾರ್ಥದ ಅಶ್ಲೀಲ ಸಂಭಾಷಣೆಗಳು ಲೈಂಗಿಕ ಉದ್ರೇಕಕ್ಕೆ ಎಡೆಮಾಡಿ ಕೊಡುವುದರಿಂದ ಇವೆಲ್ಲವುಗಳಿಗೆ ಸ್ವಲ್ಪ ದಿನ ಕಡಿವಾಣ ಹಾಕಿ ತಮ್ಮ ಮನಸ್ಸನ್ನು ಸರಿದಾರಿಗೆ ಎಳೆದು ತರುವುದು ಒಂದು ಕಲೆ ಇದ್ದಂತೆ. ಈ ಕಲೆಯನ್ನು ಕರಗತ ಮಾಡಿಕೊಂಡು ಇತಿಹಾಸದಲ್ಲಿ ಬಾಳಿ ಬದುಕಿದ ಮಹಾನ್ ವ್ಯಕ್ತಿಗಳ ಮಹಾ ಕಾರ್ಯಗಳನ್ನು ಮನಸ್ಸಿನಲ್ಲಿಟ್ಟು ಅವರಂತೆಯೇ ನಡೆಯಲು ಮನಸ್ಸು ಮಾಡಿ ತಮ್ಮ ಸ್ನೇಹಿತರನ್ನು ಮತ್ತು ಸಹೋದ್ಯೋಗಿಗಳನ್ನು ಹುರಿದುಂಬಿಸಿ ತಮ್ಮ ಜೊತೆಯಲ್ಲಿ ಕರೆದೊಯ್ಯಲು ಪ್ರಯತ್ನಿಸಬೇಕು.

ಆದರೂ ಮನುಷ್ಯ ಎಚ್ಚರ ತಪ್ಪುವುದು ಮಾನವ ಸಹಜಗುಣ, ಅಪರೂಪವಾಗಿ ಕೆಲವು ಸಾಂದರ್ಭಿಕ ಕಾರಣಗಳಿಂದ ಲೈಂಗಿಕವಾಗಿ ಉದ್ರೇಕಗೊಂಡು ಮಾನಸಿಕ ತುಡಿತ ಮತ್ತು ಉದ್ವೇಗ ತಡೆಯಲು ಸಾಧ್ಯವಾಗದಿದ್ದಾಗ ಕ್ಷಣಿಕ ಮಾನಸಿಕ ಸಮತೋಲನ ತಪ್ಪುವುದು ಸಹಜ. ಅಂತಹ ಸಂದರ್ಭಗಳಲ್ಲಿ ಸ್ವಯಂ ಲೈಂಗಿಕ ಪ್ರಚೋದನೆಯ ನೆರವನ್ನು ಪಡೆದು ಉದ್ರೇಕದ ತುಮುಲವನ್ನು ಕಳಚಿ ಮಾನಸಿಕ ನೆಮ್ಮದಿಯನ್ನು ಮರಳಿ ಪಡೆದುಕೊಳ್ಳುವುದು ಅಪೇಕ್ಷಣೀಯ. ಯಾವುದೇ ಅಭ್ಯಾಸ ಮಿತಿಮೀರಿದಾಗ ಚಟವಾಗಿ ಅದು ದುಶ್ಚಟ ಮತ್ತು ದುರಭ್ಯಾಸವಾಗಿ ಮಾರ್ಪಟ್ಟು ಮಾನಸಿಕ ಮತ್ತು ದೈಹಿಕ ನೆಮ್ಮದಿಯನ್ನು ಹಾಳುಗೆಡುವುದು ಸಹಜ.

ದೀರ್ಘ ಕಾಲದ ದಾಂಪತ್ಯ ಜೀವನ ನಡೆಸುತ್ತಿರುವ ದಂಪತಿಗಳಲ್ಲಿ ಕೆಲವರು ಚಿಕ್ಕಂದಿನಲ್ಲಿ ಬೆಳೆಸಿಕೊಂಡಿದ್ದ ಹಸ್ತಮೈಥುನದ ಚಟದ ಬಗ್ಗೆ ತಲೆಕೆಡಿಸಿಕೊಂಡು ಕೊರಗುವುದು ಬಹಳ ಸಾಮಾನ್ಯ. ಮದುವೆಗೆ ಮುನ್ನ ಬಹಳಷ್ಟು ಜನರಲ್ಲಿ ಹಸ್ತಮೈಥುನದ ಚಟ ಜಾಸ್ತಿ. ಅಂತಹ ವ್ಯಕ್ತಿಗಳು ಮದುವೆ

ಆಗಿ ಮುಂದೆ ಸಾಂಸಾರಿಕ ಜೀವನದಿಂದ ಮಕ್ಕಳಾದ ಮೇಲೂ ಹಿಂದೆ ಮಾಡಿದ ತಪ್ಪಿಗೆ ಕೊರಗುವುದು ಅಜ್ಞಾನದಿಂದ ಅಥವಾ ಮಾನಸಿಕ ತೊಂದರೆಯ ಹಿನ್ನೆಲೆಯಿಂದಲೆ ಹೊರತು ದೈಹಿಕ ತೊಂದರೆಯ ಹಿನ್ನೆಲೆಯಂತೂ ಖಂಡಿತ ಅಲ್ಲ. ದಂಪತಿಗಳಿಗೆ ಮಕ್ಕಳು ಹುಟ್ಟಿದ ನಿದರ್ಶನವೆ ಅವರ ಲೈಂಗಿಕ ಮತ್ತು ದೈಹಿಕ ಚೈತನ್ಯಕ್ಕೆ ಸಾಕ್ಷಿ. ಅಂತಹ ವ್ಯಕ್ತಿಗಳು ಚಿಕ್ಕಂದಿನಲ್ಲಿ ಬೆಳೆಸಿಕೊಂಡಿದ್ದ ಹಸ್ತಮೈಥುನ ಚಟದ ಹುಸಿ ಭೂತವನ್ನು ತಮ್ಮ ಮನಸ್ಸಿನಿಂದ ತೊಲಗಿಸಿ ಆರೋಗ್ಯಪೂರ್ಣ ಲೈಂಗಿಕ ಸಾಂಸಾರಿಕ ಜೀವನಕ್ಕೆ ನಾಂದಿ ಹಾಡಬೇಕು. ಹಿಂದಿನ ಹಸ್ತಮೈಥುನದ ಚಟ ದಂಪತಿಗಳ ಆರೋಗ್ಯ ಪೂರ್ಣ ಲೈಂಗಿಕ ಚಟುವಟಿಕೆಗೆ ಯಾವುದೆ ರೀತಿಯಲ್ಲಿ ತೊಂದರೆ ಉಂಟು ಮಾಡುವುದಿಲ್ಲ.

ಹಸ್ತಮೈಥುನದ ಅತಿಯಾದ ಚಟ ಮಾನಸಿಕ ನಿಶ್ಯಕ್ತಿಗೆ ಕಾರಣವಾಗಿ ನಂತರ ಅದರ ಪರಿಣಾಮವಾಗಿ ದೈಹಿಕ ನಿಶ್ಯಕ್ತಿಗೂ ಎಡೆಮಾಡಿಕೊಡಬಹುದು. ಇದು ಲಘು ಪ್ರಮಾಣದಲ್ಲಿ ಮದ್ಯ ಮತ್ತು ಮಾದಕ ವಸ್ತುಗಳ ಸೇವನೆಯ ಚಟವನ್ನು ಅಂಟಿಸಿಕೊಂಡಂತೆಯೇ ಕಾಡಬಹುದು. ಆದುದರಿಂದ ಯುವಕ ಯುವತಿಯರು ದಾಂಪತ್ಯ ಜೀವನಕ್ಕೆ ಕಾಲಿರಿಸುವವರೆಗೆ ಮೊದಲು ಮಾಡಬೇಕಾದ ಕೆಲಸ ಚಟವನ್ನು ಕಡಿಮೆ ಮಾಡಿ. ನಂತರ ಒಂದು ಮಿತಿಯಲ್ಲಿಟ್ಟು ಸರಿದಾರಿಗೆ ತಂದರೆ ಕ್ರಮೇಣ ಮಾನಸಿಕ ನಿಶ್ಯಕ್ತಿ ಮತ್ತು ದೈಹಿಕ ನಿಶ್ಯಕ್ತಿ ಪುನಹ ಸಹಜ ಸ್ಥಿತಿಗೆ ಮರಳುತ್ತದೆ. ಯಾವುದೇ ತರಹದ ಅಲ್ಪ ಕಾಲದ ಅಥವ ದೀರ್ಘ ಕಾಲದ ಕಾಯಿಲೆಗಳಿಗೆ ಗುರಿಯಾಗುವ ಮತ್ತು ಮಾನಸಿಕ ಅಥವ ದೈಹಿಕವಾಗಿ ದೃತಿಕೆಟ್ಟಾಗ ಪ್ರತಿಯೊಂದಕ್ಕೂ ಹಸ್ತಮೈಥುನ ಚಟವೇ ಕಾರಣ ಎಂದು ಕೊರಗಿ ಬಳಲುವುದನ್ನು ಬಿಡಬೇಕು. ತಮ್ಮ ಮನಸ್ಸು ದೃಢವಾಗಿದ್ದರೆ ಮತ್ತು ಆತ್ಮ ವಿಶ್ವಾಸ ಹೆಚ್ಚಿಸಿಕೊಂಡರೆ ಭವಿಷ್ಯದ ದಾಂಪತ್ಯ ಜೀವನಕ್ಕೆ ಕುಂದುಂಟಾಗದಂತೆ ಜೀವನ ನಡೆಸಬಹುದು.

ಬಹಳಷ್ಟು ಅವಿವಾಹಿತ ಯುವಕ ಯುವತಿಯರು ಮದುವೆಗೆ ಮುನ್ನ ತಮ್ಮ ಲೈಂಗಿಕ ಸಾಮರ್ಥ್ಯವನ್ನು ಪರೀಕ್ಷೆ ಮಾಡಲು ಸ್ನೇಹಿತ ಸ್ನೇಹಿತೆಯರ ಅಥವ ಅನೈತಿಕ ವ್ಯವಹಾರಗಳಲ್ಲಿ ತೊಡಗಿರುವವರ ಜೊತೆ ಗುಪ್ತವಾಗಿ ನೀತಿ ಬಾಹಿರ ಲೈಂಗಿಕ ಕ್ರಿಯೆಯಲ್ಲಿ ತೊಡಗಿ ಲೈಂಗಿಕ ಸಾಮರ್ಥ್ಯದ ಪರೀಕ್ಷೆಯಲ್ಲಿ ನಪಾಸಾಗಿ ಮಾನಸಿಕವಾಗಿ ತಲೆ ಕೆಡಿಸಿಕೊಂಡಾಗ ದೈಹಿಕ ನಿಶ್ಯಕ್ತಿಗೂ ಕಾರಣವಾಗಬಹುದು. ಮೇಲು ನೋಟಕ್ಕೆ ಅವ್ಯವಹಾರವಾದುರಿಂದ ಮತ್ತು ಕಾನೂನಿಗೆ ವಿರುದ್ಧವಾದುದರಿಂದ ಭಯದ ವಾತಾವರಣದಲ್ಲಿ ಸಹಜ ಲೈಂಗಿಕ ಕ್ರೀಡೆ ಸಾಧ್ಯವಾಗುವುದಿಲ್ಲ. ಆದುದರಿಂದ ಇಷ್ಟವಿದ್ದರೆ ಮದುವೆಗೆ ಮುನ್ನ ತಮ್ಮ ಲೈಂಗಿಕ ಸಾಮರ್ಥ್ಯವನ್ನು ವೈಜ್ಞಾನಿಕವಾಗಿ ವೈದ್ಯರ ಜೊತೆ

ಚರ್ಚಿಸಿ ಖಚಿತಪಡಿಸಿಕೊಳ್ಳಬೇಕೆ ಹೊರತು ಮಾನಸಿಕವಾಗಿ ಸೊರಗುವುದರ ಜೊತೆಗೆ ವಿಷಯ ಬಹಿರಂಗಗೊಂಡರೆ ಕುಟುಂಬಗಳಲ್ಲಿ ಘರ್ಷಣೆಗೆ ಕಾರಣ ವಾಗಬಹುದು ಅಥವ ಲೈಂಗಿಕ ರೋಗಗಳಿಗೆ ಗುರಿಯಾಗಬಹುದು.

ಸ್ವಯಂ ಲೈಂಗಿಕ ಪ್ರಚೋದನೆಯ ಬಹಳಷ್ಟು ತಪ್ಪು ಅಭಿಪ್ರಾಯಗಳು ಮತ್ತು ಮೂಢ ನಂಬಿಕೆಗಳು ಅನಾವಶ್ಯಕವಾಗಿ ಬಿರುಗಾಳಿಯಂತೆ ಯುವ ಜನರ ಮನಸ್ಸಿನಲ್ಲಿ ತುಂಬುವುದರಿಂದ ಮತ್ತು ಈ ಹುಸಿ ನಂಬಿಕೆಗೆ ಇತರ ಸ್ನೇಹಿತರು ವೈದ್ಯರೆಂದು ಸೋಗು ಹಾಕುವ ಇತರರು ಮತ್ತು ಕೆಲವು ವೈದ್ಯರು ಹಸ್ತಮೈಥುನದ ವ್ಯಕ್ತಿಗೆ ಮತ್ತಷ್ಟು ಗಾಬರಿ ಹುಟ್ಟಿಸುವುದರಿಂದ ಸಮಸ್ಯೆ ಮತ್ತಷ್ಟು ಸಂಕೀರ್ಣವಾಗುತ್ತ ಮುಂದುವರಿಯುವುದೇ ಹೆಚ್ಚು.

ದೃಢ ಮನಸ್ಸು

ಯಾವುದೇ ದುಶ್ಚಟ ಮತ್ತು ದುರಭ್ಯಾಸ ಎಷ್ಟೇ ಪುರಾತನವಾಗಲಿ ಅಥವ ಸಾರ್ವತ್ರಿಕವಾಗಲಿ ಅದು ಖಂಡನೀಯವೆ. ಕುಟುಂಬ ಜೀವನದಲ್ಲಿ ವ್ಯಕ್ತಿ ಪ್ರಾಯದ ಹಂತ ತಲುಪಿದ ನಂತರ ಮುಖ್ಯವಾದ ಮೊದಲ ಕೆಲಸ ತಾನು ಓದು ಬರಹ ಕಲಿತು ಜವಾಬ್ದಾರಿ ಪ್ರೌಢನಾಗುವುದು ಮತ್ತು ಇತರರನ್ನು ಅವಲಂಬಿಸದೆ ಸ್ವತಂತ್ರವಾಗಿ ಜೀವನ ನಡೆಸುವ ಸಾಮರ್ಥ್ಯವನ್ನು ಗಳಿಸಿಕೊಳ್ಳುವುದು, ಇದರ ಗುರಿಯತ್ತ ತಮ್ಮ ಮನಸ್ಸನ್ನು ಸದಾ ಕೇಂದ್ರೀಕರಿಸಿದರೆ ಸ್ವಯಂ ಲೈಂಗಿಕ ಪ್ರಚೋದನೆಯ ನೆನಪೂ ಕೂಡ ಹತ್ತಿರ ಸುಳಿಯುವುದಿಲ್ಲ. ಒಂದು ವೇಳೆ ಸುಳಿದರೆ ತಮ್ಮ ಮನಸ್ಸನ್ನು ಅದರಿಂದ ದೂರ ಕೊಂಡೊಯ್ಯುವ ಪುಸ್ತಕಗಳನ್ನು ಓದುವುದರಿಂದ ವಿಷಯಗಳನ್ನು ಚರ್ಚಿಸುವುದರಿಂದ, ಆಟ ಮತ್ತು ವ್ಯಾಯಾಮಗಳಲ್ಲಿ ಭಾಗವಹಿಸುವುದರಿಂದ ಅಥವ ವ್ಯವಹಾರಗಳಲ್ಲಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಳ್ಳುವುದಿರಂದ ಸ್ವಯಂ ಲೈಂಗಿಕ ಪ್ರಚೋದನೆಯ ನೆನಪನ್ನು ಮತ್ತಷ್ಟು ಅಳಿಸಬಹುದು.

ಅಂತಿಮವಾಗಿ ಅವಶ್ಯಕತೆ ಇದ್ದರೆ ಅಥವ ಅನುಮಾನವಿದ್ದರೆ ವೈದ್ಯರನ್ನು ಪದೇ ಪದೇ ಬದಲಿಸದೆ ಲೈಂಗಿಕ ಅಥವ ಮಾನಸಿಕ ಸಮಸ್ಯೆಗಳ ತಜ್ಞರನ್ನು ಸಂಕೋಚವಿಲ್ಲದೆ ಭೇಟಿಯಾಗಿ ಬಿಚ್ಚು ಮನಸ್ಸಿನಿಂದ ಅವರ ಜೊತೆ ಚರ್ಚಿಸಿ ಅವರು ಕೊಟ್ಟ ಸಲಹೆಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ಆರೋಗ್ಯವಂತರಾಗಿ ಬಾಳಿ ಬದುಕಬಹುದು.

* * * * *

37. ವಿಕೃತ ಕಾಮ

ಕಾಮ ಪ್ರತಿಯೊಬ್ಬರನ್ನೂ ಕೆರಳಿಸುವ ಶಬ್ದ. ಎಲ್ಲರನ್ನೂ ಅದು ಬೆನ್ನಿಗೆ ಅಂಟಿದ ನೆರಳಿನಂತೆಯೇ ಕಾಡಬಹುದು. ಪ್ರೌಢಾವಸ್ಥೆಯ ನಂತರ ಹೆಣ್ಣು ಮತ್ತು ಗಂಡು ಎಂಬ ಬೇದ ಭಾವವಿಲ್ಲದೆ ಪ್ರತಿಯೊಬ್ಬರಲ್ಲಿಯೂ ಕಾಮದ ಬಯಕೆ ಇರುವುದು ನಿಜ. ಇದಕ್ಕೆ ಯಾರೂ ಹೊರತಾಗಿಲ್ಲ. ಮಾನಸಿಕವಾಗಿ ಅಥವ ದೈಹಿಕವಾಗಿ ಅಂಗ ಊನತೆಯುಳ್ಳವರು ಮತ್ತು ನಪುಂಸಕರಲ್ಲಿಯೂ ಕಾಮದ ಬಯಕೆ ಇರುತ್ತದೆ. ಕಾಮದ ಬಯಕೆ ಎಲ್ಲರಲ್ಲಿ ಇರುವುದು ಸಹಜವಾದುದರಿಂದ ಕಾಮದ ಬಯಕೆ ಸವಿಯುವ ದಾರಿಯನ್ನು ಸಹ ಪ್ರಕೃತಿ ಪ್ರತಿಯೊಬ್ಬರಿಗೂ ತೋರಿಸಿರುತ್ತದೆ.

ಸಾಮಾನ್ಯ ಆರೋಗ್ಯವಂತ ವ್ಯಕ್ತಿಗಳು ಅಂದರೆ ಮಾನಸಿಕ ದೈಹಿಕ ಮತ್ತು ಲೈಂಗಿಕವಾಗಿ ದೃಢಕಾಯ ವ್ಯಕ್ತಿಗಳು ಕಾಮದ ಬಯಕೆಯನ್ನು ಪ್ರೇಮದ ಜೊತೆಯಲ್ಲಿ ಜೀವನ ಬಾಳ ಸಂಗಾತಿ ಯೊಡನೆ ವ್ಯವಸ್ಥಿತ ರೀತಿ ನೀತಿಗಳಲ್ಲಿ ಮತ್ತು ನಿಗದಿತ ವಯಸ್ಸು ಮತ್ತು ವೇಳೆಯಲ್ಲಿ ಸವಿಯುವುದು ಪ್ರಕೃತಿಯ ನಿಯಮ. ಅಂದರೆ ಪ್ರೇಮ ಮತ್ತು ಕಾಮ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಒಂದಕ್ಕೊಂದು ಪೂರಕ ಮತ್ತು ಪ್ರೇರಕ.

ಸಮತೋಲನ ಅಗತ್ಯ

ಪ್ರೇಮ ಅಥವ ಪ್ರೀತಿಯನ್ನು ಮರೆತು ಕಾಮ ಒಂದಕ್ಕೇ ಮೇಲೇರಲು ಆಸ್ಪದ ಕೊಟ್ಟಾಗ ಅನೈತಿಕ ಲೈಂಗಿಕ ವ್ಯವಹಾರಗಳಿಗೆ ನಾಂದಿ ಆಗುವುದು ಸಹಜ. ಆದುದರಿಂದ ವ್ಯವಸ್ಥಿತ ಕೌಟುಂಬಿಕ ಜೀವನದ ಚೌಕಟ್ಟಿನಲ್ಲಿ ಮುನ್ನಡೆದರೆ ಪ್ರೇಮವು ಕಾಮಕ್ಕಿಂತ ಶಕ್ತಿಯುತವಾಗಿ ಕಾಮವನ್ನು ತನ್ನ ಜೊತೆಯಲ್ಲಿ ಎಳೆದುಕೊಂಡು ಸಾಗುತ್ತ ಆರೋಗ್ಯಪೂರ್ಣ ಲೈಂಗಿಕ ಹಾಗೂ ಸಾಂಸಾರಿಕ ಜೀವನಕ್ಕೆ ಹಾದಿ ಸುಗಮವಾಗುತ್ತದೆ. ಒಂದು ವೇಳೆ ಪ್ರೇಮವನ್ನು ಮರೆತರೆ ಕಾಮ ಕೇಕೆ ಹಾಕುತ್ತಾ ವಿಕೃತ ಲೈಂಗಿಕತೆಗೆ ಎಡೆ ಮಾಡಿಕೊಡುತ್ತದೆ.

ಊರಿದ್ದಲ್ಲೆ ಹೊಲಸು ಎಂಬ ಗಾದೆಯಂತೆ ಪುರಾತನ ಕಾಲದಿಂದಲೂ ಆರೋಗ್ಯಕರ ಲೈಂಗಿಕತೆಯಂತೆ ಅಯೋಗ್ಯ ಅಥವಾ ಅನಾರೋಗ್ಯ ಲೈಂಗಿಕ ಕ್ರಿಯೆ ಅಥವ ಕ್ರೀಡೆಗಳೂ ಬಳಕೆಯಲ್ಲಿವೆ. ಸಲಿಂಗ ಕಾಮ ಮತ್ತು ವಿಕೃತ ಕಾಮಗಳು ಉದಾಹರಣೆಗಳು. ಹೆಂಗಸರು ಹೆಂಗಸರ ಜೊತೆ ಮತ್ತು ಗಂಡಸರು

ಗಂಡಸರ ಜೊತೆ ನಡೆಸುವ ಲೈಂಗಿಕ ಕ್ರೀಡೆಯನ್ನು ಸಲಿಂಗ ಕಾಮ ಅಥವ ಹೋಮೋಸೆಕ್ಸ್ ಎಂದು ಕರೆಯುತ್ತೇವೆ.

ಲೈಂಗಿಕಾಂಗಗಳಲ್ಲಿ ಅಥವ ನಿರ್ನಾಳ ಗ್ರಂಥಿಗಳಲ್ಲಿ ನ್ಯೂನತೆಯೊಂದಿಗೆ ಜನಿಸಿದ ನಪುಂಸಕರಲ್ಲಿ ಅಂದರೆ ಹೆಣ್ಣಿನ ಗುಣವೂ ಕಾಣಿಸಿಕೊಳ್ಳುವ ಪುರುಷರಲ್ಲಿ (ಹೆಣ್ಣುಬೀರಿ, ಸಂಗ) ಅಧಿಕ ಪ್ರಮಾಣದ ನ್ಯೂನತೆ ಇದ್ದು ಲೈಂಗಿಕ ತೃಪ್ತಿ ಶಿಶ್ನದ ಮೂಲಕ ಅಸಾಧ್ಯವಾದಾಗ ಗುದದ್ವಾರದ ಸಂಭೋಗದಿಂದ ಲೈಂಗಿಕ ತೃಪ್ತಿಯನ್ನು ಪಡೆಯುತ್ತಾರೆ. ಹಾಗೆಯೆ ಗಂಡಸರ ಗುಣವು ಕಾಣಿಸಿಕೊಳ್ಳುವ ಹೆಂಗಸರು (ಗಂಡು ಬೀರಿ) ಹೆಂಗಸರ ಜೊತೆಯಲ್ಲಿ ಲೈಂಗಿಕ ಕ್ರೀಡೆಯಲ್ಲಿ ಭಾಗವಹಿಸಲು ಇಷ್ಟಪಡುತ್ತಾರೆ.

ಪ್ರಪಂಚದಲ್ಲಿ ನಪುಂಸಕರ ಸಂಖ್ಯೆ ಅಲ್ಪ ಪ್ರಮಾಣದಲ್ಲಿ ಇರುವುದರಿಂದ ಸಮಾಜಕ್ಕೆ ಇಂತಹ ವ್ಯಕ್ತಿಗಳಿಂದ ಅಷ್ಟೊಂದು ಕೆಡಕಾಗುತ್ತಿಲ್ಲ. ನಪುಂಸಕರಲ್ಲಿ ದೈಹಿಕ ನ್ಯೂನತೆ ಲಘು ಪ್ರಮಾಣದಲ್ಲಿದ್ದು ಲೈಂಗಿಕ ಶಕ್ತಿ ಹೆಚ್ಚಿದ್ದರೆ ಅಂತವರಿಗೆ ಮಕ್ಕಳು ಹುಟ್ಟಿ ಅವರಲ್ಲಿರುವ ಲಕ್ಷಣಗಳು ಮತ್ತು ನ್ಯೂನತೆಗಳು ವಂಶದಲ್ಲಿ ಮುಂದುವರಿಯುವ ಸಾಧ್ಯತೆ ಇರುತ್ತದೆ. ಅಂತಹ ವ್ಯಕ್ತಿಗಳು ಮಕ್ಕಳನ್ನು ಪಡೆಯದಿದ್ದರೆ ಭವಿಷ್ಯದಲ್ಲಿ ನಪುಂಸಕರ ಸಂಖ್ಯೆಯನ್ನು ಕಡಿಮೆಗೊಳಿಸಬಹುದು. ನಮ್ಮ ದೇಶದಲ್ಲಿ ನಪುಂಸಕರನ್ನು ಸಮಾಜ ಕೀಳಾಗಿ ನೋಡುವುದರಿಂದ ಸಮಾಜದಲ್ಲಿ ಅವರಿಗೆ ಉತ್ತಮ ಸ್ಥಾನ ಸಿಗದೆ ಸಾಮಾಜಿಕ ಭದ್ರತೆಯೂ ಇಲ್ಲದೆ ಜೀವನ ನಡೆಸಲು ಕಷ್ಟ ಪಡುತ್ತಾರೆ. ಸಮಾಜದಲ್ಲಿ ಜವಾಬ್ದಾರಿ ವ್ಯಕ್ತಿಗಳೆಂದು ಸೋಗು ಹಾಕುವ ಕೆಲವರು ಇಂತಹ ನಪುಂಸಕರನ್ನು ತಮ್ಮ ವಿಕೃತ ಕಾಮ ತೀರಿಸಿಕೊಳ್ಳಲು ಹಣದಾಸೆ ತೋರಿಸಿ ಹಾದಿ ತಪ್ಪಿಸಿ ವೇಶ್ಯಾವಾಟಿಕೆಗೆ ತಳ್ಳುತ್ತಿದ್ದಾರೆ.

ಪಾಶ್ಚಿಮಾತ್ಯ ದೇಶಗಳಲ್ಲಿ ನಪುಂಸಕರು ತಮ್ಮ ಸಂಘ ಸಂಸ್ಥೆಗಳ ಹೋರಾಟದಿಂದ ಸರ್ಕಾರದ ಗಮನವನ್ನು ಸೆಳೆದು ದೇಶದ ಅಭಿವೃದ್ಧಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ನಪುಂಸಕರು ಆ ದೇಶಗಳಲ್ಲಿ ಎಲ್ಲಾ ವಿಧವಾದ ವ್ಯವಹಾರ ಮತ್ತು ಕಸಬುಗಳಲ್ಲಿಯೂ ದುಡಿಯುತ್ತಿದ್ದಾರೆ. ದೈಹಿಕ ಮತ್ತು ಮಾನಸಿಕ ಕಾರಣಗಳಿಂದ ಅಪರೂಪವಾಗಿ ಕೆಲವು ಸಲಿಂಗ ಕಾಮಿಗಳು ತಮ್ಮ ಸಂಗಾತಿಗಳ ಜೊತೆಯಲ್ಲಿ ಕಾಮದೊಡನೆ ಪ್ರೇಮವನ್ನು ಸಮ್ಮಿಲನಗೊಳಿಸಿ ಜೀವನ ಸಂಗಾತಿಗಳಾಗಿ ಬದುಕುತ್ತಿರುವ ಪ್ರಸಂಗಗಳೂ ಉಂಟು. ಇಂತಹ ಜೀವನದಿಂದ ಸಮಾಜಕ್ಕೆ ಯಾವ ರೀತಿಯ ತೊಂದರೆಯೂ ಇಲ್ಲ. ಯಾವುದೇ ರೀತಿಯ ಲೈಂಗಿಕ ಚಟುವಟಿಕೆ ಜೀವನ ಪೂರ್ತಿ ಸಂಗಾತಿಗಳಿಬ್ಬರ ನಡುವೆ

ಮಾತ್ರ ಇದ್ದರೆ ಲೈಂಗಿಕ ರೋಗಗಳು ಹತ್ತಿರ ಕೂಡ ಸುಳಿಯುವುದಿಲ್ಲ.

ಇತ್ತೀಚಿಗೆ ಆಧುನಿಕತೆ, ಮಾನಸಿಕ ಅಸ್ಥಿರತೆಯ ಪರಿಣಾಮವಾಗಿ ಸಲಿಂಗ ಕಾಮಿಗಳಾಗುವವರ ಸಂಖ್ಯೆ ಹೆಚ್ಚುತ್ತಾ ಇದೆ. ಹುಟ್ಟುಗುಣ ಅಥವ ಮಾನಸಿಕ ನ್ಯೂನತೆಯಿಂದ ಕೆಲವರು ಮಾತ್ರ ಇದರತ್ತ ಆಸಕ್ತಿ ತೋರಿದರೆ ಬಹಳಷ್ಟು ಜನರು ಸುತ್ತಲಿನ ಪರಿಸರ, ಸ್ನೇಹಿತರು ಮತ್ತು ಅಶ್ಲೀಲ ಲೈಂಗಿಕ ಮಾಧ್ಯಮಗಳ ಪ್ರಚೋದನೆಯಿಂದ ತಮಗೆ ಅರಿವಿಲ್ಲ ದಂತೆಯೇ ಈ ಚಟಕ್ಕೆ ಬಲಿಯಾಗುತ್ತಿದ್ದಾರೆ. ಸಲಿಂಗ ಕಾಮದಲ್ಲಿ ತೊಡಗಿರುವ ಬಹಳಷ್ಟು ವ್ಯಕ್ತಿಗಳು ಜವಾಬ್ದಾರಿ ವ್ಯಕ್ತಿಗಳಂತೆ ಮೇಲುನೋಟಕ್ಕೆ ನಟಿಸಿ ಸಮಯ ಸಂದರ್ಭಕ್ಕೆ ತಕ್ಕಂತೆ ತಮ್ಮ ಬಾಳ ಸಂಗಾತಿಗಳಿಗೆ ದ್ರೋಹ ಬಗೆದು ಅಡ್ಡದಾರಿ ಹಿಡಿಯುತ್ತಾರೆ. ಇಂತಹ ವ್ಯಕ್ತಿಗಳು "ನನ್ನ ಜೀವನ ಸಂಗಾತಿಯೂ ನನ್ನಂತೆಯೇ ಆದರೆ ಸಹಿಸುತ್ತೇನಯೇ" ಎಂದು ಯೋಚಿಸಿ ಆರೋಗ್ಯ ಪೂರ್ಣ ಲೈಂಗಿಕತೆಯತ್ತ ಮನಸ್ಸನ್ನು ಹರಿಸಬೇಕು.

ಮಕ್ಕಳ ಲೈಂಗಿಕ ಶೋಷಣೆ

ದೊಡ್ಡವರ ದೌರ್ಜನ್ಯಕ್ಕೆ ಬಲಿಯಾಗಿ ಬಹಳಷ್ಟು ಬಾಲಕರು, ಪ್ರಾಯದ ಹಂತ ತಲುಪಿರುವ ಮತ್ತು ತಲುಪುತ್ತಿರುವ ಮುಗ್ಧರು, ಗುದದ್ವಾರದ ಸಂಭೋಗದರಿಂದ ಲೈಂಗಿಕ ರೋಗಗಳಗೆ ಗುರಿಯಾದ ಉದಾಹರಣೆಗಳು ಸಾಕಷ್ಟಿವೆ. ಹೋಟೆಲ್, ಲಾಡ್ಜಿಂಗ್, ಹಾಸ್ಟೆಲ್, ಕಾರ್ಖಾನೆಗಳು ಅಥವ ಇನ್ನಾವುದೇ ಸ್ಥಳಗಳಲ್ಲಿರುವ ಮುಗ್ಧ ಮಕ್ಕಳ ಮೇಲೆ ಅಲ್ಲೆ ಕೆಲಸ ಮಾಡುವ ದೊಡ್ಡವರು ವಿಕೃತ ಕಾಮದ ಕಿಡಿಗೇಡಿತನ ನಡೆಸುವವರಾಗಿದ್ದಾರೆ ಇಂತಹ ದುಷ್ಕೃತ್ಯದಲ್ಲಿ ಭಾಗವಹಿಸುವವರು ಬಹುಪಾಲು ಗೃಹಸ್ಥರು ಅಥವ ಪ್ರೌಢರು, ಇಂತಹವರಲ್ಲಿ ಮಾನಸಿಕ ಅಥವ ದೈಹಿಕ ತೊಂದರೆ ಯಾವುದೂ ಇಲ್ಲದೆ ಇದು ಧೂಮಪಾನ ಅಥವ ಮದ್ಯಪಾನದಂತೆ ಗಳಿಸಿಕೊಂಡಿರುವ ದುರಭ್ಯಾಸ ಮಾತ್ರವಷ್ಟೆ. ಇಂತಹ ಸಮಾಜಘಾತುಕರನ್ನು ಸರಿದಾರಿಗೆ ತರಲು ಬಿಗಿಯಾದ ನ್ಯಾಯವ್ಯವಸ್ಥೆ ಮತ್ತು ಸಮಾಜೋದ್ಧಾರಕರಿಂದ ಸಾಧ್ಯವಾಗಬಹುದು.

ಲೈಂಗಿಕ ಕ್ರೀಡೆಯ ಸಮಯದಲ್ಲಿ ಸಂಗಾತಿಗೆ ನೋವು ಮತ್ತು ಹಿಂಸೆಯನ್ನುಂಟು ಮಾಡಿ (ಸ್ಯಾಡಿಸಮ್) ಅಥವ ತನಗೆ ನೋವುಂಟು ಮಾಡಿಕೊಂಡು (ಮೆಸೋಕಿಸಮ್) ಲೈಂಗಿಕ ತೃಪ್ತಿ ಪಡುವದು, ಪ್ರಾಣಿಗಳೊಂದಿಗೆ ಸಂಭೋಗ ನಡೆಸುವುದು (ಬೇಸ್ಟಿಯಾಲೆಟಿ), ರಕ್ತ ಸಂಬಂಧಿಗಳೊಡನೆ ರತಿ ಕ್ರೀಡೆಯಲ್ಲೆ ಪಾಲ್ಗೊಳ್ಳುವುದು (ಇನ್ಸೆಸ್ಟ್), ಹೆಣ್ಣು ಗಂಡಿನ ವೇಷ

ಧರಿಸಿ ಅಥವ ಗುಂಡು ಹೆಣ್ಣಿನ ವೇಷ ಧರಿಸಿ (ಟ್ರಾನ್ಸ್‌ವೆಸ್ಟಿಸಮ್) ಲೈಂಗಿಕ ತೃಪ್ತಿಯನ್ನು ತೀರಿಸಿಕೊಳ್ಳುವುದು; ತನ್ನ ವಿರುದ್ಧ ಲಿಂಗದ ವ್ಯಕ್ತಿಯ ಮುಂದೆ ತನ್ನ ಲೈಂಗಿಕಾಂಗಗಳನ್ನು ಪ್ರದರ್ಶಿಸಿ (ಎಕ್ಸಿಬಿಷನಿಸಂ) ಕಾಮಾವೇಶವನ್ನು ತೀರಿಸಿಕೊಳ್ಳುವುದು; ತಮ್ಮ ಕಲ್ಪಿತ ಸಂಗಾತಿಯು ಉಪಯೋಗಿಸುವ ವಸ್ತುಗಳನ್ನು ಕದ್ದುತಂದು ತಮ್ಮ ಲೈಂಗಿಕಾಂಗಗಳಿಗೆ ಸ್ಪರ್ಶಿಸಿ (ಫೆಟಿಸಿಸಮ್) ಲೈಂಗಿಕ ತೃಪ್ತಿ ಹೊಂದುವುದು ಮುಂತಾದುವು ವಿಕೃತ ಕಾಮದ ಕೆಲವು ಪರಿಗಳು.

ಈ ವಿಕೃತ ಕಾಮದ ಬಯಕೆಗೆ ಕೆಲವರಲ್ಲಿ ಅಲ್ಪ ಪ್ರಮಾಣದ ಮಾನಸಿಕ ಕಾರಣಗಳಿರಬಹುದು. ಆದರೆ ಬಹುಪಾಲು ವ್ಯಕ್ತಿಗಳಲ್ಲಿ ಅವರಲ್ಲಿ ತುಂಬಿರುವ ಮೂಢ ನಂಬಿಕೆ, ಅನಕ್ಷರತೆ, ಅಯೋಗ್ಯ ಸ್ನೇಹಿತರ ಸಹವಾಸ, ಅವರು ಬೆಳೆಯುವ ಪರಿಸರ, ಸಾಮಾಜಿಕ ಹಿನ್ನೆಲೆ ಮತ್ತು ಏಕಾಂಗಿ ತನಗಳು ಕಾರಣವಾಗಿವೆ.

ಮಕ್ಕಳು ಪ್ರಾಪ್ತವಯಸ್ಕರಾಗುತ್ತಿದ್ದಂತೆ ತಂದೆ ತಾಯಿಗಳು, ಸಮಾಜ ಮತ್ತು ಸರ್ಕಾರ ಆರೋಗ್ಯಕರ ಪರಿಸರದಲ್ಲಿ ಬೆಳೆಯಲು ಅನುವು ಮಾಡಿಕೊಟ್ಟು ವಿಕೃತ ಲೈಂಗಿಕತೆಯ ದುಷ್ಪರಿಣಾಮಗಳ ಬಗ್ಗೆ ಎಚ್ಚರಿಕೆಯ ನುಡಿಗಳು ಮತ್ತು ಆರೋಗ್ಯಕರ ಲೈಂಗಿಕತೆ ಕುರಿತು ಸ್ಪಷ್ಟ ತಿಳುವಳಿಕೆ ದೊರೆಯುವಂತೆ ನೋಡಿಕೊಂಡರೆ ವಿಕೃತ ಲೈಂಗಿಕತೆಗೆ ವಿದಾಯ ಹೇಳಬಹುದು.

* * * * *

೩೮. ಲೈಂಗಿಕ ರೋಗ ಅಂಟಿದ ಭಯ

ಈರಯ್ಯ ಅವರಿಗೆ ಸುಮಾರು 65 ವರ್ಷ. ಪತ್ನಿ ಪ್ರಾಪ್ತ ವಯಸ್ಸಿನ 4 ಜನ ಮಕ್ಕಳು, ಒಬ್ಬಳು ಸೊಸೆ ಜೊತೆಗೆ ಒಬ್ಬ ಮೊಮ್ಮಗನನ್ನು ಒಳಗೊಂಡಿದೆ ಅವರ ಕುಟುಂಬ. ಬಹಳ ಚುರುಕಿನ ವ್ಯಕ್ತಿಯಾದ ಈರಯ್ಯನ ಕಾಯಿಲೆಯ ಇತಿಹಾಸದ ಪ್ರಕಾರ ಸುಮಾರು 20 ವರ್ಷದಷ್ಟು ಹಳೆಯದಾಗಿದ್ದು ಆಗಿನಿಂದಲೂ ಈ ಕಾಯಿಲೆಯು ಅವರನ್ನು ಕಾಡುತ್ತಿದೆಯಂತೆ. ಬಹಳಷ್ಟು ವೈದ್ಯರು ಮತ್ತು ನಾಟಿ ವೈದ್ಯರಲ್ಲಿ ಪರಿಹಾರ ಕಾಣದೆ ನನ್ನಲ್ಲಿ ಅವರ ಕೊನೆಯ ಪ್ರಯತ್ನ. ಒಬ್ಬ ಹಕೀಮ ಸುಮಾರು ಹತ್ತು ಸಾವಿರ ರೂಪಾಯಿವರೆಗೂ ಹಣ ಕಿತ್ತನಂತೆ.

ಈರಯ್ಯನಿಗೆ ತಮ್ಮ ಪ್ರಾಯದಲ್ಲಿ ಒಂದೇ ಒಂದು ಬಾರಿ ಜನನಾಂಗಕ್ಕೆ ಅಂಟಿದ ಕಾಯಿಲೆ ಅವರನ್ನು ಇನ್ನೂ ಕಾಡುತ್ತಿದೆಯಂತೆ. ಶಿಶ್ನದ ಸುತ್ತ ಮತ್ತು ಅದರ ಚರ್ಮದ ಒಳಭಾಗದಲ್ಲಿ ವಾಸನೆಯ ಜೊತೆಗೆ ಬೆಣ್ಣೆಯಂತಹ ಮುಸುರೆ ಬರುತ್ತಿದೆಯಂತೆ, ಕಾಯಿಲೆ ಕಣ್ಣುಗಳಿಗೂ ಹಬ್ಬಿ ಪೊರೆ ಬಂದಿದೆಯಂತೆ ಮೈ ಚರ್ಮವೆಲ್ಲಾ ಸುಕ್ಕುಗಟ್ಟಿದೆಯಂತೆ. ತನ್ನ ಮೈಯಲ್ಲೆಲ್ಲಾ ತುಂಬಿದ ಕಾಯಿಲೆ ಅವನಿಂದ ಅವನ ಮಡದಿಗೆ ಮತ್ತು ಮಡದಿಯಿಂದ ಹೆರಿಗೆ ಸಮಯದಲ್ಲಿ ಮಕ್ಕಳಿಗೂ ಅಂಟಿದೆ ಎಂಬ ನಂಬಿಕೆಯಿಂದ ಎಲ್ಲರಿಗೂ ನಾನು ಔಷಧ ಕೊಡಬೇಕಂತೆ, ಮೊಮ್ಮಗನಿಗೂ ಅಂಟಿದೆ ಎಂದು ಮೊಮ್ಮಗನ ಜನನಾಂಗವನ್ನು ಆಗಾಗ್ಗೆ ನೋಡುವ ಈರಯ್ಯ ಅವರ ಕುಟುಂಬದ ಮನೆ ಮಂದಿಗೆಲ್ಲಾ ತನ್ನಿಂದ ಕಾಯಿಲೆ ಹರಡಿದ ಬಗ್ಗೆ ಬೇಸರ ಮತ್ತು ಜಿಗುಪ್ಸೆಯನ್ನು ವ್ಯಕ್ತಪಡಿಸಿ ಔಷಧ ಯಾಚಿಸುತ್ತಾರೆ.

ರಾಮಣ್ಣ 63 ವರ್ಷದ ದೃಢಕಾಯ ವ್ಯಕ್ತಿ. ಇಂಟರಮಿಡಿಯಟ್ ವರೆಗೆ ವಿದ್ಯಾಭ್ಯಾಸ ಕಲಿತು ಸ್ವಲ್ಪ ರಾಜಕೀಯದ ಆಸಕ್ತಿಯ ಜತೆಗೆ ಆಸ್ತಿಯಿಂದ ಅನುಕೂಲಸ್ಥರು, ಮುವತ್ತು ವರ್ಷದ ಹಿಂದೆ ಮಂಡ್ಯದಲ್ಲಿ ಲೈಂಗಿಕ ರೋಗಗಳ ತಜ್ಞನಾಗಿದ್ದಾಗೊಮ್ಮೆ ಅವರಿಗೆ ನಾನು ಚಿಕಿತ್ಸೆ ಕೊಟ್ಟಿದ್ದು ಇನ್ನೂ ಜ್ಞಾಪಕವಿದೆ.

ಮೊನ್ನೆ ಹೋಟೆಲೊಂದರಲ್ಲಿ ತಂಗಿರುವುದಾಗಿ ಜಾಹಿರಾತು ಹಾಕಿಸಿರುವ ಸಂಚಾರಿ ವೈದ್ಯರು ರಾಮಣ್ಣನ ಗುಪ್ತ ಕಾಯಿಲೆ ವಾಸಿ ಮಾಡಲು ಏಳು ಸಾವಿರ ರೂಪಾಯಿಗಳನ್ನು ಸಾರಾಸಗಟು ಕೇಳಿದಾಗ ತಬ್ಬಿಬ್ಬಾಗಿ ನಾಳೆ ಬರುತ್ತೇನೆಂದು ಅಲ್ಲಿಂದ ಕಾಲ್ಕಿತ್ತು ಪುನಹ ಅಲ್ಲಿಗೆ ಕಾಲಿಡದೆ ನನ್ನನ್ನು ಭೇಟಿ

ಮಾಡಿದ ರಾಮಣ್ಣನಿಗೆ ಹಿಂದೆ ನಾನು ಚಿಕಿತ್ಸೆ ಕೊಟ್ಟಿದ್ದು ನೆನಪಿಲ್ಲ. ಸರಿ ತನ್ನ ಕಾಯಿಲೆಯ ಚರಿತ್ರೆಯ ಪಠಣ ಸುಮಾರು ಹೊತ್ತಿನವರೆಗೆ, ಮಧ್ಯದಲ್ಲಿ ನಾನು ಅವರ ಪಠಣವನ್ನು ಮೊಟಕುಗೊಳಿಸಲು ಬುದ್ಧಿ ಉಪಯೋಗಿಸಿದರೆ ತಕ್ಷಣ ಗೊತ್ತಾಗುವಷ್ಟು ಬುದ್ಧಿವಂತಿಕೆ ಅವರದು. ಮುವತ್ತು ವರ್ಷಗಳಿಂದಲೂ ಇದೇ ಕಾಯಿಲೆಗೆ ಚಿಕಿತ್ಸೆ ತೆಗೆದುಕೊಂಡ ಬಗೆ ಬಗೆಯ ವೈದ್ಯರ ಚಿಕಿತ್ಸೆಯ ಚೀಟಿಗಳು ಮತ್ತು ಔಷಧಿಗಳ ಪಟ್ಟಿಗಳನ್ನು ನನಗೆ ತೋರಿಸುತ್ತಾ ಅವರ ಪ್ರಕಾರ ಹಿಂದೆ ವೇಶ್ಯೆಯರ ಸಂಗದಿಂದ ಅಂಟಿದ ಕಾಯಿಲೆಯಿಂದ ನರಳುತ್ತಿದ್ದು ಅವರ ನರನಾಡಿಗಳಲ್ಲಿ ಮತ್ತು ರಕ್ತದಲ್ಲಿಯೂ ಲೈಂಗಿಕ ರೋಗವೆ ಸಂಚರಿಸುತ್ತಿದೆ ಎನ್ನುತ್ತಾರೆ.

ಕುಮಾರ ಸುಮಾರು 26 ವರ್ಷದ ಯುವಕ. ಆರು ತಿಂಗಳ ಹಿಂದಷ್ಟೆ ಮದುವೆಯಾಗಿದ್ದು ಅವರ ಹೆಂಡತಿ ಈಗ ಗರ್ಭಿಣಿ. ಅಂತಹ ಅನುಕೂಲಸ್ಥನಲ್ಲದ ಇವರಿಗೆ ಒಂದೇ ಒಂದು ಸಾರಿ ಅನ್ಯ ಹುಡುಗಿಯ ಜತೆ ಲೈಂಗಿಕ ಸಂಪರ್ಕದಿಂದ ಕಾಯಿಲೆ ಅಂಟಿದ್ದು ಮೂರು ವರ್ಷದಿಂದಲೂ ನರಳುತ್ತಿದ್ದಾರಂತೆ. ಜನ ನೇಂದ್ರಿಯದ ಸ್ಥಳವೂ ಸೇರಿದಂತೆ ಮೈಯ್ಯಲ್ಲೆಲ್ಲಾ ಎಲ್ಲಾ ತರಹದ ನೋವು ಮತ್ತು ಉರಿ ಆಗಾಗ್ಗೆ ಕಾಡುತ್ತಿದೆಯಂತೆ. ಅವರ ತೊಂದರೆಯನ್ನು ಸಹಿಸಲಾರದೆ ಅವರ ಸ್ನೇಹಿತ ನನ್ನಲ್ಲಿ ಕರೆದು ತಂದಿದ್ದು ಅವರು ಮೂರು ವರ್ಷದಲ್ಲಿ ತೆಗೆದುಕೊಂಡಿದ್ದ ಚಿಕಿತ್ಸೆಯ ಚೀಟಿಗಳ ಕಂತೆಯನ್ನು ನನ್ನ ಮುಂದಿಡುತ್ತಾರೆ. ಖರ್ಚೀ ಸುಮಾರು ಸಾವಿರಗಳ ಗಡಿ ದಾಟಿ ಸಾಲಗಾರನಾಗಿದ್ದಾನಂತೆ. ಈಗ ಹೆಂಡತಿ ಮತ್ತು ಹುಟ್ಟುವ ಮಗುವಿಗೂ ರೋಗ ಹರಡಬಹುದೆಂಬ ಚಿಂತೆ.

ಈ ಮೂರು ಉದಾಹರಣೆಗಳು ಬರಿ ಸ್ಯಾಂಪಲ್‌ಗಳು ಮಾತ್ರ. ಈ ರೀತಿಯ ಬಹಳಷ್ಟು ರೋಗಿಗಳನ್ನು ಲೈಂಗಿಕ ರೋಗಗಳ ತಜ್ಞರು ತಮ್ಮ ತಪಾಸಣೆ ಕೋಣೆಗಳಲ್ಲಿ ಭೇಟಿಯಾಗುವುದು ಬಹಳ ಸಾಮಾನ್ಯ. ಈ ರೀತಿ ಕಾಡುವ ಕಾಯಿಲೆಯೇ ವೆನ್‌ರಿಯೊಫೋಬಿಯಾ ಅರ್ಥಾತ್ ಲೈಂಗಿಕ ರೋಗ ಅಂಟಿದ ಭಯ.

ಪುರುಷರಲ್ಲಿ ಅದರಲ್ಲೂ ಸೂಕ್ಷ್ಮ ಮನಸ್ಸಿನ ಚುರುಕಿನ ವ್ಯಕ್ತಿಗಳಲ್ಲಿ ಸಾಮಾನ್ಯವಾಗಿ ಕಾಣಿಸಿಕೊಳ್ಳುವ ಈ ಬೇನೆಗೆ ಲೈಂಗಿಕ ರೋಗ ಅಂಟಲೇಬೇಕೆಂಬ ಕಟ್ಟಳೇ ಇಲ್ಲ. ಲೈಂಗಿಕ ರೋಗ ತಗಲಿಸಿಕೊಂಡ ವ್ಯಕ್ತಿಗಳು ಚಿಕಿತ್ಸೆ ತೆಗೆದುಕೊಂಡು ಸಂಪೂರ್ಣ ಕಾಯಿಲೆಯಿಂದ ಗುಣವಾದ ವ್ಯಕ್ತಿಗಳಲ್ಲಿ ಕೆಲವರಲ್ಲಿ ಮಾತ್ರ ಈ ರೋಗ ಕಾಣಿಸಿಕೊಂಡರೆ, ವೇಶ್ಯೆಯ ಜೊತೆ ಲೈಂಗಿಕ

ಸಂಪರ್ಕ ಪಡೆದು ಯಾವ ಕಾಯಿಲೆಯೂ ತಗಲದಿದ್ದ ಆರೋಗ್ಯವಂತರಲ್ಲೇ ಈ ರೋಗ ಜಾಸ್ತಿ. ವೇಶ್ಯೆ ಯಾಗದಿದ್ದರೂ ಲೈಂಗಿಕ ಸಂಪರ್ಕ ಪಡೆದ ಸ್ತ್ರೀಯ ನಡತೆ ಸಂಶಯಾಸ್ಪದವಾಗಿದ್ದರೂ ಸಾಕು ಈ ಕಾಯಿಲೆಯ ಬಲೆಗೆ ಬೀಳಲು. ಅಪರೂಪವಾಗಿ ಕೆಲವರಲ್ಲಿ ಈ ಕಾಯಿಲೆಯಿಂದ ಬಳಲಲು ಪರಸ್ತ್ರೀ ಅಥವ ವೇಶ್ಯೆಯ ಜೊತೆ ಲೈಂಗಿಕ ಸಂಪರ್ಕ ಪಡೆಯಲೇಬೇಕೆಂಬ ನಿಯಮವಿಲ್ಲ. ಲೈಂಗಿಕ ರೋಗವಿಲ್ಲದಿದ್ದರೂ ತಮ್ಮ ಸ್ನೇಹಿತರ ನಡತೆಯ ಬಗ್ಗೆ ಸಂಶಯವಿದ್ದು ಅವರ ಒಳ ಚಡ್ಡಿ ಅಥವ ಸಾಬೂನು ಮುಂತಾದ ವಸ್ತುಗಳನ್ನು ಒಮ್ಮೆ ಉಪಯೋಗಿಸಿದ್ದರೆ ಸಾಕು ಈ ಕಾಯಿಲೆಯ ಆಹ್ವಾನಕ್ಕೆ. ಲೈಂಗಿಕ ಸಂಪರ್ಕ ಅಥವ ಸಂಶಯಾಸ್ಪದಘಟನೆ ಘಟಿಸಿದ ತಕ್ಷಣವೆ ಈ ಕಾಯಿಲೆ ಬರಲೇಬೇಕೆಂಬ ಕಟ್ಟುಪಾಡಿಲ್ಲ. ಕೆಲವು ದಿನಗಳಿಂದ ಕೆಲವು ವರ್ಷಗಳಲ್ಲಿ ಯಾವಾಗ ಬೇಕಾದರೂ ಈ ಕಾಯಿಲೆ ಪ್ರಾರಂಭವಾಗಬಹುದು. ಒಮ್ಮೆ ಈ ಕಾಯಿಲೆಯ ಬಲೆಗೆ ಬಿದ್ದರ ಅದರಿಂದ ಹೊರಬರುವುದು ಬಹು ಕಷ್ಟ. ಜೀವನದಲ್ಲಿ ಸಹಜವಾಗಿ ಎಲ್ಲರಿಗೂ ಬರುವಂತಹ ಯಾವುದೇ ಕಾಯಿಲೆಯ ಲಕ್ಷಣಗಳು ಅವರಲ್ಲಿ ಕಾಣಿಸಿಕೊಂಡರೂ ಅವುಗಳೆಲ್ಲವೂ ಲೈಂಗಿಕ ಕಾಯಿಲೆಗಳ ಲಕ್ಷಣಗಳೆ ಎಂಬ ಭ್ರಮೆ ಮತ್ತು ವಯಸ್ಸಾಗುತ್ತಿದ್ದಂತೆ ಪ್ರತಿಯೊಬ್ಬರ ದೇಹದಲ್ಲಿ ಮತ್ತು ಚರ್ಮದಲ್ಲಿ ಉಂಟಾಗುವ ಕಲೆಗಳು, ಸುಕ್ಕು ಕಟ್ಟುವುದು ಮುಂತಾದ ಬದಲಾವಣೆಗಳು ಸಹಜವಾಗಿದ್ದರೂ ಅವುಗಳೆಲ್ಲವೂ ಅನೈತಿಕ ಲೈಂಗಿಕ ಸಂಪರ್ಕ ಪಡೆದ ನಂತರ ಉಂಟಾಗಿದೆಂಬ ಭ್ರಾಂತಿ.

ಲೈಂಗಿಕ ರೋಗಗಳ ತಜ್ಞರು ಈ ಕಾಯಿಲೆಯ ಲಕ್ಷಣಗಳ ಇತಿಹಾಸವನ್ನು ಕೂಲಂಕುಷವಾಗಿ ಕೇಳಿದ ನಂತರ ಖುದ್ದು ಪರೀಕ್ಷಿಸಿ ಲೈಂಗಿಕ ರೋಗಗಳು ಇಲ್ಲದಿರುವಿಕೆಯ ಬಗ್ಗೆ ದೃಢಪಡಿಸಿಕೊಂಡ ನಂತರವೇ ವೆನೆರಿಯೊಫೋಬಿಯಾ ಕಾಯಿಲೆಯ ಮುದ್ರೆ ಒತ್ತಿ ಚಿಕಿತ್ಸೆಯ ಪ್ರಾರಂಭ.

ಅಲೆಮಾರಿಗಳಂತೆ ಒಬ್ಬ ವೈದ್ಯರಿಂದ ಮತ್ತೊಬ್ಬ ವೈದ್ಯರ ಹತ್ತಿರ ಅಲೆಯುವ ಈ ವ್ಯಕ್ತಿಗಳು ಮಾನಸಿಕ ಹಿನ್ನೆಲೆಯಿಂದ ಬಳಲುತ್ತಿದ್ದು ಅಂತವರಿಗೆ ಮೊದಲು ಲೈಂಗಿಕ ಕಾಯಿಲೆಗಳ ಬಗ್ಗೆ ತಿಳುವಳಿಕೆ ಕೊಟ್ಟು ವೈಜ್ಞಾನಿಕವಾಗಿ ಮತ್ತು ಮಾನಸಿಕವಾಗಿ ಸ್ಥೈರ್ಯ ತುಂಬಿ ಜೊತೆಗೆ ಭಯವನ್ನು ಹೊಗಲಾಡಿಸುವಂತಹ ಔಷಧಗಳನ್ನು ನೀಡಿದರೆ ಬಹಳಷ್ಟು ವ್ಯಕ್ತಿಗಳು ಸಹಜ ಸ್ಥಿತಿಗೆ ಮರಳುವರು. ಆದರೂ ಮಾನಸಿಕ ಒತ್ತಡ ಹೆಚ್ಚಾಗಿದ್ದು ಕಾಯಿಲೆ ಅತಿಯಾಗಿದ್ದಾಗ ಅಂತವರಿಗೆ ಮನೋವೈದ್ಯರಲ್ಲಿ ಚಿಕಿತ್ಸೆ ಅಗತ್ಯ.

ಆದುದರಿಂದ ಭವಿಷ್ಯದಲ್ಲಿ ಯಾರಿಗೆ ಬೇಕಾದರೂ ಈ ಕಾಯಿಲೆ ಬರುವ ಸಾಧ್ಯತೆ ಇರುವುದರಿಂದ ಪ್ರತಿಯೊಬ್ಬರು ಈ ಕಾಯಿಲೆಯ ಬಗ್ಗೆ ಎಚ್ಚರಿಕೆಯಿಂದ ಇದ್ದು ಕಷ್ಟ ಕಾರ್ಪಣ್ಯಗಳನ್ನು ಧೈರ್ಯದಿಂದ ಎದುರಿಸುವ ಮನೋಭಾವವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಹಿಂದೆ ನಡೆದ ಸಣ್ಣ ಪುಟ್ಟ ಅಹಿತಕರ ಅಥವ ಘಟನೆಗಳ ಬಗ್ಗೆ ಕೊರಗದೆ ಮಾನಸಿಕವಾಗಿ ದೃಢತೆಯನ್ನು ಅಳಪಡಿಸಿಕೊಂಡರೆ ಈ ಕಾಯಿಲೆ ಬರದಂತೆ ನೋಡಿಕೊಳ್ಳಬಹುದು.

* * * * *

39. ಆರೋಗ್ಯಪೂರ್ಣ ಲೈಂಗಿಕ ಚಟುವಟಿಕೆ

ಬಾಳ ಸಂಗಾತಿಗಳು ಅಥವ ಪತಿ ಪತ್ನಿಯರಿಬ್ಬರು ಜೀವನ ಪರ್ಯಂತ ತಮ್ಮ ಲೈಂಗಿಕ ಚಟುವಟಿಕೆಗಳನ್ನು ಪರಸ್ಪರ ತಮ್ಮಿಬ್ಬರಲ್ಲಿ ಮಾತ್ರ ಮಿತಿಗೊಳಿಸಿದರೆ ಬಹುಪಾಲು ಲೈಂಗಿಕ ರೋಗಗಳಿಂದ ಮುಕ್ತವಾಗಿರಬಹುದು. ಹಾಗೆಯೇ ಅನೈತಿಕ ಲೈಂಗಿಕ ಚಟುವಟಿಕೆಯಿಂದ ದೂರವಿರುವುದು ಮತ್ತು ಲೈಂಗಿಕ ರೋಗಗಳು ತಗಲುವ ಇನ್ನಿತರ ಕಾರಣಗಳನ್ನು ತಮ್ಮ ಮನಸ್ಸಿನಲ್ಲಿಟ್ಟುಕೊಂಡು ಎಚ್ಚರಿಕೆಯಿಂದಿದ್ದರೆ ಲೈಂಗಿಕ ರೋಗಗಳ ಬಗ್ಗೆ ಮತ್ತಷ್ಟು ಭಯವಿಲ್ಲದೆ ಸಂಗಾತಿಗಳು ಪರಸ್ಪರ ಲೈಂಗಿಕ ಚಟುವಟಿಕೆಗಳಲ್ಲಿ ತಲ್ಲೀನರಾಗಬಹುದು.

ಜೀವಿತದ ಅವಧಿಯಲ್ಲಿ ಪತೀವ್ರತ ಅಥವ ಪತ್ನಿವ್ರತ ಆಚರಿಸುತ್ತಿದ್ದಾಗ ಲೈಂಗಿಕ ರೋಗಗಳ ಭಯ ವಿಲ್ಲದಿದ್ದರೂ ಸಂಗಾತಿಗಳಿಗೆ ಕೆಲವಾರು ಸೋಂಕು (ಇನ್‌ಫೆಕ್ಷನ್) ಕಾಯಿಲೆಗಳು ಜನನೇಂದ್ರಿಯಗಳಿಗೆ ತಗಲಿ ಒಬ್ಬರಿಂದ ಮತ್ತೊಬ್ಬರಿಗೆ ಅಂಟುವುದು ಸರ್ವೇ ಸಾಮಾನ್ಯ. ಅಂತಹ ಸಂದರ್ಭಗಳಲ್ಲಿ ಒಬ್ಬರು ಇನ್ನೊಬ್ಬರನ್ನು ಶಂಕಿಸದೆ ವೈದ್ಯರ ಸಲಹೆ ಪಡೆದು ಸೋಂಕು ಗುಣವಾಗುವವರೆಗೆ ಲೈಂಗಿಕ ಕ್ರಿಯೆಯಿಂದ ದೂರವಿರುವುದು ಒಳ್ಳೆಯದು.

ಲೈಂಗಿಕಾಸಕ್ತಿ ಪ್ರಾಯದ ಹಂತದಲ್ಲಿ ಪ್ರಾರಂಭಗೊಂಡು ನಿರಂತರ ಮುಂದುವರಿಯುತ್ತದೆ. ಕಾಯಿಲೆಗಳಲ್ಲಿ ಮತ್ತು ಕಾಯಿಲೆಗಳಿಗೆ ತೆಗೆದುಕೊಳ್ಳುವ ಔಷಧಿಗಳಿಂದ, ದೈಹಿಕವಾಗಿ ದುಡಿದು ದಣಿವಾದಾಗ, ಮಾನಸಿಕ ಒತ್ತಡಗಳಲ್ಲಿ, ಸಮಯಕ್ಕಿಂತ ಕಡಿಮೆ ನಿದ್ರೆ ಮಾಡಿದ್ದಾಗ, ಸಂಸಾರದ ತಾಪತ್ರಯಗಳಿಂದ ಮನಸ್ಸು ಬೇಸರಗೊಂಡಾಗ, ಆಹಾರದ ಕೊರತೆಯಿಂದ ನಿಶ್ಶಕ್ತಿಯುಂಟಾದಾಗ, ಪತಿ ಪತ್ನಿಯರಲ್ಲಿ ವಿರಸ ಮೂಡಿದಾಗ, ಅತಿಯಾದ ಮುಚ್ಚಟಗಳಿದ್ದಾಗ, ಮನಸ್ಸು ಭಯ ಕೋಪ ಮತ್ತು ಜೀಗುಪ್ಸೆಗೊಳಪಟ್ಟಾಗ, ಲೈಂಗಿಕಾಸಕ್ತಿ ಮತ್ತ ಲೈಂಗಿಕ ಶಕ್ತಿ ಕುಗ್ಗುತ್ತದೆ. ಈ ಕಾರಣಗಳನ್ನು ಸರಿಪಡಿಸದೆ ಲೈಂಗಿಕ ಜೀವನದ ಬಗ್ಗೆ ಕೊರಗಿ ಮಾನಸಿಕ ಖಿನ್ನತೆಗೆ ಗುರಿಯಾಗಬಾರದು.

ಬಾಳಸಂಗಾತಿಗಳು ಕೈಗೆಟಕದ ಜೀವನ ಶೈಲಿಗೆ ಕೈ ಹಾಕದೆ, ಚಿಕ್ಕ ಮತ್ತು ಚೊಕ್ಕ ಕೌಟುಂಬಿಕ ಜೀವನದಲ್ಲಿ ತಮ್ಮ ಯೋಗ್ಯತೆ, ಅರ್ಹತೆ ಮತ್ತು ಆದಾಯಕ್ಕೆ ತಕ್ಕಂತೆ ತೃಪ್ತಿಯಿಂದ ಜೀವನವನ್ನು ಸಾಗಿಸಲು ಅಣಿಯಾದರೆ ಕೌಟುಂಬಿಕ ಜೀವನದ ಹಗಲು ಮತ್ತು ರಾತ್ರಿ ವಿರಸ ನಿಲುಗಡೆಗೊಂಡು ಮಾನಸಿಕ ನೆಮ್ಮದಿಯುಂಟಾಗಿ ಲೈಂಗಿಕ ಶಕ್ತಿ ಮತ್ತು ಆಸಕ್ತಿಗೆ ಕುಂದುಂಟಾಗದೆ ಲೈಂಗಿಕ

ಕ್ರಿಯೆಗೆ ಹಾದಿ ಸುಗಮವಾಗುತ್ತದೆ.

ಲೈಂಗಿಕಾಸಕ್ತಿ ಮತ್ತು ಲೈಂಗಿಕ ಶಕ್ತಿ ಕುಂದುವ ಎಲ್ಲಾ ಕಾರಣಗಳನ್ನು ಅರಿತು ತಡೆಗಟ್ಟಬಹುದಾದುದನ್ನು ತಡೆಗಟ್ಟಿ, ಸರಿಪಡಿಸಬಹುದಾದುದನ್ನು ಸರಿಪಡಿಸಿ ಮತ್ತು ಮಿತಿಯಿಲ್ಲದ ದುಶ್ಚಟಗಳನ್ನು ನಿಗ್ರಹಿಸಿ ಜೀವನವನ್ನು ನಡೆಸುವುದರಿಂದ ಅಲ್ಪ ಅವಧಿಯವರೆಗೆ ಕುಂದಿದ್ದ ಲೈಂಗಿಕ ಶಕ್ತಿ ಪುನಹ ಗರಿಗೆದರಿ ನಿಲ್ಲುತ್ತದೆ.

ದೀರ್ಘ ಕಾಲದ ಕಾಯಿಲೆ ಇದ್ದಾಗ ವೈದ್ಯರ ಸಲಹೆ ಮೇರೆಗೆ ಚಿಕಿತ್ಸೆ ತೆಗೆದುಕೊಂಡು ಜೀವನ ಪರ್ಯಂತ ಕಾಯಿಲೆಯನ್ನು ತಹಬಂಧಿಗೆ ತಂದು ಬಾಳುವೆ ನಡೆಸುವುದು ಲೈಂಗಿಕ ಜೀವನಕ್ಕೆ ಅತ್ಯವಶ್ಯಕ. ಲೈಂಗಿಕ ಶಕ್ತಿ ಮತ್ತು ಆಸಕ್ತಿ ಪ್ರತಿಯೊಬ್ಬರಲ್ಲಿಯೂ ಒಂದೇ ಸಮನಾಗಿರುವುದಿಲ್ಲ. ಇದನ್ನರಿತು ಜೀವನದಲ್ಲಿ ಬಾಳ ಸಂಗಾತಿಗಳು ಪರಸ್ಪರ ನಂಬಿಕೆ, ವಿಶ್ವಾಸ, ಅರಿವು ಮತ್ತು ಬಿಚ್ಚು ಮನಸ್ಸಿನ ಚರ್ಚೆಯ ಮೂಲಕ ತಮ್ಮ ಅವಶ್ಯಕತೆಗನುಸಾರ ಕೂಡು ಕೊಳ್ಳುವಿಕೆಯ ಅಧಾರದ ಮೇಲೆ ಲೈಂಗಿಕ ಕ್ರಿಯೆಯಲ್ಲಿ ಭಾಗವಹಿಸಿ ಮಾನಸಿಕವಾಗಿ ದೈಹಿಕವಾಗಿ ಹಗುರವಾಗಬಹುದು.

ಲೈಂಗಿಕ ಜೀವನವು ವಂಶಾಬಿವೃದ್ದಿಯ ಜೊತೆಗೆ ಮಾನಸಿಕವಾಗಿ ನೆಮ್ಮದಿ ಮತ್ತು ಖುಷಿಯಾಗಿರಲು ಪ್ರಕೃತಿಯು ಬಳುವಳಿಯಾಗಿ ಕೊಟ್ಟ ಪುಕ್ಕಟೆ ಮನರಂಜನೆ. ಇದರಿಂದ ಸಾಂಸಾರಿಕ ಜೀವನದ ಬಾಂಧವ್ಯ ಮತ್ತಷ್ಟು ವೃದ್ದಿಸುತ್ತದೆ. ಹೀಗೆ ಕೌಟುಂಬಿಕ ಜೀವನ ಮತ್ತು ಲೈಂಗಿಕ ಜೀವನ ಪರಸ್ಪರ ಪೂರಕ.

ಸುಸ್ತಿಲ್ಲದ ಲೈಂಗಿಕ ಕ್ರಿಯೆಗೆ ಲೈಂಗಿಕ ವ್ಯಾಯಾಮ ಅತಿ ಮುಖ್ಯ. ಲೈಂಗಿಕ ಕ್ರಿಯೆಯ ಸಮಯದಲ್ಲಿ ಚಟುವಟಿಕೆಯಿಂದಿರುವ ಸ್ನಾಯುಗಳನ್ನು ಪ್ರತಿದಿನವು ಚಟುವಟಿಕೆಯಿಂದಿರುವಂತೆ ನೋಡಿಕೊಳ್ಳಲು ಆಟ ಓಟ, ದಂಡ, ಬೈಸಿಕೆ ಮುಂತಾದ ವ್ಯಾಯಾಮಗಳನ್ನು ಚಾಚೂ ತಪ್ಪದೆ ಮಾಡುವುದು ಅವಶ್ಯಕ.

ತಿಂಗಳ ಋತುಸ್ರಾವದ ಅವಧಿಯಲ್ಲಿ ಲಿಂಗಗಳ ಉಪವಾಸ ಅಪೇಕ್ಷಣೀಯ, ಲೈಂಗಿಕ ಕ್ರಿಯೆಯ ಮುನ್ನ ಮತ್ತು ಅನಂತರ ಜನನಾಂಗ, ಬಾಯಿ ಮತ್ತು ಕೈಗಳನ್ನು ಶುಚಿ ಮಾಡಿಕೊಳ್ಳುವುದು ಆರೋಗ್ಯಕರ.

ಲೈಂಗಿಕ ಕ್ರಿಯೆಗೆ ಗೌಪ್ಯ, ಏಕಾಂತ, ಮಂದ ಬೆಳಕು, ಸುಗಂಧ ಭರಿತ ಮತ್ತು ಭಯ ರಹಿತ ಪರಿಸರ ಲೈಂಗಿಕ ಶಕ್ತಿ ವರ್ಧಕಗಳು; ಸಂಗೀತವಿದ್ದರೆ ಮಧುರ ಮತ್ತು ಲೈಂಗಿಕ ಕ್ರೀಡೆಯ ಶಬ್ದಗ್ರಹಣಕ್ಕೆ ಸಹಾಯಕ. ನಿರ್ಮಲ ಮನಸ್ಸಿನಿಂದ

ಸಂಗಾತಿಗಳ ಶಯನ ಗೃಹದ ಪ್ರವೇಶ, ಶಯ್ಯೆಯ ಮೇಲೆ ಸಂಗಾತಿಗಳ ಆಲಿಂಗನ, ಚುಂಬನ ಮುಂತಾದ ದೈಹಿಕ ಮೇಲಾಟ ಅತಿ ಮುಖ್ಯ. ಲೈಂಗಿಕ ಆಸಕ್ತಿ ಉತ್ತುಂಗಕ್ಕೇರಿದ ಮೇಲೆ ಸಂಗಾತಿಗಳ ಮಿಲನ. ಯೋನಿ ಮತ್ತು ಶಿಶ್ನದ ಮಿಲನ ಯಾವ ಯಾವ ರೀತಿಯಲ್ಲಿ ಮತ್ತು ಭಂಗಿಯಲ್ಲಿ ಮಿಲನಗೊಳ್ಳಲು ಸಾಧ್ಯವೋ ಅವುಗಳ ಪ್ರಯೋಗಗಳೆಲ್ಲವು ಸಂಗಾತಿಗಳ ದೀರ್ಘ ಲೈಂಗಿಕ ಜೀವನದ ಬೆಸುಗೆಯ ದೃಷ್ಟಿಯಿಂದ ಅನಿವಾರ್ಯ. ಇಲ್ಲಿ ಯಾರೂ ಮೇಲಲ್ಲ ಅಥವ ಕೀಳಲ್ಲ.

ಲೈಂಗಿಕ ಕ್ರಿಯೆಯ ಅವಧಿಗೆ ಇಂತಿಷ್ಟೆ ಎಂಬ ಮಾನದಂಡವಿಲ್ಲ. ಕೆಲವಾರು ನಿಮಿಷಗಳು ಮಾತ್ರ ಪ್ರಥಮ ಬಾರಿಗೆ ಮತ್ತು ಆನಂತರದ ಕ್ರಿಯೆಗಳಲ್ಲಿ ಒಂದೆರಡು ಪಟ್ಟು ಹೆಚ್ಚು ಸಮಯ ಅಷ್ಟೆ.

ಸಹಜವಲ್ಲದ ಮತ್ತು ಕೃತಕವಾದ ಬ್ಲೂ ಸಿನಿಮಾಗಳನ್ನು ಒಂದು ಪಕ್ಷ ನೋಡಿದರೆ ಮರೆಯುವುದು ಮನಸ್ಸಿಗೆ ಹಿತ, ಸ್ಪರ್ಧೆಗಿಳಿದರೆ ಸೋಲಿನಿಂದ ಮಾನಸಿಕ ಖಿನ್ನತೆಗೆ ಗುರಿ ಖಂಡಿತ. ಲೈಂಗಿಕ ಕ್ರಿಯೆಯ ಅವಶ್ಯಕತೆ ಪ್ರತಿಯೊಬ್ಬರಿಗೂ ರಾತ್ರಿಯಲ್ಲಿ, ವಾರಕ್ಕೆ ಅಥವ ತಿಂಗಳಿಗೆ ಇಂತಿಷ್ಟೆ ಎಂಬ ನಿಯಮವಿಲ್ಲ. ಇದು ಕೆಲವು ಬಾರಿ ಮಾತ್ರ; ವಯಸ್ಸು, ಆರೋಗ್ಯ, ಮನಸ್ಸು ಮತ್ತು ಸಮಸ್ಯೆಗಳ ಅಧಾರದ ಮೇಲೆ ಇದರ ನಿರ್ಧಾರ.

ದಂಪತಿಗಳು ಲೈಂಗಿಕ ಕ್ರಿಯೆಯಲ್ಲಿ ತೊಡಗಿದಾಗ ಆ ಕ್ರಿಯೆಯಿಂದ ಬಿಡುಗಡೆಯಾದ ಲಕ್ಷಾಂತರ ವೀರ್ಯಾಣುಗಳು ಗರ್ಭನಾಳದಲ್ಲಿ ಕಾದು ಕುಳಿತಿರುವ ಒಂದೇ ಒಂದು ಅಂಡಾಣು (ಓವಾ) ವನ್ನು ಮಿಲನಗೊಳ್ಳಲು ಗರ್ಭಕೋಶದ ಮುಖಾಂತರ ಈಜಿ ಈಜುವ ಸ್ಪರ್ಧೆಯಲ್ಲಿ ಒಂದು ವೀರ್ಯಾಣು ಮಾತ್ರ ಯಶಸ್ವಿಯಾಗುತ್ತದೆ. ಅದು ಅಂಡಾಣುವಿಯೊಡನೆ ಮಿಲನಗೊಂಡು ಗರ್ಭಧಾರಣ ಕ್ರಿಯೆ ಯಶಸ್ವಿಯಾದರೆ ಅಂಡಾಣು ಗರ್ಭನಾಳದಿಂದ ಚಲಿಸಿ ಗರ್ಭಕೊಶದೊಳಗಿನ ಹದವಾದ ಪದರದ ಮೇಲೆ ಅಂಟಿಕೊಂಡಾಗ ಭ್ರೂಣದ ರಚನೆ ಮುಂದೆ ಸಾಗಿ ವಂಶದ ಕುಡಿ ಚಿಗುರುತ್ತದೆ.

* * * * *

ಕನ್ನಡ ಪುಸ್ತಕ ಪ್ರಾಧಿಕಾರವು ಅಪರೂಪದ ಹಾಗೂ ಶಾಸ್ತ್ರಸಂಬಂಧ ಕೃತಿಗಳನ್ನು ಪ್ರಕಟಿಸುವುದರ ಜೊತೆಗೆ ವಿವಿಧ ಮಾಲಿಕೆಯಡಿ ಬೇರೆ ಪ್ರಕಾಶಕರು ಅಷ್ಟಾಗಿ ಪ್ರಕಟಿಸದ ಪುಸ್ತಕಗಳು ಜನಸಾಮಾನ್ಯರಿಗೆ ಲಭ್ಯವಾಗಬೇಕೆಂಬ ಉದ್ದೇಶದಿಂದ ಪ್ರಕಟಿಸುತ್ತಾ ಬಂದಿದೆ. ಸಾವಿರಾರು ವರ್ಷಗಳ ಇತಿಹಾಸ ಹೊಂದಿರುವ ಕನ್ನಡ ಭಾಷೆ ಸಾಹಿತ್ಯಿಕವಾಗಿ ಪ್ರೌಢಾವಸ್ಥೆಯನ್ನು ತಲುಪಿರುವುದರಲ್ಲಿ ಸಂಶಯವಿಲ್ಲ. ಸಮಾಜ ಈ ಒಂದು ಶತಮಾನದಿಂದ ಬಹಳ ಶೀಘ್ರಗತಿಯಲ್ಲಿ ಮುಂದುವರೆಯುತ್ತಿದ್ದು ಆ ವೇಗಕ್ಕೆ ತಕ್ಕಾಗಿ ಕನ್ನಡ ಭಾಷೆಯೂ ಹೊಸ ಪ್ರಯೋಗಗಳನ್ನು ಮಾಡುತ್ತಾ ಹೊಸತನ್ನು ತನ್ನಲ್ಲಿ ಅರಗಿಸಿಕೊಳ್ಳುವುದು ಅನಿವಾರ್ಯ. ವೈದ್ಯಕೀಯ, ಇಂಜಿನಿಯರಿಂಗ್, ವಿಜ್ಞಾನ ಲೋಕಗಳ ಬಗ್ಗೆ ಕನ್ನಡದಲ್ಲಿ ಸಾಕಷ್ಟು ಪುಸ್ತಕಗಳು ಹೊರಬರುತ್ತಿದ್ದರೂ ಈಗಿನ ಕಾಲ ವೇಗಕ್ಕೆ ತಕ್ಕಷ್ಟು ಕನ್ನಡದಲ್ಲಿ ಈ ವಿಭಾಗಗಳಲ್ಲಿ ಪುಸ್ತಕಗಳು ಹೊರಬರುತ್ತಿಲ್ಲ. ಬಂದಂತಹ ಪುಸ್ತಕಗಳೂ ಕೂಡ ಜನ ಸಾಮಾನ್ಯರಿಗೆ ಎಟುಕುವ ದರದಲ್ಲಿ ಲಭ್ಯವಾಗುತ್ತಿಲ್ಲ. ಈ ಕೊರತೆಯನ್ನು ತುಂಬಬೇಕೆಂಬ ಸದಾಶಯದಿಂದ ಕೆಲ ಮಾಲೆಗಳಲ್ಲಿ ಪುಸ್ತಕಗಳನ್ನು ಹೊರತರುವ ಪ್ರಯತ್ನವನ್ನು ಮಾಡಿದ್ದೇವೆ.

ಈ ದಿಶೆಯಲ್ಲಿ ಪ್ರಾಧಿಕಾರವು ಹಮ್ಮಿಕೊಂಡಿರುವ ಮಹತ್ವದ ಯೋಜನೆಗಳಲ್ಲಿ ವೈದ್ಯಕೀಯ ವಿಜ್ಞಾನ ಸಾಹಿತ್ಯದ ಮಾಲೆಯೂ ಒಂದು.

ಡಾ. ಸಿದ್ಧಲಿಂಗಯ್ಯ
ಅಧ್ಯಕ್ಷರು

ಕನ್ನಡ ಪುಸ್ತಕ ಪ್ರಾಧಿಕಾರ